ಅಧ್ಯಕ್ಷರು :- ಜಯಚಂದ್ರರವರೇ, ರೂಲ್ 69 ಮೇಲೆ ಚರ್ಚೆಯನ್ನು ತಾವು ಮುಂದುವರಿಸುತ್ತೀರೋ ಅಥವಾ ವಿರೋಧ ಪಕ್ಷದ ನಾಯಕರು ಮುಂದುವರಿಸುತ್ತಾರೋ? (ಗೊಂದಲ) ಕರೆಸೋಣ. ಸುರೇಶ್‌ಕುಮಾರ್‌ರವರೆ, ಸಂಬಂಧಪಟ್ಟ ಸಚಿವರನ್ನು ಬರಬೇಕೆಂದು ಹೇಳಿ. (ಗೊಂದಲ) ಕರೆಸುತ್ತಾರೆ.

ಶ್ರೀ ಶ್ರೀಕಾಂತ ಕುಲಕರ್ಣಿ :- ನೀರಾವರಿ ಬಗ್ಗೆ. . . .

ಅಧ್ಯಕ್ಷರು :- ಆಯಿತು. ಇದಾದ ಮೇಲೆ ತೆಗೆದುಕೊಳ್ಳುತ್ತೇನೆ. ನಿಮ್ಮದು subject ಇದೆ. ಇದಾದ ಮೇಲೆ ತೆಗೆದುಕೊಳ್ಳುತ್ತೇನೆ. ಗಣಿಗಾರಿಕೆ ವಿಷಯ ಪ್ರಸ್ತಾಪವಾದಾಗ agenda ದಲ್ಲಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಇದಾದಮೇಲೆ ನಿಮ್ಮ subject ಅನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಶ್ರೀಕಾಂತ ಕುಲಕರ್ಣಿ :- ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆ ಇದೆ.

ಅಧ್ಯಕ್ಷರು :- ಅವಕಾಶ ಕೊಡುತ್ತೇನೆ. ಅದಕ್ಕೆ ಇವತ್ತಿನ agenda ದಲ್ಲಿಟ್ಟಿದ್ದೇನೆ. ಆದ್ಯತೆ ಕೊಡುತ್ತೇನೆ. ಇದಾದ ತಕ್ಷಣ ಕೊಡುತ್ತೇನೆ. ಮುಖ್ಯಮಂತ್ರಿಯವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಇದೇ ವಿಷಯದ ಬಗ್ಗೆ ಅಲ್ಲಿ ಚರ್ಚೆ ನಡೆಯುತ್ತಿದೆ. ಅವರು ಬರುತ್ತಾರೆ. ನೀವು ಪ್ರಾರಂಭ ಮಾಡಿ.

5. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ರಾಜ್ಯದ ಬಳ್ಳಾರಿ ಹಾಗೂ ಇತರ ಪ್ರದೇಶಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಮತ್ತು ಗಡಿ ಒತ್ತುವರಿ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ರಾಜ್ಯದ ಸಂಪತ್ತನ್ನು ರಕ್ಷಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ವಿಚಾರದಲ್ಲಿ ನೀಡಿರುವ ಸೂಚನೆ ಕುರಿತು.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ರಾಜ್ಯದಲ್ಲಿನ ಗಣಿಗಾರಿಕೆ ಬಗ್ಗೆ ನಾವು ನಿಲುವಳಿ ಸೂಚನೆ ಮುಖೇನ ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಟ್ಟೆವು. ತಾವು ರಾಜ್ಯದ ದೃಷ್ಟಿಯಿಂದ ಮಹತ್ವವಾದ ವಿಚಾರವೆಂದು ಹೇಳಿ ಈಗಾಗಲೇ ರೂಲ್ 69ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ :- ಇನ್ನರ್ಧ ಗಂಟೆ ಕಳೆದರೆ ರಾಹುಕಾಲ ಮುಗಿಯುತ್ತದೆ.

ಅಧ್ಯಕ್ಷರು :- ಸದನ ನಡೆಸಲಿಕ್ಕೂ ರಾಹು ಕಾಲ ಹೇಳುತ್ತೀರಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ಉದಾಸಿಯವರು ಬೆಳಗ್ಗೆಯೇ,ಪಂಚಾಂಗ ನೋಡಿ ನಾನು ಇವತ್ತು ಪೂಜೆ ಮಾಡಿಸಿಕೊಂಡಿದ್ದೇನೆಂದು ಹೇಳಿದರು. ಅದಕ್ಕೆ 1.30ರ ನಂತರ ಶುರು ಮಾಡುತ್ತಾರೋ ಅಥವಾ ಈಗ ಶುರು ಮಾಡಬಹುದೋ ಎಂದು ಕೇಳಿ ಎಂದೆ.

ಅಧ್ಯಕ್ಷರು :- ಟಿ.ಬಿ. ಜಯಚಂದ್ರರವರು ರಾಹುಕಾಲವನ್ನು ನಂಬುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಗಣಿಗಾರಿಕೆ ವಿಚಾರದಲ್ಲಿ ಸಾಕಷ್ಟು ರೀತಿಯಲ್ಲಿ ಚರ್ಚೆಯಾಗುತ್ತಿದೆ ಗಣಿಗಾರಿಕೆಯಿಂದಾಗಿ ಸಾಕಷ್ಟು ರೀತಿಯಾದಂಥ ಅಲ್ಲೋಲ ಕಲ್ಲೋಲವಾಗುತ್ತಿದೆ. ರಾಜಕೀಯುವಾಗಿ ಬಹಳ ಪ್ರಭಾವವನ್ನು ಬೀರುತ್ತಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯ ಬೇರು ಅಲುಗಾಡುವ ರೀತಿಯಲ್ಲಿ ಇವತ್ತು ಗಣಿಗಾರಿಕೆ ವಿಚಾರ ಪ್ರಸ್ತಾಪವಾಗುತ್ತಿದೆ.

ಈ ಗಣಿಗಾರಿಗೆ ಇರಬೇಕೆ, ಬೇಡವೇ ಎನ್ನುವ ವಿಚಾರ ಕೂಡ ಇಲ್ಲಿ ಬರುತ್ತದೆ. ಗಣಿಗಾರಿಕೆಯಿಂದ ಯಾರಿಗೆ ಲಾಭ ಆಗುತ್ತಿದೆ ಎನ್ನುವ ವಿಚಾರ ಕೂಡ ಇದೆ. ಯಾವಾಗ ಈ ಗಣಿಗಾರಿಕೆಗೆ ಹೆಚ್ಚು ಮಹತ್ವ ಬಂತೆಂದರೆ 2004ರ ನಂತರ ಗಣಿಗಾರಿಕೆಗೆ ಹೆಚ್ಚು ಮಹತ್ವ ಬಂದುಹೋಯಿತು. ವಸ್ತುಸ್ಥಿತಿ ಏನಾಗಿದೆ? ಬಹಳ ಮುಖ್ಯವಾಗಿ ಏನೆಂದರೆ ಇವತ್ತು ಅಕ್ರಮವಾಗಿ ನಡೆಯುತ್ತಿರತಕ್ಕಂಥ ಗಣಿಗಾರಿಕೆಗೆ ನಾವು ಆಕ್ಷೇಪಣೆ ಎತ್ತಿದೆವು. ಅದರ ಬಗ್ಗೆ ಕೂಡ ಚರ್ಚೆ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆವು. ಇಲ್ಲಿರತಕ್ಕಂಥಾದ್ದು leases, lease ಮುಖೇನ ನಾವು ಗಣಿಗಾರಿಕೆಯನ್ನು ಮಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು, ಈ ಭಾಗಗಳಲ್ಲಿ ವಿಶೇಷವಾಗಿ ಅದಿರು ಇರುವಂತಹ ಪ್ರದೇಶ. ರಾಜ್ಯದಲ್ಲಿ 300 ರಿಂದ 320ಕ್ಕಿಂತ ಹೆಚ್ಚು mining leases ಇರುವುದಕ್ಕೆ ಸಾಧ್ಯವಿಲ್ಲ. Mining leases ಇರುವುದು ಇವತ್ತಿನದಲ್ಲ, ಕಳೆದ 50-60 ವರ್ಷದಿಂದ mining leases ಇದೆ. ಮೊದಲು ಏನು ಪರಿಸ್ಥಿತಿ ಇತ್ತು ಎಂದರೆ ಯಾರೇ ಆದರೂ mining leasesನಲ್ಲಿ ಇದ್ದರೂ ಕೂಡ ಅವರ ಗಡಿಯ ವ್ಯಾಪ್ತಿಯಲ್ಲಿ mining ಮಾಡಿಕೊಂಡು ಹೋಗುತ್ತಿದ್ದರು. ಆಗ ಅವರಿಗೆ ಲಾಭವಾಗುತ್ತಿತ್ತೊ, ನಷ್ಟವಾಗುತ್ತಿತೋ, ಆದರೆ ಆಗ ಹೆಚ್ಚು ಲಾಭ ಇರಲಿಲ್ಲವೆನ್ನುವ ವಿಷಯ ಇತ್ತು. ಕಳೆದ 10 ರಿಂದ 15 ವರ್ಷದ ಹಿಂದೆ steel mines ನಡೆಯುವುದಕ್ಕೆ ಸಾಧ್ಯವಿಲ್ಲ,

ಆಗ Iron ಇರುವಂತಹ ಪ್ರದೇಶವನ್ನು leasesಗೆ ತೆಗೆದುಕೊಂಡರೆ ಏನೂ ಪ್ರಯೋಜನವಿಲ್ಲವೆನ್ನುವ ವಿಚಾರ ಇತ್ತು. ಆದರೆ ಇವತ್ತು ದಿಢೀರ್ ಎಂದು China exports ಶುರುವಾಗಿ ಅದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಆ ರೀತಿ ಮಹತ್ವ ಬಂದಾಗ ಏನಾಯಿತೆಂದರೆ, ನಮ್ಮ mining ವ್ಯಾಪ್ತಿಯಲ್ಲಿ ಇವತ್ತು ಗಣಿಗಾರಿಕೆ ನಡೆದಿದ್ದರೆ ಯಾರದೂ ಆಕ್ಷೇಪ ಇರಲಿಲ್ಲ, ಯಾರೂ ಆಕ್ಷೇಪಣೆ ಮಾಡುತ್ತಿರಲಿಲ್ಲ. ಆದರೆ ಇಲ್ಲಿ ನಡೆದಿದ್ದೇನೆಂದರೆ ದಿಢೀರ್ ಎಂದು ಏನು demand ಬಂತು, ಆಗ leases ಅವರ ವ್ಯಾಪ್ತಿಯನ್ನು ಬಿಟ್ಟು ಹೊರಗಡೆ ಹೋದರು. Encroach ಮಾಡಿದರು, encroach ಮಾಡಿ ಗಣಿಗಾರಿಕೆ ಮಾಡುವುದಕ್ಕೆ ಪ್ರಾರಂಭ ಮಾಡಿದರು. Encroachment ಇವತ್ತು ಯಾವ ಮಟ್ಟಕ್ಕೆ ಹೋಗಿದೆಯೆಂದರೆ even mining leases sketches ಬದಲು ಮಾಡಿದರು. ಅದನ್ನು ಬದಲು ಮಾಡಿ ಅನಧಿಕೃತವಾಗಿ ಪಕ್ಕದಲ್ಲಿ ಇರುವಂತಹ ಜಾಗದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆ ಭಾಗ ಕಂದಾಯ ಇಲಾಖೆಗೆ ಸೇರಿದಂತಹ ಜಮೀನು, ಅರಣ್ಯ ಇಲಾಖೆಗೆ ಸೇರಿರತಕ್ಕಂಥ ಜಮೀನು ಹಾಗೂ ಬೇರೆ ಬೇರೆ ಇಲಾಖೆಗೆ ಸೇರಿರತಕ್ಕಂಥ ಜಮೀನಿನಲ್ಲಿ ಇವತ್ತು ಒತ್ತುವರಿಯನ್ನು ಮಾಡಿ ಗಣಿಗಾರಿಕೆ ಮಾಡುವುದಕ್ಕೆ ಹೋದರು. ಇಲ್ಲಿ ಏನು ಮುಖ್ಯವಾದಂಥ ಪ್ರಶ್ನೆ? ಇವತ್ತು ಏಕೆ ವಿರೋಧ ಪಕ್ಷದವರು ಈ ರೀತಿ ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆ ಉದ್ಭವವಾಗಬಹುದು. ಆದರೆ ಇಲ್ಲಿ ಏನಾಗಿದೆ ಎಂದರೆ, ಇವತ್ತು mining ಆಗುತ್ತಿರುವುದು ಎಲ್ಲರಿಗೂ ಗೊತ್ತಿರುವಂಥಾದ್ದು ಹಾಗೂ ನೋಡಿರತಕ್ಕಂಥಾದ್ದು ಇದೆ. ಆದರೆ ಇವತ್ತು ಗಣಿಗಾರಿಕೆ ನಡೆಯುತ್ತಿರುವುದು ಅವರ mining ವ್ಯಾಪ್ತಿಯಲ್ಲಿ ಇರತಕ್ಕಂಥ areaದಲ್ಲಿ ನಡೆಯುತ್ತಿಲ್ಲ. ಅದರ ಪಕ್ಕ ಇರುವಂತಹ ಅರಣ್ಯದಲ್ಲಿ ಮತ್ತು ಗೋಮಾಳದಲ್ಲಿ ನಡೆಯುತ್ತಿದೆ. ಅದೂ ಕೂಡ ಅನಧಿಕೃತವಾಗಿ ನಡೆಯುತ್ತಿರತಕ್ಕಂಥಾದ್ದು. Mining lease area ಬಿಟ್ಟು ಹೊರಗಡೆ ಹೋದಾಗ ಅದು ಅನಧಿಕೃತವಾಗುತ್ತದೆ, encroachment ಆಗುತ್ತದೆ, ಅಲ್ಲಿ ಗಣಿಗಾರಿಕೆ ನಡೆಯುತ್ತಿರುವಂಥಾದ್ದು, ಅಲ್ಲಿ ನೀವು control ಮಾಡುವುದಕ್ಕೆ ಆಗಲಿಲ್ಲವಲ್ಲ. ಅಲ್ಲಿ ಏನಾಗಿದೆ? ಹೊರಗಡೆಯಿಂದ ನೀವು mining ತಂದಿದ್ದರೆ ನೀವು ಯಾವ ರೀತಿ ಅದನ್ನು operate ಮಾಡುತ್ತೀರಿ? Permit ಮೂಲಕ operate ಮಾಡುತ್ತೀರಿ. ನಾವು permit ಇಲ್ಲಿ ಕೊಡತಕ್ಕಂಥಾದ್ದು mining lease areaದಲ್ಲಿ material ಇದೆ, ಅಲ್ಲಿ extract

ಮಾಡಿದರು ಎನ್ನುವ ರೀತಿಯಲ್ಲಿ permitಗಳನ್ನು ಕೊಟ್ಟಿವು. ಅಲ್ಲಿ ಕೊಟ್ಟರು, mining ಮಾಡುತ್ತಿದ್ದಾರೆ. ಆದರೆ ನಾವು ಇಲ್ಲಿ ಆಕ್ಷೇಪ ತೆಗೆಯುತ್ತಿರುವುದು, ನೀವು ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲ, ಅದು ತಪ್ಪಾಗುತ್ತದೆ. ಆದರೂ ಕೂಡ permit ಎಂದು ಹೇಳಿದರೆ ಅದು ಒಂದು regulations. ನಾವು ಮಾತನಾಡುವಾಗ ಬಹಳಷ್ಟು ಜನ, ನಾವು ಕೊಟ್ಟಿಲ್ಲ, ಕೇಂದ್ರ ಸರ್ಕಾರ ಕೊಟ್ಟಿರುವುದು, ಕಾಂಗ್ರೆಸ್‌ನವರು ಇದ್ದಾಗ ಕೊಟ್ಟಿರುವುದು, ದಳದದವರು ಇದ್ದಾಗ ಕೊಟ್ಟಿರುವುದು ಎಂದು ಹೇಳುವ ಪ್ರಶ್ನೆ ಅಲ್ಲ. Leases ಕೊಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. Leases ಕೊಡಬೇಕಾಗುತ್ತದೆ, ಕೈಗಾರಿಕೆಗಳು ಬರಬೇಕಾಗುತ್ತದೆ, ಕೆಲವು ಸಂದರ್ಭದಲ್ಲಿ export ಆಗಬೇಕಾಗುತ್ತದೆ. ಅವೆಲ್ಲವುಗಳ ಜೊತೆಗೆ ಇಲ್ಲಿ ಮುಖ್ಯವಾದ ಆಕ್ಷೇಪ ಎಂದರೆ ಯಾವುದು mining areaದಲ್ಲಿ ಇಲ್ಲವೋ, encroach ಮಾಡಿರುವಂತಹ ಅರಣ್ಯ ಜಮೀನಿನಲ್ಲಿ ಇವತ್ತು ಸಾರಾಸಗಟಾಗಿ ನಿರಂತರವಾಗಿ ಗಣಿಗಾರಿಕೆ ನಡೆಯುತ್ತಿದೆ. ಅದರಿಂದ ದುಷ್ಪರಿಣಾಮಗಳು ಏನಿದೆಯೆನ್ನುವುದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಪರಿಸರಕ್ಕೆ ಇವತ್ತು ಹಾನಿ ಯಾಗುತ್ತಿದೆ. ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತಿದೆ. ಇವತ್ತು ಕುಡಿಯುವ ನೀರಿಗೆ ತೊಂದರೆಯಾಗಿದೆ. ಕುಡಿಯುವ ನೀರಿಗೆ ಏಕೆ ತೊಂದರೆ ಯಾಗುತ್ತಿದೆ ಎಂದರೆ ಧೂಳಿನಿಂದ pollution ಆಗುತ್ತಿರುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಅವರು ಉಪಯೋಗಿಸುವಂತಹ blasting material ಏನಿದೆ ಅದರಿಂದ ಜಲ ವರ್ಗಗಳೆಲ್ಲವೂ ಬದಲಾವಣೆಯಾಗಿರುವಂಥಾದ್ದು ಇದೆ. ಇದು ಯಾವ ಮಾಧ್ಯಮದಲ್ಲಿಯಾಗಲಿ, ವರದಿಯಲ್ಲಾಗಲಿ ಬಿಂಬಿತವಾಗುತ್ತಿಲ್ಲ. ನೀವು ತುಮಕೂರು ಜಿಲ್ಲಾ ಸಚಿವರು, ನಿಮಗೆ ಅದು ಗೊತ್ತಿದೆ, ನೀವು ಆ areas ನೋಡಿದ್ದೀರಿ. ನೀವು ಅಲ್ಲಿ ಹೋಗಿ ಬರುವುದಕ್ಕೆ ಮುಂಚೆ ನಾನು ತುಮಕೂರಿಗೆ ಹೋಗಿ ಬಂದೆನು. ಮೊದಲು ಅಲ್ಲಿ ಕಾಡಿನಲ್ಲಿ ಹೋಗಬೇಕೆಂದರೆ ನೋಡುವುದಕ್ಕೆ ಸಂತೋಷವಾಗುತ್ತಿತ್ತು. ಈಗ ಅಲ್ಲಿ ಹೇಗಿದೆ ಎಂದರೆ ಒಂದು ರೀತಿಯಲ್ಲಿ ತೊನ್ನು ಹತ್ತಿದ ನಾಯಿ ನೋಡಿದ ಹಾಗಾಗುತ್ತದೆ. ಆ ಮಟ್ಟಕ್ಕೆ ಬಂದು ಹೋಗಿದೆ. ಪರಿಸರ ಸಂಪೂರ್ಣವಾಗಿ ಹಾಳಾಗಿ ರುವುದನ್ನು ನಾವು ಇವತ್ತು ಅಲ್ಲಿ ನೋಡುತ್ತಿದ್ದೇವೆ. ಹೀಗಿರುವಾಗ ಈ ಗಣಿಗಾರಿಕೆ ನಡೆಯುತ್ತಿರುವಂತಹ ಅರಣ್ಯ ಪ್ರದೇಶದಲ್ಲಿ ಅದನ್ನು ಏಕೆ ನಿಯಂತ್ರಣ ಮಾಡುವುದಕ್ಕಾಗಲಿಲ್ಲ? ಅದನ್ನೇ ನಾವು ಹೇಳುತ್ತಿರುವುದು, ಎಲ್ಲೋ ಒಂದು ಕಡೆ

collusion ಆಯಿತು. ಇವತ್ತು ಸಾಕಷ್ಟು ರೀತಿಯಲ್ಲಿ ಲಾಭ ಬರುವುದಕ್ಕೆ ಪ್ರಾರಂಭವಾಯಿತು. ಲಾಭ ಎಷ್ಟು ಎಂದು ಹೇಳಿದರೆ, ನಮಗೆ royalty ಮುಖಾಂತರ ಬರುವುದು 16 ರಿಂದ 27 ರೂಪಾಯಿ ಮಾತ್ರ. Miningಗೆ expenditure transportation ಎಲ್ಲಾ ಸೇರಿದರೂ ಕೂಡ 250 ರೂಪಾಯಿಯಿಂದ 300 ರೂಪಾಯಿ ಮೇಲೆ ಆಗುವುದಿಲ್ಲ. ನೀವು ಮಂಗಳೂರಿಗೆ, ಮದ್ರಾಸ್‌ಗೆ ಅಥವಾ ಕಾರವಾರಕ್ಕೆ transport ಮಾಡಿ, ಎಲ್ಲಿ ಮಾಡಿದರೂ ಕೂಡ ಒಂದು ಸಾವಿರ ರೂಪಾಯಿ ಮೇಲೆ ಆಗುವುದಕ್ಕೆ ಸಾಧ್ಯವಿಲ್ಲ. ಇಷ್ಟಾದರೂ ಕೂಡ ಎಲ್ಲಿಯವರೆಗೆ ನಿಮಗೆ ರೇಟ್ ಸಿಗುತ್ತದೆಯೆಂದರೆ ಕನಿಷ್ಟ ಎಂದರೆ 1,500 ಜಾಸ್ತಿ ಎಂದರೆ 7,000 ರೂಪಾಯಿ. ಒಂದು ಲಾರಿ truck loadಗೆ 30ರಿಂದ 40 ಸಾವಿರ ರೂಪಾಯಿ ಲಾಭ ಬರುತ್ತದೆಂದರೆ ಜನ ಬಿಡುತ್ತಾರಾ? Overload ಎಂದರೆ ಇದು ಹತ್ತು ಟನ್ ಅಲ್ಲ, 40 ಟನ್, 6 wheel, 8 wheels, 10 wheels, ನಾವು ಅವುಗಳನ್ನು ನೋಡುವುದಕ್ಕೆ ಆಗಿರಲಿಲ್ಲ. ನಾವು ಕ್ಷೇತ್ರಕ್ಕೆ ಹೋಗಿ ಮುಖ ತೋರಿಸುವುದಕ್ಕೆ ಆಗುತ್ತಿಲ್ಲ. ಇವತ್ತು ಗಣಿ ಲಾರಿಗಳು ಓಡಾಡಿ ಅಲ್ಲಿ ಒಂದೇ ಒಂದು ರಸ್ತೆಗಳು ಉಳಿದಿಲ್ಲ. ಆ ರಸ್ತೆಗಳನ್ನು ಸುಧಾರಣೆ ಮಾಡಿ ವಾಪಸ್ಸು ತರಬೇಕಾದರೆ ಇನ್ನು 10 ವರ್ಷ ಬೇಕೋ 15 ವರ್ಷ ಬೇಕಾಗುತ್ತದೋ ನಮಗೆ ಗೊತ್ತಾಗುತ್ತಿಲ್ಲ. ಇವತ್ತು Transportation problem ಆಗುತ್ತಿದೆ, environment problem ಆಗುತ್ತಿದೆ ಹಾಗೂ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಆದರೆ ಇದರ ಲಾಭ ಯಾರಿಗೆ ಆಗುತ್ತಿದೆ? ತಾವು ಇವತ್ತು ಚಿಕ್ಕನಾಯಕನ ಹಳ್ಳಿಯಲ್ಲಿ ಹೋಗಿ ನೋಡಿದಿರಿ. ಗಣಿಗಾರಿಕೆ ಆಗಬೇಕು ನಿಜ, ಅದರಿಂದ ಯಾರಿಗೆ ಲಾಭ? ಆ ಊರಿನವರೆಲ್ಲಾ ನೀವು ಹೋದಾಗ ನಿಮ್ಮನ್ನು attack ಮಾಡಿದರಲ್ಲ. ಅಲ್ಲಿನ ಜನರಿಗೆ ಕುಡಿಯುವುದಕ್ಕೆ ನೀರು ಇದೆಯೇ? ಅವರ ಮೈಮೇಲೆ ಬಟ್ಟೆ ಇದೆಯಾ? ಒಂದು ರಸ್ತೆ ಇದೆಯಾ? ಇದು ಯಾರಿಗೆ ಲಾಭ? ಸ್ಥಳೀಯವಾಗಿ ವಾಸ ಮಾಡತಕ್ಕಂಥ ಜನರಿಗೆ ಅವರ ಹೊಟ್ಟೆ ಮೇಲೆ ಹೊಡೆದು, ಅಲ್ಲಿ ಸುತ್ತಮುತ್ತಲೂ ಇರುವಂತಹ ತೆಂಗಿನ ತೋಟಗಳಿರಬಹುದು, ಹೊಲಗಳಿರಬಹುದು ಯಾವುದೇ ಬೆಳೆ ಬೆಳೆಯುವುದಕ್ಕೆ ಆಗದಿರುವಂತಹ ಪರಿಸ್ಥಿತಿ ಇದ್ದಾಗ, ಇದು ಯಾರಿಗೋಸ್ಕರ? ಹೋಗಲಿ ಇದರಲ್ಲಿ ಲಾಭ ಇದೆ, ಅದರಿಂದ ಬರುವಂತಹ ಹಣದಿಂದ ಒಂದು ರೂಪಾಯಿಯನ್ನು ತೆಗೆದುಕೊಂಡು ಹಳ್ಳಿಗಳ rehabilitation ಅಥವಾ ಸಂಸ್ಥೆಗೆ ಸಹಾಯ ಮಾಡುವಂತಹ ಪ್ರಕ್ರಿಯೆ

ನಡೆದಿದೆಯಾ ಎಂದರೆ ಎಲ್ಲೂ ಕೂಡ ನಡೆದಿಲ್ಲ. ಏಳು ಕೋಟಿ ರೂಪಾಯಿ ಇವತ್ತು ಚಿಕ್ಕನಾಯಕನಹಳ್ಳಿಯಲ್ಲಿ ಆಯಿತು. ಒಂದು ಟನ್‌ಗೆ ನೀವು ಎಷ್ಟು ಬೇಕಾದರೂ ಕೇಳಿ ನಾವು ದುಡ್ಡು ಕೊಡುತ್ತೇವೆಂದು ಅವರು ಹೇಳಿದರು. ಅವರು ನೂರು ರೂಪಾಯಿ ಕೊಡುವುದಕ್ಕೆ ತಯಾರಾಗಿದ್ದರು. ಅದೊಂದು ದೊಡ್ಡ ಚರಿತ್ರೆ, ಅದನ್ನು ಹೇಳುವುದು ಬೇಡ. ಅಲ್ಲಿ ಕೊನೆಗೆ ಹತ್ತು ರೂಪಾಯಿ ಕೊಡಬೇಕೆಂದು ಆಯಿತು. ಹತ್ತು ರೂಪಾಯಿ ಎಂದು ಕೊಟ್ಟಿರುವುದು ಸುಮಾರು ಎಂಟು ಕೋಟಿ ರೂಪಾಯಿ ಆಗಿದೆ. ಅವರು ನೂರು ರೂಪಾಯಿ ಕೊಡುವುದಕ್ಕೆ ತಯಾರಿದ್ದರು. ಮೊನ್ನೆ ಗಲಾಟೆಯಾದಂತಹ ಸಂದರ್ಭದಲ್ಲಿ ಅವರು ನಿಮಗೆ ಇನ್ನೂರಲ್ಲ ಮುನ್ನೂರು ರೂಪಾಯಿ ಒಂದು ಟನ್‌ಗೆ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೂರು, ಮುನ್ನೂರು ರೂಪಾಯಿ ನಾವು ಕೊಡುತ್ತೇವೆಂದು ಅವರು ಹೇಳುವುದು ಒಂದು ಕಡೆಯಾದರೆ, ನಮ್ಮ ಸರ್ಕಾರ ಯೋಚನೆ ಮಾಡಬೇಕು. ತಹಶೀಲ್ದಾರ್, Deputy Commissioner head of accountನಲ್ಲಿ ಇವತ್ತು ದುಡ್ಡನ್ನು ಇಟ್ಟಿದ್ದು, ಎಂಟು ಕೋಟಿ ರೂಪಾಯಿ ಇವತ್ತು ಕೇವಲ transportation ನಿಂದ ಸಂಪನ್ಮೂಲ ಬಂದಿದೆ ಎಂದು ಹೇಳಿದರೆ, ಬಹುಶ: ನೀವು ನಾಗರೀಕ ಸರ್ಕಾರವಾಗಿ ನೀವೇನಾದರೂ ಕೂಡ ಕಾನೂನು ತಂದಿದ್ದರೆ, ಇವತ್ತು ಸಂಪನ್ಮೂಲವನ್ನು ಒಂದುಗೂಡಿಸುವುದಕ್ಕೆ ಆಗುತ್ತಿರಲಿಲ್ಲವೇ? Miningನಲ್ಲಿ ನಿಮಗೆ ಏನು ಬರುತ್ತಿರತಕ್ಕಂಥಾದ್ದು? ಅದು 200 ಕೋಟಿ, 250 ಕೋಟಿ 300 ಕೋಟಿ ರೂಪಾಯಿ ಬಂದಿರುವುದು ಅದು ದುಡ್ಡೇ ಅಲ್ಲಾರಿ. ಅದು ಒಂದು ತಾಲ್ಲೂಕಿನಲ್ಲಿ ಬರತಕ್ಕಂಥ ವರಮಾನ. ಯಾವುದೋ ಒಂದು ರೀತಿಯಲ್ಲಿ development cess ಎಂದು ಹಾಕಬಹುದಾಗಿತ್ತು. ಅದರ ಬಗ್ಗೆ ಯಾವ ರೀತಿಯ ಚಿಂತನೆಯಾಗಲಿಲ್ಲ. ಅದನ್ನು ಹಾಕಿದ್ದರೆ, ಒಂದು ಕಡೆ ನೀವು illegal ಆಗಿ ನಡೆಯುತ್ತಿರುವಂಥಾದ್ದನ್ನು check ಮಾಡಿ. ಅವರ mining areaದಲ್ಲಿ ಅವರು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರೆ, ಬಹುಶ: ಅದು ಒಂದು ಹದ್ದುಬಸ್ತಿನಲ್ಲಿ ಬರುತ್ತಿತ್ತು. ಅದು ಯಾವುದೂ ಕೂಡ ಆಗಲಿಲ್ಲ. ಮತ್ತೊಂದು ಬಹಳ ಮುಖ್ಯವಾದ ವಿಷಯವೇನೆಂದರೆ mining leases ಕೊಡುವುದು ಹೇಗೆಂದರೆ, Indian Bureau of Mines ಎನ್ನತಕ್ಕಂಥಾದ್ದು ಇದೆ. ಅವರು lease ಕೊಡಬೇಕಾದರೆ ಒಂದು estimate ಮಾಡುತ್ತಾರೆ. ನಿಮ್ಮ ಯಾವ ಲೋಕಾಯುಕ್ತ reportನಲ್ಲಿ ಕೂಡ ಈ ವಿಚಾರ ಪ್ರಸ್ತಾಪವಾಗಿಲ್ಲ. Indian Bureau of Mines ನವರು leases ಕೊಡಬೇಕಾದಾಗ ಒಂದು approximate

estimate ಮಾಡುತ್ತಾರೆ. ಅವರಿಗೆ ಇರುವಂತಹ ಎಲ್ಲಾ ತಾಂತ್ರಿಕತೆಯನ್ನು ಉಪಯೋಗಿಸಿ estimate ಮಾಡಿ, ಇಷ್ಟು mining ಮಾಡುವುದಕ್ಕೆ ಅವಕಾಶ ಇದೆಯೆಂದು ಹೇಳುತ್ತಾರೆ. ಅವರು ಪ್ರತಿ ವರ್ಷ ಕೂಡ visit ಮಾಡುತ್ತಾರೆ.

ಅವರು ಪ್ರತಿವರ್ಷವೂ ಕೂಡ ಅಲ್ಲಿಗೆ visit ಮಾಡುತ್ತಾರೆ. ಮಾಡಿ, ಎಷ್ಟು exhaust ಆಗಿದೆ, ಎಷ್ಟು ಇದೆ ಎಂದು ಹೇಳುತ್ತಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಇವತ್ತು mining leases operations ಏನಿದೆ, ಏನು ಪರ್ಮಿಟ್‌ಗಳನ್ನು ಕೊಡುತ್ತಿದ್ದೀರಿ, ಅದರಲ್ಲಿ more than 50% of the minesಗೆ ಅಲ್ಲಿ deposit ಇಲ್ಲ. ಡೆಪಾಸಿಟ್ ಎಲ್ಲಿದೆ ಎಂದರೆ, ಪಕ್ಕದಲ್ಲಿ ಒಡೆಯುತ್ತಾರೆ, ತೆಗೆದುಕೊಂಡು ಬಂದು ಹಾಕುತ್ತಾರೆ. ಅಲ್ಲಿ collusion ಆಗಿರುತ್ತದೆ. ಎಷ್ಟು ಎಂದರೆ, ಅಧಿಕಾರಿಗಳು ಎಲ್ಲಿಯವರೆಗೆ ಹೋಗಿದ್ದಾರೆ ಎಂದು ಹೇಳಿದರೆ, ಇದು ಯಾವುದೋ ಸಣ್ಣ ಅಧಿಕಾರಿಗಳ ಪ್ರಶ್ನೆ ಅಲ್ಲ, ದೊಡ್ಡ, ದೊಡ್ಡ ಅಧಿಕಾರಿಗಳು ಎಂದರೆ Deputy Commissioner, Superintedent of Police ರವರೆಗೂ ಕೂಡ involve ಆಗಿರತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಅವರೂ ಸಹ ಅಕ್ರಮವಾಗಿರತಕ್ಕಂಥ ಗಣಿಗಾರಿಕೆಗೆ, ಅದರ transportationಗೆ ನೇರವಾಗಿ ಸಪೋರ್ಟ್ ಮಾಡುತ್ತಿರತಕ್ಕಂಥಾದ್ದನ್ನು ನೋಡಿದ್ದೇವೆ. ಅದೆಲ್ಲದಕ್ಕಿಂತಲೂ ಹೆಚ್ಚಾಗಿ ಅವರೇನು ಸುಮ್ಮನಿರಲಿಲ್ಲ. ಬಹಳಷ್ಟು ಜನ ಅಧಿಕಾರಿಗಳು ಅವರ ಹೆಂಡತಿ, ತಮ್ಮಂದಿರು, ಅವರ ಹೆಸರು, ಇವರ ಹೆಸರು ಹೀಗೆ ಸಂಬಂಧಿಕರ ಹೆಸರಿನಲ್ಲಿ ಗಣಿಗಾರಿಕೆಯನ್ನು illegal ಆಗಿ ಪ್ರಾರಂಭ ಮಾಡಿದರು. ಇದು ಅವ್ಯಾಹತವಾಗಿ ನಡೆಯುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಇವತ್ತು ಕಾನೂನು violation ಆಗಿದೆ. ಇವತ್ತು ನಾವು ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡಬಹುದು. ಆದರೆ ಸರ್ಕಾರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರತಕ್ಕ ನೀವು, ಇದರಲ್ಲಿ ಏನು ತಪ್ಪಾಗಿದೆ ಎಂದು ನೋಡಬೇಕಾಗುತ್ತದೆ. ಈ ಯಾವ ಕೆಲಸವೂ ಆಗಲಿಲ್ಲ. ಇದು ಒಂದು ಕಡೆ ಆದರೆ, ಇನ್ನೊಂದು ಕಡೆ ಏನಾಗಿದೆ ಎಂದರೆ ಗಡಿ ವಿವಾದವಿದೆ. 40 ವರ್ಷಗಳಿಂದಲೂ ಕೂಡ ಗಡಿ ವಿವಾದ ಇದ್ದೇ ಇದೆ. Border dispute ಇರುವಂಥ ಈ ಸಂದರ್ಭದಲ್ಲಿ ಅಕ್ರಮವಾಗಿ ಹೊರ ರಾಜ್ಯದಲ್ಲಿರತಕ್ಕಂಥ ಒಂದು ಕಂಪನಿ ಇವತ್ತು ಕರ್ನಾಟಕಕ್ಕೆ ಬಂದು, ಲಗ್ಗೆ ಇಟ್ಟು, ಬೌಂಡರಿ ಕಲ್ಲನ್ನೆಲ್ಲ ಕಿತ್ತುಹಾಕಿ, ಎಲ್ಲ ಮ್ಯಾಪನ್ನು ಬದಲಾಯಿಸಿ ಗಣಿಗಾರಿಕೆ ನಡೆಯುತ್ತಿದೆ ಎಂದರೆ ಆ ಕಂಪನಿಗೆ ನೀವು permit

ಕೊಡುತ್ತೀರಲ್ಲ, ಇದಕ್ಕೆ ಏನು ಹೇಳಬೇಕು? ನಿಮ್ಮ ಅಧಿಕಾರಿಗಳಿಗೆ ಏನು ಹೇಳಬೇಕು? ಅದು ಹೊರ ರಾಜ್ಯದಲ್ಲಿರತಕ್ಕಂಥ ಮೈನ್ಸ್ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಪರ್ಮಿಟ್ ಮಾತ್ರ ಕರ್ನಾಟಕದ್ದು. ಅದು ಹೇಗೆ ಸಾಧ್ಯವಾಗುತ್ತದೆ ಸ್ವಾಮಿ? ಇವತ್ತು ಇದೆಲ್ಲ ಹದ್ದುಬಸ್ತಿಗೆ ಬರಬೇಕು ಎನ್ನುವುದಾದರೆ, ನಿಮಗೆ ನಿಜವಾಗಲೂ ಕೂಡ ಸದಿಚ್ಛೆ ಇದ್ದದ್ದೇ ಆದರೆ, ನೀವು ಪರ್ಮಿಟ್ ಕೊಡುವುದನ್ನು ಸ್ಟಾಪ್ ಮಾಡಿ. ಇದು ಏಕೆ ಹದ್ದುಬಸ್ತಿಗೆ ಬರುವುದಿಲ್ಲ ಎನ್ನುವುದನ್ನು ನೋಡೋಣ. ಆದರೆ, ನೀವು ಆ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಪರ್ಮಿಟ್ ಅಂದರೆ ಅದು Mines and Geology Departmentನಿಂದ ಕೊಡತಕ್ಕಂತ ಪರ್ಮಿಟ್ ಅನ್ನುವುದಕ್ಕಿಂತ, ಅವರು ಅವರದೇ ಆದ ಒಂದು ರೀತಿಯಲ್ಲಿ ಪರ್ಮಿಟ್‌ಗಳನ್ನು ಮಾಡಿಕೊಂಡು ಬಿಟ್ಟರು. Permit Collusion ಹೇಗಾಯಿತು ಎಂದರೆ, ಎಲ್ಲವನ್ನೂ ಅವರೇ ಪ್ರಿಂಟ್ ಮಾಡುವುದಕ್ಕೆ ಶುರು ಮಾಡಿಬಿಟ್ಟರು. ಎಲ್ಲವನ್ನೂ ಪ್ರಿಂಟ್ ಮಾಡಿ, ಅದೇ ತರಹ ಸಿಗ್ನೇಚರ್‌ಗಳನ್ನು ಫೋರ್ಜರಿ ಮಾಡಿ ಪರ್ಮಿಟ್‌ಗಳನ್ನು ಇಷ್ಯೂ ಮಾಡುವುದು ಆಗುತ್ತಿದೆ. ಹೀಗೆ, ಕೋಟಾ ಪರ್ಮಿಟ್‌ಗಳ ಮೂಲಕ ಮಾಲು ಹೋಗುತ್ತಿದೆ. ಯಾರಾದರೂ ಹಿಡಿದರೆ ಆಗ ಮಾತ್ರ ರೆಗ್ಯುಲರ್ ಪರ್ಮಿಟ್ ತೋರಿಸುವುದು, ಇಲ್ಲದಿದ್ದರೆ ಇದನ್ನು ಹರಿದು ಹಾಕುವುದು ಆಗುತ್ತಿದೆ. ನಾನು ನಿಮಗೆ ಒಂದು ವಿಷಯವನ್ನು ಹೇಳುತ್ತೇನೆ, ಇವತ್ತು ಅಧಿಕೃತವಾದ ಪರ್ಮಿಟ್‌ನಲ್ಲಿ ಎಷ್ಟು ಹೋಗಿದೆಯೋ, ಅದರ ಹತ್ತರಷ್ಟು, ನೂರರಷ್ಟು ಅನಧಿಕೃತವಾಗಿ ಹೋಗಿದೆ. ಇದು ಸರ್ಕಾರಕ್ಕೆ ಗೊತ್ತಾಗಲಿಲ್ಲವೇ ಸ್ವಾಮಿ? ಪೊಲೀಸಿನವರು ಬಹಳಷ್ಟು ಕಡೆ ಕೋಟಾ ಪರ್ಮಿಟ್ ಗಳನ್ನು ಸೀಜ್ ಮಾಡಿದರು, ಎಲ್ಲಿ ಕೋಟಾ ಪರ್ಮಿಟ್ ತಯಾರಾಗುತ್ತಿದೆ ಎನ್ನುವುದನ್ನು ಪತ್ತೆ ಮಾಡಿದರು. ಆದರೆ ಏನಾಯಿತು? ಯಾರ ಮೇಲೂ ಕೇಸ್ ಹಾಕಲಿಲ್ಲ, ಯಾರನ್ನೂ ಹಿಡಿಯಲಿಲ್ಲ, ಅದರ ಬಗ್ಗೆ ಎಚ್ಚರಿಕೆಯನ್ನೂ ತೆಗೆದುಕೊಳ್ಳಲಿಲ್ಲ. ಇದು ಆಗಿ ರತಕ್ಕಂಥಾದ್ದು. ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಣಕ್ಕೆ ತರತಕ್ಕಂಥ ಯಾವುದೇ ರೀತಿಯಾದಂಥ ಪ್ರಯತ್ನ ಆಗಲಿಲ್ಲ. ಅದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಲಾಸ್ ಆಗಿದೆ ಅನ್ನತಕ್ಕಂಥಾದ್ದನ್ನು ಹೇಳುವುದಕ್ಕೆ ಹೋದರೆ ಬಹುಶ: ಅದು ಎಲ್ಲಿಗೋ ಹೋಗುತ್ತದೆ. ಇದರ ಬಗ್ಗೆ ಜನರೆಲ್ಲರೂ ಬಂದು ಹೇಳುತ್ತಾರಲ್ಲ, ಇದು ಹೌದೋ ಅಲ್ಲವೋ ನೋಡೋಣ ಎಂದು ಹೇಳಿ ನಮ್ಮ ಕಾಂಗ್ರೆಸ್ ಪಕ್ಷದ ವತಿಯಿಂದ ಒಂದು ಸತ್ಯ ಶೋಧನಾ ಸಮಿತಿ ಎಂದು ಮಾಡಿ ಕಳುಹಿಸಿದ್ದೆವು. ಅದರಲ್ಲಿ, ಜವಾಬ್ದಾರಿಕೆಯಿದ್ದವರೆಲ್ಲ ಹೋಗಿದ್ದರು, ಆಗ ಎಲ್ಲ ಅಧಿಕಾರಿಗಳು ಕೂಡ ಬಂದಿದ್ದರು.

ಹಾಗೆ ಬಂದಂಥ ಅಧಿಕಾರಿಗಳು ಮಾಹಿತಿಯನ್ನು ಏನು ಒದಗಿಸುತ್ತಾರೆ ಎನ್ನುವುದನ್ನು ಅದರ ವರದಿಯಲ್ಲಿ ನೋಡಬೇಕು. ನಾವು ಯಾವುದನ್ನು ಕೇಳಿದರೂ ಅಧಿಕಾರಿಗಳು ನಮಗೆ ಮಾಹಿತಿ ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ, ನೀವು ಯಾವ ಮಾಹಿತಿಯನ್ನೂ ಅವರಿಗೆ ಕೊಡಬೇಡಿ ಎನ್ನುವ ಗೌಪ್ಯವಾದ ಆದೇಶ ಅವರಿಗೆ ಇದೆ. ಹಾಗಾಗಿ, ಯಾರೂ, ಏನೂ ಮಾಹಿತಿಯನ್ನು ಕೊಡಲಿಲ್ಲ. ನಮ್ಮಲ್ಲಿರತಕ್ಕಂಥ, available records ಪ್ರಕಾರ ನೋಡಿದರೆ, ಸ್ಥಳವನ್ನು ನೋಡಿ, ಅಜಮಾಯಿಸಿ ಮಾಡಿ ನೋಡಿದರೆ ಸುಮಾರು ಮೈಲಿಗಳಗಟ್ಟಲೆ ಇರುವುದು ಕಣ್ಣಿಗೆ ಕಾಣುತ್ತದೆ. ಅರ್ಧ ಕಿ.ಮೀ.ಅಗಲದಷ್ಟು, ಸುಮಾರು 30-35 ಕಿ.ಮೀ. ವರೆಗೆ ಕೂಡ ಗಣಿಗಾರಿಕೆ ನಡೆದಿದೆ. ಅಲ್ಲಿ ಬೌಂಡರಿ ಕಲ್ಲುಗಳಿಲ್ಲ, ಬೌಂಡರಿ ಯಾವುದು ಅಂತ ಗೊತ್ತಿಲ್ಲ, ಸಾರಾಸಗಟಾಗಿರತಕ್ಕಂಥ ರಸ್ತೆಯಾಗಿದೆ. ಅದು ಕರ್ನಾಟಕವೋ, ಆಂಧ್ರಪ್ರದೇಶವೋ ಎಂದು ಗೊತ್ತಾಗದೇ ಇರತಕ್ಕಂಥ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಮಾತನ್ನು ನಾನು ಹೇಳುತ್ತೇನೆ, Bureau of Mines ನಿಂದ, ಆ ಭಾಗದಲ್ಲಿ ಎಷ್ಟು ಮೈನ್ಸ್ ಇತ್ತು ಎನ್ನತಕ್ಕಂಥ ಮಾಹಿತಿಯನ್ನು ನೀವು ತರಿಸಿ. ನೀವು ಅದನ್ನು ಅಂದಾಜು ಮಾಡಿಸಿ. ನೀವು ಅಂದಾಜು ಮಾಡಿಸಿದರೆ ಲಕ್ಷ ಲಕ್ಷ ಕೋಟಿ ರೂಪಾಯಿಗಳಷ್ಟು ಗಣಿ ಸಂಪತ್ತು ಇವತ್ತು ಆಚೆ ಹೋಗಿದೆ. ಇವತ್ತು ಇದನ್ನು ನಾವು ಹಿಡಿಯುವುಕ್ಕೆ ತಡೆಯುವುದಕ್ಕೆ ಆಗುವುದಿಲ್ಲವೇ ಎಂದರೆ, ಮೊದಲೇ ಆಗಿಹೋಗಿಬಿಟ್ಟಿದೆ ನಾವು ಏನು ಮಾಡುವುದು ಎಂದರೆ ಹೇಗೆ? ಸ್ವಾಮಿ, ಬಹಳ ಸುಲಭವಾಗಿರತಕ್ಕಂಥಾದ್ದು ಇದು. ಇವತ್ತು ಸರ್ಕಾರಕ್ಕೆ ಇಚ್ಛೆ ಇದ್ದರೆ, ಅದು ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂಥಾದ್ದೇನೂ ಅಲ್ಲ. ನೀವು ಕೊಟ್ಟಿರತಕ್ಕಂಥ ಪರ್ಮಿಟ್‌ಗಳು ಎಷ್ಟು? ಅವರು ಎಕ್ಸ್‌ಪೋರ್ಟ್ ಮಾಡಿರತಕ್ಕಂಥಾದ್ದು ಎಷ್ಟು? ಅದಿರಿನ ಲೆಕ್ಕ ಸಿಗುವುದು ಎಲ್ಲಿ ಎಂದು ಹೇಳಿದರೆ Port Authorities ನಲ್ಲಿ ಸಿಗುತ್ತದೆ. ಲೋಕಾಯುಕ್ತದಲ್ಲಿ ಆ ಬಗ್ಗೆ ಪ್ರಸ್ತಾಪಿಸಿರುತ್ತಾರೇನೋ ಎಂದು ನಾನು ಅಂದುಕೊಂಡಿದ್ದೆ. ಅಲ್ಲೂ ಕೂಡ ಅದರ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ. ಅದು ಯಾವುದೇ ಕಂಪನಿಯವರು ಇರಲಿ, ಅವರು ಪೋರ್ಟ್ ಮೂಲಕ ಎಷ್ಟನ್ನು ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡಿದ್ದಾರೆ, ಅಷ್ಟಕ್ಕೆ ಅವರ ಹತ್ತಿರ ಪರ್ಮಿಟ್ ಇತ್ತೇ, ಎಷ್ಟಕ್ಕೆ ಇತ್ತು, ಪರ್ಮಿಟ್ ಇಲ್ಲದಿದ್ದರೆ, ಏಕೆ ಇರಲಿಲ್ಲ ಎನ್ನತಕ್ಕಂಥಾದ್ದನ್ನು ನೋಡಿದರೆ, ಅದರ differenceಅನ್ನು ನೋಡಿದರೆ ಅಕ್ರಮವಾಗಿ ಎಷ್ಟು ನಡೆದಿದೆ ಎನ್ನುವುದು ನಿಮಗೆ ಗೊತ್ತಾಗುತ್ತದೆ. ಅಕ್ರಮವಾಗಿ ಗಣಿಗಾರಿಕೆಯಾಗಿರತಕ್ಕಂಥಾದ್ದು ಒಂದು ಕಡೆ

ಆದರೆ, ಪರ್ಮಿಟ್ಟುಗಳೇ ಇಲ್ಲದೇ ಸಾರಾಸಗಟಾಗಿ ಹೊರಗಡೆ ಹೋಗಿರತಕ್ಕಂಥಾದ್ದು ಇನ್ನೊಂದು ಕಡೆ ಆಗಿದೆ. ಒಂದು ಕಡೆ ರಾಜ್ಯದ ಬೊಕ್ಕಸಕ್ಕೆ ರಾಯಲ್ಟಿ ಮುಖೇನ ಬರತಕ್ಕಂಥ ಅತ್ಯಲ್ಪ ಮೊತ್ತವೂ ಕೂಡ ಬರಲಿಲ್ಲ. ಅದು ಯಾರ ಪಾಲಾಯಿತು? ಅದು ಯಾರ ಪಾಲಾಯಿತೆಂದರೆ, ಯಾರು ಈ ರೀತಿಯ ದಂಧೆಯಲ್ಲಿ ಮುಳುಗಿ ಹೋಗಿದ್ದರೋ ಅವರ ಪಾಲಾಯಿತು. ಇದು ಖಾಸಗಿಯವರ ಕೈಗೆ ಹೋದರೆ ಏನಾಗುತ್ತದೆ? ಅವರು ಹಣವನ್ನು ಯಾವ ರೀತಿ ಖರ್ಚು ಮಾಡುತ್ತಾರೆ? ಸ್ವೇಚ್ಛಾಚಾರವಾಗಿ ಖರ್ಚು ಮಾಡುತ್ತಾರೆ. ದುರಾದೃಷ್ಟವೆಂದರೆ, ಕರ್ನಾಟಕದಲ್ಲಿ ಅದು ಬಳಕೆಯಾದುದು ಪ್ರಜಾಪ್ರಭುತ್ವದಲ್ಲಿ. ಇವತ್ತು, ಅದರ ಮೂಲಕ ಪ್ರಜಾಪ್ರಭುತ್ವದ ಬೇರು ಕೀಳಲಿಕ್ಕೆ ಪ್ರಯತ್ನ ಪಟ್ಟರು. Capitalist mentality ಯಾವತ್ತೂ ಕೂಡ ಅಷ್ಟೇ, ಸುರೇಶ್ ಕುಮಾರ್‌ರವರು ಹೇಳಬೇಕಾಗಿಲ್ಲ. ಹಣ ಇತ್ತು ಎಂದರೆ ಅವರಿಗೆ ಅಧಿಕಾರ ಬೇಕಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ಟಾಟಾ, ಬಿರ್ಲಾರವರಂಥವರು ಬಹಳಷ್ಟು ಜನರಿದ್ದಾರೆ. ಇಂಥ ಕಂಪನಿಗಳು ಬೇಕಾದಷ್ಟು ಇವೆ. ಆದರೆ ಅವರ್‍ಯಾರೂ ಅಧಿಕಾರದಲ್ಲಿ ಮುಂದೆ ಬರುವುದಕ್ಕೆ ಅಗಲಿಲ್ಲ. ಆದರೆ ಕರ್ನಾಟಕದ ದುರಾದೃಷ್ಟ ಎಂದು ಹೇಳಿದರೆ, ಇವತ್ತು ಯಾರ ಕೈಯಲ್ಲಿ ಹಣ ಇತ್ತೋ, ಅವರ ಕೈಗೆ ಅಧಿಕಾರ ಸಿಕ್ಕಿ ಹೋಯಿತು. ಅಧಿಕಾರ ಕೊಟ್ಟವರು ಯಾರು ಎನ್ನುವುದು ಬೇರೆ ಪ್ರಶ್ನೆ. ಅಧಿಕಾರವನ್ನು ಜನರೇ ಕೊಟ್ಟಿರಬಹುದು. ಆದರೆ ಯಾವ ಮುಖೇನ ಬಂದರು, ಹೇಗೆ ಬಂದರು ಎನ್ನುವುದು ಮುಖ್ಯ. ಇವತ್ತು ರಾಜಕೀಯವಾಗಿ ಪ್ರಜಾಪ್ರಭುತ್ವವೇ ಬುಡಮೇಲಾಗುತ್ತಿದೆ ಎನ್ನುವುದಕ್ಕೆ ಇವೆಲ್ಲವೂ ಕೂಡ ನಿದರ್ಶನ. ಒಂದು ಮಾತನ್ನು ನಾನು ಹೇಳುತ್ತೇನೆ, ಒಂದು ವಿಷಯವನ್ನು ಯಾರೂ ಮರೆಯಬಾರದು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಕೇವಲ 60 ವರ್ಷವಾಗಿದೆ. ಅದಕ್ಕೂ ಪೂರ್ವದಲ್ಲಿ ಇಷ್ಟು ದೊಡ್ಡ ದೇಶದ ಸ್ವಾತಂತ್ರ್ಯವನ್ನು ನಾವು ಯಾವ ರೀತಿ ಕಳೆದುಕೊಂಡೆವು. ಅದನ್ನು ಕಳೆದುಕೊಳ್ಳುವುದಕ್ಕೆ ಕಾರಣ ಎಂದರೆ, ಬ್ರಿಟೀಷರು East India Company ಮುಖೇನ ಇಲ್ಲಿಗೆ ವ್ಯಾಪಾರಕ್ಕಾಗಿ ಬಂದಿದ್ದಂಥವರು. ಆ ಕಂಪನಿಯವರು ಇಲ್ಲಿಗೆ ಬಂದು 200-300 ವರ್ಷಗಳೊಳಗಾಗಿ ಈ ದೇಶವನ್ನೇ ಆಳುವಂಥ ಮಟ್ಟಕ್ಕೆ ಹೋದರು. ಅವರಿಂದ ಬಿಡಿಸಿಕೊಳ್ಳಲು ಅದಕ್ಕೆ ಒಂದು ದೊಡ್ಡ ಸಂಗ್ರಾಮ, ಹೋರಾಟ, ನೂರಾರು ವರ್ಷಗಳು ಇತಿಹಾಸವಿರುವಂಥ ಒಂದು ಹೋರಾಟವನ್ನು ಮಾಡಿ, ಕೋಟ್ಯಾಂತರ ಜನಗಳು ಬಲಿದಾನವನ್ನು ಮಾಡಿ ನಾವು ಈ ಸ್ವಾತಂತ್ರ್ಯವನ್ನು ಪಡೆಯಬೇಕಾಗಿ ಬಂತು. ಅಂದರೆ ಇದರಿಂದ ಏನು

ಗೊತ್ತಾಗುತ್ತದೆ ಎಂದರೆ ಯಾವತ್ತೂ ಕೂಡ ಇಂಥ ಕಂಪನಿಗಳಿಗೆ ಅಧಿಕಾರ ಬೇಕಾಗಿರುತ್ತದೆ. ಅವರಿಗೆ ಹಣವನ್ನು ಮಾಡತಕ್ಕಂಥಾದ್ದೇ ಒಂದು ದೃಷ್ಟಿಯಾಗಿರುತ್ತದೆ. ಈ ರೀತಿಯ ಕಂಪನಿಗಳು ಇವತ್ತು ನಿರಂತರವಾಗಿ ಲೂಟಿ ಮಾಡುತ್ತಿವೆ, ಕೊಳ್ಳೆ ಹೊಡೆಯುತ್ತಿವೆ. ನಾನು ಇವತ್ತು ಏಕೆ East India Companyಗೆ ಹೋಲಿಸಿದೆ ಎಂದರೆ ಇವತ್ತು ನಾವು ಎಚ್ಚರಿಕೆಯಿಂದ ನೋಡಬೇಕು. ಇದರಲ್ಲಿ, foreign currency is involved. Foreign currency ಯಲ್ಲಿ ನೀವು export ಮಾಡುವುದರಲ್ಲಿ ಸಾಕಷ್ಟು money comes free of income tax and it comes in white. ಇದು ನನಗೆ ದೊರೆತಿರುವ ಮಾಹಿತಿ, ನನಗೆ ವರ್ತಮಾನ ಬಂದಿರುವ ಪ್ರಕಾರವಿದೆ. ಇದನ್ನು ನಾನು ಸರ್ಕಾರದ ಜೊತೆ ಹಂಚಿಕೊಳ್ಳಲು ಇಚ್ಛೆಪಡುತ್ತೇನೆ. ಇವತ್ತು ಸಾಕಷ್ಟು ರೀತಿಯಲ್ಲಿ ಹಣ ಬಂದಿರತಕ್ಕಂಥಾದ್ದು ಇದೆ. ನಾನು ನಿರ್ದಿಷ್ಟವಾಗಿ ಯಾರ ಮೇಲೂ ಆರೋಪ ಮಾಡುತ್ತಿಲ್ಲ. ಆ ಹಣದಿಂದ ಈಗಾಗಲೇ ಆಸ್ಟ್ರೇಲಿಯಾ ಮತ್ತು ಸೌತ್ ಆಫ್ರಿಕಾದಲ್ಲಿ ಇವತ್ತು ಗಣಿಗಾರಿಕೆಯನ್ನು ಪ್ರಾರಂಭ ಮಾಡಿದ್ದಾರೆ ಎಂದು ಹೇಳಿದರೆ, ಒಂದು ಕಡೆ ಕರ್ನಾಟಕದವರು ಅಥವಾ ಭಾರತ ದೇಶದವರು ಹೊರದೇಶಗಳಲ್ಲಿ ಗಣಿಗಾರಿಕೆಯನ್ನು ಮಾಡಿದ್ದಾರೆ ಎಂದರೆ ಸಂತೋಷ ಪಡತಕ್ಕಂಥಾದ್ದೇ. ಆದರೆ ಒಂದು ತಪ್ಪು ಆಗಬಾರದು. ಏನೆಂದರೆ, East India Companyಗಳು ಏನು ಮಾಡಿದವು ಎಂದರೆ ಮೇಯ್ದಿದ್ದು ನಮ್ಮ ಭೂಮಿಯಲ್ಲಿ, ಆದರೆ ಲದ್ದಿ ಹಾಕಿದ್ದು ಇಂಗ್ಲೆಂಡಿನಲ್ಲಿ. ಅದೇ ರೀತಿ, ಇಲ್ಲಿನ ore ಅಲ್ಲಿನ permit ಆದರೆ ಅದು ತಪ್ಪಾಗುತ್ತದೆ. ಆ ರೀತಿ ದುರುಪಯೋಗವಾಗತಕ್ಕಂಥ chances ಇರುತ್ತದೆ. ಇದಕ್ಕಾಗಿ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ, ಈ ರೀತಿಯಾಗಿ ಕಂಪನಿಗಳು ಲಾಭದ ದೃಷ್ಟಿಯಿಂದ ಮೇಯುವುದು ಒಂದು ಕಡೆಗೆ ಲದ್ದಿ ಹಾಕುವುದು ಒಂದು ಕಡೆಗೆ ಆದರೆ ಅದರಿಂದ ರಾಜ್ಯಕ್ಕೆ ಒಳ್ಳೆಯದು ಆಗುವುದಿಲ್ಲ. ಇವತ್ತು ನಿಮಗೆ ಜವಾಬ್ದಾರಿಕೆ ಇದೆ. ಇವತ್ತು ನೀವು ಸಂವಿಧಾನದ ಅಡಿಯಲ್ಲಿ ಕೆಲಸವನ್ನು ಮಾಡುತ್ತಿದ್ದೀರಿ. ನೀವು ಇಲ್ಲಿಗೆ ಆಯ್ಕೆಯಾಗಿ ಬರುವುದಕ್ಕೆ ಮುಂಚೆ ಪಕ್ಷವೇ ಮುಖ್ಯವಾಗಿರುತ್ತದೆ. ನಿಮಗೆ ಪಕ್ಷದಲ್ಲಿ ಯಾರು ಬೇಕಾದರೂ ಸಹಾಯ ಮಾಡಿರಬಹುದು, ಅದೇ ರೀತಿ ನಮಗೂ ಪಕ್ಷದಲ್ಲಿ ಸಹಾಯ ಮಾಡಿರಬಹುದು. ಆದರೆ ಅಧಿಕಾರಕ್ಕೆ ಬಂದ ಮೇಲೆ, ನಾವು ಪ್ರಮಾಣ ವಚನ ಸ್ವೀಕಾರ ಮಾಡಿ ಒಳಗೆ ಬರುತ್ತೇವೆ. ಆದ್ದರಿಂದ ನಮಗೆ ಪರಮೋಚ್ಚ ಎಂದರೆ ಸಂವಿಧಾನ. ಇವತ್ತು

ಸ್ಪೀಕರ್‌ರವರ ಸ್ಥಾನದ ಮೇಲೆ ಇರತಕ್ಕಂಥಾದ್ದು, ನಮಗೆ ಕಾಣತಕ್ಕಂಥಾದ್ದು, ಸಂವಿಧಾನದ ಚಿನ್ಹೆ. ಆ ಸಂವಿಧಾನದ ಚಿನ್ಹೆಯ ಅಡಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಸ್ವಾಮಿ, ಎಲ್ಲಾದರೂ ಕೂಡ ಉಂಟೇ? ಈ ರೀತಿಯಾಗಿ ರಾತ್ರೋರಾತ್ರಿ ಶ್ರೀಮಂತರಾಗುವಂಥ ಸಂದರ್ಭದಲ್ಲಿ ಸರ್ಕಾರ, ನಾವು ಏನು ಮಾಡುವುದು? ಪರ್ಮಿಟ್ ಅವರು ಕೊಟ್ಟಿದ್ದರು ಎಂದು ಹೇಳಿ ಕೈಕಟ್ಟಿಕೊಂಡು ಕುಳಿತರೆ ಇದು ಸರಿಯಾಗುತ್ತದೆಯೇ?

ಇದನ್ನು ಯಾವುದೇ ಒಂದು ಸರ್ಕಾರ ಮಾಡತಕ್ಕಂಥ ಕೆಲಸವಾಗುತ್ತದೆಯೇ ಎನ್ನತಕ್ಕಂಥದ್ದನ್ನು ತಾವು ಯೋಚನೆ ಮಾಡಬೇಕು. ಅದರ ಬಗ್ಗೆ ನೀವು ಗಮನಹರಿಸಬೇಕು ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರತಕ್ಕಂಥ ವಿಚಾರವೆಂದು ಹೇಳುತ್ತಾ, ಇನ್ನು ಲೋಪದೋಷಗಳ ಬಗ್ಗೆ ಎಷ್ಟೊಂದು ಹೇಳಬಹುದು. ಒಂದು ತರಹ ಅಲ್ಲ, ನೂರಾರು ತರಹ ಇರತಕ್ಕಂಥದ್ದು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ನೀವು ಬಹಳಷ್ಟು ಮಾಹಿತಿಯನ್ನು ಕೊಡುತ್ತಿದ್ದೀರಿ ಮತ್ತು ಬಹಳಷ್ಟು ಬೆಳಕನ್ನು ಚೆಲ್ಲುತ್ತಿದ್ದೀರಿ ಬಹಳ ಗಂಭೀರವಾದ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಮಾನ್ಯ ಅಧ್ಯಕ್ಷರಲ್ಲಿ ಬಹಳ ಗಹನವಾದ ಒಂದು ವಿಚಾರ ಪ್ರಾಯಶ ಮಾನ್ಯ ಜಯಚಂದ್ರರವರು ಆದ ಮೇಲೆ ಇನ್ನು ಅನೇಕರು ಇದರ ಬಗ್ಗೆ ಮಾತನಾಡುವುದಕ್ಕೆ ತಯಾರಾಗಿದ್ದಾರೆ. ಅದಕ್ಕೋಸ್ಕರ ಇದರ ಜೊತೆಗೆ ಇನ್ನು ಎರಡು, ನಿಯಮ 69ರ ಮೇಲೆ ಚರ್ಚೆಗೆ ಇವೆ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವವರು ಇದ್ದಾರೆ. ಅದಕ್ಕೋಸ್ಕರ ನೀವು allow ಮಾಡಿ ಇದಕ್ಕೆ ಒಂದು time frame ನ್ನು ನಿಗದಿ ಮಾಡಿ. ಅಂದರೆ ಈ ವಿಷಯಕ್ಕೆ ಇನ್ನು ಎಷ್ಟು ಸಮಯ ಕೊಡಬೇಕು. ಮತ್ತು ಬೇರೆಯವರಿಗೆ ಕೂಡ ಅವಕಾಶ ಸಿಗಬೇಕು. ಮಾನ್ಯ ಅಧ್ಯಕ್ಷರು ಇದಕ್ಕೆ ಒಂದು ಸಮಯವನ್ನು ನಿಗದಿ ಮಾಡಬೇಕು ಎನ್ನುವುದು ನನ್ನ ಅನಿಸಿಕೆ. ಇದು ಗಣಿಯಷ್ಟೆ ತೋಡಿಕೊಂಡು ಹೋಗಬಹುದು. ನಮ್ಮ ಹತ್ತಿರ ಎಷ್ಟು deposit ಇದೆ ಎಂದು ನಮಗೆ ಗೊತ್ತಿಲ್ಲ. ಮಾನ್ಯ ಜಯಚಂದ್ರರವರ ಹತ್ತಿರ ಎಷ್ಟು deposit ಇದೆ ಎಂದು ನಮಗೆ ಗೊತ್ತಿಲ್ಲ. ಅದನ್ನು ತೋಡಿಕೊಂಡು ಹೋಗಬಹುದು. ಎಲ್ಲೋ ಒಂದು ಕಡೆ ಇದಕ್ಕೆ time frame ಹಾಕಬೇಕೆಂದು ನನ್ನ ಅನಿಸಿಕೆಯಾಗಿದೆ.

ಶ್ರೀ ಸಿದ್ದು ಸವದಿ (ತೇರದಾಳ) :- ಮಾನ್ಯ ಅಧ್ಯಕ್ಷರೆ, ಯಾರದ್ದೋ ನೋಡಿ ಹೊಟ್ಟೆ ಉರಿಯುವುದು ಬೇಡ. ಯಾವ್ಯಾವ ರಾಜಕೀಯ ಮುಖಂಡರು ಎಷ್ಟು ದಿವಸ ರಾಜ್ಯವಾಳಿದ್ದಾರೆ. ಯಾರು ಎಷ್ಟು ಬೆಂಗಳೂರಿನಲ್ಲಿ ಆಸ್ತಿಯನ್ನು ಮಾಡಿದ್ದಾರೆನ್ನುವುದು ಅದು ಕೂಡ ಹೊರಗೆ ಬರಲಿ. ಅದು ಹೊರಗೆ ಬರಲಿ ರಾಜ್ಯದ ಭೊಕ್ಕಸ ತುಂಬಲಿ. ಎಷ್ಟು ವರ್ಷ ರಾಜಕೀಯ ಆಳಿದ್ದಾರೆ ಎಷ್ಟು ಲಾಭವನ್ನು ತೆಗೆದುಕೊಂಡಿದ್ದಾರೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಸವದಿಯವರೆ ಎಲ್ಲವನ್ನು ಕೊಡುತ್ತೇವೆ. ಸ್ವಲ್ಪ ತಾಳ್ಮೆಯಿಂದ ನೀವು ಕೇಳಿ.

ಶ್ರೀ ಸಿದ್ದು ಸವದಿ :- ಯಾರು ಎಷ್ಟು ಆಸ್ತಿ ಮಾಡಿದ್ದಾರೆನ್ನುವುದನ್ನು ಹೇಳಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮಾನ್ಯ ಮಂತ್ರಿಗಳು ನಮ್ಮ ನಾಯಕರ ಮೇಲೆ ನಿನ್ನೆ ನೇರವಾಗಿ ಆರೋಪವನ್ನು ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯಾಗ ಬೇಕು, ಅದಕ್ಕೆ ಕಾಲಾವಕಾಶವನ್ನು ಕೊಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಇದರ ಚರ್ಚೆಯಿಂದ ಸರ್ಕಾರಕ್ಕೆ ಏನಾದರೂ ಆಕ್ಷೇಪ ಇದೆಯಾ? ಅವರು ಏಕೆ ಸರ್ಕಾರಕ್ಕೆ ಆಕ್ಷೇಪ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಅವರು ಸಲಹೆಯನ್ನು ಕೊಟ್ಟಿದ್ದಾರಷ್ಟೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಇದರಿಂದ ಸರ್ಕಾರಕ್ಕೆ ಏನೋ ಆತಂಕ ಇರಬಹುದು.

ಅಧ್ಯಕ್ಷರು :- ಏಕೆ ನೀವು ಪದೇ ಪದೇ ಎದ್ದು ನಿಲ್ಲುತ್ತೀರಿ. ಯಾವುದಕ್ಕೆ ಟೈಮ್ ಕೊಡಬೇಕು ಎನ್ನುವುದರ ಬಗ್ಗೆ ಅದನ್ನು ನೀವು ನನಗೆ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, Forest land ನ್ನು lease ಗೆ ಕೊಡಬೇಕು. ನೀವು ಹೇಳಿದಿರಿ, Forest land ನ್ನು leases ಗೆ ಕೊಟ್ಟುಬಿಟ್ಟಿದ್ದಾರೆ, ಆ ಕಾಲದಲ್ಲಿ ಆಗಿದೆ, ಈ ಕಾಲದಲ್ಲಿ ಆಗಿದೆ ಎಂದು ಹೇಳಿದರು. ಯಾವ ಕಾಲದಲ್ಲಿಯಾದರೂ ಕಾನೂನಿನ ವ್ಯಾಪ್ತಿಯಲ್ಲಿ lease ನ್ನು ಕೊಟ್ಟರೆ ಏನು problem ಇಲ್ಲ. ಆದರೆ ಎಲ್ಲಿ ತೊಂದರೆಯಾಯಿತು ಎಂದರೆ,

ಅಧಿಕಾರಿಗಳ ಮಟ್ಟದಲ್ಲಿಯೇ forest land ನ್ನು ಗೋಮಾಳವೆಂದು classify ಮಾಡಿದರು. ಸರ್ಕಾರಿ ಭೂಮಿ ಎಂದು classify ಮಾಡಿದರು. ಖರಾಬ್ ಲ್ಯಾಂಡ್ ಎಂದು ಇವತ್ತು ಆ ಭೂಮಿಯನ್ನು ಮಾಡಿ ಲೀಸ ಎಂದು ಅರಣ್ಯದಲ್ಲಿ ಕೊಟ್ಟಿದ್ದಾರೆ. ಅದು ಆಗಿರತಕ್ಕಂಥ ಲೋಪದೋಷ. ಅದಕ್ಕೆ ನೀವು ಸರ್ಕಾರವನ್ನು ಹೊಣೆ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳು ಆ ರೀತಿಯಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಕೊಟ್ಟಂಥ ದಿನದಲ್ಲಿ ಅದನ್ನು concord ಮಾಡಿರತಕ್ಕಂಥದ್ದನ್ನು ಅದನ್ನು ಶೋಧನೆ ಮಾಡಿ ನೋಡಬೇಕು. ಅದನ್ನು ನೋಡಿದಾಗ ಮಾತ್ರ ನಿಮಗೆ ಗೊತ್ತಾಗುತ್ತದೆ. ಅಂತಹ ಲೀಸೆಸ್ ಯಾವುದು ಎನ್ನುವುದು ಸರ್ಕಾರದ ಬಳಿ ಮಾಹಿತಿ ಇದೆ ಅದು ಸರ್ಕಾರಕ್ಕೆ ಗೊತ್ತಿದೆ. ಅಲ್ಲೂ ಕೂಡ ಇವತ್ತು ಖೋಟಾ ಪರ್ಮಿಟ್‌ನ್ನು ಕೊಟ್ಟು ಮಾಡುತ್ತಿದ್ದಾರೆ ಎಂದರೆ ಅದನ್ನು ನಿಲ್ಲಿಸುವಂಥ ಕೆಲಸವನ್ನು ಇನ್ನುವರೆಗೆ ಮಾಡಲಿಲ್ಲ ಎನ್ನುವಂಥದ್ದು ಒಂದು. ಇನ್ನೊಂದು ಬಹಳ ಮುಖ್ಯವಾಗಿ ನಾನು ಒಂದನ್ನು ಹೇಳುತ್ತೇನೆ. ಮೈನಿಂಗ್ ಲೀಸ್ ಎನ್ನುವಂಥದ್ದು ಯಾರದೋ ಒಬ್ಬರ ಕೈಯಲ್ಲಿ ಇರುತ್ತದೆ. ಆದರೆ ಇದು ಇದ್ದರೆ ಅದನ್ನು ಮೈನಿಂಗ್ ಮಾಡುವಂಥವನು ಯಾರು ಎಂದರೆ, ಅವನು 4-5ನೇ ಪಾರ್ಟಿ. ಓರಿಜಿನಲ್ ಪಾರ್ಟಿ ಇಲ್ಲವೇ ಇಲ್ಲ. ನಾನು ನಮ್ಮ ಏರಿಯಾದಲ್ಲಿ ಓರಿಜಿನಲ್ ಪಾರ್ಟಿ ಯಾರು ಎಂದು ಕೇಳಿದರೆ ಅದನ್ನು ಮಾಡುತ್ತಿರುವವರು ಬೇರೆ ಇರುತ್ತಾರೆ. ಇದು ಹೇಗೆ ಎಂದು ಕೇಳಿದರೆ, raising contract ನಲ್ಲಿ ಮಾಡುತ್ತೇವೆಂದು ಹೇಳಿದರು. raising contract ಎಂದರೆ ಏನು ಕತೆಯಪ್ಪಾ ಎಂದು ಕೇಳಿದೆ. ನಾನು ಸ್ವಲ್ಪ ಲಾ ಓದಿದವನು. ಮಾನ್ಯ ಸುರೇಶ್ ಕುಮಾರ್‌ವರಿಗೆ ಏನಾದರೂ ಗೊತ್ತಿದೆಯಾ? Transfer of property act ನಲ್ಲಿ raising contract ಎನ್ನುವಂಥ ಶಬ್ಧವೇ ಇಲ್ಲ. ಶಬ್ಧ ಇಲ್ಲದಿರುವುದನ್ನು ಆ ಶಬ್ಧವನ್ನು coin ಮಾಡಿ raising contract ನ್ನು ಕಂಡು ಅಧಿಕಾರಿಗಳು ಇವತ್ತು ನಿರಂತರವಾಗಿ ಅವರಿಗೆ ಗಣಿಗಾರಿಕೆ ಮಾಡುವುದಕ್ಕೆ ಅವಕಾಶವನ್ನು ಮಾಡಿದ್ದಾರೆಂದು ಹೇಳಿದರೆ ಇದಕ್ಕೆ ಅಧಿಕಾರ ಕರ್ತವ್ಯ ಲೋಪವಾಗಿಲ್ಲವೆ? ಅದಕ್ಕೆ ಸರ್ಕಾರ ಏಕೆ ಕಣ್ಣು ತೆರೆಯಲಿಲ್ಲವೆಂದು ನಾನು ಕೇಳುತ್ತೇನೆ. ಈ ರೀತಿಯಾಗಿ leases ಕೊಟ್ಟಿರುವುದರಲ್ಲಿ ಸಾಕಷ್ಟು ರೀತಿಯಲ್ಲಿ ಇವತ್ತು ಹೋಗಲಿ ಬಿಡಿ ಅದನ್ನು raising contract ಎಂದು ಯಾರೋ ಮಾಡಿದ್ದಾರೆ. ಒಬ್ಬನ ಕೈಯಲ್ಲಿ entire ಆ ಒಂದು ತಾಲ್ಲೂಕು ಇರುವಂಥದ್ದು. ಶಿರಾ ತಾಲ್ಲೂಕು ಎಂದು ಹೇಳೋಣ. ಏಕೆಂದರೆ, ನಮ್ಮಲ್ಲಿ

ಮೈನಿಂಗ್ ಇಲ್ಲ. ಯಾವುದೋ ಒಂದು ತಾಲ್ಲೂಕಿನ ಉದಾಹರಣೆ ಹೇಳುವುದರಿಂದ ನಮ್ಮ ತಾಲ್ಲೂಕು ಎಂದು ಭಾವನೆ ಬರುವುದು ಬೇಡ. ಇವತ್ತು ಶಿರಾ ತಾಲ್ಲೂಕಿನಲ್ಲಿ ಮೈನಿಂಗ್ ಇಲ್ಲ. ಅಲ್ಲಿ ಪ್ರಭಾವಿ ವ್ಯಕ್ತಿ ಯಾರು ಎಂದರೆ, ಯಾವುದೋ ರೀತಿಯಲ್ಲಿ ಎಲ್ಲಾ ಮೈನಿಂಗ್‌ನ್ನು ತಡೆದು ತನ್ನ ಕಂಟ್ರೋಲ್‌ಗೆ ಬರತಕ್ಕಂಥ ರೀತಿಯಲ್ಲಿ ದುಂಡಾವರ್ತಿಯನ್ನು ಮಾಡಿದ್ದಾರೆ. ಕಾನೂನನ್ನು ಕೈಗೆ ತೆಗೆದುಕೊಂಡಿದ್ದಾರೆ. ಪ್ರಾಣ ಭಯ ಉಂಟು ಮಾಡಿದ್ದಾರೆ. ಎಲ್ಲಾ ಮೈನಿಂಗ್ ಕೂಡ ತಮಗೆ ಬರಬೇಕೆಂದು ಹೇಳಿ ಏನು ತೀರ್ಮಾನ ಮಾಡಿ ತಮ್ಮ ಕಡೆಗೆ ಸೆಳೆದುಕೊಂಡು ಇವತ್ತು ದೊಡ್ಡ ರೀತಿಯಲ್ಲಿ ಯಾರದೋ ಹೆಸರು ಯಾರೋ transport ಮಾಡುವುದು. ಇದು ನಿರಂತರವಾಗಿ ನಡೆಯುತ್ತಿರತಕ್ಕಂಥ ಇದು ಕರ್ನಾಟಕದಲ್ಲಿ ನಡೆಯುತ್ತಿರುವ ಮೈನಿಂಗ್ ದೃಶ್ಯ ಎನ್ನತಕ್ಕಂಥ ಮಾತು ಎಂದು ಹೇಳುತ್ತೇನೆ. ಇವತ್ತು ಎಷ್ಟು ದುಡ್ಡು ಹಸ್ತಾಂತರವಾಗಿದೆ ಎಂದು ಹೇಳಿದರೆ, ಬಹುಶಃ ಯಾರಿಗೂ ಕೂಡ ಅದನ್ನು ಎಣಿಸುವುದಕ್ಕೆ ಆಗುವುದಿಲ್ಲ. ಅದು ನಿಲುಕುವುದಕ್ಕೆ ಸಾಧ್ಯವಿಲ್ಲದಷ್ಟು ಹಣ ಇವತ್ತು ಪೋಲಾಗಿ ಹೋಗಿದೆ. ಅದರ ಕಡೆಗೆ ನೀವು ಗಮನವನ್ನು ಕೊಡಬೇಕು. ದಯಮಾಡಿ ನಾನು ಹೇಳುತ್ತೇನೆ. ಇವತ್ತು ಬಳ್ಳಾರಿಯ ಭಾಗದಲ್ಲಿ 1972 ರಿಂದ ಇಲ್ಲಿಯವರೆಗೆ ಗಣಿಗಾರಿಕೆ ನಡೆಯುತ್ತಿದೆ. ಆಗ ಬಹಳಷ್ಟು ಜನ ಕೋರ್ಟಿಗೆ ಹೋಗಿರುವ ಸಂದರ್ಭದಲ್ಲಿ ಬಾರ್ಡರ್ ಏರಿಯಾದ ಬಗ್ಗೆ ಒಂದು ಹೈಕೋರ್ಟ್ ಜಡ್ಜ್‌ಮೆಂಟಾಯಿತು. ಕೆ.ಎಲ್.ಸ್ವಾಮಿಯವರು ನ್ಯಾಯಾಧೀಶರಾಗಿ ಜಡ್ಜ್‌ಮೆಂಟ್‌ನ್ನು ಕೊಟ್ಟಿರುವಂಥದ್ದು. ಅದು Inter State dispute ನಲ್ಲಿ ಬರುತ್ತದೆ. ಅದರ ಅಳತೆಯಾಗುವವರೆಗೂ ಕೂಡ ಯಾರು ಕೂಡ ಗಣಿಗಾರಿಕೆಯನ್ನು ಮಾಡಬಾರದು ಎನ್ನುವ ಮಾತನ್ನು ಅವತ್ತೆ ಹೇಳಿದ್ದಾರೆ. ಅವತ್ತಿನಿಂದ ಇವತ್ತಿನವರೆಗೆ ಏನಾದರೂ ಪ್ರಯತ್ನಗಳು ನಡೆದಿದೆಯಾ ಎಂದರೆ, ಏನೇನು ಕೂಡ ನಡೆದಿಲ್ಲ. ಇದರಲ್ಲಿ ನಾನು ಯಾರನ್ನು ದೂಷಿಸತಕ್ಕಂಥದ್ದು ಅಲ್ಲ. ಅಧಿಕಾರಿಗಳು ಏನು ಮಾಡುತ್ತಿದ್ದರು, ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಅದರ ಬಗ್ಗೆ ಏಕೆ ಗಮನವನ್ನು ಹರಿಸಲಿಲ್ಲ ಎನ್ನತಕ್ಕಂಥದ್ದು ಒಂದು ಮುಖ್ಯವಾದಂಥ ಅಂಶ. ಆದರೆ ಸುಮ್ಮನೆ ಬರಲಿಲ್ಲವೆಂದು ಹೇಳಿದರೆ, ಲಾಭವಲ್ಲದೆ ಅವರೇನು ಮಾಡುವುದಿಲ್ಲ. ಲಾಭ ಅಂತೂ ಇದ್ದೇ ಇದೆ. ಲಾಭ ಯಾವ ರೀತಿಯಾಗಿ ಇದೆ ಎನ್ನುವುದನ್ನು ನಾನು ಬಿಡಿಸಿ ಹೇಳಬೇಕಾಗಿಲ್ಲ. ಈಗ disputed area is demarcated and until the boundaries between the two states of

Karnataka and Andhra Pradesh lying between the disputed area is settled neither the petitioner nor the respondent 1 & 3 should operate in the disputed area or cause any person/persons to operate on their behalf. Respondent-1 is Karnataka and Respondent 3 is Andhra Pradesh. ಇವರಿಬ್ಬರ ಮಧ್ಯದಲ್ಲಿ ಇದು ಆಗಬೇಕಾಗಿದೆ. ಅದು ಆಗಲಿಲ್ಲ. ಅದರ ಬಗ್ಗೆ ಇವತ್ತು ಸಾಕಷ್ಟು ರೀತಿಯಲ್ಲಿ ಇವತ್ತು ಖಾಸಗಿಯವರ ಕೈಯಲ್ಲಿ ಹೋಗಿದೆ ಎನ್ನುವುದಕ್ಕೆ ಇವತ್ತು ಒಂದು ಉದಾಹರಣೆ, 21-8-2007 ರಲ್ಲಿ ಅಲ್ಲಿ DCF ಆಗಿರತಕ್ಕಂಥವರು ಅರಣ್ಯ ಸಂಚಾರಿದಳ ಬಳ್ಳಾರಿ ಕಛೇರಿಯಲ್ಲಿ ನಡೆದಂಥ ನಡವಳಿಕೆಗಳು ಎನ್ನುವಂಥ ರೀತಿಯಲ್ಲಿ ಒಂದು ಕಾಗದವನ್ನು ಇವತ್ತು ಬರೆದಿದ್ದಾರೆ. ಒಂದು complaint ಕೂಡ ಮಾಡಿದ್ದಾರೆ. ಅದನ್ನು ನಾನು ಹೇಳಬೇಕೆಂದರೆ, complaint ಕೊಟ್ಟಿರುವುದು ಸರ್ಕಾರದ ಅಧೀನದಲ್ಲಿಯೇ ಇದೆ. ಅದನ್ನು ಕೋಟ್ ಮಾಡುವುದರಿಂದ ಬಹುಶ ಅದರಿಂದ ಅದು ಏನು ತಪ್ಪಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. 21-8-2007 ರಲ್ಲಿ ಡಾ॥ ಪಿ. ರಾಜಶೇಖರನ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬರೆದಿರುವಂಥ ಒಂದು complaint. ಅದನ್ನು ಗೌರವಾನ್ವಿತ ಮುಖ್ಯಮಂತ್ರಿಗಳಾಗಿರತಕ್ಕಂಥವರಿಗೂ ಇವತ್ತು ಅದನ್ನು ಕೊಟ್ಟಿದ್ದಾರೆ. ಅರಣ್ಯ ಸಚಿವರಿಗೆ ಕೊಟ್ಟಿದ್ದಾರೆ. ಎಲ್ಲಾ ಅಧಿಕಾರಿಗಳಿಗೂ complaint ನ್ನು ಕೂಡ ಕೊಟ್ಟಿದ್ದಾರೆ. ಆ complaint ನಲ್ಲಿ ಏನು ಕೊಟ್ಟಿದ್ದಾರೆಂದರೆ, ತುಮಟಿ ಅರಣ್ಯ ಪ್ರದೇಶದಲ್ಲಿ ಪರಿಶೀಲನೆ ಮಾಡುತ್ತಿರುವ ಆಂಧ್ರಪ್ರದೇಶ ರಾಜ್ಯದ ರಾಯದುರ್ಗ, ವಲಯ ಅರಣ್ಯಾಧಿಕಾರಿಯಾದ ಶ್ರೀನಿವಾಸರೆಡ್ಡಿ, ವನಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಪೊಲೀಸ್ ಅಧಿಕಾರಿಯಾದ ರಾಜು ಇವರಿಗೆ ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿ ಮೆ॥ ಓಬಳಾಪುರಂ ಮೈನಿಂಗ್ ಕಾರ್ಪೋರೇಷನ್ ಪ್ರೈವೇಟ್ ಕಂಪನಿ ಲಿ., ಸುಮಾರು 20 ಎಕರೆ ಅರಣ್ಯ ಪ್ರದೇಶವನ್ನು ಆಕ್ರಮವಾಗಿ ಒತ್ತುವರಿಯನ್ನು ಮಾಡಿರುವ ಬಗ್ಗೆ ತಿಳಿಸಿದಾಗ ಅವರು ಸಹಕಾರವನ್ನು ಕೊಡದೇ ನಿರಾಕರಿಸಿದ್ದಾರೆ. ಅಲ್ಲಿಯೇ ಇದ್ದ ಮೆ॥ ಓಬಳಾಪುರಂ ಮೈನಿಂಗ್ ಕಾರ್ಪೋರೇಷನ್ ಪ್ರೈವೇಟ್ ಕಂಪನಿ ಲಿ., ರಾಮಚಂದ್ರರೆಡ್ಡಿಯವರು ನನ್ನನ್ನು ಮತ್ತು ನಮ್ಮ ಎಲ್ಲಾ ಸಿಬ್ಬಂದಿಗಳನ್ನು ಅವಾಚ್ಯ ಶಬ್ಧಗಳಿಂದ ಬೈದು ಗೂಂಡಾಗಿರಿಯಿಂದ ನಿಮ್ಮನ್ನು ಒಂದು ಕೈ ನೋಡಿಕೊಳ್ಳುತ್ತೇವೆಂದು ಬೆದರಿಸಿ ನಮ್ಮ ಸಿಬ್ಬಂದಿ ವರ್ಗದವರ

ಮೈಮುಟ್ಟಿ ತಳ್ಳಿರುತ್ತಾರೆ. ನಂತರ ಮಹೇಶ್ ಎಂಬುವವರ ಮೊಬೈಲ್ ಸಂಸ್ಥೆ ನಂಬರ್: 9880594990 ಯಿಂದ ನನ್ನ ಮೊಬೈಲ್‌ಗೆ ರಿಂಗ್ ಮಾಡಿ ನಾನು ಶ್ರೀರಾಮುಲುರವರ ಪಿ.ಎ. ಸಾಹೇಬರು ಮಾತನಾಡುತ್ತಾರೆಂದು ಫೋನ್ ಮಾಡಿ ಕಟ್ ಮಾಡಿರುತ್ತಾರೆ. ನಾನು ಕೊಡಿ ಎಂದು ಹೇಳಿದೆ. ನಂತರ 2 ನಿಮಿಷ ಬಿಟ್ಟು ಬೇರೆ ಫೋನ್ ನಲ್ಲಿ 9343594666ನಲ್ಲಿ ಮಾನ್ಯ ಮಂತ್ರಿಗಳಾದ ಶ್ರೀರಾಮುಲುರವರು ಪ್ರವಾಸೋದ್ಯಮ ಮತ್ತು ಜವಳಿ ಸಚಿವರು ಕರ್ನಾಟಕ ಸರ್ಕಾರ ಇವರು ಮೊಬೈಲ್‌ನಲ್ಲಿ ಸಂಪರ್ಕಿಸಿ ಇದರಿಂದ ನಿನಗೆ ಮುಂದೆ ತೊಂದರೆಯಾಗುತ್ತದೆ.

ನೀವು ಇಲ್ಲಿಗೆ ಬರಬೇಡಿ ಎಂದು ಹೆದರಿಸಿರುತ್ತಾರೆ. ಅದಕ್ಕಾಗಿ ನಾನು ವೈಯಕ್ತಿಕವಾಗಿ ಮಾತನಾಡಿ, ಈ ಬಗ್ಗೆ ಮಾತನಾಡಬೇಡಿ ದಯವಿಟ್ಟು ಅರಣ್ಯ ಸಚಿವರ ಜೊತೆಯಲ್ಲಿ ಮಾತನಾಡಿ ಎಂದು ಹೇಳಿರುತ್ತೇನೆ. ಆದರೆ ಅವರು ಮತ್ತೊಂದು ಸಲ ನನ್ನ ಮೊಬೈಲ್‌ನಲ್ಲಿ ನನ್ನನ್ನು ಅವಾಚ್ಯಶಬ್ದಗಳಿಂದ ನಿಂದಿಸಿ ನಿನ್ನನ್ನು ಮತ್ತು ನಿನ್ನ ಹೆಂಡತಿ ಮಕ್ಕಳ ಹೆಣವನ್ನು ಕಳುಹಿಸುತ್ತೇನೆಂದು ಹೇಳಿದರು. 3ನೇ ಸಲ ಫೋನ್ ಮಾಡಿ ರಾಜಶೇಖರನ್ ಈ ದಿನವೆ ನಿನ್ನ ಹೆಂಡತಿಯನ್ನು ಮತ್ತು ಮಕ್ಕಳನ್ನು ಎತ್ತಿಕೊಂಡು ಹೋಗುತ್ತೇನೆ. ನಿನ್ನನ್ನು ಮುಗಿಸುತ್ತೇನೆಂದು ಹೇಳಿರುತ್ತಾರೆ. ಈ ಮಾತುಗಳನ್ನು ನನ್ನ ಎಲ್ಲಾ ಸಿಬ್ಬಂದಿವರ್ಗದವರು ಕೇಳಿರುತ್ತಾರೆ. ಇದು ಅರಣ್ಯ ಕಾಯುವ ಕೆಲಸ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆ ಹೆಚ್ಚಿನ ದಿಸೆಯಲ್ಲಿ ತಡೆಗಟ್ಟಿ ಅರಣ್ಯ ಪ್ರಕರಣಗಳನ್ನು ದಾಖಲು ಮಾಡಲು ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತೇನೆ. ಇದು ತುಂಬಾ ಇದೆ ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಇದನ್ನು ಡಾ॥ ರಾಜಶೇಖರನ್‌ರವರು ಬರೆದಿರುವುದು.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, ನಾವು ಸಮಾಧಾನವಾಗಿ ಇದ್ದೇವೆ, ಸಮಾಧಾನವಾಗಿ ಕೇಳುತ್ತೇವೆ. ಸಮಾಧಾನವಾಗಿ ಮಾತನಾಡುವಂತಹ ಅವಶ್ಯಕತೆ ಇದ್ದರೆ ಮಾನ್ಯ ಸಭಾಧ್ಯಕ್ಷರು ಅನುಮತಿಯನ್ನು ಕೊಟ್ಟರೆ ಮಾತನಾಡುತ್ತೇವೆ. ಏಕೆಂದರೆ ಅವರು ಗಂಟೆಗಟ್ಟಲೆ ಮಾತನಾಡುತ್ತಿದ್ದಾರೆ. ಇಲ್ಲಿ ಮಾಧ್ಯಮಗಳು ಸಹ ಇವೆ. ಇವತ್ತಿನ ದಿವಸ ಸನ್ಮಾನ್ಯ ಜಯಚಂದ್ರರವರು ರಾಜಶೇಖರನ್ DFO ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅವರು

ಲೋಕಾಯುಕ್ತರ ದಾಳಿಗೆ ಒಳಪಟ್ಟಿರುವಂತಹ ಒಬ್ಬ ಅಧಿಕಾರಿಯಾಗಿದ್ದಾರೆ. ಮತ್ತು DFO ಹುದ್ದೆಗೂ ಕೂಡ ಅನರ್ಹ ಆಗಿರುವಂತಹ ಒಬ್ಬ ಅಧಿಕಾರಿಯನ್ನು ಅವತ್ತು ಮುಖ್ಯಮಂತ್ರಿಯು ಮೇಲೆ ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದಂತಹ ಒಬ್ಬ ಮುಖ್ಯಮಂತ್ರಿಯ ಮೇಲೆ ನಮ್ಮ ಒಂದು ಕುಟುಂಬದ ಹೋರಾಟ ಏನಿತ್ತು, ಅದರ ಮೇಲಿನ ಸೇಡಿನ ಮನೋಭಾವದಿಂದ ಕೆಲಸ ನಿರ್ವಹಿಸುತ್ತಿದ್ದ ಒಬ್ಬ ರಾಜಶೇಖರನ್ ಅಂತ ಒಬ್ಬ DFO ಕೊಟ್ಟಿರುವಂತಹ complaintನ ತಾವು ಇವತ್ತು ಏನು ಓದುತ್ತಿದ್ದೀರಿ, ರಾಜಶೇಖರನ್ ಬಗ್ಗೆ ಮಾಧ್ಯಮಗಳು ಇವತ್ತು ಇಡೀ ಕರ್ನಾಟಕದಲ್ಲಿ ಅವತ್ತು ಬಳ್ಳಾರಿ ಜಿಲ್ಲೆಯಲ್ಲಿ DFO ಹುದ್ದೆಗೆ ಯಾರು fit ಆಗಿದ್ದರೋ ಅಂತಹ ಮೂವರು ಅಧಿಕಾರಿಗಳನ್ನು ಬದಿಗಿಟ್ಟು ಒಬ್ಬ ಅನರ್ಹ DFO ಹುದ್ದೆಗೆ ನಾಲಾಯಕ್ ಆಗಿರುವಂತಹ ಒಬ್ಬ ವ್ಯಕ್ತಿಯನ್ನು official ಆಗಿrules ಆಗಿ ತೆಗೆದುಕೊಂಡರು ಸಹ ಆ postನಲ್ಲಿ ಕೂರಿಸುವುದಕ್ಕೆ ಆಗದೆ ಹೋದರೂ ಕೂಡ ಲೋಕಾಯುಕ್ತ ದಾಳಿಗೆ ಗುರಿಯಾಗಿದ್ದರೂ ಕೂಡ ಅವನನ್ನು suspend ಮಾಡಬೇಕೆಂದು ಹೇಳಿ ಕೆಳಗಿನ ಅಧಿಕಾರಿಗಳು recommend ಮಾಡಿದರೂ ಕೂಡ ಅಲ್ಲಿರುವಂತಹ ಒಬ್ಬ ಅಧಿಕಾರಿಯವರು. ಅಂದರೆ ಇದು ನಿಮ್ಮ ಗಮನಕ್ಕೆ ಇರಲಿ, ಅವರು complaintನ್ನು ಕೊಟ್ಟಿದ್ದಾರೆ ಅದನ್ನು ತಾವು ಓದಿದ್ದೀರಿ. But ಆ ಅಧಿಕಾರಿಯ ಹಿನ್ನೆಲೆಯನ್ನು ಸಹ ಹೇಳಬೇಕಾಗುತ್ತದೆ ಅದಕ್ಕಾಗಿ ನಾನು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಏನಾಗಿದೆ ಎಂದರೆ ಇವತ್ತು ಬೆಳಿಗ್ಗೆ adjournment motion ಅನ್ನು raise ಮಾಡುವಂತಹ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ಅಧಿಕಾರಿಗಳನ್ನು ನಾಲ್ಕು ಜನ Principal Conservatorಗಳು ಇರುತ್ತಾರೆ. ಕೆಳಗಿರುವವರನ್ನು ತೆಗೆದುಕೊಂಡು ಹೋಗಿ ಮೊದಲನೆಯವನ ಜಾಗಕ್ಕೆ ಕೂರಿಸಿ ಅಲ್ಲಿ ಮಾಡಿಲ್ಲವೇ? ಅದು ನಡೆದಿದೆ. ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅಧಿಕಾರಿ ಕೆಟ್ಟವನೋ .....

ಶ್ರೀ ಜಿ. ಜನಾರ್ಧನರೆಡ್ಡಿ :- ಅವರ ಮೇಲೆ ಲೋಕಾಯುಕ್ತ ದಾಳಿಯೂ ಸಹ ಆಗಿದೆ. ಅವರ ಕೆಳಗಡೆ ಇರುವಂತಹ ಅಧಿಕಾರಿಗಳು ಅವರನ್ನು suspend ಮಾಡಬೇಕೆಂದು ಕೂಡ recommend ಮಾಡಿದ್ದರು. ಆ ಅಧಿಕಾರಿ ಹಿನ್ನೆಲೆ ಕೂಡ ತಮಗೆ ಗೊತ್ತಾಗಬೇಕಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ :- ಇಲ್ಲಿಯುವರೆಗೆ ಏತಕ್ಕಾಗಿ ಅವನನ್ನು dismiss ಮಾಡಿಲ್ಲ. ಅದು ಬೇರೆ ಪ್ರಶ್ನೆ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಆ ಅಧಿಕಾರಿ ಹಿನ್ನೆಲೆಯೂ ಕೂಡ ತಮಗೆ ಗೊತ್ತಾಗಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :- ಲೋಕಾಯುಕ್ತ enquiry ಆಗಿದೆ ಎನ್ನುವ ಕಾರಣಕ್ಕೋಸ್ಕರ ಅಧಿಕಾರಿ ಒಬ್ಬ ಭ್ರಷ್ಟ ಅವನು ಹೇಳತಕ್ಕಂಥದ್ದು ಎಲ್ಲ ಸುಳ್ಳು ಎಂದು ಹೇಳುವುದು ಅಲ್ಲ.

ಶ್ರೀ ಜಿ. ಜನಾರ್ಧನರೆಡ್ಡಿ :- ನಾನು ಅವರ ಹಿನ್ನೆಲೆಯ ಬಗ್ಗೆ ಸಹ ತಮಗೆ ಒಂದು ಮಾಹಿತಿಯನ್ನು ಕೊಡುತ್ತಿದ್ದೇನೆ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಅದು ಅಲ್ಲ. ಯಾವ ಅಧಿಕಾರಿ ಪ್ರಾಮಾಣಿಕನೋ, ಅಪ್ರಮಾಣಿಕನೋ, ಭ್ರಷ್ಟನೋ ಅದು ಬೇರೆ ವಿಚಾರ. ಅದರ ಬಗ್ಗೆ ನೀವು ಕಾನೂನಿನ ಕ್ರಮ ತೆಗೆದುಕೊಳ್ಳಿ. ಅವರನ್ನು ಶೂಲಕ್ಕೆ ಏರಿಸಿ,ಅವನನ್ನು suspend ಮಾಡಿ, Dismiss ಮಾಡಿ. ಆದರೆ ಇಲ್ಲಿ ಆ ಕಾಗದ ಇದೆ. ಅವರು ಬರೆದಿರುವಂತಹ ಪತ್ರ ಹಾಗೂ report ಸಹ ಇದೆ. ಆ reportನಲ್ಲಿ ಸತ್ಯಾಂಶ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತನಿಖೆಯಿಂದಲೇ ಗೊತ್ತಾಗುತ್ತದೆ. ನಾನು ನನ್ನ ವಾದವನ್ನು ಮಂಡಿಸುತ್ತೇನೆ. ತಾವು ನಿಮ್ಮ ವಾದವನ್ನು ಮಂಡಿಸುತ್ತೀರಿ. ಅದಕ್ಕೆ ಅಂತಿಮವಾಗಿ ಹೇಳುವುದರ ಬಗ್ಗೆ ಯಾರಾದರೂ ಒಬ್ಬರು ಬೇಕಲ್ಲವೇ? ಅದನ್ನು ಏತಕ್ಕಾಗಿ ಪ್ರಸ್ತಾಪ ಮಾಡಬೇಕಾಗಿದೆ ಎಂದರೆ ಮುಂದೆ ಇವೆಲ್ಲವೂ ಕೂಡ controversy ಗಳು ಇವೆ. ಅದರ ಬಗ್ಗೆ enquiry ಆಗಲಿ. ಏನಾಗುತ್ತದೆ ಎಂದು ನೋಡೋಣ. ಆದರೆ ನೀವು ಒಬ್ಬರು ಭ್ರಷ್ಟ ಅಧಿಕಾರಿ ಎಂದ ಕೂಡಲೆ ಅವನು ಹೇಳಿದ್ದೆಲ್ಲವೂ ಅಸತ್ಯ ಎಂದು ಹೇಳುವುದಕ್ಕಾಗುವುದಿಲ್ಲ ಅಥವಾ ಸತ್ಯಕ್ಕೆ ದೂರವಾದುದು ಎಂದು ಹೇಳುವುದಕ್ಕಾಗುವುದಿಲ್ಲ. ಇದು ಯಾವಾಗ ಗೊತ್ತಾಗುತ್ತದೆ ಎಂದರೆ ತನಿಖೆಯಿಂದ ಗೊತ್ತಾಗುತ್ತದೆ. ತನಿಖೆ ಹೊರಗೆ ಬರಲಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಅಧಿಕಾರಿಯ ಹೆಸರನ್ನು ಹಿಡಿದು ಕರೆಯುವುದಕ್ಕಾಗುವುದಿಲ್ಲ. ಆ

ಅಧಿಕಾರಿಯೂ ಈ ಜಾಗದಲ್ಲಿ ಬಂದು ನಿಂತುಕೊಂಡು ಮಾತನಾಡುವಂತಹ ಶಕ್ತಿಯಿದೆಯೇ? ಈ ರಾಜ್ಯದಲ್ಲಿ ಲೋಕಾಯುಕ್ತರಿಂದ ಎಷ್ಟು ಜನ ರೈಡ್ ಆಗಿದ್ದಾರೆ, ಯಾರ್ಯಾರ ಹತ್ತಿರ ಎಷ್ಟೆಷ್ಟು ಕೋಟಿಗಟ್ಟಲೆ ಹಣ ಇರುವವರೆಲ್ಲರನ್ನು ನೀವು ಕ್ಯಾಬಿನೆಟ್ ನಲ್ಲಿಟ್ಟು ಅದೆಲ್ಲವನ್ನು ತಂದಿದ್ದೀರಲ್ಲಾ ಅವರನ್ನು suspend ಅಲ್ಲ dismiss ಮಾಡಿ. ಬೇಕಾದರೆ ಅವರನ್ನು ಜೈಲಿಗೆ ಹಾಕಿಸಿ, ಬೇಡವೆಂದು ನಾವು ಹಿಡಿದುಕೊಂಡಿದ್ದೀವಾ? ಭ್ರಷ್ಟ ಅಧಿಕಾರಿಗಳು ಯಾರು ಇದ್ದಾರೆ ಕಳ್ಳರಿಗೆಲ್ಲರಿಗೂ ನೀವು ಮತ್ತೆ ಕರೆದು ಜಿಲ್ಲಾಡಳಿತವನ್ನು ಕೊಡುತ್ತೀರಿ. ಲೋಕಾಯುಕ್ತದಿಂದ ರೈಡ್ ಆಗಿ ಅಂತಹವರು ಎಷ್ಟು ಜನ ಇದ್ದಾರೆ ಅದನ್ನು ದಯಮಾಡಿ ಸಭೆಯ ಮುಂದೆ ಇಡಿ. ಬೇಕಾದರೆ ಇವತ್ತು ಆ ಬಗ್ಗೆ ಚರ್ಚೆಯನ್ನು ಮಾಡೋಣ. ಬೇಕಾದರೆ ಇವತ್ತು ಯಾರ್ಯಾರು ಈ ರಾಜ್ಯದಲ್ಲಿ ಭ್ರಷ್ಟ ಅಧಿಕಾರಿಗಳು ಇದ್ದಾರೆ ಅವರ ಬಗ್ಗೆ ಚರ್ಚೆ ಮಾಡುವ ಬಗ್ಗೆ ಒಂದು ದಿನ ಟೈಮ್‌ನ್ನು ನಿಗಧಿಪಡಿಸಿ. ನಾವೆಲ್ಲರೂ ಬೇಕಾದರೆ ಸರ್ವಾನುಮತದಿಂದ opposition side ನಲ್ಲಿ ಕೈಯಲ್ಲಿ ಕೊಡುತ್ತೇವೆ. ಯಾರ್ಯಾರು ಕಳ್ಳರಿದ್ದಾರೆ, ಅವರ ಮೇಲೆ ಏನೂ ಕ್ರಮ ತೆಗೆದುಕೊಂಡರೂ ನಾವು ರೆಡಿ ಇದ್ದೇವೆ. ಯಾರ ಪರವೂ ವಹಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಈಗ ಚರ್ಚೆ ಆಗುತ್ತಿರುವ ವಿಷಯವು ಯಾವುದೆಂದು ಸಭಾಧ್ಯಕ್ಷರು ಗಮನಹರಿಸಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೆ, ತಾವು continue ಮಾಡಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಜಯಚಂದ್ರರವರೆ ಒಂದು ನಿಮಿಷ ತಾಳಿ, ನಾನು ಮಾತನಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಈ ರೀತಿಯಾಗಿ ಇಲ್ಲಿ ಅಧಿಕಾರಿಗಳು ಒಳ್ಳೆಯವರು ಮತ್ತು ಕೆಟ್ಟವರು ಎಂಬ ಪ್ರಶ್ನೆ ಬೇಡ. ಅವರ ಮೇಲೆ ಏನು ಬೇಕಾದರೂ ತಾವು ಕ್ರಮವನ್ನು ತೆಗೆದುಕೊಳ್ಳಿ. ಆದರೆ ಇದೊಂದು ಸರ್ಕಾರಿ ದಾಖಲೆ, ಸರ್ಕಾರದಲ್ಲಿ ಅಧಿಕೃತವಾಗಿ complaint ಮಾಡಿದ್ದಾರೆ. ಆ complaint ಮಾಡಿದ್ದು ಆದ ಮೇಲೆ ಅದರ ಮೇಲೆ ಏನು action ಅಯಿತು ಎಂಬ ಬಗ್ಗೆ ಅದು ನಮಗೆ ಗೊತ್ತಾಗಬೇಕಲ್ಲವೇ? ಅದು ಏನು ಕತೆ, complaint is alive. complaint ಕೊಟ್ಟಿರುವುದಕ್ಕೆ ಆಧಾರ ಅದು 1972ರಿಂದಲೂ ಕೂಡ dispute ಇದೆ. ಆದರೆ ಆ Area ದಲ್ಲಿ ಇವತ್ತು leasesಗೆ

permission ಕೊಟ್ಟಿರುವಂತಹದ್ದು ಸಾರಾಸಗಟಾಗಿ ಇವತ್ತು mines ರವಾನೆಯಾಗುತ್ತಿದೆಯಲ್ಲಾ ಇದು ಸರಿಯೇ? ಅದು ಕರ್ನಾಟಕದ ಸಂಪತ್ತು ಕೊಳ್ಳೆ ಹೊಡೆದಹಾಗೆ ಅಲ್ಲವೇ? ಅಧಿಕೃತವಾಗಿ ಒಂದು ಕಡೆ royalty ಬಗ್ಗೆ. Royalty ಇರತಕ್ಕಂಥಹದ್ದಲ್ಲ ರಾಯಲ್ಟಿ ಇಲ್ಲದೆ ಹೋಗಿರುವಂತಹದ್ದು. ರಾಯಲ್ಟಿಯಿಂದಲೂ ಹೋಗತಕ್ಕದ್ದು, Nominal royalty ಇವೆಲ್ಲವನ್ನು ನೋಡಿದರೆ ಇವತ್ತು ನಮ್ಮ ಸಂಪತ್ತು ಹೋಗಿರುತ್ತದೆ. ಇವತ್ತು ನಾವು ಯೋಚನೆಯನ್ನು ಮಾಡಬೇಕು. ಎಲ್ಲೋ ಒಂದು ಕಡೆಗೆ ಈ ರೀತಿ ಇರುವುದರಿಂದ ಗಣಿಗಾರಿಕೆಯ ವಿಚಾರದಲ್ಲಿ ತಾವು ಹೆಚ್ಚು ಅಸಕ್ತಿಯನ್ನು ವಹಿಸಬೇಕಾಗುತ್ತದೆ. ನಾನು ಒಂದು ಮಾತನ್ನು ಸಹ ಹೇಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರಾದ ಶ್ರೀ ಈಶ್ವರಪ್ಪನವರಿಗೆ ಗೊತ್ತಿದೆ. ಹಿಂದೆ ಗ್ರಾನೈಟ್ ಕಮಿಟಿಯ ಸಂಬಂಧ ಜಂಟಿ ಸದನ ಸಮಿತಿಯಾದಾಗ ನಾನು ಮತ್ತು ನೀವು ಮಾನ್ಯ ಯಡಿಯೂರಪ್ಪನವರು ಮತ್ತು ಎಲ್ಲರೂ ಕೂಡ ಅ ಸಮಿತಿಯ ಸದಸ್ಯರಾಗಿ ದ್ದೆವು. ನಾವೆಲ್ಲರೂ ಹೊರ ರಾಜ್ಯಕ್ಕೆ ಹೋಗಿದ್ದೆವು. ಮಧ್ಯಪ್ರದೇಶ ಹಾಗೂ ಓರಿಸ್ಸಾ ರಾಜ್ಯಕ್ಕೂ ಕೂಡ ಹೋಗಿದ್ದೆವು. ಓರಿಸ್ಸಾಕ್ಕೆ ಹೋದಾಗ ಅಲ್ಲಿ ಏನು ಸಂತೋಷವಾಯಿತೆಂದರೆ ಅವರಿಗೆ ತೆರಿಗೆಯಿಂದ ಸಾವಿರಾರು ಕೋಟಿ ರೂಪಾಯಿಗಳು ಬರುತ್ತಿದೆ. ಅವರು ಯಾವ ರೀತಿಯಾಗಿ ನಿಯಂತ್ರಣವನ್ನು ಮಾಡಿದ್ದಾರೆ. ಅದನ್ನು ಹೇಗೆ ಮಾಡಿದ್ದಾರೆ ಇದಕ್ಕೆ ಯಾರು ಅಲ್ಲ, ಆ ರಿಪೋರ್ಟಿಗೆ signatory ಯಾಗಿ ನಾನು ಇದ್ದೇನೆ, ಮಾನ್ಯ ಯಡಿಯೂರಪ್ಪನವರು ಸಹ ಇದ್ದಾರೆ, ಮಾನ್ಯ ಈಶ್ವರಪ್ಪನವರು ಸಹ ಇದ್ದಾರೆ, ಬಹಳಷ್ಟು ಜನ ಆ ಕಡೆಯಲ್ಲಿ ಕುಳಿತಿರುವಂತಹ ಸದಸ್ಯರುಗಳು ಸಹ ಇದ್ದಾರೆ. ಅವರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ ತಾವು ಒಂದು ಸಾರಿ ನೋಡಿ. ಇವೆಲ್ಲವೂ ಆದ ಮೇಲೆ ಒಂದು mining policy ಯನ್ನು ತಾವು ತಂದಿದ್ದೀರಿ ಸ್ವಾಮಿ. Mining Policy ಎಂದರೆ ನಾವು ಯಾವುದರಲ್ಲೂ ಕೂಡ ಸರ್ಕಾರ ದೂರದೃಷ್ಟಿಯಲ್ಲ, ಹೊರಗಡೆಯಿಂದ ಬರತಕ್ಕಂತಹ ಬಂಡವಾಳವನ್ನು ಹಾಕತಕ್ಕಂತಹವರನ್ನು attract ಮಾಡುವುದಕ್ಕೋಸ್ಕರ ಮಾಡತಕ್ಕಂತಹ ದೂರದೃಷ್ಟಿಯುಳ್ಳ ಒಂದು ಸರ್ಕಾರಿ ದಾಖಲೆ. ಒಂದು policyಯನ್ನು ತಾವು ಮಾಡಿದ್ದೀರಿ. ಅದು ಮೊನ್ನೆ ಡಿಸೆಂಬರ್ 16ನೇ ತಾರೀಖಿನ ಗೆಜೆಟ್‌ನಲ್ಲಿ ಬಂದಿದೆ. ಅದು ನಿನ್ನೆಯಷ್ಟೆ ನನ್ನ ಕೈಗೆ ಸಿಕ್ಕಿತು. ಅದನ್ನು ನಾನು ಹೇಳುತ್ತೇನೆ. ನೀವು ಪಾಲಿಸಿಯನ್ನು ನೀವು ಯಾವ ದೃಷ್ಟಿಯಲ್ಲಿ ನೋಡಬೇಕು. ನೀವು ಯಾವತ್ತೇ ಪಾಲಿಸಿಯನ್ನು ಮಾಡಬೇಕಾದಾಗಲೂ ಕೂಡ ಇವತ್ತು ಖಾಸಗಿ

ಕಂಪನಿಯವರು ಬಂಡವಾಳವನ್ನು ಹೂಡುವ ಬಗ್ಗೆ ನಮ್ಮ ರಾಜ್ಯಕ್ಕೆ ಬರುವುದಕ್ಕೋಸ್ಕರ ನಾವು ಎಲ್ಲಾ ರೀತಿಯಿಂದಲೂ ಕೂಡ ಪಾಲಿಸಿಯನ್ನು ಮಾಡಬೇಕಾಗುತ್ತದೆ. ಇವತ್ತು ಮಾಹಿತಿ ತಂತ್ರಜ್ಞಾನ ಇರಬಹುದು, ಜೈವಿಕ ತಂತ್ರಜ್ಞಾನ ಇರಬಹುದು, ಸಾಕಷ್ಟು ರೀತಿಯಲ್ಲಿ ಇವತ್ತು ನಮ್ಮ ದೇಶಕ್ಕೆ ಬಂಡವಾಳವು ಹರಿದುಬರುತ್ತಿದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳೂ ಅಮೇರಿಕಾಕ್ಕೆ ಹೋದರು, ಇನ್ಯಾವುದೋ ದೇಶಕ್ಕೆ ಹೋದರು ಇವತ್ತು ಸಾಕಷ್ಟು ರೀತಿಯಲ್ಲಿ ಹಣ ಬರುತ್ತಿದೆ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಯಾವ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬರುವುದಾದರೆ Yes ಅದು ಬರಲಿ. ಅದರಿಂದ ನಮಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಇದರಿಂದಾಗಿ ಎಷ್ಟೋ ಜನರಿಗೆ ಕೆಲಸಗಳು ಸಿಗುತ್ತದೆ. ಅಥವಾ ಬೇರೆ ಇನ್ಯಾವುದೋ ರೀತಿಯಲ್ಲಿ ಬರಲಿ, ದೊಡ್ಡದೊಡ್ಡ industriesಗಳು ಸಹ ಬರಲಿ. ಆದರೆ ಗಣಿಗಾರಿಕೆ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಅದು ಕರ್ನಾಟಕದ ಸಂಪತ್ತು, ಅದು ಯಾರೊಬ್ಬರ ಆಸ್ತಿ ಅಲ್ಲ, ಕರ್ನಾಟಕದ 6 ಕೋಟಿ ಜನರ ಸಂಪತ್ತು. ಅದನ್ನು ನಾವು ಲೀಸಸ್ ಕೊಡಬೇಕಾದಾಗ ಅದಕ್ಕೆ ನೀವು policyಯನ್ನು ಮಾಡಬೇಕಾದಾಗ ಇಡೀ ಕರ್ನಾಟಕದ ಸಮಗ್ರ ದೃಷ್ಟಿಯನ್ನಿಟ್ಟುಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ ಅದು ಆಗಿದೆಯೋ ಎಂದು ಹೇಳಬೇಕಾದರೆ, ಬಹುಶ: ಎಲ್ಲೋ ಒಂದು ಕಡೆಗೆ ನಾನು ಸುರೇಶ್‌ಕುಮಾರ್‌ರವರಿಗೆ ಹೇಳುತ್ತೇನೆ. ಇದು ಎಲ್ಲೋ typed copy ಸಿಕ್ಕಿರುವುದು ಬಹುಶ: ಯಾರೋ type ಮಾಡಿರುವುದನ್ನು ಏನಾದರು ಇಟ್ಟುಬಿಟ್ಟು policy ಎಂದು announce ಮಾಡಿಬಿಟ್ಟಿದ್ದೀರಾ ಅಂತ ನನಗೆ ಅನಿಸುತ್ತಿದೆ. ಆ ತರಹ ಅನುಮಾನ ಬರುವ ರೀತಿಯಲ್ಲಿದೆ. ಅದರ ಒಂದೇ content ಹೇಳುತ್ತೇನೆ. Minerals will continue to be exported to earn foreign exchange. ಸ್ವಾಮಿ foreign exchange! ಎಂತಹ ದೇಶಪ್ರೇಮ, ಈ ದೇಶದ ಬಗ್ಗೆ, finances ಬಗ್ಗೆ ಎಂಥ ಅಗಾಧವಾದಂತಹ ಕಳಕಳಿ ಇವತ್ತು ಸರ್ಕಾರಕ್ಕೆ ಇದೆ ನೋಡಿ ಸ್ವಾಮಿ. Foreign Exchange ಬರುವುದಕೋಸ್ಕರ ಇವತ್ತು exportನ್ನು promote ಮಾಡಬೇಕೆಂದು ಹೇಳಿ ಇವತ್ತು ನೀವು policyನಲ್ಲಿ ತರುತ್ತೀರಲ್ಲಾ, ಈ ಬಗ್ಗೆ ನಾನು ಏನೆಂದು ಹೇಳಬೇಕು ಸ್ವಾಮಿ. The revenues from minerals will be rationalized to ensure that the

mineral bearing states get a fair share of the value of minerals extracted. States will be assisted to overcome the problem of illegal mining through operational and financial linkages with Indian Bureau of Mines.

ಇಲ್ಲಿ ಕರಪ್ಟ್ ಎಂದರೆ ಇಡೀ ಭಾರತ ದೇಶದಲ್ಲಿರುವ ಇಲಾಖೆಗಳಲ್ಲಿ ಭ್ರಷ್ಟಾಚಾರವನ್ನು ಮಾಡಿ ಅವರು illegal mining ಅನ್ನು regularize ಮಾಡುವುದಕ್ಕೆ Bureau of Mines ಅವರ ಮುಂದೆ ಹೋಗಬೇಕಾಗುತ್ತದೆ ಎಂದು ಹೇಳಿ ನೀವು ಪಾಲಿಸಿಯಲ್ಲಿ ತರುತ್ತೀರಲ್ಲಾ The research and development in minerals will receive prime importance and a comprehensive institutional framework for R&D and Training will be developed. ಎಂಥಾ ದೂರದೃಷ್ಟಿ ಸ್ವಾಮಿ? ನನಗಂತೂ ಅರ್ಥವಾಗುತ್ತಿಲ್ಲ. ನನ್ನ ರಾಜಕೀಯ ಜೀವನದಲ್ಲಿ ಇಷ್ಟೊಂದು ದೂರದೃಷ್ಟಿಯುಳ್ಳ ಒಂದು ಪಾಲಿಸಿಯನ್ನು ನಾನೆಲ್ಲೋ ನೋಡಿರಲಿಲ್ಲ. The National Mineral Policy, 2008 differs from the earlier policy, ಹಿಂದೆ ಮಾಡಿದವರು ದಡ್ಡರು,by introducing an open sky policy on non-exclusivity for reconnaissance work, large area prospecting license, seamless transfer and security of tenure to the entrepreneurs. The MMDR Act, the MCRs and the MCDRs are being amended by Government of India in line with the policy in consultation with the states. This has necessitated changes in the policy and the legal regime regulating the growth and development of the mineral sector in Karnataka. Keeping in view of the objectives

of National Mineral Policy 2008, Government of Karnataka has come out with Mineral Policy 2008. ಎಂಥ ದೂರದೃಷ್ಟಿ ಸ್ವಾಮಿ ಇದು? ಇದಂತೂ ಬಹಳ ಮುಖ್ಯವಾಗಿ ಸರ್ಕಾರಕ್ಕೆ ಇವತ್ತು ಎಷ್ಟು ಕಳಕಳಿ ಎಂದು ಹೇಳಿದರೆ bio-diversity ಬಗ್ಗೆ ಬಹಳ ಇದೆ. ಪಾಲಿಸಿಯಲ್ಲಿ ಏನು ಮಾಡುತ್ತಾರೆಂದರೆ To resolutely pursue the policy of preserving flora, fauna and bio-diversity and ensure that the invaluable forest wealth is safeguarded while granting mineral concessions. ಅಧ್ಯಕ್ಷರೇ ಇದರಲ್ಲಿ ಸ್ಫೂರ್ತಿ ಬರಬೇಕಾದರೆ ನೀವು ಇದನ್ನು ಒಂದು ಸಾರಿ ಓದಬೇಕು. ಇವತ್ತು Flora and Fauna ಎಂದರೆ ಏನು ಎಂದು ಹೇಳಿ areas ಇದೆ ಎಂದು ಗೊತ್ತೆ, ಏನು ಹೇಳುತ್ತಾರೆ ಗೊತ್ತೇ? ಕಟುಕರ ಮುಂದೆ ಹೋಗಿ ಭಗವದ್ಗೀತೆ ಹೇಳಿದಂತೆ. ಅವರ ಮುಂದೆ ಹೋಗಿ ಇವತ್ತು Flora and Fauna ವನ್ನು protect ಮಾಡಲಿಕ್ಕೋಸ್ಕರ ಇವತ್ತು mineral concession ಅನ್ನು ರೂಲ್ಸ್ ಪ್ರಕಾರ leases ಕೊಡಬೇಕಂತೆ. ಏನಪ್ಪಾ ಪಾಲಿಸಿ ಇದು? Priority will be given to the applicants who propose establishment of industries for value addition within the vicinity of the mineral bearing areas. The Government will explore the possibility of notifying mineral bearing areas to avoid clash of interest between mineral exploitation and other development activities. To promote indigenous utilization of iron ore fines and beneficiation of low grade ores and the review of mining areas granted to public/private companies periodically to ascertain the adherence to mining plan and discourage unproductive holding-on to large mineral

resources. ಅಂದರೆ ಇದು ಯಾರ ಕಡೆ ದೃಷ್ಟಿಯಿರುವುದು ಗೊತ್ತೇನು? ಮೈಸೂರು ಮಿನರಲ್ಸ್ ಲಿಮಿಟೆಡ್ ವ್ಯಾಪ್ತಿಯಲ್ಲಿ I am on records ಇವತ್ತು ಸುಮಾರು ಒಂದು ಲಕ್ಷ ಕೋಟಿ worth mines is there in my M.M.L. areas. ಆ M.M.L areas ಅನ್ನು ನೀವು ಕಿತ್ತುಕೊಳ್ಳುವುದಕ್ಕೋಸ್ಕರ ಪಾಲಿಸಿ ಅಂದರೆ ಅವರು ಏನೂ ಡೆವಲಪ್ ಮಾಡುತ್ತಿಲ್ಲ, ಅದಕ್ಕೋಸ್ಕರ ನಾವು ಅದನ್ನು ವಾಪಸ್ಸು ಕಿತ್ತುಕೊಂಡು ಬಿಡೋಣ ಎನ್ನತಕ್ಕಂಥ ಪಾಲಿಸಿಯನ್ನು ತರುತ್ತೀರಲ್ಲಾ ನಿಮ್ಮ ದೂರದೃಷ್ಟಿತನವನ್ನು ಮೆಚ್ಚಬೇಕೋ ಬೇಡವೋ ಹೇಳಿ and to ensure the better quality of life for mine workers. ಏನು ಸ್ವಾಮಿ ಸುರೇಶ್‌ಕುಮಾರ್‌ರವರೇ, ನಾವು ಚಿಕ್ಕನಾಯಕನಹಳ್ಳಿಯಲ್ಲಿ ಹೋಗಿ ನೋಡಿದೆವು. ಆ ಮೈನ್ಸ್ ಕೆಲಸಗಾರರು ಏನು ಚೆನ್ನಾಗಿದ್ದಾರೆಂದರೆ ನಿಜವಾಗಲೂ ಅಧ್ಯಕ್ಷರೇ, ಹೆಣ್ಣುಮಕ್ಕಳು ಕಲ್ಲನ್ನು ಹೊಡೆಯುತ್ತಿರುತ್ತಾರೆ. ಮಕ್ಕಳು ಇವತ್ತು ಊಟ ಇಲ್ಲದೆ ಧೂಳು ಕುಡಿಯುತ್ತಾ ಕುಳಿತಿರುತ್ತಾರೆ. ಕುಡಿಯುವುದಕ್ಕೆ ನೀರು ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಹೊಟ್ಟೆಪಾಡಿಗೋಸ್ಕರ ಜೀವ ಉಳಿಸಿಕೊಳ್ಳುವುದಕ್ಕೋಸ್ಕರ ಮಾಡುತ್ತಿರಬೇಕು. ಮೈನ್ಸ್‌ನಲ್ಲಿ ಕೆಲಸ ಮಾಡುವ ಯಾರೊಬ್ಬ ಹೆಣ್ಣುಮಕ್ಕಳು ಒಳ್ಳೆಯ ಸೀರೆ , ಪುರುಷರು ಒಳ್ಳೆಯ ಷರ್ಟ್ ಹಾಕಿದ್ದನ್ನು ನಾನು ನೋಡಿಲ್ಲ. ನಿಮ್ಮ ಕಣ್ಣಿಗೂ ಎಲ್ಲಿಯೂ ಕಾಣಲಿಲ್ಲ. ಆ ಹಳ್ಳಿಗಳಲ್ಲಿಯೂ ನೋಡಲಿಲ್ಲ. ಅವರ ಆರೋಗ್ಯದ ಬಗ್ಗೆ, ಕುಡಿಯವ ನೀರಿನ ಬಗ್ಗೆ ಬಹಳ ಕಾಳಜಿ. ಅಬ್ಬಬ್ಬಾ ನನಗೇನೂ ಅರ್ಥವಾಗುತ್ತಿಲ್ಲ. To formulate rules to regulate mineral trade and establishment of stockyards to ensure adherence to provisions of acts and rules by traders. ಇನ್ನೊಂದು ಬಹಳ beautiful ಆಗಿ ಬಹಳ ದೂರ ದೃಷ್ಟಿಯಿಟ್ಟುಕೊಂಡಿದ್ದಾರೆ. Western Ghats is covered by thick evergreen forest with rare species.ಇದು ಯಾರಿಗೂ ಗೊತ್ತಿರುವುದಿಲ್ಲ. ಈ ಪಾಲಿಸಿ ಹೇಳಿದ ಮೇಲೆ ಗೊತ್ತಾಗಿದ್ದು. The area is ecologically fragile. Western Ghats have influence over the rainfall pattern of the State. However, carrying out survey and exploration to discover the mineral resources will be

allowed without disturbing ecology, as in future with advanced methods of mining, it may be possible to extract minerals with minimum damage to the forest. ಮೊದಲನೇ ಸಾಲಿನಲ್ಲಿ flora and fauna ಅನ್ನು protect ಮಾಡಬೇಕು ಎಂದು ಹೇಳಿದ್ದೀರಿ. ನಾನೇನು ಹೇಳುತ್ತೇನೆಂದರೆ, ಇವತ್ತು ಪಶ್ಚಿಮ ಘಟ್ಟದಲ್ಲಿ ಇವತ್ತು ಗಣಿಗಾರಿಕೆಯನ್ನು ಮಾಡಬಾರದು ಎನ್ನುವ ಕಾರಣಕ್ಕೋಸ್ಕರ ಇವತ್ತು ಕುದುರೆಮುಖ Iron ores ಅನ್ನು ಸುಪ್ರೀಂಕೋರ್ಟ್‌ನ ಆದೇಶದನ್ವಯ ಮುಚ್ಚಿದ್ದೇವೆ. ಏಕೆ ಅದನ್ನು ಮಾಡಿದ್ದೇವೆಂದರೆ Supreme Court closed the Kuduremukh iron ore due to only reason that it will spoil the flora and fauna. ಇವತ್ತು ಒಂದು ಕಡೆ flora and fauna ಅನ್ನು ರಕ್ಷಣೆ ಮಾಡಬೇಕೆಂದು ಹೇಳಿದರೆ ಮತ್ತೊಂದು ಕಡೆ ಮೈನಿಂಗ್ಸ್ ಮಾಡಬೇಕೆಂದು ಹೇಳುತ್ತೀರಿ. Western Ghats has thick vegetation area which needs to be preserved is clearly demarcated by the forest department, and will be declared as ecologically sensitive areas. ಇಂಥ areas ಎಂದು declare ಮಾಡುವವರು ಯಾರು ಎಂದು ಹೇಳಿದರೆ ಇಡೀ ಪ್ರಪಂಚದ ಮಟ್ಟದಲ್ಲಿ ಪಶ್ಚಿಮ ಘಟ್ಟ 28 ಜಾಗಗಳನ್ನು sensitive areas ಎಂದು ಗುರುತು ಮಾಡಿದ್ದಾರೆ. ಇವತ್ತು ನಾವೆಲ್ಲಾ ಇಲ್ಲಿ ಕುಳಿತಿರಬೇಕಾದರೆ ಇಡೀ ಪ್ರಪಂಚದಲ್ಲಿ ಕಾಣುವಂಥ ಎಲ್ಲಾ ಜೀವಾಣುಗಳಿಗೆ ಮೂಲ ಯಾವುದು ಎಂದರೆ, ಮನೆ ಯಾವುದೆಂದರೆ ಪಶ್ಚಿಮ ಘಟ್ಟ. ಪಶ್ಚಿಮ ಘಟ್ಟದಿಂದಲೇ ಎಲ್ಲಾ ಪ್ರಾಣಿ, ಕುಲ, ವಂಶಗಳು ಬೆಳೆದು ಬಂದಿರುವಂಥದ್ದು. ಅದನ್ನು ಮುಟ್ಟಬಾರದು ಎನ್ನುವ ಕಾರಣಕ್ಕೋಸ್ಕರ ಪ್ರಪಂಚದ ಮಟ್ಟದಲ್ಲಿ ಇವತ್ತು ಕಾರ್ಯಕ್ರಮಗಳನ್ನು ಹಾಕಿದ್ದಾರೆ. ಪಶ್ಚಿಮ ಘಟ್ಟಗಳನ್ನು preserve ಮಾಡಲಿಕ್ಕೋಸ್ಕರ ಇವತ್ತು ಮಾಡಿದ್ದಾರೆ. ಪಶ್ಚಿಮ ಘಟ್ಟಗಳಿಗೆ ಯಾರು ಹೋಗಬಾರದು ಎಂದು ಮಾಡಿದ್ದಾರೆ. ಪಶ್ಚಿಮ ಘಟ್ಟದಲ್ಲಿ ಬರುವಂಥ ಎಲ್ಲಾ ಅರಣ್ಯ ಭೂಮಿಯನ್ನು ಕೂಡ ಅದೊಂದು ಕಾದಿಟ್ಟ ಅರಣ್ಯ ಎಂದು ಇದೆ. ಕಾದಿಟ್ಟ ಅರಣ್ಯಕ್ಕೆ ವಿಶೇಷವಾದ ಕಾನೂನು ಇದೆ. ಅಲ್ಲಿ ಹೆಜ್ಜೆ ಇಡಲಿಕ್ಕೂ

ಸಾಧ್ಯವಿಲ್ಲ ಎಂದಾಗ ಅಂಥ ಕಾನೂನಿನ ವಿರುದ್ಧವಾಗಿಯೂ ಕೂಡ ಅಮೆಂಡ್‌ಮೆಂಟ್ ಅನ್ನು ತಂದು ಅಲ್ಲಿ ಹೋಗಿ ಬಹಳ scientific ಆಗಿ mining ಮಾಡಬೇಕೆಂದು ಹೊರಟಿರಬೇಕಾದರೆ ಎಂಥಾ ದೇಶಾಭಿಮಾನ ಇದು. ಅದನ್ನು ನಾವೆಷ್ಟು ಹೊಗಳಿದರೂ ಕೂಡ ಸಾಧ್ಯವಿಲ್ಲ. Transportation of ore from mining area to railway siding/stockyard through conveyor belts, rope ways and other similar methods will be encouraged. This will avoid pollution to neighbouring villages, congestion and damage of roads and prevention of accidents. To identify and develop by-pass roads on PPP basis across towns and villages through which the minerals are transported. ನಮ್ಮ ಹಳ್ಳಿಗಳಿಗೆ ರಸ್ತೆ ಇಲ್ಲ ಎಂದರೆ ಪಾಪ ಉದಾಸಿಯವರ ಹತ್ತಿರ ಹಣವಿಲ್ಲ. ನಿಮಗೆ ದೂರದೃಷ್ಟಿ ಬರಲಿಲ್ಲ ನೋಡಿ. Public Private Partnership, mining areaದಲ್ಲಿ ಹೋಗಬೇಕಾದಾಗ ಸರ್ಕಾರ Public Private Partnership ಯಾರಿಗೆ ಶಕ್ತಿ ಇರುತ್ತದೆ. ನಾವು ಮಾಡಲಿಕ್ಕಾಗುತ್ತದೆಯೇ? ಉದಾಸಿಯವರು ಮಾಡುತ್ತಾರೋ, ಇಲ್ಲವೋ ಗೊತ್ತಿಲ್ಲ. ಬೇರೆ ಯಾರು ಬೇಕಾದರೂ ಮಾಡಬಹುದು, ಆದರೆ ಈ ಮಾತನ್ನು ತಮಾಷೆಗೆ ಹೇಳಿದೆ ಅಷ್ಟೆ, ಅದನ್ನೇನೂ ತಾವು ಸೀರಿಯೆಸ್ ಆಗಿ ತೆಗೆದುಕೊಳ್ಳಬೇಡಿ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :-ಎಲ್ಲದಕ್ಕಿಂತ ಪ್ರಮುಖವಾಗಿ ಪ್ರಸ್ತಾಪವಾಗಬೇಕಾಗಿರುವುದು ಏನೆಂದರೆ ತಾವು ಹೇಳಿದ ಹಾಗೆ ಈ raw minerals ಅನ್ನು export ಮಾಡುವುದನ್ನು ಬದಲಾಯಿಸಿ finished goods ಅನ್ನು export ಮಾಡಬೇಕಾಗಿತ್ತು ಎಂಬ ಪ್ರಶ್ನೆ ಬಂದರೆ ಅದು ಕೇಂದ್ರ ಸರ್ಕಾರದಿಂದ ಆಗಬೇಕಾಗಿತ್ತು ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಇವತ್ತು ದೇಶ ಯಾವ ಮಟ್ಟಕ್ಕೆ ಆರ್ಥಿಕವಾಗಿ ಇದೆ ಎಂಬುದರ ಬಗ್ಗೆ ನಾನು ಹೇಳುತ್ತೇನೆ. ಕೇಂದ್ರಸರ್ಕಾರವನ್ನು ನಾನು

ಮುಚ್ಚಿಟ್ಟುಕೊಂಡು ಹೇಳುತ್ತಿಲ್ಲ. ಹಿಂದೆ ಚಿನ್ನವನ್ನು ಅಡವು ಇಟ್ಟು ದೇಶ ನಡೆಸಲಿಕ್ಕೆ ಪೆಟ್ರೋಲ್ ತರುವಂಥ ಪರಿಸ್ಥಿತಿ ಇತ್ತು. ಇವತ್ತೇನು ದೇಶದ ಸ್ಥಿತಿ ಬಹಳ ಚೆನ್ನಾಗಿದೆ ಎಂಬ ಮಾತನ್ನು ಹೇಳುತ್ತಿಲ್ಲ.

ಅಧ್ಯಕ್ಷರು :- ಜಯಚಂದ್ರರವರೇ ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :- ಇನ್ನೂ ದೇಶದಲ್ಲಿ ಯಾರು ಚಿನ್ನವನ್ನು ಅಡ ಇಟ್ಟಿಲ್ಲ. ಕರ್ನಾಟಕದಲ್ಲಿ ಮೈಸೂರು ಮಹಾರಾಜರು ಮಾತ್ರ ಚಿನ್ನವನ್ನು ಅಡವು ಇಟ್ಟಿದ್ದಾರೆ. ಬೇರೆ ಯಾರಿಂದಲೂ ಸಾಧ್ಯವಿಲ್ಲ. ಅದು ಮೈಸೂರು ಮಹಾರಾಜರಿಂದ ಮಾತ್ರ ಸಾಧ್ಯ. ಇನ್ನ್ಯಾರೂ ಚಿನ್ನವನ್ನು ಅಡ ಇಟ್ಟಿಲ್ಲ. ಅರಸರಾಳಿದ ಮೈಸೂರು, ಶ್ರೀಗಂಧದ ಕಂಪಿನ ಮೈಸೂರು, ಮಲ್ಲಿಗೆ ಕಂಪಿನ ಮೈಸೂರು... ಕರ್ನಾಟಕಕ್ಕೆ ಸಹಾಯ ಮಾಡಿರುವವರು ಮಹಾರಾಜರು ಒಬ್ಬರೇ ಎಂದು ಹೇಳಿದರೆ ತಪ್ಪಾಗಲಾರದು.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೇ, ಇನ್ನು ಎಷ್ಟು ಹೊತ್ತು ಆಗುತ್ತದೆ. ಏಕೆಂದರೆ, ಊಟಕ್ಕೆ ಹೋಗಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :- ಇನ್ನು ಏನು ಮುಗಿಯಿತು ಅಧ್ಯಕ್ಷರೆ, ಈಗ ಮಾನ್ಯ ಶಂಕರ್‌ಲಿಂಗೇಗೌಡರು ಬಹಳ ವಿಚಾರಗಳನ್ನು ಹೇಳಿದರು. ಅದು ಏನೆಂದರೆ, ಚಿನ್ನವನ್ನು ಅಡವು ಇಡುವಂಥವರು ಮೈಸೂರು ಮಹಾರಾಜರು ಎಂದು ಹೇಳಿದರು. ನನಗೂ ಗೊತ್ತಿದೆ. ಡಾ॥ ಸರ್.ಎಂ. ವಿಶ್ವೇಶ್ವರಯ್ಯನವರ ಕಥೆ ಓದಿದ್ದೇನೆ. ಕೆ.ಆರ್.ಎಸ್. ಡ್ಯಾಂ ಅನ್ನು ಕಟ್ಟಲು ದುಡ್ಡಿಲ್ಲದೇ ಇದ್ದಂಥ ಸಂದರ್ಭದಲ್ಲಿ ಮೈಸೂರು ಮಹಾರಾಜರು ಹೈದರಾಬಾದ್‌ಗೆ ಹೋಗಿ ಚಿನ್ನವನ್ನು ಮಾರಿ ಕೆ.ಆರ್.ಎಸ್.ಅನ್ನು ಕಟ್ಟಿದಂಥ ಪುಣ್ಯಾತ್ಮ ಅವರು. ಅದಕ್ಕೋಸ್ಕರ ಚಿನ್ನವನ್ನು ಮಾರಿದರು. ಪೆಟ್ರೋಲ್‌ಗೋಸ್ಕರ ಚಿನ್ನವನ್ನು ಅಡವು ಇಟ್ಟಂಥ ಸಂದರ್ಭ ಇತ್ತು. ಆದರೆ, ಇವತ್ತು ಬಹಳ ವಿಭಿನ್ನವಾಗಿದೆ, ಬಹಳ ಸಮೃದ್ಧಿಯಾಗಿದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗಾಗಲೇ ನೋಟಿಫಿಕೇಷನ್ ಆಗಿ ಹೋಗಿದೆ. ಇದನ್ನು ಯಾರೂ ಬದಲಾಯಿಸುವುದಕ್ಕಾಗುವುದಿಲ್ಲ. ಇವತ್ತಷ್ಟೇ ಪ್ರಸ್ತಾಪ ಮಾಡುತ್ತೇವೆ ಅಷ್ಟೆ. ಸರ್ಕಾರಕ್ಕೆ ಕಾಣುತ್ತಿರುವುದು ಎರಡು ವಸ್ತುಗಳು ಒಂದು ಕಡೆ ಕಬ್ಬಿಣ, ಇನ್ನೊಂದು ಕಡೆ ಮರಳು. ಆ ಮರಳು ಏನಾಗಿದೆಯೆಂದರೆ, ಮರಳಿನ ದಂಧೆಯಿಂದಾಗಿ ಸಂಪೂರ್ಣವಾಗಿ ಕೃಷಿ ಭೂಮಿ, ಅಂತರ್ಜಲ ಬತ್ತಿ ಹೋಗಿದೆ. ಇವತ್ತು ರೈತರು ಸರ್ವನಾಶವಾಗಿ

ಹೋಗಿದ್ದಾರೆ. ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರ ಅಧಿಕಾರಕ್ಕೆ ಬಂದಂಥ ಸರ್ಕಾರ, ರೈತರ ಬಗ್ಗೆ ಯೋಚನೆ ಮಾಡಬೇಕು. ನಿಮ್ಮ ಪಾಲಿಸಿಯಲ್ಲಿ blanket order...'Village panchayats will keep vigil on mining of sand from streams in their jurisdiction. Setting up units to manufacture sand from granite and sand stone will be encouraged and incentives will be given to such units'. ಏನು ಸ್ವಾಮಿ, ಒಂದು order ಮಾಡಿದ್ದೀರಿ. ಮಾನ್ಯ ಸುರೇಶ್ ಕುಮಾರ್‌ರವರೆ, ನೀವು ಮಾನ್ಯ ಈಶ್ವರಪ್ಪನವರ ಪಕ್ಕದಲ್ಲಿ ಕುಳಿತುಕೊಂಡರೆ ಅವರು ನಿಮ್ಮ ದಾರಿ ಕೆಡಿಸುತ್ತಾರೆ. ಅವರನ್ನು ಕೇಳುವುದಕ್ಕೆ ಹೋಗಬೇಡಿ. ನಿಮ್ಮನ್ನು ಬುದ್ಧಿವಂತ ಮಂತ್ರಿಗಳು ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಈಶ್ವರಪ್ಪನವರು ಏನು ಹೇಳುತ್ತಿದ್ದಾರೆಂದರೆ, ಒಂದೇ ಒಂದು mistake ಆಗಿ ಹೋಯಿತು. Mining Policy ಬಹಳ ದೊಡ್ಡದಾಯಿತು. ಅದನ್ನು ಪೂರ್ತಿ ಓದುತ್ತಿದ್ದಾರೆ. ಇನ್ನು ಮೇಲೆ ಮಾನ್ಯ ಜಯಚಂದ್ರರಂಥವರಿಗಾದರೂ ಕೂಡ ಒಂದೇ ಶೀಟ್‌ನಲ್ಲಿ 5 ಪಾಯಿಂಟ್ ಇರುವಂಥ Mining Policy ತರಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ಮೊನ್ನೆ ಮರಳಿಗೆ ಸಂಬಂಧಪಟ್ಟಂತೆ ಒಂದು ಸರ್ಕಾರದ ಆದೇಶವನ್ನು ನಾನು ನಿಮಗೆ ಕೊಟ್ಟೆ. ಸರ್ಕಾರದವರು ಒಂದು ಆದೇಶವನ್ನು ಮಾಡಿದ್ದಾರೆ. ಲಾರಿ ಮಾಲೀಕರ ಜೊತೆ ಹೊಂದಾಣಿಕೆಯನ್ನು ಮಾಡಿಕೊಂಡು ಇವತ್ತು ಸರ್ಕಾರದವರು ಆದೇಶ ಮಾಡಿದ್ದಾರೆ. ಒಬ್ಬ ವ್ಯಕ್ತಿ ಎಲ್ಲಿ ಬೇಕಾದರೂ ಕೂಡ 250/- ರೂ. ಹಣವನ್ನು ಕಟ್ಟಿದರೆ, ಎಲ್ಲಿ ಬೇಕಾದರೂ ಮರಳನ್ನು ಎತ್ತುವುದಕ್ಕೆ permission ಕೊಡುತ್ತಾರೆ. ಎಲ್ಲಿ ಬೇಕಾದರೂ ಮರಳನ್ನು ಲಾರಿಗಳಲ್ಲಿ ಹೊಡೆಯಬಹುದು. ಇಂಥದ್ದೇ ಒಂದು ಜಾಗ ಎಂದು ಪರಿಗಣಿಸಿಲ್ಲ. Mines and Geology Department ನವರು 8 ಸಾವಿರ areas ಅನ್ನು ಗುರುತು ಮಾಡಿದ್ದಾರಂತೆ. 8 ಸಾವಿರ areas ಯಾವುದು ಎಂದು ಕೇಳಿದರೆ, ಪುಸ್ತಕ ತುಂಬಾ ದಪ್ಪ ಇದೆ ಕಾಪಿಗಳನ್ನು ತೆಗೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈ blanket order ಅನ್ನು ಮಾಡಿ, ಇವತ್ತು ಸಂಪನ್ಮೂಲ ಹಾಳಾಗಿ ಹೋಗುತ್ತಿದೆ. ಮರಳು

ಎಲ್ಲಿಯೂ ಹೋಗುವುದಿಲ್ಲ. ಅಲ್ಪಸ್ವಲ್ಪ ಹೋಯಿತು ಎಂದರೆ, ಆ ಮರಳು ಬೆಂಗಳೂರಿಗೆ ಬಂದಿರುತ್ತದೆ. ಮರಳಿನ ಆಸ್ತಿ ನಮ್ಮಲ್ಲೇ ಉಳಿದುಕೊಳ್ಳುತ್ತದೆ. ಮಾನ್ಯ ಅಶೋಕ್‌ರವರಿಗೆ ಸಿಟ್ಟು ಬರುತ್ತದೆ. ಏಕೆಂದರೆ, ಮರಳು ಬರಲಿಲ್ಲವೆಂದರೆ ಬೆಂಗಳೂರು ಹೇಗೆ ಬೆಳೆಯುತ್ತದೆ ಎಂದು ಅನಿಸುತ್ತದೆ ಅಲ್ಲವೇ? ಮಾತಿಗೆ ಹೇಳುತ್ತಿದ್ದೇನೆ, ಮರಳಿಗೆ alternative ಆಗಿ ......

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :- ಇನ್ನೂ ಒಂದು ಗಂಟೆ ಆರಾಮವಾಗಿ ಮಾತನಾಡಿ. ನಾವೆಲ್ಲಾ ಕೇಳುವುದಕ್ಕೆ ತಯಾರಾಗಿದ್ದೇವೆ. ಆದರೆ, ಒಂದು ಸಲ ಜ್ಞಾಪಿಸಿಕೊಳ್ಳಿ, mining, ಮರಳು ಇಷ್ಟೆಲ್ಲಾ ಕೋಟ್ಯಾಂತರ ರೂಪಾಯಿಗಳ ಲೂಟಿಯಾಗುತ್ತಿತ್ತಲ್ಲಾ, ತಮಗೆ ಈಗ ಏಕೆ ಜ್ಞಾನೋದಯವಾಯಿತು. ಮೊದಲೇ ಜ್ಞಾನೋದಯವಾಗಿದ್ದರೆ, ಎಲ್ಲಾ ಉಳಿಸಬಹುದಾಗಿತ್ತಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ :- ನೀವು ಅಧಿಕೃತವಾಗಿ ಈಗ ಆದೇಶ ಮಾಡಿದ್ದೀರಿ. ನೋಡಿ ಸ್ವಾಮಿ, ಹಿಂದೆ ಎಲ್ಲಾ ತಪ್ಪಾಗಿದೆ ಅಥವಾ ಆಗಿಲ್ಲ, ಇನ್ನು ಮುಂದೆ ತಪ್ಪಾಗಬಾರದು ಎನ್ನುವಂಥಾದ್ದಲ್ಲ. ಸರ್ಕಾರದ ಜವಾಬ್ದಾರಿಕೆ ಜಾಸ್ತಿ ಇದೆ. ಆ ಜವಾಬ್ದಾರಿಕೆಯನ್ನು ನೀವು ನಿಭಾಯಿಸಬೇಕು. ಇವತ್ತು ನಿಮ್ಮ ಸಂವಿಧಾನದ ಅಡಿಯಲ್ಲಿ ನೀವು ಕೆಲಸ ಮಾಡುತ್ತಿದ್ದೀರಿ. ಸಂಪತ್ತು ಲೂಟಿಯಾಗುತ್ತಿದೆ. ಖಾಸಗಿಯವರ ಕೈವಶವಾಗುತ್ತಿದೆ.

ಅಧ್ಯಕ್ಷರು :- ಮಾನ್ಯ ಜಯಚಂದ್ರರವರೇ, ಊಟ ಆದ ಮೇಲೆ ಮಾತನಾಡೋಣ. 5 ನಿಮಿಷದಲ್ಲಿ ಮುಗಿಸಿಬಿಡಿ. ಏಕೆಂದರೆ, ನಿಮ್ಮ ಪಕ್ಷದವರಿಂದಲೂ ಮಾತನಾಡುವುದಕ್ಕೆ ಬಹಳಷ್ಟು ಹೆಸರುಗಳನ್ನು ಕೊಟ್ಟಿದ್ದೀರಿ. ಇನ್ನೂ ಜೆ.ಡಿ.ಎಸ್.ನವರು ಮಾತನಾಡಬೇಕು, ಬಿ.ಜೆ.ಪಿ.ಯವರು ಮಾತನಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ :- 5 ನಿಮಿಷ ಮಾತನಾಡುತ್ತೇನೆ ಅಷ್ಟೆ ಅಧ್ಯಕ್ಷರೆ, Illegal Mining, Transportation and Storages of Minerals ಎಂದು ಏನು ಒಂದು ಕಲಂ ಇದೆ. ಅದನ್ನು ಕೂಡ ಇವತ್ತು ನಾನು object ಮಾಡುತ್ತೇನೆ. ದಯಮಾಡಿ, ಇವತ್ತು ನನ್ನ ದೃಷ್ಟಿಯಲ್ಲಿ ಅಧ್ಯಕ್ಷರೆ, ಇವರಿಗೆ ಎರಡೇ ವಿಷಯದಲ್ಲಿ ಕಣ್ಣು ಬಿದ್ದಿದೆ ಎಂದರೆ, ಏಕೆ? ಬೇರೆ Minor Minerals ಇಲ್ಲವೇ? Major Minerals ಇಲ್ಲವೇ? ಯಾವುದಕ್ಕೂ ಇಲ್ಲದೇ ಈ ಎರಡಕ್ಕೆ ಸೀಮಿತವಾಗಿ ಮಾತ್ರ ಒಂದು ಪಾಲಿಸಿ ಮಾಡಿದ್ದಾರೆಂದರೆ,

ಬಹುಶಃ ಈ ಪಾಲಿಸಿಯನ್ನು ನಾನು ಹರಿದು ಬಿಸಾಡಬೇಕೆಂದು ಮಾಡಿದ್ದೆ. ಆದರೆ, ಒಂದು ರಾಜಕೀಯ ಪಕ್ಷವಾಗಿ ನಾವು ಆ ಕೆಲಸವನ್ನು ಮಾಡಬಾರದೆಂದು ಮಾಡಲಿಲ್ಲ. Please throw this into a dustbin. Don't keep this. Don't implement it. Sort all the officers who are responsible to bring this policy to the Government. ಇವರೇನು ದೇಶ ಇಟ್ಟುಕೊಳ್ಳಬೇಕೆಂದಿದ್ದಾರೊ, ಕೊಳ್ಳೆ ಹೊಡೆಯಬೇಕೆಂದಿದ್ದಾರೊ, ಏನು ಮಾಡಬೇಕೆಂದು ಮಾಡಿದ್ದೀರಿ? ಇಂತಹ ಪಾಲಿಸಿಯನ್ನು ಹರಿದು ಬಿಸಾಡುವಂಥ ಕೆಲಸವನ್ನು ಮಾಡಿ ಎಂದು ಹೇಳುತ್ತೇನೆ. ಅಧ್ಯಕ್ಷರೆ, ಇವತ್ತು ಯಾವುದೇ ಒಂದು ಖನಿಜ ಸಂಪತ್ತಿನ ಬಗ್ಗೆ ವಿಚಾರ ಮಾಡಬೇಕಾದರೆ, ಯಾರೇ, ನಮ್ಮ ದೇಶಕ್ಕೆ ಬರಲಿ, ಕೈಗಾರಿಕೆಯನ್ನು ಸ್ಥಾಪನೆ ಮಾಡಲಿ. ಆದರೆ, ಖನಿಜ ಸಂಪತ್ತಿಗೆ ಸಂಬಂಧಪಟ್ಟಂತೆ ನಮ್ಮಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಕೈಗಾರಿಕೆಗಳು ಯಾರು ಸ್ಥಾಪನೆ ಮಾಡುತ್ತಾರೆ ಅವರಿಗೆ ಕೊಡಬೇಕು. ಆದರೆ, ಅಲ್ಲಿ ಒಂದು clause ಅನ್ನು ಇಟ್ಟುಕೊಳ್ಳಬೇಕಾಗುತ್ತದೆ. ಶಕ್ತಿ ಇರುವವರಿಗೆ ಮಾತ್ರ ಸಿಗುತ್ತದೆ. ಇವತ್ತು ಯಾರು ಅನಾವಶ್ಯಕವಾಗಿ ಬೇರೆ ಬೇರೆ ರೀತಿಯಲ್ಲಿ ದುಡ್ಡು ಮಾಡಿದ್ದಾರೆ, ಅವರಿಗೇ ಕೈಗಾರಿಕೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಕೈಗಾರಿಕೆ ಒಂದೇ ದೃಷ್ಟಿ ಎನ್ನುವುದಕ್ಕಿಂತ ಹೆಚ್ಚಾಗಿ, ದಯಮಾಡಿ, ಈ ಪಾಲಿಸಿಯಲ್ಲಿ ಮೈಸೂರು ಮಿನರಲ್ಸ್ ಲಿಮಿಟೆಡ್‌ಅನ್ನು ಹಾಳು ಮಾಡುವುದನ್ನೇ ಕೇಳುತ್ತಿದ್ದೇವೆ ವಿನ: ಅದಕ್ಕೆ areas ಕೊಡುವುದನ್ನು ಮಾಡಲಿಲ್ಲ. ಇವತ್ತು ಮಾನ್ಯ ದೇವರಾಜ್ ಅರಸುರವರನ್ನು ನೆನಪಿಸಿಕೊಳ್ಳಬೇಕು. ಒಂದು ಕಾಲದಲ್ಲಿ ಅವ್ಯಾಹಿತವಾಗಿ ರಾಜ್ಯದಲ್ಲಿ ಗ್ರಾನೈಟ್ ಆಚೆ ಹೋಗುವಂಥ ಸಂದರ್ಭದಲ್ಲಿ ಮೈಸೂರು ಮಿನರಲ್ಸ್ ಲಿಮಿಟೆಡ್‌ಅನ್ನು ತಂದು, ಅವರಿಗೆ areasಅನ್ನು ಕೊಟ್ಟು, ಆ areas ಮುಖೇನ leases ಅನ್ನು ಮಾಡಿದ್ದರಿಂದ ಇವತ್ತು 1 ಲಕ್ಷ ಕೋಟಿ ಆಸ್ತಿ, ಮುಂದಿನ ಪೀಳಿಗೆಗೆ ಆಗುವಷ್ಟು ಆಸ್ತಿಯನ್ನು ಉಳಿಸಿ ಹೋಗಿದ್ದಾರೆ. ದಯಮಾಡಿ, ಇವತ್ತು leases ಅನ್ನು ಸಂಪೂರ್ಣವಾಗಿ ರದ್ದು ಮಾಡಿ. ರದ್ದು ಎಂದರೆ, ಇನ್ನು ಮುಂದೆ ಯಾವುದನ್ನೂ ಕೊಡಬೇಡಿ. ಕೊಟ್ಟರೆ, ಮೈಸೂರು ಮಿನರಲ್ಸ್ ಲಿಮಿಟೆಡ್‌ಗೆ ಕೊಡಿ. ಅಲ್ಲಿ ಅವ್ಯವಹಾರಗಳೆಲ್ಲಾ ಸೇರಿದರೂ ಸಹ ಅಧಿಕಾರಿಗಳಿಂದ ವಸೂಲಿ ಮಾಡುವುದಕ್ಕೆ ಲೋಕಾಯುಕ್ತರವರು ಇದ್ದಾರೆ. 100 ಕೋಟಿ ಇರಬಹುದು. 100 ಕೋಟಿ ಏನು ಮಹಾ ದೊಡ್ಡದಲ್ಲ. ಆದರೆ, ಲಕ್ಷಾಂತರ ಕೋಟಿಗಳಷ್ಟು, ಸಹಸ್ರಾರು

ಕೋಟಿಗಳಷ್ಟು ಹಣ ಇವತ್ತು ಖಾಸಗಿಯವರ ಕೈವಶವಾಗಿದೆ. ಇದನ್ನು ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡಿದೆ. ಇನ್ನು ಮಾತನಾಡುವಂಥ ನಾಯಕರು ಬಹಳಷ್ಟು ಜನ ಇದ್ದಾರೆ, ಬೆಳಕನ್ನು ಚೆಲ್ಲುತ್ತಾರೆ. ರಾಜ್ಯದ ಸಂಪನ್ಮೂಲವನ್ನು ವೃದ್ಧಿ ಮಾಡುವಂಥ ದೃಷ್ಟಿಯಲ್ಲಿ, ಇವತ್ತು ಆಂದ್ರ ಹಾಗೂ ಯಾವುದೇ ರಾಜ್ಯಕ್ಕೂ ಕಡಿಮೆ ಇಲ್ಲದ ಸಂಪದ್ಭರಿತವಾದ ರಾಜ್ಯವನ್ನು ಹೊಂದಿದ್ದೇವೆ. ಬೆಳಗಾಂನಲ್ಲಿ ಬಂದು ಅಧಿವೇಶನ ಮಾಡುತ್ತಿದ್ದೇವೆ. ಯಾವುದೇ ಒಂದು irrigation project ಮಾಡುವುದಕ್ಕೆ ದುಡ್ಡಿಲ್ಲ. ಪಾಪ, ಮಾನ್ಯ ಬಸವರಾಜು ಬೊಮ್ಮಾಯಿಯವರು ಏನು ಮಾಡುತ್ತಾರೆ? ಅವರು ಒಳ್ಳೆಯ ಮಂತ್ರಿಗಳು. 1500 ಕೋಟಿ ರೂ.ಗಳನ್ನು ಕೊಟ್ಟು ಉದ್ಧಾರ ಮಾಡಿ ಎಂದು ಹೇಳಿದರೆ ಅವರು ಏನು ಮಾಡುತ್ತಾರೆ? ಏನು ಘೋಷಣೆ ಮಾಡುತ್ತೀರಿ? ಏನೂ ಆಗುವುದಿಲ್ಲ. ದಯಮಾಡಿ, ಇದನ್ನು ನಿಯಂತ್ರಣ ಮಾಡಿ. ಎಷ್ಟು ಸಾವಿರ ಕೋಟಿ ಬೇಕಾದರೂ ನಿಮಗೆ ಹಣ ಬರುತ್ತದೆ. ನೀವು ಎಲ್ಲಾ ಯೋಜನೆಗಳನ್ನು 5 ವರ್ಷಗಳಲ್ಲಿ ಮುಗಿಸುವುದಕ್ಕೆ ಸಾಧ್ಯವಿದೆ. ನಿಮಗೆ ರೈತರ ಬಗ್ಗೆ ಕಳಕಳಿ ಇದ್ದರೆ ಈ ಕೆಲಸಗಳನ್ನು ಮಾಡುತ್ತೀರಿ ಎನ್ನುವ ನಂಬಿಕೆ ನನಗಿದೆ. ನೀವು ಉತ್ತರ ಏನು ಕೊಡುತ್ತೀರಿ ಎಂದು ನೋಡಿ ನಂತರ ನಾನು ಪ್ರತಿಕ್ರಿಯೆ ಕೊಡುತ್ತೇನೆ.

ಅಧ್ಯಕ್ಷರು :- ಇವತ್ತಿನ ಭೋಜನ ಕೂಟವನ್ನು ಮಾನ್ಯ ವಿರೋಧಪಕ್ಷದ ನಾಯಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಏರ್ಪಡಿಸಿದ್ದಾರೆ. ದಯವಿಟ್ಟು ತಾವೆಲ್ಲರೂ ಅದರಲ್ಲಿ ಭಾಗವಹಿಸಿ ಎಂದು ಕೋರುತ್ತೇನೆ. ಈಗ ಸಭೆಯನ್ನು ಮಧ್ಯಾಹ್ನ 3-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಕ್ತಾಯ ಮಾಡಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು)

(ಸಭೆಯು ಪುನ: 3.20 ಗಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಅಧ್ಯಕ್ಷರು :- ಮಾನ್ಯ ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) :- ಮಾನ್ಯ ಅಧ್ಯಕ್ಷರೆ, ಈ ದಿನ ನಿಯಮ 69ರ ಅಡಿಯಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಚರ್ಚೆ ಮಾಡುವುದರಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟ ತಮಗೆ ಮೊದಲು ವಂದನೆಯನ್ನು ಸಲ್ಲಿಸಬಯಸುತ್ತೇನೆ. ಅಕ್ರಮ ಗಣಿಗಾರಿಕೆಯ ಬಗ್ಗೆ ರಾಜ್ಯದಲ್ಲಿ ಶಬ್ಧ

ಪ್ರಾರಂಭವಾಗಿದ್ದೇ ನಾನು ಮುಖ್ಯಮಂತ್ರಿಯಾದ ನಂತರ ಎಂಬುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಆದರೆ, ಕೆಲವು ಪೂರ್ವ ಹಿನ್ನೆಲೆಯನ್ನು ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಕಾರಣ, ಮೊನ್ನೆ ಟಿ.ಬಿ.ಜಯಚಂದ್ರರವರು ಮತ್ತು ಅವರ ಸಹದ್ಯೋಗಿ ಸದಸ್ಯರುಗಳು ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದಾಗ ಸದನದಲ್ಲಿ ನಾನು ಇರಲಿಲ್ಲ. ಆ ಸಂದರ್ಭದಲ್ಲಿ ಜವಾಬ್ದಾರಿಯುತ ವಾಗಿರತಕ್ಕ ಸಚಿವರು ಹಿಂದೆ ಇದ್ದಂಥ ಮುಖ್ಯಮಂತ್ರಿಯವರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಚಂಬಲ್ ದರೋಡೆಕೋರರನ್ನು ಸೃಷ್ಟಿ ಮಾಡುವುದಕ್ಕೆ ಪ್ರಾರಂಭ ಮಾಡಿದರು, ಅವರ ಕಾಲದಲ್ಲಿ ಪ್ರಾರಂಭವಾಯಿತು ಎನ್ನತಕ್ಕ ಮಾತನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ತದನಂತರ ಇವತ್ತು ಮಾನ್ಯ ಜಯಚಂದ್ರರವರು ಮಾತನಾಡತಕ್ಕ ಸಂದರ್ಭದಲ್ಲಿ ಪಾಪ ಹೇಳಿದರು. ಯಾರೋ ಹಿಂದೆ ಇದ್ದಂಥ ಮುಖ್ಯ ಮಂತ್ರಿಯವರ ಕುಟುಂಬದ ವಿರುದ್ಧ ನಾನು ದೊಡ್ಡ ಹೋರಾಟ ಪ್ರಾರಂಭ ಮಾಡಿದೆವು. ಆ ಕಾರಣದಿಂದ ನಮ್ಮ ಮೇಲೆ ದ್ವೇಷವನ್ನು ತೀರಿಸಿಕೊಳ್ಳಲು ಇಂದಿನ ಮುಖ್ಯಮಂತ್ರಿಯವರ ಕಾಲದಲ್ಲಿ ಒಬ್ಬ ನಾಲಾಯಕ್ ಅಧಿಕಾರಿಯ ಮೂಲಕ ಆ ಒಂದು ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದಿರತಕ್ಕ, ಆ ಕೆಲಸವನ್ನು ಮಾಡುವುದಕ್ಕೆ ಯೋಗ್ಯತೆ ಇಲ್ಲದಿರತಕ್ಕ ವ್ಯಕ್ತಿ ಕೊಟ್ಟಿರತಕ್ಕ ವರದಿ ಎನ್ನತಕ್ಕದನ್ನು ಮಧ್ಯದಲ್ಲಿ ಭಾಗವಹಿಸಿ ಸೃಷ್ಟೀಕರಣ ಕೊಟ್ಟರು. ಅವರದ್ದೇ ಮಂತ್ರಿಗಳಿದ್ದಾರೆ, ಅವರದ್ದೇ ಸರ್ಕಾರ ಇದೆ, ಆ ಅಧಿಕಾರಿ ಅಲ್ಲಿ ಕೆಲಸ ಮಾಡುವುದಕ್ಕೆ ನಾಲಾಯಕ್ ಇದ್ದರೆ, ಆ ಅಧಿಕಾರಿ ಲೋಕಾಯುಕ್ತ ಸಂಸ್ಥೆಯಿಂದ ದಾಳಿಗೆ ಒಳಗಾಗಿ ತಪ್ಪು ಮಾಡಿದ್ದರೆ ಅವರ ಮೇಲೆ ಇದುವರೆಗೆ ಕ್ರಮ ಕೈಗೊಳ್ಳುವುದಕ್ಕೆ ಇವರಿಂದ ಏಕೆ ಸಾಧ್ಯವಾಗಿಲ್ಲ. ಒಬ್ಬ ಲೋಕಾಯುಕ್ತ ದಾಳಿಯಿಂದ ತಪ್ಪಿಗೆ ಒಳಗಾಗಿರತಕ್ಕ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗದಿರುವುದನ್ನು ನಿಷ್ಕ್ರಿಯ ಸರ್ಕಾರವೆಂದು ಅವರ ಹೇಳಿಕೆಯಿಂದ ನಾವು ಗಮನಿಸಬಹುದು ಎಂಬುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಇವತ್ತು ನಾವು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ನಿನ್ನೆ ಸಹ ಎಲ್ಲೋ ಒಂದು ಕಡೆ ಮಾತನಾಡಿದ್ದಾರೆ ಎನ್ನತಕ್ಕ ವರದಿ ನನ್ನ ಹತ್ತಿರ ಇದೆ. ಈ ಸುಪ್ರೀಂಕೋರ್ಟ್‌ನವರು ಏನು ನ್ಯಾಯವನ್ನು ಒದಗಿಸುತ್ತಾರೆ, ನಾನು ಏನು ಹೋರಾಟ ಮಡುತ್ತಿದ್ದೇನೆ ಅದರಲ್ಲಿ ಜಯ ಸಿಗುತ್ತದೆಂದು ಹೇಳಿರುವ ವರದಿ ನನ್ನ ಹತ್ತಿರ ಇದೆ. ಅವರಿಗೆ ಆ ಒಂದು ಹೋರಾಟದಲ್ಲಿ ಜಯ ಸಿಗಲಿ ಎಂದು ಅವರಿಗೆ ಶುಭ ಹಾರೈಸುತ್ತೇನೆ. ಅದರಲ್ಲಿ ಅವರಿಗೆ ಅಂತಿಮವಾದ ಜಯ ಸಿಗುವುದಾದರೆ ನಾನು ಸಂತೋಷ ಪಡುತ್ತೇನೆ.

ಅದಕ್ಕೆ ನನಗೆ ಯಾವುದೆ ಸಂಕಟ, ಆಕ್ರೋಶ ಯಾವುದು ಇಲ್ಲವೆಂದು ಸ್ಪಷ್ಟೀಕರಣ ಕೊಟ್ಟುಬಿಡುತ್ತೇನೆ. ಈ ಅಕ್ರಮ ಗಣಿಗಾರಿಕೆಯಲ್ಲಿ ಕೋಟಿಗಟ್ಟಲೆ ಹಣ ಲೂಟಿ ಮಾಡುತ್ತಿದ್ದಾರೆಂಬ ವಿಚಾರ ಪ್ರಾರಂಭವಾಗಿದ್ದು ಯಾವಾಗ ಎಂದರೆ, ಬಿ.ಜೆ.ಪಿ. ಮತ್ತು ಜಾತ್ಯಾತೀತ ಜನತಾ ದಳದ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿ ರಚನೆಯಾದ ಮೂರು ನಾಲ್ಕು ತಿಂಗಳ ನಂತರ ಈ ಶಬ್ಧ ಪ್ರಾರಂಭವಾಯಿತು. ಯಾವ ಕಾರಣಕೊಸ್ಕರ ಪ್ರಾರಂಭವಾಯಿತು ಎಂದರೆ, ಯಾವುದೋ ಅಲ್ಲಿಯ ಜಿಲ್ಲೆಯ ಉಸ್ತುವಾರಿ ಪೋಲೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿದಂಥ ಸಂದರ್ಭದಲ್ಲಿ 150 ಕೋಟಿ ರೂಪಾಯಿಗಳ ಸಂಗ್ರಹ ಎನ್ನತಕ್ಕ ದೊಡ್ಡ ಬಾಂಬ್‌ನ್ನು ಸಿಡಿಸಿದ್ದು. ಇನ್ನೂ ಆ ಪ್ರಸ್ತಾವನೆ ಬಿಡಲೇ ಇಲ್ಲ. 150 ಕೋಟಿ ರೂಪಾಯಿಯ ಆ ಹಗರಣ ಅಲ್ಲಿ ಇಲ್ಲಿ ನಡೆಯುತ್ತಲೇ ಇದೆ. ಪಾಪ ಅವರು ಅದನ್ನು ಇನ್ನೂ ನಿಲ್ಲಿಸಲಿಲ್ಲ. ಅದರಲ್ಲಿ ಹೋರಾಟ ಅವರಿಗೆ ಅಂತಿಮವಾಗಿ ಸಿಗುತ್ತದೆ. ಆವತ್ತು 150 ಕೋಟಿ ರೂಪಾಯಿ ಸಂಗ್ರಹ ಮಾಡಿದರು ಎಂದು ಹೇಳುತ್ತಾರೆ. ನಾನು ಇದಕ್ಕೆ ಪೂರ್ವ ಹಿನ್ನೆಲೆ ಹೇಳುವುದಾದರೆ, ಒಂದು ಸಲ ಬಳ್ಳಾರಿಯ ಒಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಆ ಕಾರ್ಯಕ್ರಮಕ್ಕೆ ಹೋಗಿದ್ದ ಸಂದರ್ಭದಲ್ಲಿ ಈ ಆಪಾದನೆ ಮಾಡಿದಂಥ ವ್ಯಕ್ತಿ ಅವರ ಮನೆಗೆ ತಿಂಡಿಗೆ ಕರೆದಿದ್ದರು. ಆಗ ಅವರು ಅವರ ಬೆಡ್‌ರೂಮ್‌ಗೆ ಕರೆದುಕೊಂಡು ಹೋಗಿ ಏನು ಹೇಳಿದರು ಎಂಬುದನ್ನು ನಾನು ಇಲ್ಲಿ ಹೇಳುವುದಿಲ್ಲ. ಆದರೆ ಅಂದು ಅಲ್ಲಿ ಅವರು ಏನೇನು ವಿಚಾರಗಳನ್ನು ಚರ್ಚೆ ಮಾಡಿದರು ಎಂಬುದನ್ನು ಜ್ಞಾಪಕ ಮಾಡಿಕೊಳ್ಳಲಿ. ಅದನ್ನೆಲ್ಲ ಹೇಳಬೇಕು ಎಂದರೆ ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ಏನಾದರು ಹೇಳುವುದಾಗಿದ್ದರೆ ಸ್ಪಷ್ಟವಾಗಿ ಹೇಳಲಿ. ಈ ಸದನದಲ್ಲೇ ಹೇಳಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಸ್ಪಷ್ಟವಾಗಿಯೇ ಹೇಳಲು ಸಿದ್ದನಿದ್ದೇನೆ, ದಯಮಾಡಿ ಕುಳಿತುಕೊಳ್ಳಿ. ಅವರು ಕೇಳಬೇಕೆಂದರೆ ಹೇಳುತ್ತೇನೆ. ಅವರು ಅದನ್ನು ಮರೆತಿದ್ದರೆ ಹೇಳಬೇಕೆಂದರೆ ಹೇಳುತ್ತೇನೆ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ಅದನ್ನು ಹೇಳಲೇ ಬೇಕು.

ಶ್ರೀ ಆರ್. ದಿನೇಶ್ ಗುಂಡೂರಾವ್ :- ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ :- ಅವರು ಸಭಾಧ್ಯಕ್ಷರಿಗೆ ನೇರವಾಗಿ ಹೇಳುತ್ತಿದ್ದಾರೆ ಅದಕ್ಕೆ ನೀನು direction ತೋರಿಸುತ್ತೀಯಾ? ಅವರಿಗೆ ಕುಳಿತುಕೊಳ್ಳಿ, ಎದ್ದೇಳಿ ಎಂದು direction ತೋರಿಸುವುದಕ್ಕೆ ನೀನು ಯಾರು?

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ಹೇಳುವುದಾಗಿದ್ದರೆ, ನಾನು ಹೇಳುವುದೋ ಬೇಡವೋ ಎಂದರೆ ಇದರಲ್ಲಿ ಏನೋ ಆಗಿರಬೇಕೆಂದು ಅರ್ಥ ಬರುತ್ತದೆ. ಅವರು ಹೇಳಿದಂತೆ ಎಲ್ಲೋ ಪತ್ರಿಕೆಯಲ್ಲಿ ನೋಡಿದೆ, ಎಲ್ಲೋ ಮಾತನಾಡಿದ್ದನ್ನು ಕೇಳಿದೆ, ಅಲ್ಲಿ ಕೇಳಿದೆ, ಇಲ್ಲಿ ಕೇಳಿದೆ ಎನ್ನುವುದು ಬೇಡ. ಅವರು 150 ಕೋಟಿ ಹಣ ತಿಂದಿರುವುದು ನೂರಕ್ಕೆ ನೂರು ಪರ್ಸೆಂಟ್ ಸತ್ಯ. ಆ ಹೇಳಿಕೆಗೆ ನಾನು ಬದ್ಧನಾಗಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅದಕ್ಕೆ ಸಾಕ್ಷಿ ಇಡಿ. ಯಾವ ಸಾಕ್ಷಿ ಇದೆ?

ಶ್ರೀ ಜಿ. ಜನಾರ್ಧನ ರೆಡ್ಡಿ :- ಸುಪ್ರಿಂಕೋರ್ಟ್‌ನಲ್ಲಿ ಎಲ್ಲಾ details ಇದೆ. ಸುಪ್ರೀಂಕೋರ್ಟ್‌ನಲ್ಲಿ ಎಲ್ಲ ಸಾಕ್ಷಿಗಳನ್ನು ಇಟ್ಟಿದ್ದೇನೆ. 9 ಸಿ.ಡಿ.ಗಳನ್ನು, ಎಲ್ಲ ದಾಖಲಾತಿಗಳನ್ನು, ನೀವು ಯಾವ ರೀತಿಯಾಗಿ ಹಣವನ್ನು ದುರುಪಯೋಗ ಮಾಡಿಕೊಂಡಿದ್ದೀರಿ ಎಂಬುದಕ್ಕೆ ಪ್ರತಿಯೊಂದು ಸಾಕ್ಷಿಯನ್ನು ಸುಪ್ರೀಂಕೋರ್ಟ್‌ನಲ್ಲಿ ನಾನು ಇಟ್ಟಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಿಮ್ಮ ಹತ್ತಿರ ಸಾಕ್ಷಿ ಇದ್ದರೆ ಸಭಾಧ್ಯಕ್ಷರ ಮುಂದೆ ಇಡಿ.

ಶ್ರೀ ಜಿ. ಜನಾರ್ಧನ ರೆರಡ್ಡಿ :- ನಾನು ಸುಪ್ರೀಂಕೋರ್ಟ್‌ನಲ್ಲಿ ಇಟ್ಟಿದ್ದೇನೆ. ನೀವು ಮಾತನಾಡಿ. ಸಭಾಪತಿಗಳ ಮುಂದೆ ಇಡಬೇಕಲ್ಲವೇ? ಮಾನ್ಯ ಅಧ್ಯಕ್ಷರೆ ಒಂದು ವಿಷಯವನ್ನು ಹೇಳುತ್ತಿದ್ದೇನೆ. ಇದು ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಅದಕ್ಕೆ ಗೌರವ ಕೊಡುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ. ಆದರೆ ನಾನು ಅದಕ್ಕೆ ಗೌರವ ಕೊಡುತ್ತಿದ್ದೇನೆ. ಇವತ್ತು question of law ಮೇಲೆ ಸಿ.ಬಿ.ಐ. enquiry ಗೆ ಹಾಕಿರುವುದು ಇವತ್ತು judgment reserve ಆಗಿದೆ. ಅಂಥ ಸಂದರ್ಭದಲ್ಲಿ ಪ್ರಚೋದನೆ ಮಾತುಗಳನ್ನು ಆಡುವುದು ಬೇಡ. ನೀವು

ಹೇಳುವುದನ್ನು ಸದನಕ್ಕೆ ತಿಳಿಸಿ. ಅವರ ಮನೆಗೆ ಹೋಗಿದ್ದೆ, ತಿಂಡಿಗೆ ಹೋಗಿದ್ದೆ, ಬೆಡ್‌ರೂಮ್‌ಗೆ ಹೋಗಿದ್ದೆ, ಅಲ್ಲಿ ಏನಾಯಿತು ಇಂಥ ಕತೆಗಳನ್ನು ಜನರು ನಂಬುವುದಿಲ್ಲ. ನೀವು ಈ ಸದನಕ್ಕೆ ಸುಳ್ಳು ಹೇಳುವುದಕ್ಕೆ ಹೋಗಬೇಡಿ. ನಿಮಗೆ ಏನಾದರು ಸತ್ಯ ಹೇಳುವುದಕ್ಕೆ ಇದ್ದರೆ ಹೇಳಿ. ಅದಕ್ಕೆ ನಾನು ಇವತ್ತು ಉತ್ತರ ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಅವರೇ ಈಗ ಒಪ್ಪಿಕೊಂಡಿದ್ದಾರೆ. ಇದರ ಚರ್ಚೆಯೇ ಬೇಡ ಇದನ್ನು ಸಿ.ಬಿ.ಐ.ಗೆ ವಹಿಸಿ. ನಾನು ಮಾನ್ಯ ಖರ್ಗೆಯವರು ಮತ್ತು ಜಯಚಂದ್ರ ಸಾಹೇಬರುಗಳನ್ನು ಮನವಿ ಮಾಡಿಕೊಳ್ಳುತ್ತೇನೆ, ಇದನ್ನು ಸಿ.ಬಿ.ಐ.ಗೆ ವಹಿಸಲು ಈ ಸದನ ಸರ್ವಾನುಮತದ ನಿರ್ಣಯ ಮಾಡಿ. ಅವರೇ ಹೇಳುತ್ತಿದ್ದಾರಲ್ಲ, ಕೋರ್ಟ್‌ನ judgement ಬೇಡ. ಸಿ.ಬಿ.ಐ.ಗೆ refer ಮಾಡಿಬಿಡೋಣ ಸ್ವಾಮಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಕೋರ್ಟ್ judgement ಬಗ್ಗೆ ನಾನು ನಿನ್ನೆ ಒಂದು ಮಾತನ್ನು ಹೇಳಿದೆ. ಅದೇನೆಂದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಬರತಕ್ಕ ತೀರ್ಪಿನಿಂದ ಇಂಥ ಭ್ರಷ್ಟ ಮುಖ್ಯಮಂತ್ರಿ, ಇವತ್ತು ಯಾವ ಒಂದು ಮುಖ್ಯಮಂತ್ರಿ ಸ್ಥಾನದಲ್ಲಿದ್ದು ಭ್ರಷ್ಟಾಚಾರಕ್ಕೆ ಕೈಹಾಕಿದ್ದಾರೆ ಅದಕ್ಕೆ ಸರ್ವೋಚ್ಚ ನ್ಯಾಯಾಲಯದಿಂದ ಬರತಕ್ಕ ತೀರ್ಪು ಇಡೀ ಭಾರತ ದೇಶದಲ್ಲಿರುವ ಎಲ್ಲಾ ಮುಖ್ಯಮಂತ್ರಿಗಳಿಗೆ ಅದು ಮಾದರಿಯಾಗಲಿಯೆಂದು ನಾನು ಹೋರಾಟ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಿಮ್ಮ ಹೋರಾಟ ಮಾದರಿಯಾಗಿ ಬಿಟ್ಟರೆ ಈ ದೇಶ ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು ಈಗಾಗಲೇ ಕಳೆದ ಏಳು ತಿಂಗಳಿನಲ್ಲಿ ನೋಡಿಯಾಯಿತು.

(ಗೊಂದಲ)

ಅಧ್ಯಕ್ಷರು :- ರೇಣುಕಾಚಾರ್ಯರವರೆ, ಬಾಲಕೃಷ್ಣರವರೆ ಬೇಡ. ಜನಾರ್ದನರೆಡ್ಡಿಯವರು ಹೇಳಿದ್ದಾರೆ, ಕುಮಾರಸ್ವಾಮಿಯವರು ಮಾತನಾಡುತ್ತಿದ್ದಾರೆ, ಅವರು ಮಾತನಾಡಲಿ. ತಾವು ಕುಳಿತುಕೊಳ್ಳಿ. ಅವರು ಯೀಲ್ಡ್ ಆಗಿಲ್ಲ. ರೇಣುಕಾಚಾರ್ಯರವರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ನೀವು ಪರಸ್ಪರ ಚರ್ಚೆ ಮಾಡಬೇಡಿ. ಇಲ್ಲಿ ಕುಮಾರಸ್ವಾಮಿಯವರು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ಉತ್ತರವನ್ನು ಕೊಡಲಿ. ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರಿನ ಮತ್ತು ಬಳ್ಳಾರಿಯ ನನ್ನ ಮನೆಗೆ ಬಂದಿದ್ದರು. ಆದರೆ, ಈ ಜನಾರ್ದನರೆಡ್ಡಿ ಯವುದೇ ಕ್ಷಣದಲ್ಲಿ ಯಾರ ಮನೆಗೂ ಹೋಗಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಯಾರಾದರು ಆಹ್ವಾನ ಕೊಟ್ಟಾಗ..

(ಗೊಂದಲ)

ಅಧ್ಯಕ್ಷರು :- ಕುಮಾರಸ್ವಾಮಿಯವರು ಮಾತನಾಡುತ್ತಿದ್ದಾರೆ ಕುಳಿತುಕೊಳ್ಳಿ.

ಅಧ್ಯಕ್ಷರೆ, ನಾವು ಚಿಕ್ಕವರಿದ್ದೇವೆ. ಅವರು ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡ ಹಿಡಿತ ಇಟ್ಟುಕೊಂಡಿರುವವರು. ರಾಜ್ಯ ಹಿಡಿಯುವುದಕ್ಕೆ ಹೊರಟಿರುವವರು. ನಾವು ಸಣ್ಣವರಿದ್ದೇವೆ. ಅವರು ತಿಂಡಿಗೆ ಕರೆದರು, ನಾವು ಹೋದೆವು. ಅವರೇನು ನಮ್ಮ ಮನೆಗೆ ಬಂದಿಲ್ಲ. ಅವರು ಬಂದರು ಎಂದು ಇಲ್ಲಿ ನಾನೇನೂ ಹೇಳುತ್ತಿಲ್ಲ. ಬೆಂಗಳೂರಿನಲ್ಲಿ ಒಂದು ಬಾರಿ ಅವರ ಫ್ಲಾಟ್‌ಗೆ ಹೋಗಿದ್ದೇನೆ ಮತ್ತು ಬಳ್ಳಾರಿಯಲ್ಲಿ ಅವರ ಮನೆಗೆ ಒಂದು ದಿವಸ ಹೋಗಿದ್ದೇನೆ ನಿಜ. ಆದರೆ, ಅಲ್ಲಿ ನಡೆದಂತಹ ಘಟನೆ ಏನೆಂದರೆ, ಅವರು ನನಗೆ ಹೇಳುತ್ತಾರೆ: "ಮಾನ್ಯ ಎಂ.ಪಿ.ಪ್ರಕಾಶ್‌ರವರನ್ನು ಯಾವುದೇ ಕಾರಣಕ್ಕೂ ಮಂತ್ರಿಯನ್ನಾಗಿ ಮಾಡಬೇಡಿ." ನಾನು ಸತ್ಯ ಹೇಳುತ್ತಿದ್ದೇನೋ, ಇಲ್ಲವೋ ಎಂಬುದನ್ನು ಅವರು ತೀರ್ಮಾನ ಮಾಡಲಿ. ಅವರ ಆತ್ಮಕ್ಕೆ ಪ್ರಶ್ನೆ ಮಾಡಿಕೊಳ್ಳಲಿ. ಅವರು ಅದನ್ನು ಸುಳ್ಳು ಎಂದಾದರೂ ಹೇಳಲಿ. "ನಮಗೆ ಬಿ.ಜೆ.ಪಿ. ಪಕ್ಷದಲ್ಲಿ ನಿರಾಸೆಯಾಗುತ್ತಿದೆ, ನಿಮ್ಮ ಜೊತೆ ನಾವು ಮುಂದೆ ಬರುವುದಕ್ಕೆ ತಯಾರಿದ್ದೇವೆ. ನಿಮ್ಮ ಪಕ್ಷದ ಚುನಾವಣೆ ನಡೆಸುವುದಕ್ಕೆ ನಾವು 200 ಕೋಟಿ ರೂ.ಗಳನ್ನು ಕೊಡುವುದಕ್ಕೆ ತಯಾರಿದ್ದೇವೆ. ನಮಗೆ ನಿಮ್ಮ ಸಹಕಾರ ಕೊಡಿ" ಎಂಬ ಮಾತನ್ನು ಅವರು ಹೇಳಿದರೋ ಇಲ್ಲವೋ ಎಂಬುದರ ಬಗ್ಗೆ ಅವರ ಆತ್ಮಕ್ಕೆ ಅವರು ಪ್ರಶ್ನೆಯನ್ನು ಹಾಕಿಕೊಳ್ಳಬಹುದು.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮೊದಲು ಕ್ಲಾರಿಫಿಕೇಷನ್ ಆಗಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ಶ್ರೀಮಾನ್ ಕುಮಾರಸ್ವಾಮಿಯವರು ಏನು ಹೇಳಬೇಕಾಗಿದೆಯೋ ಅದನ್ನು ಹೇಳಲಿ. ಅದಾದ ನಂತರ ಅದಕ್ಕೆ ಪ್ರತ್ಯುತ್ತರವಾಗಿ ತಾವು ಅಪ್ಪಣೆ ಕೊಟ್ಟರೆ ಅವರೂ ಹೇಳಲಿ. ಇದೇನೋ ವಾದ ವಿವಾದಗಳಾಗಿ ಅವರೂ ಹೇಳುವುದು, ಇವರೂ ಹೇಳುವುದು ಎಂದರೆ confuse ಆಗುತ್ತದೆ. ಕೇಳುವವರಾದ ನಮಗೂ ಅದು ಚೆನ್ನಾಗಿ ಕಾಣಿಸುವುದಿಲ್ಲ. ಮಾನ್ಯ ಜನಾರ್ದನ ರೆಡ್ಡಿಯವರಿಗೆ ನನ್ನ ಇನ್ನೊಂದು ಮನವಿ ಏನೆಂದರೆ, ನೀವು ಯಾರನ್ನೋ ಕರೆದಾಗ ಅವರು ನಿಮ್ಮ ಮನೆಗೆ ಬರುತ್ತಾರೆ, ಇನ್ನೊಬ್ಬರ ಮನೆಗೂ ಬರುತ್ತಾರೆ. ಆದರೆ, "ನಾನು ಯಾರ ಮನೆಯ ಬಾಗಿಲಿಗೂ ಹೋಗಿಲ್ಲ" ಎಂದು ಹೇಳುವುದು ಸರಿಯಲ್ಲ. ಆ ರೀತಿ ಮಾತನಾಡುವುದು ಬೇಡ. ಏಕೆಂದರೆ, ನಾನು ಇದನ್ನು ಅನೇಕ ಸಾರಿ ನೋಡಿದ್ದೇನೆ. ನಾನು ಸುಮಾರು 40 ವರ್ಷಗಳಿಂದ ಈ ಸದನದಲ್ಲಿದ್ದು ನೋಡಿದ್ದೇನೆ. ಎಲ್ಲಾ ಮುಖ್ಯಮಂತ್ರಿಗಳನ್ನು ಮತ್ತು ವಿರೋಧ ಪಕ್ಷದ ನಾಯಕರುಗಳನ್ನು ನೋಡಿದ್ದೇನೆ. ಯಾರೂ ಕೂಡ ಒಬ್ಬರಿಗೊಬ್ಬರು ಪರಸ್ಪರ ಹೀಯಾಳಿಸಿ ಮಾತನಾಡುವುದು ಬೇಡ. ನಿಮ್ಮ ನಿಮ್ಮ ವಾದಗಳನ್ನು ನೀವು ಮಂಡಿಸಿ. ಏನಾದರೂ ತಪ್ಪಿದ್ದರೆ ಅದನ್ನು ಖಂಡಿಸಿ. ಅದನ್ನು ಬಿಟ್ಟು, ದುರಹಂಕಾರದ ಮಾತುಗಳನ್ನು ಒಬ್ಬರಿಗೊಬ್ಬರು ಮಾತನಾಡುವುದು ಬೇಡ ಎಂಬುದು ನನ್ನ ಮನವಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಜನಾರ್ದನ ರೆಡ್ಡಿಯವರು ಮಾತನಾಡುವಾಗ, "ಸುಪ್ರೀಂಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ reserve ಆಗಿದೆ, ಅದು ಬಂದು ಬಿಡುತ್ತದೆ. ಅದು ಬಂದ ತಕ್ಷಣವೇ ಇವರು ದೇಶದಲ್ಲಿ ಅತಿ ದೊಡ್ಡ ಭ್ರಷ್ಟ ಮುಖ್ಯಮಂತ್ರಿ..." ಆ judgment ಬಂದರೆ ಎಂದು ಹೇಳಿದರು. Judgment reserve ಆಗಿದೆ ಎಂದಾಗ, ಈ ಹಂತದಲ್ಲಿ ಮಾತನಾಡುವುದು ಒಂದು, ಎರಡನೆಯದು, ಒಂದು ವಿಷಯ ತಿಳಿಯಬಯಸುವುದೇನೆಂದರೆ, ಅದರಲ್ಲಿ ಮಾನ್ಯ ಕುಮಾರಸ್ವಾಮಿಯವರ ಮೇಲೂ ಇತ್ತು ಮತ್ತು ಮಾನ್ಯ ಚೆನ್ನಿಗಪ್ಪನವರ ಮೇಲೂ ಇತ್ತು. ಮಾನ್ಯ ಚೆನ್ನಿಗಪ್ಪನವರ ಮೇಲೂ judgement ಬರುತ್ತಿದೆ ಎಂದು ಹೇಳಿದರು. ಏಕೆಂದರೆ, ಅವರು ನಿಮ್ಮ ಜೊತೆಗೆ ಸೇರಿ ಬಿಟ್ಟಿದ್ದಾರೆ.

ಅಧ್ಯಕ್ಷರು :- ಮಾನ್ಯ ಕುಮಾರಸ್ವಾಮಿಯವರೆ, ತಾವು continue ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾನು ಆ ರೀತಿ ಕೋಟ್ಯಂತರ ರೂಪಾಯಿಗಳ ವ್ಯವಹಾರಕ್ಕೆ ಕೈ ಹಾಕುವುದಾಗಿದ್ದರೆ, ಅವತ್ತು ಅವರು

ಸುಲಭವಾಗಿಯೇ ಏನು ಒಪ್ಪಿಗೆ ಕೊಟ್ಟಿದ್ದರು, ನಾನು ಇಷ್ಟೆಲ್ಲಾ ಕಷ್ಟ ಪಡಲೇ ಬೇಕಾಗಿರಲಿಲ್ಲ. "ಆಯಿತು, ನಿಮಗೆ ಜವಾಬ್ದಾರಿ ಕೊಟ್ಟು ಬಿಡುತ್ತೇವೆ, 200 ಕೋಟಿ ರೂ.ಗಳನ್ನು ನಮ್ಮ ಪಕ್ಷದ ಚುನಾವಣೆಗಾಗಿ ದೇಣಿಗೆಯಾಗಿ ನೀವು ಕೊಡಿ" ಎಂದು ಅಲ್ಲಿಯೇ ನಾನು compromise ಮಾಡಿಕೊಳ್ಳಬಹುದಾಗಿತ್ತು. ಇದನ್ನು ನಾನು ಹೇಳಬಯಸುತ್ತೇನೆ. ನಂತರ, ಮಾನ್ಯ ಎಂ.ಪಿ.ಪ್ರಕಾಶ್‌ರವರು ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಗಳಾದರು. ಆ ಸಂದರ್ಭದಲ್ಲಿ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಿದರು. ಅವತ್ತಿನಿಂದ ಪ್ರಾರಂಭವಾಯಿತು. ಈ 150 ಕೋಟಿ ರೂ.ಗಳ ಹಗರಣವು ಅಲ್ಲಿಂದ ಪ್ರಾರಂಭವಾಗುತ್ತದೆ. **"ಅಕ್ರಮ ಗಣಿಗಾರಿಕೆ ಹೆಸರಿನಲ್ಲಿ ಸಿಎಂ, ಚೆನ್ನಿಗಪ್ಪ ಲೂಟಿ: ಜನಾರ್ಧನ ರೆಡ್ಡಿಯವರ ಆರೋಪ, ಎಸ್ಪಿ ವರ್ಗಾವಣೆ : ಪರ-ವಿರೋಧ, ಪ್ರತಿಭಟನ."** ಒಂದು ಎಸ್ಪಿ ವಿಷಯದಲ್ಲಿ ಪ್ರಾರಂಭವಾದ ಸನ್ನಿವೇಶದಲ್ಲಿ 150 ಕೋಟಿ ರೂ.ಗಳ ಹಗರಣದ ಬಗ್ಗೆ ತೆಗೆಯುತ್ತಾರೆ. ಪಾಪ, ಚೆನ್ನಿಗಪ್ಪನವರು ಈಗ ಚುನಾವಣೆಗೆ ನಿಂತಿದ್ದರಲ್ಲಾ, ಆ ಹೇಳಿಕೆ ಬಂದಾಗ, ಚನ್ನಿಗಪ್ಪನವರು ಹೇಳುತ್ತಾರೆ: "ಸರ್ಕಾರದ ಮಣ್ಣನ್ನು ಮಾರಿಕೊಂಡು ಬದುಕಿದವರು, ಇವರ ಹತ್ತಿರ ನಾನಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ ಒಂದೂ ಪೈಸೆ ವಸೂಲು ಮಾಡಿಲ್ಲ, ಮಾಡುವುದೂ ಇಲ್ಲ." ಇದು ಮಾನ್ಯ ಅರಣ್ಯ ಸಚಿವರ ಅವತ್ತಿನ ಹೇಳಿಕೆ. ಅವರನ್ನು ಇವತ್ತು ಅವರ ಪಕ್ಷದ ಅಭ್ಯರ್ಥಿಯನ್ನಾಗಿ ಮಾಡಿಕೊಂಡಿದ್ದರು. ಸಿ.ಎಂ.ಗೇ ಪಾಠ ಕಲಿಸುತ್ತೇವೆ ಎಂದು ಪಾಪ ಆ ಸಂದರ್ಭದಲ್ಲಿ ಹೇಳುತ್ತಾರೆ. "ಹಣ ವಸೂಲಾತಿಗೆ ಚೆನ್ನಿಗಪ್ಪ ಯತ್ನ"... ಇವೆಲ್ಲವನ್ನೂ ನಾನು ಸುದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಬಳ್ಳಾರಿ ಜನತೆಯ ಭಾವನಗೆ ಧಕ್ಕೆ ಉಂಟಾಗಿದೆ. ಇದು ಸಮ್ಮಿಶ್ರ ಸರ್ಕಾರ ಎಂಬುದನ್ನು ಮರೆತು, ಸರ್ವಾಧಿಕಾರಿ ಧೋರಣೆ ಮುಂದುವರೆಸಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿ ಹೇಳಿಕೆ ಕೊಟ್ಟಿದ್ದಾರೆ. **"ದೆಹಲಿಗೆ ತಟ್ಟಿದ ಬಳ್ಳಾರಿ ಬಿಸಿ"** ಇರಲಿ. ಇವೆಲ್ಲವನ್ನೂ ಸ್ವಲ್ಪ ನೆನಪಿಸಿಕೊಡಬೇಕು. ಅವರು ಕೆಲವೊಂದನ್ನು ಮರೆತಿದ್ದಾರೆ.

"ಬಳ್ಳಾರಿ ಎಸ್ಪಿ ವರ್ಗಾವಣೆ : ದೋಸ್ತಿಗಳಲ್ಲಿ ಭಿನ್ನಾಭಿಪ್ರಾಯ" ಅವತ್ತು ನನ್ನ ಮುಂದೆ ಎಸ್ಪಿಯವರ ವರ್ಗಾವಣೆ ವಿಚಾರದಲ್ಲಿ ಅಂದು ಸಚಿವರಾಗಿದ್ದ ಮಾನ್ಯ ಅಶೋಕ್‌ರವರು ಮತ್ತು ಮಾನ್ಯ ಅರವಿಂದ ಲಿಂಬಾವಳಿಯವರು ಬಂದರು. "ಅದೊಂದು ಹಾಳಾಗಿ ಹೋಗಲಿ, ಎಸ್ಪಿ transferಗೆ stay ಕೊಟ್ಟುಬಿಡಿ. ಅವರು ಕೊಟ್ಟಿರುವ ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳುತ್ತೇವೆ" ಎಂದರು.

ನಾನು ಅದಕ್ಕೆ ಒಪ್ಪಿಗೆ ಕೊಡಲಿಲ್ಲ. 150 ಕೋಟಿ ರೂ.ಗಳ ಹಗರಣ ಈ ದೇಶದಲ್ಲಿ, ರಾಜ್ಯದಲ್ಲಿ ಅದಕ್ಕೆ ಸಾಕ್ಷ್ಯಾಧಾರಗಳನ್ನು ಇಟ್ಟು, ನನ್ನನ್ನು ಗಲ್ಲಿಗೇರಿಸುತ್ತಾರೆ, ಏರಿಸಲಿ, ನಾನು compromise ಆಗುವ ಪ್ರಶ್ನೆಯೇ ಇಲ್ಲ ಎನ್ನುವ ಮಾತನ್ನು ಆಗಲೇ ಹೇಳಿದ್ದೇನೆ. ಅವತ್ತು ನಾನು ಮುಖ್ಯಮಂತ್ರಿಯಾಗಿದ್ದಾಗ ಸದನದಲ್ಲಿ ಹೇಳಿದ್ದೇನೆ. ನನ್ನ ಸಂಖ್ಯೆಯನ್ನು ಉಪಯೋಗಿಸಿಕೊಂಡು ಸಂಖ್ಯೆಯ ಆಧಾರದ ಮೇಲೆ ನಾನು ರಕ್ಷಣೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇದೆಲ್ಲದರ ಬಗ್ಗೆ ನಾನು individual ಆಗಿಯೇ ಹೋರಾಟ ಮಾಡುತ್ತೇನೆಂಬ ಮಾತನ್ನು ಅವತ್ತು ಏನು ಹೇಳಿದ್ದೇನೋ, ಇವತ್ತೂ ಅದಕ್ಕೆ ಬದ್ಧನಾಗಿದ್ದೇನೆ. **"ರೆಡ್ಡಿ ಬಾಯಿಂದಲೇ ಸಮಜಾಯಿಷಿಗೆ ನಿರ್ಧಾರ"** ಇದೆಲ್ಲಾ ಇದೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. **"ಬಿ.ಜೆ.ಪಿ. ಶಾಸಕರ ಆಕ್ರೋಶ"** SP transfer ಬಗ್ಗೆ. ಅದಾದ ನಂತರ, ಪಾಪ! ಸಾಕ್ಷ್ಯಾಧಾರಗಳನ್ನು ಇಟ್ಟುಕೊಂಡಿದ್ದಾರೆ, ಇನ್ನೂ ದೊಡ್ಡ ದೊಡ್ಡ ಕಡತಗಳನ್ನು ಅವರು ಇಟ್ಟುಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಅವರು ನಿನ್ನೆಯೇ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಕೆಲವು ಕ್ಲಾರಿಫಿಕೇಷನ್‌ಗಳನ್ನು ಕೊಡಲೇಬೇಕು.

ಶ್ರೀ ಜಿ. ಜನಾರ್ಧನ ರೆಡ್ಡಿ:- ಈ ರೀತಿ ಚುಚ್ಚಿ ಮಾತನಾಡುವ ಸ್ವಭಾವವನ್ನು ಅವರು ಮೊದಲು ತಿದ್ದಿಕೊಳ್ಳಬೇಕು. ಚುಚ್ಚುವ ರೀತಿಯಲ್ಲಿ ದಯವಿಟ್ಟು ಮಾತನಾಡುವುದು ಬೇಡ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- Disturbance ಬೇಡ, ನಾನು ಯೀಲ್ಡ್ ಆಗಿಲ್ಲ.

ಶ್ರೀ ಜಿ. ಜನಾರ್ದನ ರೆಡ್ಡಿ :- ನಿನ್ನೆ ಕೂಡ ನಾನು ಬಹಳ ಸಮಾಧಾನವಾಗಿಯೇ ಇದ್ದು, ಸಮಾಧಾನವಾಗಿಯೇ ಹೇಳಿದೆ. ಅವರು ಏನೇನು ಮಾತನಾಡಬೇಕೆಂದಿದ್ದಾರೋ, ಅವೆಲ್ಲವನ್ನೂ ಮಾತನಾಡಲಿ. ಆದರೆ, ಅವರು ಮಾತನಾಡುತ್ತಾ, "ಇಟ್ಟುಕೊಂಡಿದ್ದಾರೆ, ಮಾಡುತ್ತಿದ್ದಾರೆ" ಎಂದರೆ, ನಿಮ್ಮ ಹಣೆಬರಹವನ್ನು ನಾನೇ decide ಮಾಡೋದು. ಯಾರೂ decide ಮಾಡುವುದಿಲ್ಲ. ಇದು ನನ್ನ challenge. ಈ ರೀತಿ ಚುಚ್ಚುವ ರೀತಿಯಲ್ಲಿ ಮಾತನಾಡಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಿಮ್ಮಂತಹ ನೂರು ಜನ ಜನಾರ್ದನ ರೆಡ್ಡಿಗಳು ಬಂದರೂ ನನ್ನ ಹಣೆಬರಹ ಬರೆಯುವುದಕ್ಕಾಗುವುದಿಲ್ಲ. ನಮ್ಮ

ಹಣೆಬರಹವನ್ನು ಬರೆಯುವವರು ಈ ರಾಜ್ಯದ ಐದೂವರೆ ಕೋಟಿ ಜನತೆ. ನಿಮ್ಮಂತಹ ನೂರು ಜನ ಜನಾರ್ಧನ ರೆಡ್ಡಿಗಳು ಬಂದರೂ ನಮ್ಮನ್ನು ಏನೂ ಮಾಡುವುದಕ್ಕಾಗುವುದಿಲ್ಲ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಇಂತಹ ಬಹಳಷ್ಟು ಜನರನ್ನು ನೋಡಿದ್ದೇವೆ.

[ಗೊಂದಲ]

ಶ್ರೀ ಜಿ. ಜನಾರ್ಧನ ರೆಡ್ಡಿ :- ಐದೂವರೆ ಕೋಟಿ ಜನರೇ ನಿಮ್ಮ ಹಣೆಬರಹ ಏನು ಎಂಬುದನ್ನು ಬರೆದಿದ್ದಾರೆ.

[ಗೊಂದಲ]

ಶ್ರೀ ಜಿ. ಜನಾರ್ಧನ ರೆಡ್ಡಿ :- ಚುಚ್ಚುವ ರೀತಿಯಲ್ಲಿ ಮಾತನಾಡಬೇಡಿ. ಮಾನ್ಯ ಅಧ್ಯಕ್ಷರೆ, ಅವರು ಏನು ಮಾತನಾಡಬೇಕೋ, ಅದೆಲ್ಲವನ್ನೂ ಮಾತನಾಡಲಿ. ಚುಚ್ಚುವ ರೀತಿಯಲ್ಲಿ ಮಾತನಾಡುವುದು ಬೇಡ. ಅವರು ಬೇಕಾದುದನ್ನು ಮಾತನಾಡಲಿ. ಅವರು ಕೀಳು ಮಟ್ಟದಲ್ಲಿ ಮಾತನಾಡುವ ಮೂಲಕ, "ಅವರು ಇಟ್ಟುಕೊಂಡಿದ್ದಾರೆ, ಮಾಡುತ್ತಿದ್ದಾರೆ, ಅವರ ಮನೆಗೆ ಹೋಗಿದ್ದೆ, ಅವರು ಪಕ್ಷ ಬಿಡುತ್ತೇವೆಂದು ಹೇಳಿದರು" ಎಂದರೆ, ನಾನು ಸಮಾಧಾನವಾಗಿಯೇ ಮಾತನಾಡುತ್ತೇನೆ. ನೀವು ಏನು ಹೇಳಬೇಕೆಂದುಕೊಂಡಿದ್ದೀರೋ, ಅದನ್ನು ಚುಚ್ಚುವ ರೀತಿಯಲ್ಲಿ ಹೇಳಬೇಡಿ.

ಅಧ್ಯಕ್ಷರು :- ಯಾರೂ ಸಂಯಮ ಕಳೆದುಕೊಳ್ಳಬಾರದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಇದೀಗ ತಾನೆ ಅವರು ಹೇಳುತ್ತಾರೆ. ಈ ದೇಶದಲ್ಲಿ......ನಿಮಗೆಲ್ಲಾ ಗೊತ್ತಿಲ್ಲ ಕುಳಿತುಕೊಳ್ಳಿ. ಪಾಪ! ನೀವು ಯಾವ್ಯಾವುದರಲ್ಲೋ ಗೆದ್ದು ಬಂದಿದ್ದೀರಿ. ಯಾವುದೋ 20 ಕೋಟಿ, 25 ಕೋಟಿ ಖರ್ಚು ಮಾಡಿಕೊಂಡು ಇಲ್ಲಿಗೆ ಗೆದ್ದು ಬಂದಿರುತ್ತೀರಿ, ಸುಮ್ಮನೆ ಮಾತನಾಡುತ್ತೀರಿ. ಅಧ್ಯಕ್ಷರೆ, ತಾವು ಅವರಿಗೆ ದಯವಿಟ್ಟು ಹೇಳಬೇಕು. ನಾನು ಯೀಲ್ಡ್ ಆಗಿಲ್ಲ.

[ಗೊಂದಲ]

ಅಧ್ಯಕ್ಷರು :- Please, ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ.

[ಗೊಂದಲ]

ಒಬ್ಬ ಮಾನ್ಯ ಸದಸ್ಯರು :- ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಅಂದಂಗೆ..

[ಗೊಂದಲ]

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾವು ಯಾವ ತರಹ ಮಾತನಾಡಬೇಕೆಂದು ನಮಗೆ ಸಲಹೆ ಕೊಟ್ಟುಬಿಟ್ಟರೆ ಒಳ್ಳೆಯದು. ಚುಚ್ಚಿ ಮಾತನಾಡುತ್ತೇವೋ, ದೆವ್ವದ ತರಹ ಮಾತನಾಡುತ್ತೇವೋ, ಬ್ರಹ್ಮ ರಾಕ್ಷಸರ ತರಹ ಮಾತನಾಡುತ್ತೇವೋ. ಯಾವ ತರಹ ಮಾತನಾಡಬೇಕೆಂದು ಹೇಳಿದರೆ, ಹಾಗೆಯೇ ಮಾತನಾಡೋಣ.

ಅಧ್ಯಕ್ಷರು :- ಮಾನ್ಯ ಬಾಲಕೃಷ್ಣರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನೀವೇನು ಕಂಟ್ರೋಲ್ ಮಾಡಬೇಡಿ.

[ಗೊಂದಲ]

ಅಧ್ಯಕ್ಷರು :- ನನಗೆ ನೀವು dictate ಮಾಡುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ನಿಮ್ಮನ್ನು ನಾನು dictate ಮಾಡುತ್ತಿಲ್ಲ. ದಯಮಾಡಿ ನೀವು ಅರ್ಥ ಮಾಡಿಕೊಳ್ಳಬೇಕು. ನೀವು ಎಲ್ಲರಿಗೂ ಹೇಳಬೇಕು.

ಅಧ್ಯಕ್ಷರು :- ಹೇಳಬೇಕಾದಂತಹ ಸಂದರ್ಭದಲ್ಲಿ ಹೇಳುತ್ತೇವೆ. ಮೊದಲು ನೀವು ನಿಯಂತ್ರಣದಲ್ಲಿರಿ.... ಪರಸ್ಪರ ಒಬ್ಬರಿಗೊಬ್ಬರು ಮಾತನಾಡುವುದು ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಪಾಪ ನಾನು ಅವರಿಗೆ ಚುಚ್ಚಿ ಮಾತನಾಡಿದರೆ ನೋವಾಗುತ್ತದೆ. ಇಂಥ ಭ್ರಷ್ಟ ಮುಖ್ಯಮಂತ್ರಿ ದೇಶದಲ್ಲೇ ಇಲ್ಲವೆಂದು ಈಗತಾನೆ ಹೇಳಿದರು. ನಾನು ಭ್ರಷ್ಟ ಮುಖ್ಯಮಂತ್ರಿ ಎಂದು ನನಗೆ ಸರ್ಟಿಫಿಕೇಟ್ ಕೊಡುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದು? ಇದರಿಂದ ನನಗೆ ನೋವಾಗುವುದಿಲ್ಲವೇ? ನಾನು ಸ್ಪೋರ್ಟಿವ್ ಆಗಿ ತೆಗೆದುಕೊಂಡಿದ್ದೇನೆ. ಕಳೆದ 2

ವರ್ಷದಿಂದ ನನ್ನ ಮೇಲೆ 150 ಕೋಟಿ 150 ಕೋಟಿ ಎಂದು ಹೇಳಿದಾಗ ನಾನು ಅದನ್ನು ನುಂಗಿದ್ದೇನೆ, ಅರ್ಥ ಮಾಡಿಕೊಳ್ಳಬೇಕು. ಅಪಾದನೆ ಮಾಡುವುದು ಸುಲಭ, ಕೇಳಬೇಕಾಗುತ್ತದೆ. [ಗೊಂದಲ]

ಅಧ್ಯಕ್ಷರು :- ಈಗ ನಾಯಕರು ಮಾತನಾಡುತ್ತಿದ್ದಾರೆ, ಪರಸ್ಪರ ಯಾರು ಮಾತನಾಡಬೇಡಿ, ನಿಮ್ಮ ನಿಮ್ಮಲ್ಲೆ ಮಾತನಾಡುವ ಅವಶ್ಯಕತೆ ಇಲ್ಲ, ಏನಾದರು ಹೇಳುವುದಿದ್ದರೆ ಅಧ್ಯಕ್ಷರಿಗೆ ಹೇಳಿ, ಪರ್ಮಿಷನ್ ತೆಗೆದುಕೊಳ್ಳಿ, ಹಾಗೆ ಮಾತನಾಡಬೇಡಿ, ದಯವಿಟ್ಟು ಕುಳಿತುಕೊಳ್ಳಿ [ಗೊಂದಲ].

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನನಗೆ ಸಿಕ್ಕಂಥ ಬಳುವಳಿ ಇದು. ಯಾವ ಬಿಜೆಪಿ ಪಕ್ಷದ ಶಾಸಕರುಗಳು, ಸರ್ಕಾರ ರಚನೆ ಮಾಡಬೇಕೆಂದು ನನ್ನ ಮುಂದೆ ಬಂದು ಚರ್ಚೆ ಮಾಡಿದರು, ಈಗ 20 ವರ್ಷ ಆ ಜಾಗದಲ್ಲೇ ಇರುತ್ತೇವೆಂದು ಹೇಳುತ್ತಾರೆ, ಸಂತೋಷ ಇರಲಿ. ನನ್ನ ಮುಂದೆ ಬಂದು ಚರ್ಚೆ ಮಾಡಿದಾಗ ಅ ಸಂದರ್ಭದಲ್ಲಿ ನಾನು ತೆಗೆದುಕೊಂಡ ನಿರ್ಧಾರವೇನಿದೆ, ಅ ವಿಷಯಗಳನ್ನು ಇವತ್ತು ನಾನು ಕೆದಕಬಾರದು, ನನಗೆ ಬೇಕಾಗಿಲ್ಲ. ಆದರೆ ಅವರಿಗೆ ಕೊಟ್ಟಂಥ ಸಹಕಾರಕ್ಕೆ 150 ಕೋಟಿ ಹಗರಣ ನನಗೆ ಕೊಟ್ಟಂಥ ಬಳುವಳಿ, ಆ ಸಮಿಶ್ರ ಸರ್ಕಾರ ರಚನೆ ಮಾಡದೆ ಹೋಗಿದ್ದರೆ ಇವರೆಲ್ಲರು ಅವತ್ತು ಏನಾಗುತ್ತಿದ್ದರೊ ನನಗೆ ಗೊತ್ತಿಲ್ಲ. ಪಾಪ 9 ಕ್ಯಾಸೆಟ್ ಇಟ್ಟಿದ್ದಾರೆ, ಈಗ ಬಿಟ್ಟಿರುವುದು 3-4 ಇರಬಹುದು ಅಷ್ಟೆ. ಆ ಕ್ಯಾಸೆಟ್ ರಚನೆ ಮಾಡಿದವರು ಇದ್ದಾರೆ, ಆ ಹೆಸರನ್ನು ಈಗ ಹೇಳುವುದಿಲ್ಲ. ಅವರೆಲ್ಲಾ ಈಗ ಒಳ್ಳೆಯ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ಹರೆ ಹರೆ ಗಣಿರಾಮ, ಬಳ್ಳಾರಿ ಗಣಿಧಣಿ ರೆಡ್ಡಿಯಿಂದ ಮಧುರವಾಣಿ, ಸಿಎಂ, ಚನ್ನಿಗಪ್ಪ ಲಂಚ ಆರೋಪದಿಂದ ಮುಕ್ತ, ನಕ್ಸಲರ ಮೇಲೆ ಗೂಬೆ, ಇದು ಬಂತು, ಪತ್ರಿಕೆಯವರೇ ಬರೆಯುತ್ತಾರೆ. ಜುಲೈ 6ನೇ ತಾರೀಖು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಗಲು ದರೋಡೆ ಮಾಡುತ್ತಿದ್ದಾರೆ, ಅಕ್ರಮ ಗಣಿಗಾರಿಕೆ ಹೆಸರಿನಲ್ಲಿ ಗಣಿ ಮಾಲೀಕರಿಂದ ಸುಮಾರು 100 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ವಸೂಲ್ಮಾಡಿದ್ದಾರೆ. ಮತ್ತೆ ಜುಲೈ 14ಕ್ಕೆ ಹೇಳುತ್ತಾರೆ, ರೆಡ್ಡಿ ಡೈಲಾಗ್, ನಾನು ಸಿಎಂ ಮೇಲೆ ನೇರ ಆರೋಪ ಮಾಡಿಲ್ಲ, ಮುಖ್ಯಮಂತ್ರಿಗಳ ಹೆಸರನ್ನು ಹೇಳಿಕೊಂಡು ಕೆಲವರು ಗಣಿ ಮಾಲೀಕರಿಂದ ಹಣ ಸಂಗ್ರಹ ಮಾಡುತ್ತಿದ್ದಾರೆಂಬ ಅರ್ಥದಲ್ಲಿ ಹೇಳಿದ್ದೇನೆಯೆ ಹೊರತು, ಯಾವುದೇ ದುರುದ್ದೇಶದಿಂದಲ್ಲವೆಂದು ಇನ್ನೊಂದು ಹೇಳಿಕೆ. ಇದು ನಾನು ಹೇಳಿರುವುದಲ್ಲ, ಪತ್ರಿಕೆಗಳಲ್ಲಿ ಬಂದಿರುವುದು. ಬದಲಾದ ಧ್ವನಿ ಟುಸ್ ಎಂದ ರೆಡ್ಡಿ ಬಾಂಬ್, ಮುಖ್ಯಮಂತ್ರಿ

ಆಸ್ತಿ ತನಿಖೆ, ಸುಪ್ರೀಂ ಕೋರ್ಟಿನಿಂದ ಅರ್ಜಿ ವಜಾ, ನವೆಂಬರ್ 13ನೇ ತಾರೀಖು, ಅಲ್ಲಿ ಹೇಳುತ್ತಾರೆ, ವಿಚಾರಣೆಗೆ ಅಂಗೀಕರಿಸಬೇಕೆ ಬೇಡವೇ ಎನ್ನುವ ಪ್ರವೇಶ ಹಂತದಲ್ಲೇ ಅರ್ಧಚಂದ್ರ ಪ್ರಯೋಗಕ್ಕೆ ಒಳಗಾದ ಇಂದಿನ ಅರ್ಜಿಯನ್ನು ಸಲ್ಲಿಸಿದವರು, ಮಂಗಳೂರಿನ ಎ.ಆರ್.ಸುಭಾಷ್, ಈ ಅರ್ಜಿ ಹಿಂದೆ ಯಾರಿದ್ದಾರೆಂದು ಕೋರ್ಟಿನಲ್ಲೇ ಹೇಳುತ್ತಾರೆ. ಸುಪ್ರೀಂ ಕೋರ್ಟಿನಲ್ಲಿ ಇವರು ನನ್ನನ್ನು ಗಲ್ಲಿಗೆ ಹಾಕಿಸುತ್ತಾರಂತೆ ಸಂತೋಷ, ಗಲ್ಲಿಗೆ ಹಾಕಿಸಲಿ ಸ್ವಾಮಿ ನಾನು ತಯಾರಾಗಿದ್ದೇನೆ. ಕುಮಾರ್ ಸಾವಿರ ಕೋಟಿ ಮಾಡಿದ್ದಾರೆ, 750 ಎಕರೆ ಭೂಮಿ ಮಾರಾಟ, ಭೂಮಿ ಮಾಡಿಕೊಂಡಿದ್ದಾರೆ, ಗುರುವಾರ ಪ್ರತ್ಯೇಕ್ಷವಾದ ಮತ್ತೊಂದು ಸಿಡಿಯಲ್ಲಿ ಬಡಬಡಿಸುವ ಸಚಿವ ಚೆನ್ನಿಗಪ್ಪ, ಇದು ಸೆನ್ಸಾರ್ ಆದ ಸಿ.ಡಿ, ಇವರುಗಳು ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿರುವುದು. ಲಂಚ,ಲಂಚ ಮತ್ತೊಂದು ಸಿ.ಡಿ, ಚೆನ್ನಿಗಪ್ಪ ಸಿ.ಡಿ ಪತ್ತೆ, ಚೆನ್ನಿಗಪ್ಪ ದುಡ್ಡಿನ ಮುಂದೆ ಕುಳಿತಿರುವ ಸಿ.ಡಿಯನ್ನು ಬಿಡುತ್ತಾರೆ. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತು ಅಕ್ರಮ ಗಣಿಗಾರಿಕೆ ಎಂಬುದು ಪ್ರಸ್ತಾಪ ಪ್ರಾರಂಭವಾಗಿದ್ದೆ ಸಮಿಶ್ರ ಸರ್ಕಾರದ ರಚನೆಯಿಂದ, ಅಲ್ಲಿಯವರೆಗೆ ಯಾರೂ ಅಕ್ರಮ ಗಣಿಗಾರಿಕೆಯ ಬಗ್ಗೆ ಚರ್ಚೆ ಮಾಡಿರಲಿಲ್ಲ. ನೋಟಿನ ಕಂತೆ ಕಂತೆಯ ಮುಂದೆಯೆ ಕುಳಿತ ಲಂಚಾರೋಪಿ ಮಂತ್ರಿ, 3ನೇ ಸಿ.ಡಿ ಸ್ಫೋಟ ಚೆನ್ನಿಗಪ್ಪ ಏನು ಹೇಳುತ್ತಾರೆ, ಮುಖ್ಯಮಂತ್ರಿ, ಅವರಪ್ಪ ಪಾಳೆಗಾರರಲ್ಲ, ಜನಾರ್ಧನರೆಡ್ಡಿಯವರ ಹೇಳಿಕೆ, ರೆಡ್ಡಿ ಸಿ.ಡಿ ಸಿಡಿಸಿರುವ 5 ಪ್ರಶ್ನೆಗಳು.

ಅಧ್ಯಕ್ಷರು :- ಮಾನ್ಯ ಕುಮಾರ ಸ್ವಾಮಿಯವರೆ, ಜಯಚಂದ್ರರವರು, ವಿರೋಧಪಕ್ಷದ ನಾಯಕರು ಹಾಗು ಇನ್ನಿತರ ಶಾಸಕರು ಇವತ್ತೇನು ನಿಲುವಳಿ ಸೂಚನೆಯನ್ನು ಕೊಟ್ಟರು, ಅದನ್ನು ರೂಲ್ 69 ನಲ್ಲಿ ಕನ್ವರ್ಟ್ ಮಾಡಿದ್ದೇನೆ. ಅಲ್ಲಿರುವಂಥ ವಿಷಯ, ಬಳ್ಳಾರಿಯಲ್ಲಿ ಅಕ್ರಮವಾಗಿರುವ ಗಣಿಗಾರಿಕೆ ಏನು ನಡೆಯುತ್ತಿದೆ, ಲೋಕಾಯುಕ್ತ ವರದಿ ಏನಿದೆ, ಇದರ ಹಿನ್ನಲೆಯಲ್ಲಿ ನಾವು ಚರ್ಚೆ ಮಾಡುತ್ತೇವೆ ಎನ್ನುವ ವಿಷಯವನ್ನು ಅವರು ಮಂಡನೆ ಮಾಡಿದ್ದಾರೆ, ಅದಕ್ಕೆ ಸೀಮಿತವಾಗಿ ಚರ್ಚೆ ಮಾಡಿದರೆ ಒಳ್ಳೆಯದೇನೊ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅಧ್ಯಕ್ಷರೆ, ತಮ್ಮ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಇದನ್ನು ತಂದೆ ಎಂದರೆ, ಪ್ರಿಯಂಬಲ್ ಆಗಿ ಅಕ್ರಮ ಗಣಿಗಾರಿಕೆ ಯಾವ ರೀತಿ ಪ್ರಾರಂಭವಾಯಿತು, ಅದರ ಮೂಲ ನಾನೇ ಎನ್ನುವ

ರೀತಿಯಲ್ಲಿ ಬಿಂಬಿಸಿರುವುದರಿಂದ ಹಳೆಯದ್ದನ್ನು ಸ್ವಲ್ಪ ನೆನಪು ಮಾಡಿಕೊಟ್ಟು, ನಂತರ ಲೋಕಾಯುಕ್ತ ವರದಿ ವಿಷಯಕ್ಕೆ ನಾನು ಬರುವುದಕ್ಕೆ ಒಂದು 2-3 ನಿಮಿಷಗಳನ್ನು ತೆಗೆದುಕೊಳ್ಳುತ್ತೇನೆ, ಅದಕ್ಕಿಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ರೆಡ್ಡಿ ಬಾಂಬ್ 1, ಸರ್ಕಾರ ಸ್ಫೋಟವಿಲ್ಲ, ಬೆಂಗಳೂರಿನಲ್ಲಿ ಭಾಗ 2,3 ಪ್ರದರ್ಶನ ಅದರಲ್ಲಿ ನಿಜವಾದ ಬಾಂಬ್ ಇದೆ, ಜನಾರ್ಧನ ರೆಡ್ಡಿಯವರ ಹೇಳಿಕೆ. ಮೊದಲನೆ ಬಾಂಬ್ ಟುಸ್ ಆಯಿತು, 2,3ರಲ್ಲಿ ನಾನು ದೊಡ್ಡ ದೊಡ್ಡ ವಿಷಯವನ್ನಿಟ್ಟಿದ್ದೇನೆ, ಅದನ್ನು ನಾನು ಬಿಡುತ್ತೇನೆಂದು. ಕಳೆದ 2 ವರ್ಷಗಳಿಂದ ನಾನು ಹೇಗೆ ನೊಂದಿರಬಹುದು ಅಧ್ಯಕ್ಷರೆ? ಅವರಿಗೆ ಇದರಲ್ಲಿ ಸೋಲು ಎನ್ನುವುದೇ ಇಲ್ಲ. ನಾವೆಲ್ಲಾ ಸೋತು ಇದ್ದೇವೆ, ಗೆದ್ದು ಇದ್ದೇವೆ, ಸೋತಾಗ ಅಂಜಿಲ್ಲ, ಗೆದ್ದಾಗ ದುರಂಹಕಾರದಿಂದ ನಡೆದುಕೊಂಡಿಲ್ಲ. ಇದರ ಬಗ್ಗೆ ರಾಷ್ಟ್ರಪತಿ, ಪ್ರಧಾನಮಂತ್ರಿ ಗಳಿಗೆ ರಾಜ್ಯಪಾಲರಿಂದ ವರದಿ ಕಳುಹಿಸುತ್ತಾರೆ. ಇದು ಹಿಂದೆ ನಡೆದ ಘಟನೆ, ನಾನು ಮತ್ತೆ ಈ ಬಗ್ಗೆ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಾನು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಗಣಿಗಾರಿಕೆಗೆ ಸಂಬಂಧಪಟ್ಟ ಹಾಗೆ ನಾನು ಕೆಲವಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ ಎನ್ನುವ ಮಾತನ್ನು ಮುಖ್ಯಮಂತ್ರಿಗಳೆ ಹಲವಾರು ಸಭೆಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ, ಇವತ್ತು ಕೆಳ ಮತ್ತು ಮೇಲ್ಮನೆಯಲ್ಲೂ ವಿವರವನ್ನು ಕೊಟ್ಟಿದ್ದಾರೆ. ಅವರು ಲೋಕಾಯುಕ್ತರಿಗೆ ಮತ್ತೊಂದು ಪತ್ರವನ್ನು ಬರೆದು, 2006ರ ನಂತರ, ಏನು ಲೋಕಾಯುಕ್ತರು ಮೊದಲನೆ ವರದಿಯನ್ನು ಕೊಟ್ಟಿದ್ದಾರೆ. ಅದು ಆದ ನಂತರ 2008 ಸೆಪ್ಟೆಂಬರ್ 9ರ ಬೆಳವಣಿಗೆಯ ಬಗ್ಗೆ ತನಿಖೆ ನಡೆಸಿ ವರದಿಯನ್ನು ಕೊಡಿ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರವರಿಗೆ ರೆಫರ್ ಮಾಡಿದ್ದಾರೆ. ನಾನು ನಿಜಕ್ಕೂ ಅವರಿಗೆ ಆಭಾರಿಯಾಗಿದ್ದೇನೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಯಾರ್‍ಯಾರ ಕಾಲದಲ್ಲಿ ಏನೇನು ಮೈನಿಂಗ್ ಅನ್ನು ಕೊಟ್ಟಿದ್ದಾರೆ ಎಂಬ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಸನ್ಮಾನ್ಯ ಧರ್ಮಸಿಂಗ್ ಅವರು ಮುಖ್ಯಮಂತ್ರಿಗಳಾಗಿದ್ದಾಗ 43 ಪ್ರಕರಣಕ್ಕೆ ಅನುಮತಿಯನ್ನು ನೀಡಿದ್ದಾರೆ ಕುಮಾರ ಸ್ವಾಮಿಯವರಿದ್ದಾಗ 44 ಪ್ರಕರಣಗಳಿಗೆ ಅನುಮತಿಯನ್ನು ನೀಡಿದ್ದಾರೆ, ನನ್ನ ಕಾಲದಲ್ಲಿ ಯಾವುದನ್ನು ಕೊಟ್ಟಿಲ್ಲ, ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ 22 ಅನ್ನು ಕೊಟ್ಟಿದ್ದಾರೆ ಎಂಬುದನ್ನು ಇವತ್ತು ಪ್ರಸ್ತಾಪ ಮಾಡಿದ್ದಾರೆ. ನನ್ನ ಕಾಲದಲ್ಲಿ ಕೊಟ್ಟಿರುವುದು, ನಾನು ಕೊಡುವ ಪ್ರಶ್ನೆ ಬರುವುದಿಲ್ಲ. ನಾನೇನು ಛೇರ್ಮನ್ ಆಗಿರಲಿಲ್ಲ. ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾಗಿರುವವರೆಗೆ ಅವರೇ ಅ ಒಂದು ಸಮಿತಿಯ ಅಧ್ಯಕ್ಷರಾಗಿ

ತೀರ್ಮಾನಗಳನ್ನು ಮಾಡಿಕೊಂಡು ಬಂದರು. ನಾನು ಮುಖ್ಯಮಂತ್ರಿಯಾದ ನಂತರ ಅಧಿಕಾರಿಗಳಿಗೆ ಆ ಅಧಿಕಾರವನ್ನು ಕೊಟ್ಟಿದ್ದೇನೆ, ನಾನು ಆ ಜಾಗದಲ್ಲಿ ಕೂರಲಿಲ್ಲ, ನಾನು ಬದಲಾವಣೆ ಮಾಡಿದೆ. 44 ಪ್ರಕರಣಗಳೇನಿದ್ದಾವೆ, ಅವನ್ನು ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿದ್ದೇವೆ, ಕೇಂದ್ರ ಸರ್ಕಾರ ಅನುಮತಿ ಕೊಡಬೇಕು, ನಾನು ಅನುಮತಿಯನ್ನು ಕೊಟ್ಟಿಲ್ಲ, ಶಿಫಾರಸ್ಸು ಮಾಡಿದ್ದೇವೆ ಅಷ್ಟೆ, ನನ್ನಿಂದ ಅನುಮತಿ ಏನು ಆಗಿಲ್ಲ. ಅದರಲ್ಲಿ ನಾನು ಎಲ್ಲಾ ಪಕ್ಷಗಳ ಮುಖಂಡರುಗಳಿಗೂ ಕೊಟ್ಟಿದ್ದೇನೆ.

JDS ಶಾಸಕರು ಕೊಟ್ಟಿರತಕ್ಕಂಥದ್ದು ಅಷ್ಟಕ್ಕೆ ಸೀಮಿತ ಮಾತು ಬೇಡ. ನನ್ನ ಕುಟುಂಬದಲ್ಲಿ ಯಾರಿಗೂ ಕೊಟ್ಟಿಲ್ಲ. ಅವರೇ ಸಾರ್ವಜನಿಕವಾಗಿ ಹೇಳಿದ್ದಾರೆ. ಮಾನ್ಯ ಶಾಸಕರಾದ ಕೃಷ್ಣಪ್ಪ ಸುರೇಶ್‌ಬಾಬು ಹಾಗೂ ಅವರ ಕುಟುಂಬದ ಸದಸ್ಯರಿಗೆಲ್ಲಾ ಅನುಮತಿ ಕೊಟ್ಟಿದ್ದಾರೆಂದು ಹೇಳಿದರು. ನನ್ನ ಕುಟುಂಬದವರಿಗೆ ಯಾರಿಗೂ ಕೊಟ್ಟಿಲ್ಲ. ಅದು ಇದ್ದರೆ ಅದನ್ನೂ CBI ಗೆ ರೆಫರ್ ಮಾಡುತ್ತಾರೋ ಇಲ್ಲ ಲೋಕಾಯುಕ್ತ ಎನ್‌ಕ್ವೈರಿಗೆ ರೆಫರ್ ಮಾಡುತ್ತಾರೋ ಮಾಡಬಹುದು. BJP ಪಕ್ಷದಲ್ಲಿರತಕ್ಕಂತಹ ಹಲವಾರು ಶಾಸಕರುಗಳು ಆ ಸಂದರ್ಭದಲ್ಲಿ ಬಂದು ಮನವಿ ಮಾಡಿದಾಗ ರೆಕಮಂಡ್ ಆಗಿ ಕಾನೂನು ಬದ್ಧವಾಗಿ ಬಂದಿರುವಂಥದ್ದನ್ನು ಅಧಿಕಾರಿಗಳಿಗೆ ಕಳುಹಿಸಿದರೆ ಅದನ್ನು ಕೇಂದ್ರ ಸರ್ಕಾರಕ್ಕೆ ರವಾನೆ ಮಾಡಿದ್ದೇವೆ ಹೊರತು ನಾನಂತೂ ಯಾವುದೇ ಮೂಗು ತೂರಿಸಿ ಇಂತಹ ಅಧಿಕಾರಿಗಳಿಗೆ ಕೊಡಿ ಅಂತಹವರಿಗೆ ಕೊಡಿ ಎಂದು ನಾನು ಯಾವತ್ತೂ ಹೇಳಲಿಲ್ಲ. ಅವರದೇ ಸರ್ಕಾರ ಇದೆ. ಈಗ ಅಧಿಕಾರಿಗಳ ಹತ್ತಿರ ಯಾವ ತರಹ ಬೇಕಾದರೂ ಉತ್ತರ ಪಡೆದುಕೊಳ್ಳಬಹುದು ಎಂದು ಸ್ಪಷ್ಟೀಕರಣ ಕೊಡುತ್ತೇನೆ. ತನಿಖೆಗೆ ಆದೇಶ ಮಾಡಿದ್ದಾರೆ, ಸಂತೋಷ. 2008ರವರೆಗೆ ಯಾವ ತರಹ ಇದೆ ಎಂದರೆ ನಮ್ಮ ಕಾಲದಲ್ಲಿ ಆದರೂ ಹಿಂದೆ ಇದ್ದ ಸರ್ಕಾರಗಳು ಅನುಮತಿ ಕೊಟ್ಟರು, ರೆಕಮೆಂಡ್ ಮಾಡಿದೆವು. ಈಗ ಅನುಮತಿ ಬೇಕಾಗಿಲ್ಲ. ಅನುಮತಿ ಇಲ್ಲದೆ ರಾಜಾರೋಷವಾಗಿ ಕರ್ನಾಟಕ ರಾಜ್ಯದ ಗಡಿಯಿಂದ ಪ್ರತಿನಿತ್ಯ 10,000 ಟನ್ ಯಾವುದೋ ಸ್ಟಾಕ್ ಯಾರ್ಡ್‌ಗೆ ಹೋಗುತ್ತಿದೆ. ಯಾರು ಕೇಳುವವರು ಇದ್ದಾರೆ? ಈ ಸರ್ಕಾರದಲ್ಲಿ ಅನುಮತಿ ಬೇಕಾಗಿಯೇ ಇಲ್ಲ. ಪರವಾನಗಿ ಕೊಡಬೇಕಾಗಿಲ್ಲ. ಇವತ್ತು ರಾಜಾರೋಷವಾಗಿ ಅಧಿಕಾರಿಗಳ ಕಣ್ಣು, ಬಾಯಿ ಮತ್ತು ಕಿವಿ ಯಾರೂ ತೆಗೆಯುವ ಹಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು 10,000 ಟನ್ ಹೋಗುತ್ತಿಲ್ಲವೆಂದು ಹೇಳಿದರು. ನನ್ನ ಮಾತಿನಲ್ಲಿ ತಪ್ಪಿದ್ದರೆ ನಾನು ಇವತ್ತು ಕ್ಷಮೆ ಕೇಳುವುದಕ್ಕೆ ಸಿದ್ಧನಿದ್ದೇನೆ. ಇವತ್ತು

ತೀರ್ಮಾನ ಆಗಬೇಕು. ಯಾವ ರೀತಿ ಇವತ್ತು ದಿವಸಕ್ಕೆ 10,000 ಟನ್ ಅದಿರು ಹೋಗುತ್ತಿದೆ ಅದಕ್ಕೆ ಪರ್ಮಿಟ್ ಇದೆಯೇ? ಯಾವ ಬೇಸಿಸ್ ಮೇಲೆ, ಯಾವ ಆಧಾರದ ಮೇಲೆ ಇವತ್ತು ಕರ್ನಾಟಕ ರಾಜ್ಯದ ಗಡಿಯಿಂದ ಆಂಧ್ರ ಗಡಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ, ಅಲ್ಲಿಂದ without permit ಏನು ಪ್ರತಿನಿತ್ಯ ಸೇಲ್ ಮಾಡುತ್ತಿದ್ದಾರೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸದನದ ಗಮನಕ್ಕೆ ತರಬೇಕೆನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಲೋಕಾಯುಕ್ತ ಸಂಸ್ಥೆಯಿಂದ ಎರಡು ಕಂತಿನಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಕೊಟ್ಟ ಮೇಲೆ ಅಧ್ಯಕ್ಷರೆ, ಇವತ್ತು ಅಧಿಕಾರಿಗಳಿಗೆ ಕೊಟ್ಟು ಅದರ ಬಗ್ಗೆ ತನಿಖೆ ಮಾಡಿ ಎಂದರೆ, ಈಗ ಅಧಿಕಾರಿಗಳು ಯಾವ ಧೈರ್ಯದ ಮೇಲೆ ಲೋಕಾಯುಕ್ತದವರು ಕೊಟ್ಟಿರತಕ್ಕಂತಹ ವರದಿ ಸರಿ ಇದೆ ಎಂದು ಈ ಸರ್ಕಾರದ ಮುಂದೆ ಪ್ರಾಮಾಣಿಕವಾಗಿ ಹೇಳುವುದಕ್ಕೆ ಸಿದ್ದರಿದ್ದಾರೆ, ಆ ರೀತಿ ಅಧಿಕಾರಿ ಗಳಿಗೆ ಸ್ವತಂತ್ರವಾಗಿ ಕೆಲಸ ಮಾಡಲಿಕ್ಕೆ ಈ ಸರ್ಕಾರದಲ್ಲಿ ಅವಕಾಶಗಳಿವೆಯೇ? ಇವತ್ತು ನಾನು ಗಮನಿಸುತ್ತಿದ್ದೇನೆ. ನಾನು ನಾಳೆ ರಾಜ್ಯಪಾಲರ ಭಾಷಣದಲ್ಲಿ ವರ್ಗಾವಣೆ ಬಗ್ಗೆ ಚರ್ಚೆ ಮಾಡುತ್ತೇನೆ. ಈಗ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಯಾವ ಯಾವ IAS ಅಧಿಕಾರಿಗಳಿಗೆ ಏಳು ತಿಂಗಳುಗಳಲ್ಲಿ 8 ಬಾರಿ, 9ಬಾರಿ 10 ಬಾರಿ ವರ್ಗಾವಣೆ ಮಾಡಿದ್ದಾರೆ, ಇವತ್ತು ಯಾವ ಅಧಿಕಾರಿ ಧೈರ್ಯವಾಗಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸತಕ್ಕಂತಹ ಆಡಳಿತ ಇಲ್ಲಿ ಇದೆ ಎಂದು ನಾನು ಕೇಳಬೇಕಾಗುತ್ತದೆ. ಏಕೆಂದರೆ ಪಾಳೆಗಾರಿಕೆ ಪದ ಇದೆಯಲ್ಲ, ಪ್ರತಿನಿತ್ಯ ಆ ಪದವನ್ನು ಏನು ಬಳಸುತ್ತಾರೆ, ಆ ಪಾಳೆಗಾರಿಕೆ ರಾಜಕಾರಣ ಬಳ್ಳಾರಿ ಜಿಲ್ಲೆಯಲ್ಲಿದೆ. ಯಾವ ಅಧಿಕಾರಿಗಳೂ ಇವತ್ತು ಯಾರೂ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಹೈಕೋರ್ಟುಗಳು ಕೊಟ್ಟಂತಹ ಒಂದು ತೀರ್ಪಿನ ಮೇಲೆ ಇವತ್ತು ಅಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಹೈಕೋರ್ಟಿನಲ್ಲಿ ಕೊಟ್ಟಂತಹ ತೀರ್ಪಿಗೆ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದು ದಯುವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಯಾವುದೋ ತಮಟಿ ಗಣಿಗಾರಿಕೆಗೆ ಹೈಕೋರ್ಟಿನಿಂದ ಅವರಿಗೆ ಆದೇಶವಾದರೂ ಇವತ್ತಿನವರೆಗೂ ಅವರು ಒಳಗಡೆ ಕಾಲು ಇಟ್ಟು ಹೋಗುವುದಕ್ಕಾಗಲಿಲ್ಲ. ಅಲ್ಲಿ 144 ಸೆಕ್ಷನ್ ಇಟ್ಟಿದ್ದಾರೆ. ಹಿಂದು ಪತ್ರಿಕೆಯಲ್ಲಿ ಬಂದಿರುವಂತಹ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಿದ್ದಾರೆ. ಲೋಕಾಯುಕ್ತ ಸಂಸ್ಥೆಯವರು ಕೊಟ್ಟಂತಹ ವರದಿಯನ್ನು ಇವತು

ಮತ್ತೆ ನಿಮಗೆ ಬೇಕಾದಂತಹ ಅಧಿಕಾರಿ ಮುಖಾಂತರ ತಿರುಚಿಕೊಳ್ಳುವುದಕ್ಕೆ ಹೊರಟಿದ್ದೀರಿ. ಲೋಕಾಯುಕ್ತ ಸಂಸ್ಥೆ ಬಗ್ಗೆ ಯಾವ ರೀತಿ ಗೌರವ ಕೊಡುತ್ತಿದ್ದೀರಿ ಎಂದು ನಾವು ಇವತ್ತು ಕಾಣಬಹುದು. ನೀವು ಪ್ರಮಾಣ ವಚನ ಸ್ವೀಕಾರ ಮಾಡಿದಾಗ ಹೇಳಿದಿರಿ. ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದೇ ನನ್ನ ಉದ್ದೇಶ ಎಂದು ಹೇಳಿದಿರಿ. ನಾವೆಲ್ಲಾ ನಿಜಕ್ಕೂ ಎಂತಹ ಒಳ್ಳೆಯ ಸರ್ಕಾರ ಬಂತು, ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿಲ್ಲಿಸುವುದರ ಮುಖಾಂತರ ಇವತ್ತು ಒಂದು ಹೊಸ ದಾಖಲೆಯನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆ. ನಿಜಕ್ಕೂ ಕರ್ನಾಟಕ ರಾಜ್ಯ ರಾಮ ರಾಜ್ಯ ಆಗಬಹುದು ಎನ್ನುವಂತಹ ಆಸೆಯಿಂದ ನಾವೂ ಸ್ವಲ್ಪ ಕಾದು ನೋಡುತ್ತಿದ್ದೇವೆ. ಯಾವ ರೀತಿ ನಡೆಯುತ್ತಿದೆ ಎನ್ನುವುದಕ್ಕೆ ಇವತ್ತು ಹಿಂದು ಪತ್ರಿಕೆ ಜವಾಬ್ದಾರಿಯುತವಾದ ಪತ್ರಿಕೆ ಅದು ಆ ಪತ್ರಿಕೆಯಲ್ಲಿ ಬಂದಿರತಕ್ಕಂತಹ ವರದಿ ಏನಿದೆ, ಆ ವರದಿ ನೋಡಿದರೆ ಈ ಸರ್ಕಾರ ಲೋಕಾಯುಕ್ತ ಸಂಸ್ಥೆಗೆ ಯಾವ ರೀತಿ ಗೌರವ ಕೊಟ್ಟಿದೆ ಎನ್ನುವುದನ್ನು ಇವತ್ತು ನಾವು ಗಮನಿಸಬಹುದು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಲೋಕಾಯುಕ್ತ ಅಧಿಕಾರಿಗಳು ಹೇಳುತ್ತಾರೆ, ಸಮರ್ಪಕ ದಾಖಲೆಗಳನ್ನು ಒದಗಿಸಿಲ್ಲ. ಅಕ್ರಮ ಗಣಿಗಾರಿಕೆ ಕುರಿತಂತೆ ಲೋಕಾಯುಕ್ತರು ನಡೆಸಿದ ಮೊದಲ ಸುತ್ತಿನ ತನಿಖೆ ಸಂದರ್ಭದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮೈಸೂರು ಮಿನರಲ್ ಸಂಸ್ಥೆಯವರು ಕೇಳಿದ ಎಲ್ಲಾ ದಾಖಲೆಗಳನ್ನು ಲೋಕಾಯುಕ್ತರಿಗೆ ಒದಗಿಸಿಯೇ ಇಲ್ಲ. ಹೀಗಾಗಿ ಮೊದಲ ಸುತ್ತಿನ ತನಿಖಾ ವರದಿ ವಿಳಂಬವಾಗುವುದರ ಜೊತೆಗೆ ಪೂರ್ಣ ಪ್ರಮಾಣದ ವರದಿ ಸಲಿಸಲು ಲೋಕಾಯುಕ್ತರಿಗೆ ಸಾಧ್ಯವಾಗಿಲ್ಲವೆಂದು ಸಂತೋಷ್ ಹೆಗಡೆಯವರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಇವರ ಎರಡನೇ ಸುತ್ತಿನ ತನಿಖೆ ಸಂದರ್ಭದಲ್ಲಿ ಮತ್ತೆ ನೋಟಿಸ್ ಜಾರಿ ಮಾಡಿ ದಾಖಲೆಗಳನ್ನು ಒದಗಿಸುವಂತೆ ಕೇಳಲಾಗುವುದು. 2006 ರಿಂದ 2008ರವರೆಗಿನ ದಾಖಲೆಗಳ ಜೊತೆಗೆ ಮೊದಲ ಸುತ್ತಿನ ತನಿಖೆಯ ದಾಖಲೆಗಳನ್ನು ಒದಗಿಸುವಂತೆಯೂ ಸೂಚಿಸಲಾಗುವುದು ಎಂದು ಲೋಕಾಯುಕ್ತರು ಅವರ inability ಯನ್ನು ಹೇಳಿಕೊಳ್ಳುತ್ತಾರೆ, ಅಧಿಕಾರಿಗಳು ಯಾವ ರೀತಿ ನಮಗೆ ಸಹಕಾರ ಕೊಡುತ್ತಿದ್ದಾರೆಂದು ಹೇಳಿ ಅಧ್ಯಕ್ಷರೆ. ಅವರೇ ಇನ್ನೊಂದು ಕಡೆ ಹೇಳುತ್ತಾರೆ, ಮೂರು ತಿಂಗಳುಗಳಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ, ರಾಜಭವನಕ್ಕೆ ಹೋಗತಕ್ಕಂಥದ್ದು ಒಂದೇ ನಮಗೆ ದಾರಿ ಎನ್ನುವುದನ್ನು ಲೋಕಾಯುಕ್ತರು ಮಾಧ್ಯಮಗಳ ಮುಂದೆ ಅವರ ಭಾವನೆ ಇಟ್ಟಿದ್ದಾರೆ ಅಧ್ಯಕ್ಷರೆ, ಒಬ್

ನಿಷ್ಠಾವಂತ ಅಧಿಕಾರಿ ಯು.ವಿ. ಸಿಂಗ್‌ರವರು. ಲೋಕಾಯುಕ್ತ ಸಂಸ್ಥೆಯವರು ಅವರ ಮುಖಾಂತರ ಬೌಂಡರಿ ಲೈನ್ ಬಗ್ಗೆ ಯಾವ ಒಂದು ಮಾಹಿತಿಗಳನ್ನು ತರಿಸಿಕೊಂಡರು, ಅವರ ಬಗ್ಗೆ ಕಂದಾಯ ಸಚಿವರು ಲಘುವಾಗಿ ಚರ್ಚೆ ಮಾಡುತ್ತಾರೆ. ಇವತ್ತು ಅವರು ಏನು ಸರ್ವೇಯರ್ರಾ ಅವರಿಗೆ ಯಾವ ಅನುಭವ ಇದೆ, ಎಂದು ಆ ಒಂದು ವರದಿ ಬಗ್ಗೆ ನೇರವಾಗಿ ಚರ್ಚೆ ಮಾಡುತ್ತಾರೆ. ಹಾಗಿದ್ದರೆ ಈ ಸರ್ಕಾರ ಯಾರ ಕೈಯಲ್ಲಿ ವರದಿ ತರಿಸಿಕೊಳ್ಳಬೇಕು, ಇವತ್ತು ಜವಾಬ್ದಾರಿಯುತವಾದ ಸಚಿವರುಗಳು ಸಾರ್ವಜನಿಕವಾಗಿ ಈ ರೀತಿ ಹೇಳಿಕೆ ಕೊಟ್ಟ ಮೇಲೆ ಯಾವ ಅಧಿಕಾರಿ ಇವತ್ತು ಧೈರ್ಯವಾಗಿ ಕೆಲಸ ಮಾಡಲಿಕ್ಕೆ ಸಾಧ್ಯ? ಇದು ಇಲ್ಲಿರತಕ್ಕಂತಹ ಪ್ರಶ್ನೆ. ಯು.ವಿ. ಸಿಂಗ್ ವರದಿ ಒಪ್ಪಲಿಕ್ಕೆ ಸಾಧ್ಯವಿಲ್ಲವೆಂದು ನಿಮ್ಮ ಮಂತ್ರಿಗಳೇ ಹೇಳುತ್ತಾರೆ. ಹಾಗಿದ್ದರೆ ಲೋಕಾಯುಕ್ತ ಸಂಸ್ಥೆಯವರ ಮುಖಾಂತರ ಇವತ್ತು ವರದಿ ತರಿಸಿಕೊಂಡರೆ ಆ ವರದಿಯ ಗೌರವ ಏನಿದೆ, ಅದಕ್ಕೆ ಏನು ಬೆಲೆ ಕೊಡುತ್ತೀರಿ. ?ಇದು ಇಲ್ಲಿರತಕ್ಕಂತಹ ಪ್ರಶ್ನೆ. ಕರ್ನಾಟಕ ಆಂಧ್ರ ಗಡಿ ವಿವಾದವೇ ಬಗೆಹರಿದಿಲ್ಲ. 1924 ರಲ್ಲಿ ಸರ್ವೇ ನಡೆದಿದ್ದರೂ ಅಂತಿಮವಾಗಿಲ್ಲ. 84 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಯು.ವಿ. ಸಿಂಗ್‌ರವರು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಆಂಧ್ರದ ಅಧಿಕಾರಿಗಳಿಂದ ಮಾಹಿತಿ ತರಿಸಿ ಎಂದು ಹೇಳಿ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತಾರೆ, ಅಲ್ಲಿ ಏನೇನು ಘಟನೆ ನಡೆದಿದೆ ಎಂಬ ಬಗ್ಗೆ ಇಲ್ಲಿ ವಿವರ ಬೇಡ. ಆಂಧ್ರದ ಗುತ್ತಿಗೆ, ರಾಜ್ಯದಲ್ಲಿ ಗಣಿ. ಇದು ಲೋಕಾಯುಕ್ತ ವರದಿ ಪಡಿಸಿರುವಂಥದ್ದು ಖಚಿತ. ನಾನು ಅದರ ಮೇಲೆ ವಿವರವಾಗಿ ಓದುವುದಕ್ಕೆ ಹೋಗುವುದಿಲ್ಲ. ನಡೆದಿರತಕ್ಕಂತಹ ಘಟನೆಗಳನ್ನು ಈ ಸಭೆಯ ಮುಖಾಂತರ ಮತ್ತು ತಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಜಂಟಿ ಸಮೀಕ್ಷೆಗೆ ಲೋಕಾಯುಕ್ತ ಶಿಫಾರಸ್ಸು. ಇವತ್ತು ಹೇಳಬಹುದು. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ, ನೀವು ಹೋಗಿ ಅಲ್ಲಿ ತನಿಖೆ ನಡೆಸಬಹುದಲ್ಲ ಎಂದು ನಾನು ಮುಖ್ಯ ಮಂತ್ರಿ ಆಗಿದ್ದಾಗ ಕೇಂದ್ರ ಸರ್ಕಾರದ ಮುಂದೆ ಹಲವಾರು ರೀತಿಯ ನಿವೇದನೆಗಳನ್ನು ಮಾಡಿಕೊಂಡಿದ್ದೇನೆ. ಗಣಿ ಇಲಾಖೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಕರೆದಂತಹ ಸಭೆಗಳಲ್ಲಿ ಈಗಿರತಕ್ಕಂತಹ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಎನ್ನತಕ್ಕಂತಹ ಮನವಿಯನ್ನು ರಾಜ್ಯ ಸರ್ಕಾರದಿಂದ ಕೊಟ್ಟಿದ್ದೇವೆ. ಇವತ್ತು ಈ ರಾಜ್ಯದಲ್ಲಿ ಈ ರಾಷ್ಟ್ರದಲ್ಲಿ ಖನಿಜ ಸಂಪತ್ತನ್ನು ಸ್ವೇಚ್ಛಾಚಾರವಾಗಿ ಕೆಲವೇ ಕೆಲವೇ ಹಿಡಿ ಮಂದಿಗಳು ಈ ದೇಶದಲ್ಲಿ ಲೂಟಿ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರ ತೀರ್ಮಾನ ಮಾಡಬೇಕೆಂದು

ಹೇಳಿ ನಾನೇ ಹಲವಾರು ಸಭೆಗಳಲ್ಲಿ ಭಾಗವಹಿಸಿ ಚರ್ಚೆ ಮಾಡಿದ್ದೇನೆ. ಇಲ್ಲಿಯ ವರೆಗೆ ಯಾವ ನಿರ್ಧಾರಗಳೂ ಆಗಲಿಲ್ಲ. ನಾನು ಅವತ್ತೂ ಕೂಡ ಈ ರಾಜ್ಯದಲ್ಲಿ ಸಂಪೂರ್ಣ ಗಣಿಗಾರಿಕೆಯನ್ನು ನಿಲ್ಲಿಸಿಬಿಡೋಣ ಎಂದು ಹೇಳಿದೆ. ವಿಧಾನ ಸಭೆಯ ಸದನದಲ್ಲಿಯೇ ಹೇಳಿದ್ದೇನೆ. ಕೇಂದ್ರದ ಗಣಿ ನೀತಿಯಿಂದ ಕೆಲವರು ಸ್ವೇಚ್ಛಾಚಾರವಾದ ರೀತಿಯಲ್ಲಿ ನಡೆಸುತ್ತಿದ್ದಾರೆ, State ignored High Court order, if mining companies registered in Andhra Pradesh are encroached on Karnataka border as claimed by a Lokayuktha report on mining irregularities, the State probably has itself to blame for not acting sooner to protect its territory.

ಇವತ್ತು ಈ ರೀತಿಯಲ್ಲಿ ಹೈಕೋರ್ಟ್‌ನವರು ಕೊಟ್ಟಿರತಕ್ಕಂಥ ರಿಮಾರ್ಕ್ಸ್ ಆಗಿದೆ. ಓಬಳಾಪುರಂ ಕಂಪನಿ ರೇಖೆ ಎಲ್ಲಿದೆ ತೋರಿಸಿ. ಯಾರು ತೋರಿಸಿದವರು? ತೋರಿಸುವುದಕ್ಕೆ ಆಂಧ್ರದ ಅಧಿಕಾರಿಗಳೂ ಕೂಡ ತಯಾರಾಗಿಲ್ಲ. ಕರ್ನಾಟಕದ ಅಧಿಕಾರಿಗಳೂ ಕೂಡ ತಯಾರಾಗಿಲ್ಲ. ಅದಕ್ಕೆ ಕಾರಣ ಏನು ಎಂಬ ಬಗ್ಗೆ ನಾನು ವಿವರಣೆ ಕೊಡಬೇಕಾಗಿಲ್ಲ. ಈ ವಿಚಾರ ಈ ಸದನದಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿದೆ. ಅಲ್ಲಿಯ ಓಬಳಾಪುರಂನ ಮೈನ್‌ನ ಎಲ್ಲಾ ವ್ಯವಹಾರಗಳು, ಅಲ್ಲಿ ಯಾರಿದ್ದಾರೆ ಅಲ್ಲಿಯ ಒಂದು ರಕ್ಷಣೆ ಕೊಡುವುದಕ್ಕೆ ಆಂಧ್ರಪ್ರದೇಶದಲ್ಲಿ, ಇಲ್ಲಿ ರಕ್ಷಣೆ ಕೊಡುವುದಕ್ಕೆ ಇವರದೇ ಸರ್ಕಾರ ಏನು ಇಟ್ಟುಕೊಂಡಿದ್ದಾರೆ, ಇವತ್ತು ಜಂಟಿ ಸರ್ವೆ ಮಾಡಿಸಬೇಕು ಎಂದು ಹೇಳಿ ನೀವು ಮನವರಿಕೆ ಮಾಡಿಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ನೀವು ಪ್ರಯತ್ನ ಪಟ್ಟರೂ ಕೂಡ ಆಂಧ್ರದ ಕಡೆಯಿಂದ ಏನು ತೀರ್ಮಾನ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ನನ್ನ ಕಾಲದಲ್ಲಿಯೇ ಜಂಟಿ ಸರ್ವೆಗೆ ನಾನು ಪತ್ರಗಳನ್ನು ಬರೆದು ಎಲ್ಲಾ ರೀತಿಯ ಮನವಿಗಳನ್ನೂ ಸಲ್ಲಿಸಿದರೂ ಕೇಂದ್ರ ಸರ್ಕಾರ ಜಂಟಿ ಸರ್ವೆಗೆ ಅನುಮತಿ ಕೊಡತಕ್ಕಂಥ ನಿರ್ಧಾರವನ್ನು ಅವತ್ತೂ ಕೂಡ ಮಾಡಲಿಲ.

ಒಬ್ಬ ಮಾನ್ಯ ಸದಸ್ಯರು :- ಅವರು ಈ ರಾಜ್ಯದಲ್ಲಿ ಹುಟ್ಟಿಲ್ಲ, ಅವರು ಆಂಧ್ರದಿಂದ ಇಲ್ಲಿಗೆ ಬದುಕಲು ಬಂದವರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಆಂಧ್ರದಿಂದ ಬದುಕಲು ಬಂದವರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವೆಲ್ಲಾ ಹೇಳುವುದು ಬೇಡ. ಅದನ್ನು ಹೇಳಿ ಮತ್ತೆ ಅವರನ್ನು ಏಕೆ ಚುಚ್ಚುವುದು.

ಶ್ರೀ ಜನಾರ್ಧನ ರೆಡ್ಡಿ :-ಮಾನ್ಯ ಅಧ್ಯಕ್ಷರೆ, ನಾನು ಈ ರಾಜ್ಯದಲ್ಲಿ ಹುಟ್ಟಿ ಬೆಳೆದಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನೀವು ಹುಟ್ಟಿ ಬಂದಿರುವುದು ನಮಗೆ ಗೊತ್ತಿದೆ.

ಶ್ರೀ ಜನಾರ್ಧನ ರೆಡ್ಡಿ :- ನಾನು ಈ ರಾಜ್ಯದಲ್ಲಿಯೇ ಹುಟ್ಟಿ ಬೆಳೆದಿರುವುದು. ನಾನು ಯಾವ ಆಸ್ಪತ್ರೆಯಲ್ಲಿ ಹುಟ್ಟಿರುವುದು ಎಂಬ ಬಗ್ಗೆ ಕೂಡ ದಾಖಲೆ ಇದೆ. ಅಧ್ಯಕ್ಷರೆ, ನಾವು ಬಳ್ಳಾರಿಯಲ್ಲಿಯೇ ಹುಟ್ಟಿ ಬೆಳೆದಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ನಿಮಗೆ ಹೇಳಲಿಲ್ಲ.

ಶ್ರೀ ಜನಾರ್ಧನ ರೆಡ್ಡಿ :- ನಾನೂ ಕೂಡ ಸಭಾಧ್ಯಕ್ಷರಿಗೆ ಹೇಳುತ್ತಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರ ಕಥೆ ಈಗ ನಮಗೆ ಏಕೆ.

ಶ್ರೀ ಜನಾರ್ಧನ ರೆಡ್ಡಿ :- ನಿಮಗೆ ಬೇಡ. ಸದನದಲ್ಲಿರುವ ಎಲ್ಲ ಸದಸ್ಯರಿಗ ನಮ್ಮ ಕಥೆ ಗೊತ್ತಾಗಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರನ್ನು ನಾನು ಆಂಧ್ರದವರು ಎಂದು ಹೇಳಲೇ ಇಲ್ಲ ಅಧ್ಯಕ್ಷರೆ. ಅವರಿಗೆ ಏಕೆ ಈ ರೀತಿ ಅನ್ನಿಸಿತು?

ಶ್ರೀ ಎನ್. ಜನಾರ್ಧನ ರೆಡ್ಡಿ :- ನನ್ನ ಕಥೆ ಸಂಪೂರ್ಣ ಹೇಳಿ. ನಾನೂ ಕೂಡ ನಿಮ್ಮ ಕಥೆ ಹೇಳುತ್ತೇನೆ. ಆಂಧ್ರದಿಂದ ಬಂದಿರುವುದು ಎಂದಿರಿ. ನಾನು ಹುಟ್ಟಿರುವುದು, ಬೆಳೆದಿರುವುದು ಈ ಕನ್ನಡ ನಾಡಿನಲ್ಲಿ, ಮೈಗೂಡಿಸಿಕೊಂಡು ಬೆಳೆದಿದ್ದೇನೆ. ಇವತ್ತು ಕನ್ನಡ ಭಾಷೆ ವಿಚಾರದಲ್ಲಿ ಮತ್ತು ಕನ್ನಡ ನೆಲ, ಜಲ, ಭಾಷೆಯನ್ನು ಬೆಳೆಸಲು ಶಕ್ತಿಯನ್ನು ಹೊಂದಿರುವವರು ನಾವು. ಸುಮ್ಮ ಸುಮ್ಮನೆ ರೆಡ್ಡಿ ಎಂದ ತಕ್ಷಣ ಆಂಧ್ರದಿಂದ ಬಂದಿದ್ದಾರೆ, ಇವರ ಕಥೆಗಳನ್ನು ಹೇಳುತ್ತೇನೆ, ಇದೆಲ್ಲಾ ಬೇಡ. ನೇರವಾಗಿ ಮಾತನಾಡಿ. ನಮ್ಮ ಕಥೆ ಇದ್ದರೆ ನೀವು ಹೇಳಿ. ಆಂಧ್ರದಿಂದ ಬಂದಿದ್ದಾರೆ, ಇವರ ಕಥೆ ಏಕೆ ಹೇಳಬೇಕು ಎಂದು ಸುಮ್ಮನೆ ಹೇಳುವುದು ಬೇಡ. ಏಕೆಂದರೆ ಸದನದ ಕಲಾಪವನ್ನು ನೋಡುವವರಿಗೆ ಒಂದು ರೀತಿಯಲ್ಲಿ ಸಂಶಯ ಕ್ರಿಯೇಟ್ ಮಾಡುವುದು ಬೇಡ ಅಧ್ಯಕ್ಷರೆ. ಕಥೆ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಹುಟ್ಟಿದ್ದರಿಂದಲೇ ಕರ್ನಾಟಕ ರಾಜ್ಯದ ನೆಲ, ಜಲ, ಉಳಿಸತಕ್ಕಂಥದ್ದರಲ್ಲಿ ಇವತ್ತು 35 ಎಕರೆ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಇವರಿಬ್ಬರ ಕಥೆ ಕೇಳಿ ನನಗೆ ಬೇಸರ ಬಂದಿದೆ. ನಿಮಗೆ ಅವರು ಹೇಳಿದರು ನಿಮ್ಮ ಕಥೆ ಹೇಳುತ್ತೇನೆಂದು. ನೀವು ಹೇಳಿದಿರಿ, ಅವರ ಕಥೆ ಹೇಳುತ್ತೇನೆಂದು. So, ನಿಮ್ಮಿಬ್ಬರ ಕಥೆ ಕೇಳಿ ನಮಗೆ ಬೇಸರ ಬಂದಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಅವರ ಕಥೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲಾ ಸಾರ್. ನನ್ನ ಕೈಯಲ್ಲಿ ಆ ರೀತಿ ಕ್ಯಾಸೆಟ್ ಮಾಡಿಸುವುದಕ್ಕೆ, ಸಿ.ಡಿ. ಮಾಡಿಸುವುದಕ್ಕೆ ನನಗೆ ಇನ್ನೂ ಆ ರೀತಿಯ ಅನುಭವವಿಲ್ಲ. ಅವರೇ ಕಥೆಗಳನ್ನು ಸೃಷ್ಟಿ ಮಾಡಿಕೊಂಡು ಬಂದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಬರೀ ಡೈರಕ್ಷನ್ ಕೊಡುವವರೊ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇಲ್ಲಾ ಸಾರ್. ನಾನು ಸಿನಿಮಾ ಫೀಲ್ಡ್‌ನಲ್ಲಿ ಕೇವಲ ಪ್ರೊಡಕ್ಷನ್ ಮಾಡುತ್ತಿದ್ದೆ. ಅವರು ಡೈರಕ್ಷನ್, ಸ್ಕ್ರಿಪ್ಟ್ ಇವೆಲ್ಲಾ ಮಾಡುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಲೋಕಾಯುಕ್ತರವರು ಜಂಟಿ ಸರ್ವೆ ಮಾಡಿಸುವುದಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತೇನು ಕರ್ನಾಟಕದ ಬೌಂಡರಿಯೊಳಗೆ ಆಂಧ್ರದಲ್ಲಿ ಗಣಿಗಾರಿಕೆ ಲೈಸೆನ್ಸ್ ತೆಗೆದುಕೊಂಡು ಕರ್ನಾಟಕದಲ್ಲಿ ಗಣಿಗಾರಿಕೆ ನಡೆಯುತ್ತಿರತಕ್ಕಂಥದ್ದು ಏನಿದೆ ಅಧ್ಯಕ್ಷರೆ, ಇದರ ಒಂದು ಹಿಸ್ಟರಿಯನ್ನು ಸದನದ ಗಮನಕ್ಕೆ ತರುವುದಕ್ಕೆ ನಾನು ಬಯಸುತ್ತೇನೆ. 1956ನೇ ಇಸವಿಯಲ್ಲಿ ಮಲ್ಲಪ್ಪನಗುಡಿ ವಿಲೇಜ್ ಆಂಧ್ರ ಸ್ಟೇಟ್‌ಗೆ ಏನು ಸೇರುತ್ತದೆ ಅಲ್ಲಿ ಮೊದಲನೆಯ ಬಾರಿ1956 ರಲ್ಲಿ ಮೈನಿಂಗ್ ಲೀಸ್‌ನ್ನು ಗ್ರ್ಯಾಂಟ್ ಮಾಡಿರುತ್ತಾರೆ. ಅದು ಎಕ್ಸ್‌ಪೈರ್ ಆದಮೇಲೆ 4 ಕಂಪನಿಗಳು ಅರ್ಜಿಯಲ್ಲಿ ನಮ್ಮ ಕರ್ನಾಟಕದಲ್ಲಿ, ಇದರಲ್ಲಿ, four mining leases have been granted in bellary reserve forest within the state of Karnataka touching the border of Mallappanagudi village of Andhra Pradesh

1962ನೇ ಇಸವಿಯಲ್ಲಿ Abdul Baseer and Brothers ಅವರಿಗೆ ಮತ್ತೆ Messers Hind Traders ಮತ್ತೆ ರತ್ನಯ್ಯ, ಹೀಗೆ ಇವರು ಮೂರ್‍ನಾಲ್ಕು ಜನ, ಮತ್ತೆ ಇನ್ನೊಬ್ಬರು ಟಿ. ನಾರಾಯಣರೆಡ್ಡಿ, 1969ನೇ ಇಸವಿಯಲ್ಲಿ ಗ್ರ್ಯಾಂಟ್ ಆಗುತ್ತದೆ ಅಧ್ಯಕ್ಷರೆ. The above said lessees have operated the granted area without any interfering complaint among themselves ಅಲ್ಲಿ ಏನು ಪ್ರಾಬ್ಲಂ ಇರುವುದಿಲ್ಲ. ಇದರ ನಂತರ 1964ನೇ ಇಸವಿಯಲ್ಲಿ 64 ಎಕರೆ ಸರ್ವೆ ನಂಬರ್ 1/P of Oblapuram village ಇಲ್ಲಿ ಹಿರೇಹಾಳ್‌ಮಂಡಲ್ ಎನ್ನುವ ಅನಂತಪುರದ ಡಿಸ್ಟ್ರಿಕ್ಟ್‌ನವರಾಗಿದ್ದವರಿಗೆ 64 ಎಕರೆಯನ್ನು 1964ನೇ ಇಸವಿಯಲ್ಲಿ ಲೀಸ್‌ಗೆ ಕೊಡುತ್ತಾರೆ. The said lease has expired on 14-12-1984 ಆಗ ಆ ಒಂದು ಮೈನಿಂಗ್‌ನ್ನು ಓಬಳಾಪುರಂ ಮೈನಿಂಗ್ ಕಂಪನಿಗೆ ಕೊಡತಕ್ಕಂಥ ನಿರ್ಧಾರವನ್ನು ಮಾಡುತ್ತಾರೆ. Dated: 7-5-2004 for the unexpired lease period up to 13-12-2004. ಆ ಫಸ್ಟ್ ರಿನ್ಯೂವಲ್ ಏನು ಆಗುತ್ತದೆಯೋ ಅದು ಮತ್ತೆ 1997ನೇ ಇಸವಿಯವರೆಗೆ ಎಫೆಕ್ಟ್‌ಗೆಬಂದು ಮತ್ತೆ ಆಂಧ್ರ ಸರ್ಕಾರ ಮತ್ತೆ ಅವರಿಗೆ ಲೀಸ್‌ನ್ನು ಕೊಡುತ್ತಾರೆ. ಆದರೆ OMC ensured upon the Karnataka from Obalapuram Village to Alakudi village, Honnahalli village of Bellary Taluk which has high grade iron ore nowhere available in any part of the world. The said OMC Company taking advantage of the weakness of the Kartnataka state forest and other officials from different wings of the Government started mining operation. 2004ರಲ್ಲಿ ಪ್ರಾರಂಭ ಮಾಡುತ್ತಾರೆ. 2007ನೇ ಇಸವಿಯಲ್ಲಿ ಈ ಒಂದು ಓಬಳಾಪುರಂ ಮೈನಿಂಗ್ ಕಂಪನಿ ಮೇಲೆ ಒಂದು F.I.R. ದಾಖಲೆಯಾಗುತ್ತದೆ. ಆದರೆ ಅದು ಇವತ್ತಿನವರೆವಿಗೂ ಪೆಂಡಿಂಗ್ ಇದೆ. The said OMC company if appears, they do not have any clearance under the Forest

Conservation Act where they have obtained the lease under MMRD Act. ಈ O.M.C. Company ಏನು ಮಲ್ಲಪ್ಪನ ಗುಡಿ ವಿಲೇಜ್‌ನಲ್ಲಿ 68 ಎಕರೆ ಗ್ರ್ಯಾಂಟ್ ಏನು ಮಾಡಿಸಿಕೊಂಡಿರುತ್ತಾರೆ, ಅದು chicken neck portion ನಲ್ಲಿ ಇರುತ್ತದೆ. ಇಲ್ಲಿ ಕರ್ನಾಟಕದ ಮೂರು ಬಾರ್ಡರ್‌ಗಳು ಏನು ಬರುತ್ತದೆ, ಇಲ್ಲಿ ಏನು ಹಲವಾರು ವರ್ಷಗಳಿಂದ ಏನು ಕಂಪನಿ ಕೆಲಸವನ್ನು ಮಾಡುತ್ತಿದೆ, ಹೆಸರು ಓಬಳಾಪುರಂ ಮೈನಿಂಗ್ ಎಂದು. ಅಲ್ಲಿಗೆ ಮೆಟೀರಿಯಲ್ ದಿನ ಸಪ್ಲೈ ಆಗುವುದು ಕರ್ನಾಟಕದ ರಾಜ್ಯದ ಬಾರ್ಡರ್‌ನಿಂದ. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಅದಕ್ಕೆ ಕಾರಣ ಅವರಿಗೆ ಇರತಕ್ಕಂಥ ರಾಜಕೀಯ ಶಕ್ತಿ, ಹಣದ ಶಕ್ತಿ, ಅಧಿಕಾರ, ಹೀಗೆ ಎಲ್ಲಾ ರೀತಿಯ ಶಕ್ತಿಯನ್ನು ದುರ್ಬಳಕೆ ಮಾಡಿಕೊಂಡು muscle power ಕೇವಲ ರಾಜಕೀಯ ಶಕ್ತಿ, ಹಣದ ಶಕ್ತಿ ಒಂದೇ ಅಲ್ಲ, muscle power ಅನ್ನು ಉಪಯೋಗ ಮಾಡಿ ಏನು ಈ ಒಂದು ಅಕ್ರಮವಾದಂಥ ಗಣಿಗಾರಿಕೆಗಳು ನಡೆದಿವೆ, ಇದರ ಬಗ್ಗೆ ಯಾರು ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದನಂತರ, ಇವತ್ತು ಅಲ್ಲಿ ಏನೇನು ನಡೆಯುತ್ತಿದೆ, ಈಗ ಅಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಂಥ ಯಾವುದೇ ಕಂಪನಿಗಳು ಇರಲಿ, ಹಿಂದೆ ರಾಜಮಹಾರಾಜರುಗಳಿಗೆ ಪಾಳೇಗಾರರುಗಳು ಕಪ್ಪಕಾಣಿಕೆಗಳನ್ನು ಏನು ಕೊಡಬೇಕಾಗಿತ್ತೋ ಆ ರೀತಿಯಲ್ಲಿ ಇವೊತ್ತು ಎಲ್ಲಾ ಕಂಪನಿಗಳು ಅಲ್ಲಿ ಏನು Iron Ore business ಮಾಡುತ್ತಿವೆ ಅವರು 50% ಏನು rising contract 50% without money ಕೊಡತಕ್ಕಂಥ ಒಂದು ವಾತಾವರಣ ನಿರ್ಮಾಣವಾಗಿದೆ. ಇದು ಆಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ಮುಖ್ಯಮಂತ್ರಿಗಳು ಅವರ ಇಂಟಲಿಜೆನ್ಸ್ ಇಲಾಖೆ ಏನಿದೆ ಅಲ್ಲಿಂದ ದಯವಿಟ್ಟು ಅವರು ರಿಪೋರ್ಟ್ ತರಿಸಿಕೊಳ್ಳಲಿ. ಮುಖ್ಯಮಂತ್ರಿಗಳೆ, ಮೊನ್ನೆ ರಕ್ಷಣಾ ವೇದಿಕೆ ಸಭೆಯಲ್ಲಿ ಹೇಳಿದ್ದೀರಿ. ಈ ರಾಜ್ಯದ ನೆಲ, ಜಲ, ರಕ್ಷಣೆಯನ್ನು ಮಾಡತಕ್ಕಂಥ ವಿಷಯ ಬಂದಾಗ ನಾನು ನನ್ನ ಅಧಿಕಾರ ತ್ಯಾಗ ಮಾಡುವುದಕ್ಕೂ ಸಿದ್ಧ, ನಾನು ಕುರ್ಚಿಯನ್ನು ಖಾಲಿ ಮಾಡುವುದಕ್ಕೆ ಸಿದ್ಧನಿದ್ದೇನೆ ಎನ್ನತಕ್ಕಂಥ ಮಾತನ್ನು ನೀವು ಏನು ಹೇಳಿದ್ದೀರಿ, ಇವತ್ತು ಬಳ್ಳಾರಿಯ ಜಿಲ್ಲೆಯೊಳಗೆ ಕರ್ನಾಟಕ ರಾಜ್ಯದ ಸಂಪತ್ತು ಇವತ್ತು ಯಾವ ಪರ್ಮಿಟ್‌ಗಳಿಲ್ಲದೆ, ಯಾವುದೇ ರೀತಿಯ ಸರ್ಕಾರದ ಅನುಮತಿಗಳಿಲ್ಲದೆ ರಾಜಾರೋಷವಾಗಿ ಹಗಲೊತ್ತಿನಲ್ಲಿಯೇ ಹೋಗತಕ್ಕಂಥ ವಾತಾವರಣ ಏನು ನಿರ್ಮಾಣವಾಗಿದೆ, ಇದನ್ನು

ಉಳಿಸಬೇಕು ಎಂದರೆ ನಿಜಕ್ಕೂ ನೀವು ಮಾತಿನಲ್ಲಿ ಏನು ಹೇಳುತ್ತೀರಿ, ಅದನ್ನು ನೀವು ಸಾರ್ವಜನಿಕವಾಗಿ ಕೃತಿಯಲ್ಲಿ ಅದನ್ನು ಅನುಷ್ಠಾನಕ್ಕೆ ತರತಕ್ಕಂಥ ಆ ಒಂದು ಬದ್ಧತೆ ನಿಮಗೆ ಇದೆ ಎನ್ನತಕ್ಕಂಥದ್ದನ್ನು ನಾವೇನು ಇವತ್ತು ನಿಮ್ಮ ಹೇಳಿಕೆಗಳನ್ನು ನೋಡಿದಾಗ ನಾವು ಗಮನಿಸುತ್ತಿದ್ದೇವೆ ಆ ಬದ್ಧತೆಯನ್ನು ಉಳಿಸತಕ್ಕಂಥದ್ದಕ್ಕೆ ದಯವಿಟ್ಟು ತಾವು ಗಮನವನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕುಮಾರಸ್ವಾಮಿಯವರು ಯಾರೋ ಕೃಷ್ಣಪ್ಪನಿಗೆ, ಅಲ್ಲ್ಯಾರೋ ಸುರೇಶ್‌ಬಾಬುರವರಿಗೆ, ಶಾಸಕರುಗಳಿಗೆ ಗಣಿಗೆ ಪರವಾನಗಿ ಕೊಟ್ಟರು ಎನ್ನತಕ್ಕಂಥ ಮಾತನ್ನು ಹಲವಾರು ಬಾರಿ ಏನು ಹೇಳಿದ್ದೀರಿ, ನಿಮ್ಮ ಭಾಗದಲ್ಲಿ ಹಲವಾರು ಜನ, ನಿಮ್ಮ ಜೊತೆ ನಿಮ್ಮ ಸಹಕಾರದಿಂದ ನಾನೇನು ಸರ್ಕಾರವನ್ನು ನಡೆಸಿದೆ, ಇವತ್ತು ಮತ್ತೆ ಎಂ.ಎಲ್.ಎ.ಗಳಾಗಿ ಮತ್ತೆ ಗೆದ್ದು ಬರುವುದಕ್ಕೆ ನಾನು ಕೇವಲ ಜನತಾದಳ ಎಂದು ನೋಡಲಿಲ್ಲ.

ನಾನು ಕೇವಲ ಜನತಾದಳ ಎಂದು ನೋಡಲಿಲ್ಲ. ಕಾನೂನು ಬದ್ಧವಾಗಿ ಬಂದಂತಹ ಯಾವುದೇ ಪಕ್ಷಗಳಿರಲಿ, ಅದು ಕಾಂಗ್ರೆಸ್ ಪಕ್ಷದ ಬೆಂಬಲಿಗರಿರಬಹುದು, ಜೆಡಿಎಸ್‌ನವರು ಇರಬಹುದು, ಬಿಜೆಪಿ ಇರಬಹುದು ಕೊಟ್ಟಿದ್ದೇನೆ ಎನ್ನತಕ್ಕಂಥದ್ದನ್ನು ಕಾನೂನು ಬದ್ಧವಾಗಿ . . .

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಕೊಟ್ಟಿದ್ದೇನೆ, ಸ್ವಲ್ಪ ಕುಳಿತುಕೊಳ್ಳಿ, ವಿಷಯ ಗೊತ್ತಿಲ್ಲದಿದ್ದರೆ ಮಾತನಾಡಬೇಡಿ. ನಾನು ಎಲ್ಲಾ ಶಾಸಕರಿಗೆ ಎಂದು ಹೇಳಿದೆನಾ? ಕೆಲವರು ಉಪಯೋಗ ಮಾಡಿಕೊಂಡಿದ್ದಾರೆ. ನಾನು ಯಾವುದೇ ರೀತಿಯ ರಾಗದ್ವೇಷಕ್ಕೆ ಒಳಗಾಗಿಲ್ಲ. ಕಾನೂನು ಬದ್ಧವಾಗಿ ಬಂದಾಗ ಎಲ್ಲರಿಗೂ ಸಹಾಯ ಮಾಡಿಕೊಟ್ಟಿದ್ದೇನೆ. ಇವತ್ತು ಅಲ್ಲಿರತಕ್ಕಂಥ ಹೆಚ್ಚಿನ ಶಾಸಕರುಗಳು ಪಾಪ ಇಲ್ಲಿ ನಿಮ್ಮ ಮುಂದೆ ಹೇಳುವುದಕ್ಕೆ ಅವರಿಗೆ ಕಷ್ಟವಾಗಬಹುದು. ಆದರೆ ಅವರ ಆತ್ಮಕ್ಕೆ ಗೊತ್ತಿದೆ. ಕುಮಾರಸ್ವಾಮಿಯವರು ಇದ್ದಾಗ ನಾವು ಎಷ್ಟು ಚೆನ್ನಾಗಿ ಇದ್ದೆವು ಎಂದು ಅವರ ಆತ್ಮಕ್ಕೆ ಪ್ರಶ್ನೆ ಹಾಕಿಕೊಂಡಾಗ ಅವರಿಗೆ ಗೊತ್ತಿದೆ. ಇದನ್ನು ಪ್ರದರ್ಶನ ಮಾಡಿ ಎಂದು ನಾನು ಯಾರಿಗೂ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಯಡಿಯೂರಪ್ಪನವರಿಗೆ ಅದಕ್ಕೆ 115 ಸೀಟು ಬಂದಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಹೌದು, 115 ಸೀಟು ಏಕೆ ಬಂತು? ಅದನ್ನು ಚರ್ಚೆ ಮಾಡಬೇಕು ಎಂದರೆ . . .

ಶ್ರೀ ಜನಾರ್ಧನ ರೆಡ್ಡಿ :- ಅದು ತಮ್ಮಿಂದಲೇ,

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅದು ನಿಮ್ಮಿಂದ ಸ್ವಾಮಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ನಮ್ಮ ಶಾಸಕರೆಲ್ಲರೂ ಖುಷಿಯಾಗಿದ್ದರು ಎಂದು ಹೇಳಿದಿರಲ್ಲ, ತಮ್ಮಿಂದ ಖುಷಿಯಾಗಿ ಇಲ್ಲದೇ ಇರುವುದಕ್ಕೇ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಎಂದು ಘೋಷಣೆ ಮಾಡಿದ್ದಕ್ಕೆ 115 ಸೀಟು ಇಲ್ಲಿ ಬಂದಿವೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ :- ಯಾವ ಖುಷಿ ರೀ, ಬಳ್ಳಾರಿ ಮಣ್ಣಿನ ಖುಷಿ. ಏಕೆ ಮಾತನಾಡುತ್ತೀರಿ? ರಾಮನ ಹೆಸರನ್ನು ಹೇಳುತ್ತೀರಿ, ನಿನ್ನೆ ವಿವೇಕಾನಂದನ ಹೆಸರನ್ನು ಹೇಳುತ್ತಿದ್ದೀರಿ. ರಾಮನ ಹೆಸರಿನಿಂದ ಪ್ರಮಾಣ ಮಾಡಿ. ಈ ರೀತಿ subject ದಯವಿಟ್ಟು ತರಬೇಡಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ನೀವೆಲ್ಲ ಮಾತಾಡಿದ ಮೇಲೆ ರಾಮನ ಹೆಸರಿನಲ್ಲಿ ಪ್ರಮಾಣ ಮಾಡಿ ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ.

ಶ್ರೀ ಕುಮಾರಸ್ವಾಮಿ :- ನಮ್ಮನ್ನು ಕೆರಳಿಸಬೇಕಾಗಿಲ್ಲ, ಇವತ್ತು 115 ಸೀಟು ಬಂದಿದೆ, ಒಳ್ಳೆಯ ಆಡಳಿತ ಕೊಡಿ. ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಬಹುದು. ನಮಗೆ ಜನ ಐದು ಸೀಟು ಕೊಡುವುದರ ಮುಖಾಂತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಲ ಕೊಟ್ಟಿದ್ದಾರೆ ಎಂದು ಹೇಳಬಹುದು. ಮಧುಗಿರಿಯಲ್ಲಿ ನಾವು ಚುನಾವಣೆ ನಡೆಸಿದ್ದೇವೆ. ಮದ್ದೂರಿನಲ್ಲಿ ಚುನಾವಣೆ ನಡೆಸಿ ಗೆದ್ದು ಬಂದಿದ್ದೇವೆ. ಅಲ್ಲಿ ಯಾವ ರೀತಿ ಚುನಾವಣೆ ನಡೆಸಿದ್ದೀರಿ ಎಂದು ವಿಷಯವನ್ನು ನಾನು ಇಲ್ಲಿ ಸುಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು electronic mediaಗಳು ತೋರಿಸಿದ್ದಾರೆ, ಅದನ್ನು ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಹೇಳುತ್ತೇನೆ. ಏಕೆ ನೀವು ಅಲ್ಲಿ ಪ್ರಸ್ತಾಪ ಮಾಡಿಕೊಂಡಿದ್ದೀರಿ. Electronic mediaದಲ್ಲಿ, ನೀವು ಬೀದಿಬೀದಿಯಲ್ಲಿ ದುಡ್ಡು ಹಂಚುವ ಚಿತ್ರವನ್ನು ಏನು ತೋರಿಸಿದ್ದಾರೆ ಅದನ್ನು ನಾವೇನು ಮಾಡಿಸಿದ್ದಲ್ಲ. ನಾನು ಇರುವುದನ್ನು ಹೇಳುತ್ತಿದ್ದೇನೆ. ಅಭಿವೃದ್ಧಿ ಹೆಸರಲ್ಲ . . .

(ಗೊಂದಲ)

ಶ್ರೀ ಹೆಚ್. ಡಿ ಕುಮಾರಸ್ವಾಮಿ :- ಸ್ವಲ್ಪ ಕುಳಿತುಕೊಳ್ಳಿ, ಅದರ ಬಗ್ಗೆ ನೀವು ಮಾತನಾಡುವಾಗ ಮಾತನಾಡಿ. ಹೊಸದಾಗಿ ಬಂದಿದ್ದೀರಿ, ಎಷ್ಟು ದಿವಸ ಇರುತ್ತೀರಿ ನೋಡೋಣ ಕುಳಿತುಕೊಳ್ಳಿ. ಇಪ್ಪತ್ತು ವರ್ಷ ಇರುತ್ತೀರಾ ನನಗೆ ಗೊತ್ತಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಯಾವ ಕರ್ನಾಟಕ ರಾಜ್ಯದ ನೆಲ, ಜಲದ ರಕ್ಷಣೆ ಬಗ್ಗೆ ಪದೇ ಪದೇ ಹೇಳುತ್ತಾರೆ. ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವಂತಹ ಈ ಅಕ್ರಮ ಗಣಿಗಾರಿಕೆ, ಮುಂದಿನ ಲೋಕಸಭೆ ಚುನಾವಣೆಗೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಕುರುಡರಾಗಿ ಯಾವುದೇ ರೀತಿಯ ನಿರ್ಧಾರಗಳನ್ನು ಮಾಡದಿದ್ದರೆ, ಚುನಾವಣೆ ಗೆಲ್ಲಬೇಕು ಎಂದು ಇಂಥಾದನ್ನೇ ಮುಂದುವರೆಸಿಕೊಂಡು ಹೋಗುವುದಾದರೆ, ಅದಕ್ಕೆ ನನ್ನದು ಯಾವುದೇ ರೀತಿಯ ತಕರಾರಿಲ್ಲ. ನಾನು ಅದನ್ನೇ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಅಕ್ರಮ ಗಣಿಗಾರಿಕೆ ಎನ್ನುವುದು ನನ್ನ ಕಾಲದಲ್ಲಿ ಏನು ಹೊಸದಾಗಿ ಹುಟ್ಟು ಹಾಕಿದ್ದೀರಿ, ಇವತ್ತು ನಿಮ್ಮ ಕೈಯಲ್ಲಿ ಅಧಿಕಾರ ಇದೆ. 150 ಕೋಟಿ ರೂಪಾಯಿ ಹಗರಣದ ಸಾಕ್ಷಿ ಇದೆ, ಇನ್ನು ಏಳು-ಎಂಟು ಕ್ಯಾಸೆಟ್ ಇಟ್ಟುಕೊಂಡಿದ್ದೇನೆಂದು ಅವರು ಹೇಳುತ್ತಾರೆ, Supreme Courtನ ತೀರ್ಪು ಬರುವ ಸಮಯದವರೆಗೂ ನೀವು ಕಾಯಲೇಬೇಡಿ. ಇವತ್ತೇ ಅದು ಯಾವ international ಸಂಸ್ಥೆಯಿಂದ 150 ಕೋಟಿ ರೂಪಾಯಿಯ ಹಗರಣದ ತನಿಖೆ ನಡೆಸುತ್ತೀರೋ, ದಯವಿಟ್ಟು ನಡೆಸಿಕೊಳ್ಳಿ. ನಿಮ್ಮ ಜೊತೆ ಸರ್ಕಾರ ಮಾಡಿದ್ದಕ್ಕೆ, ಅದರಲ್ಲಿ ನಾನು ತಪ್ಪಿತಸ್ಥನಾಗಿದ್ದರೆ ಗಲ್ಲಿಗೆ ಏರಿಸುವಂತಹ ಕೆಲಸವನ್ನು ಮಾಡಿ. ಯಾವುದೇ ಒಂದು ಸಂಸ್ಥೆಯಿಂದ ತನಿಖೆ ನಡೆಸಿ, ನಾನು ತಪ್ಪಿತಸ್ಥ ಅಲ್ಲವೆನ್ನುವುದನ್ನು ಜನತೆ ಮುಂದೆ ಇಡಿ ಎಂದು ಈ ಸಂದರ್ಭದಲ್ಲಿ ಸವಿನಯಪೂರ್ವಕವಾಗಿ ಮನವಿ ಮಾಡುತ್ತೇನೆ. ನಾವುಗಳು ನಿಮ್ಮ ಜೊತೆ ಸಹಕಾರ ಕೊಟ್ಟು ಎಷ್ಟು ನೊಂದಿರಬಹುದು. ನನ್ನ ಮೇಲೆ ಬಳ್ಳಾರಿ ಜಿಲ್ಲೆಯ ಒಬ್ಬ ಮಂತ್ರಿ ಕೊಲೆ ಮಾಡಿಸುವುದಕ್ಕೆ ಮುಖ್ಯಮಂತ್ರಿ ಪ್ರಯತ್ನ ಪಟ್ಟರು ಎಂದು ಒಬ್ಬ ಕ್ಯಾಬಿನೆಟ್ ಸಚಿವ ಮುಖ್ಯಮಂತ್ರಿ ಮೇಲೆ ಈ ರಾಜ್ಯದ ಈ ದೇಶದ ರಾಜಕಾರಣದಲ್ಲಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾತಿ ಮಾಡಿದ್ದರೆ, ಅದು ಈ ಒಂದು ಕರ್ನಾಟಕ ರಾಜ್ಯದಲ್ಲಿ ಅಷ್ಟೇ. ಚಂಬಲ್ ಕಣಿವೆ ರಾಜಕೀಯ ಎಲ್ಲಿಂದ ಪ್ರಾರಂಭವಾಯಿತು ಎನ್ನುವುದನ್ನು ಸ್ವಲ್ಪ ದಿವಸ ಕಳೆಯಲಿ ಜನರೇ ತೀರ್ಮಾನ ಮಾಡುತ್ತಾರೆ. ಅದರಿಂದ ಇವತ್ತು ಲೋಕಾಯುಕ್ತದವರು ಕೊಟ್ಟಿರತಕ್ಕಂಥ ವರದಿ

ಏನಿದೆ, ನೀವು ನಿನ್ನೆ ಹೇಳುತ್ತಿದ್ದೀರಿ, ನಾವು ದೇಶ ಭಕ್ತಿ ಇದ್ದವರು, ಇವತ್ತು ದೇಶಕ್ಕೋಸ್ಕರ ಯಾವ ಮಟ್ಟದ ಹೋರಾಟಕ್ಕೂ ಸಿದ್ಧವಿರತಕ್ಕಂಥವರು, ನಾವು RSS ಹಿನ್ನೆಲೆಯಿಂದ ಬಂದಿದ್ದೇವೆ, RSS ಹಿನ್ನೆಲೆಯಿಂದಲೇ ಇವತ್ತು ಮುಖ್ಯ ಮಂತ್ರಿಯಾಗಿದ್ದೇನೆ ಎನ್ನುವ ಮಾತನ್ನು ಹೇಳಿದ್ದೀರಿ, ಸಂತೋಷ. ಆ RSS ತತ್ವ ಸಿದ್ಧಾಂತಗಳ ಆಧಾರಗಳ ಮೇಲೆ ನೀವೇನು ಬಂದಿದ್ದೀರಿ, ಇವತ್ತು ಆ ತತ್ವ ಸಿದ್ಧಾಂತಗಳು, ಮೌಲ್ಯಗಳು ಉಳಿಯಬೇಕೆಂದಿದ್ದರೆ, ಇಲ್ಲಿರತಕ್ಕಂಥ ಸತ್ಯ ಏನಿದೆ ಅದನ್ನು ಜನತೆಯ ಮುಂದೆ ತರಬೇಕೆನ್ನುವ ಮನವಿಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಅಕ್ರಮ ಗಣಿಗಾರಿಕೆ ಕೆಲವೊಂದು ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಮಾಧಾನ ಮಾಡುತ್ತಾರೆ. ಅವರು ವೈಯಕ್ತಿಕವಾಗಿ ನಮ್ಮ ಮನೆಗೆ ಬಂದಿದ್ದು, ಏನೇನಾಗಿದೆ ಅದರ ಬಗ್ಗೆ ನಾನು ಹೇಳಿ ಅಲ್ಲಿಗೆ ಮುಗಿಸಿಬಿಡುತ್ತೇನೆ. ಅವರು ಮಾತನಾಡುವ ಸಂದರ್ಭದಲ್ಲಿ ನಾನು ನಿಮಗೆ ಮಾತು ಕೊಟ್ಟಿದ್ದೆನು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದರು.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಮಂತ್ರಿಗಳು ಹೇಳಲಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ಆಗ ನೀವು ಕರೆದಿದ್ದೀರಿ, ಅವರವರ ಹೇಳಿಕೆ ಹೇಳಲಿ, ಆಮೇಲೆ ಬೇಕಾದರೆ ಅವರಿಂದ ಕೂಡ ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಇನ್ಯಾರಾರು ಮಂತ್ರಿಗಳು ಹೇಳುತ್ತಾರೆ, ಹೇಳಲಿ, ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಒಂದು ಐದು ಹತ್ತು ನಿಮಿಷ ಮಾತನಾಡಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು :- ಮಾನ್ಯ ರೇವಣ್ಣನವರೇ, ಮಾನ್ಯ ಕುಮಾರಸ್ವಾಮಿಯವರು ಏನು ವಿಷಯ ಪ್ರಸ್ತಾಪ ಮಾಡಿದರು, ಅದು ಬಿಟ್ಟು ಒಂದು ಸ್ವಲ್ಪ ವಿಷಯ ಪ್ರಸ್ತಾಪ ಆಯಿತು, ಅದನ್ನು ಅವರು ಹೇಳಲಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೇ, ಅಷ್ಟಕ್ಕೆ ಮಾತ್ರ ನಾನು ಉತ್ತರವನ್ನು ಕೊಡುತ್ತೇನೆ. ಇವತ್ತು ಮಾನ್ಯ ಕುಮಾರಸ್ವಾಮಿಯವರು

ಮಾತನಾಡುವಂತಹ ಸಂದರ್ಭದಲ್ಲಿ ನಾನೇನು 150 ಕೋಟಿ ರೂಪಾಯಿಯ ಆರೋಪ ಮಾಡಿದ್ದೆನು, ಅದರ ಪೂರ್ವದಲ್ಲಿ ಅವರು ಬೆಂಗಳೂರಿನಲ್ಲಿ ನಮ್ಮ ಫ್ಲಾಟ್‌ಗೆ ಬಂದಿದ್ದರು, ಬಳ್ಳಾರಿಯಲ್ಲಿ ನನ್ನ ಮನೆಗೆ ಬಂದಿದ್ದರು, ಬೆಡ್ ರೂಮಿನಲ್ಲಿ ಕರೆದುಕೊಂಡು ಹೋಗಿ ಏನೇನು ಮಾತನಾಡಿದರು ಎಂದು ಕೆಲವು ವಿಷಯಗಳನ್ನು ಹೇಳಿದರು. ಅದು ಏಕೆ ಇಲ್ಲೆಲ್ಲಾ ಹೇಳುವುದು ಎಂದಾಗ ನೀವು ಹೇಳಿ ಎಂದು ನಾನು ಹೇಳಿದೆ, ಅದಕ್ಕೆ ಹೇಳುತ್ತಿದ್ದೇನೆ. ಇವತ್ತು ಅವರು ರಾಮನ ಮೇಲೆ ಭಗವಂತನ ಮೇಲೆ ಆಣೆ ಇಟ್ಟು ಹೇಳಲಿ ಎಂದು ಅವರು ಹೇಳಿದರು. ಇವತ್ತು ನಮ್ಮ ತಂದೆ ತಾಯಿಗಳಿಂದ ಹಿಡಿದು ಮನಸಾಕ್ಷಿ ಮೇಲೆ ನಾನು ಮಾತನಾಡುತ್ತಿದ್ದೇನೆ. ಅವರು ಬೆಂಗಳೂರಿನಲ್ಲಿ ನನ್ನ ಫ್ಲಾಟ್‌ಗೆ ಬಂದಿದ್ದು ನಿಜ. ಅವರು ಸ್ನೇಹಪೂರ್ವಕವಾಗಿ ಬಂದಿದ್ದರು. ಬೆಳಿಗ್ಗೆ ನಾಲ್ಕು ಗಂಟೆಯ ತನಕ ಜೊತೆಗೆ ಕುಳಿತುಕೊಂಡು ಮಾತನಾಡಿಕೊಂಡು ಹೋದರು. ಬಳ್ಳಾರಿಗೆ ಬಂದಿದ್ದರು. ಬಳ್ಳಾರಿಯಲ್ಲಿ ನಮ್ಮ ಮನೆಗೆ ಬಂದಿದ್ದು ನಿಜ, ಊಟ ಮಾಡಿದ್ದು ನಿಜ, ಅವರು ಬೆಡ್‌ರೂಮಿನಲ್ಲಿ ಬಂದು ಕುಳಿತುಕೊಂಡಿದ್ದು ನಿಜ. ಆದರೆ ಅವರು ಒಂದು ಮಾತನ್ನು ಹೇಳಿದರು, ಅದೇನೆಂದರೆ ಬಿಜೆಪಿ ಪಕ್ಷದಿಂದ ನನಗೆ ಬೇಸರವಾಗಿದೆ, ಮತ್ತೆ ನಾವು ನಿಮ್ಮ ಪಕ್ಷದಲ್ಲಿ ಇನ್ನು ಮುಂದೆ ಬರುವಂತಹ ದಿನಗಳಲ್ಲಿ ಬಂದೇ ಬಿಡುತ್ತೇವೆ, ಯಾವುದೇ ರೀತಿಯಲ್ಲಿ ಎಂ. ಪಿ. ಪ್ರಕಾಶ್‌ರವರನ್ನು ಮಂತ್ರಿ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿದರು. ವಿಚಿತ್ರ ಎಂದರೆ ಎಂ.ಪಿ.ಪ್ರಕಾಶ್‌ರವರನ್ನು ಮಂತ್ರಿಯನ್ನಾಗಿ ಮಾಡದೇ ಇರುವವರು ಅವರೇ. ಮುಖ್ಯಮಂತ್ರಿಯಾದ ದಿವಸವೇ ಅವರು ಎಂ.ಪಿ. ಪ್ರಕಾಶ್‌ರವನ್ನು ಮಂತ್ರಿಯನ್ನಾಗಿ ಮಾಡಲಿಲ್ಲ. ಅವರು ನಮ್ಮ ಮನಗೆ ಬಂದ ದಿನಾಂಕ ಸನ್ಮಾನ್ಯ ಯಡಿಯೂರಪ್ಪನವರ ಜೊತೆಯಲ್ಲಿ ಅಂಬೇಡ್ಕರ್ ಪುತ್ಥಳಿ ಹಾಗೂ ಒಂದು ಉದ್ಯಾನವನವನ್ನು ಉದ್ಘಾಟನೆ ಮಾಡುವಂತಹ ಕಾರ್ಯಕ್ರಮಕ್ಕೆ ಬಂದಾಗ ನಮ್ಮ ಮನೆಗೆ ಬಂದು ಆ ಸಂದರ್ಭದಲ್ಲಿ, ಅಷ್ಟೊತ್ತಿಗಾಗಲೇ ಸುಮಾರು ಎರಡೂವರೆ ಮೂರು ತಿಂಗಳು ಕಳೆದುಹೋಗಿತ್ತು. ಅವರು ಮೊದಲನೇ ದಿವಸವೇ ಎಂ.ಪಿ. ಪ್ರಕಾಶ್‌ರವರನ್ನು ಮಂತ್ರಿಯನ್ನಾಗಿ ಮಾಡಲಿಲ್ಲ, ಅವರಿಗೆ ವಿಶ್ವಾಸ ಇಲ್ಲ ಎನ್ನುವುದಕ್ಕೆ ಅವರೇ ಅವರ ಪಕ್ಷ ಬಿಟ್ಟು ಹೋಗಿ ಇನ್ನೊಂದು ಕಡೆ ಹೋಗಿ ಸೇರಿಕೊಂಡಿದ್ದು ಇಡೀ ಜಗತ್ತಿಗೆ ಗೊತ್ತಿರುವಂತಹ ವಿಚಾರ. ನಾವು ಎಂ.ಪಿ. ಪ್ರಕಾಶ್‌ರವರನ್ನು ಮಂತ್ರಿಯನ್ನಾಗಿ ಮಾಡಬೇಡಿ ಎಂದು ಹೇಳಿಲ್ಲ. ಇನ್ನು ಎರಡನೇ ವಿಚಾರ, ಇವತ್ತು ಯಾವುದೇ ಒಂದು ವಿಚಾರದಲ್ಲಿ ಬಿಜೆಪಿ ಪಕ್ಷದಲ್ಲಿ ಬೇಜಾರಾಗಿದೆ ಎಂದು ಹೇಳಿದ್ದಾರೆ. ಆ ತಾಯಿ ಸುಷ್ಮಾ ಸ್ವರಾಜ್ ಮತ್ತು

ಸನ್ಮಾನ್ಯ ಯಡಿಯೂರಪ್ಪನವರ ಬಗ್ಗೆ, ಇವತ್ತು ನಮ್ಮ ಇಡೀ ಕುಟುಂಬದಲ್ಲಿ ನಮ್ಮ ಕೊನೇ ಉಸಿರಿರುವವರೆಗೂ ನಾವು ಭಾರತೀಯ ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಇವತ್ತು ಬಿಜೆಪಿ ಪಕ್ಷ, ಅವರ ವಿರುದ್ಧ ನಾನು 150 ಕೋಟಿ ರೂಪಾಯಿ ಭ್ರಷ್ಟಾಚಾರ ಆರೋಪ ಮಾಡಿದ ತಕ್ಷಣ ಇವತ್ತು ಪಕ್ಷದ ಸಿದ್ಧಾಂತ ಮತ್ತು ಸಮ್ಮಿಶ್ರ ಸರ್ಕಾರದ ಧರ್ಮವನ್ನು ಜನಾರ್ಧನ ರೆಡ್ಡಿ ಪಾಲಿಸಿಲ್ಲವೆಂದು ನನ್ನನ್ನು ನಮ್ಮ ಪಕ್ಷದ ಹಿರಿಯರು suspend ಮಾಡಿದರೂ ಕೂಡ, ಅನಂತರ ನನ್ನನ್ನು ಪಕ್ಷದಿಂದ dismiss ಮಾಡಬೇಕೆಂದು ವದಂತಿಗಳು ಪತ್ರಿಕೆಗಳಲ್ಲಿ ಬಂದರೂ ಕೂಡ, ಆ ವಿಚಾರದಲ್ಲಿ ಪತ್ರಕರ್ತರು ನನ್ನನ್ನು ಎಲ್ಲೇ ಕೇಳಿದರೂ ಕೂಡ ನಾನು ಹೇಳಿದ್ದೇನೆಂದರೆ, ಪಕ್ಷದಿಂದ ನನ್ನನ್ನು dismiss ಮಾಡಿದರೂ ಕೂಡ ನಾನು ಬಿಜೆಪಿ ಪಕ್ಷದ ಅಭಿಮಾನಿಯಾಗಿ, ಪಕ್ಷದ ಸಲುವಾಗಿ ನಾನು ದುಡಿಯುತ್ತೇನೆ, ಪಕ್ಷದಲ್ಲಿ ನನಗೆ ಯಾವುದೇ ಹುದ್ದೆ ನನಗೆ ಬೇಕಾಗಿಲ್ಲವೆನ್ನುವ ಮಾತನ್ನು ಕೂಡ ನಾನು ನೂರಾರು ಸಲ ಸಾವಿರಾರು ಸಲ ಹೇಳಿದಂತಹ ವಿಚಾರ ಇಡೀ ಕರ್ನಾಟಕ ರಾಜ್ಯಕ್ಕೆ ಇದೆ.

xxx xxx xxx xxx xxx xxx

ಅಧ್ಯಕ್ಷರು :- xxx xxx xxx

ಶ್ರೀ ಜನಾರ್ಧನ ರೆಡ್ಡಿ :- ಅಯಿತು, ನಾನು 200 ಕೋಟಿ ರೂಪಾಯಿಗಳನ್ನು ಅವರಿಗೆ ಕೊಡುತ್ತೇನೆಂದು ಹೇಳಿದ್ದೇನೆಂದು ಹೇಳಿದ್ದಾರೆ. ಇವೆಲ್ಲವೂ ಶುದ್ಧ ಸುಳ್ಳು, ನಿಜವಾಗಲೂ ಕೂಡ ಸುಳ್ಳನ್ನು ಇಷ್ಟು ಚೆನ್ನಾಗಿ ಹೇಳುವುದಕ್ಕೆ ಬರುತ್ತದೆಂದರೆ ನಿಜವಾಗಲೂ ಭಗವಂತ ಎನ್ನುವವನು ಇದ್ದರೆ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಅವರು ರಾಮನ ಮೇಲೆ ಪ್ರಮಾಣ ಮಾಡಿ ಹೇಳಲಿ.

ಶ್ರೀ ಜನಾರ್ಧನ ರೆಡ್ಡಿ :- ದೊಡ್ಡವರು "ಒಳ್ಳೆಯವರಿಗೆ ಒಳ್ಳೆಯದಾಗಲಿ ವೆಂಕಟರಮಣ ಗೋವಿಂದ, ಕೆಟ್ಟವರಿಗೆ ಕೆಟ್ಟದಾಗಲಿ ವೆಂಕಟರಮಣ ಗೋವಿಂದ" ಎಂದು ಹೇಳುತ್ತಾರೆ. ನಾನು ಬೆಡ್ ರೂಮ್‌ನಲ್ಲಿ ಆ ರೀತಿ ಏನಾದರೂ ಹೇಳಿದ್ದರೆ ಹಾಗೆ ಅಗಲಿ. ನಾನು ಇಲ್ಲಿ point to point ಮಾತನಾಡುತ್ತೇನೆ. ನಾನು ಯಾರ ಹೆಸರುಗಳನ್ನು ತೆಗೆದುಕೊಳ್ಳುವುದಿಲ್ಲ. ಇವತ್ತು 150 ಕೋಟಿ ರೂಪಾಯಿಗಳ allegation ವಿಚಾರವಾಗಿ ಇವತ್ತು ನಿಮ್ಮ ಹತ್ತಿರ ಸಾಕ್ಷಿಗಳು ಇದ್ದರೆ

---

xxx ಮಾನ್ಯ ಸಭಾಧ್ಯಕ್ಷರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ತೋರಿಸಿಯೆಂದು ಸದನದಲ್ಲಿ ಮಾತನಾಡಿದರು. ನಾನು ಈ ಬಗ್ಗೆ ಆರೋಪ ಮಾಡಿದ ತಕ್ಷಣ ಅದರ ಬಗ್ಗೆ CBI enquiry ಆಗಬೇಕೆಂದು ನಾನೇ ಕೇಳಿದ ತಕ್ಷಣ ಅದಕ್ಕೆ ಅವರು ಉತ್ತರವನ್ನು ಕೊಡದೆ, ಅವರು U.L.Bhat Commission ಎಂದು ಮಾಡಿದರು. ನಾನು ಹೈಕೋರ್ಟ್‌ಗೆ ಹೋಗಿದ್ದೆ, ಅಲ್ಲಿ Justice Rameshರವರು ನನ್ನ ವಿಚಾರಗಳನ್ನೆಲ್ಲಾ ಕೇಳಿದ ಮೇಲೆ, documents ಎಲ್ಲವನ್ನು ಅವರು ನೋಡಿದ ಮೇಲೆ, ವಿಷಯ ಬಹಳ ಗಂಭೀರವಾಗಿದೆ. ಇದನ್ನು ಪೂರ್ಣ ಪ್ರಮಾಣದ bench ಮುಂದೆ ಕೇಳುವುದು ಸೂಕ್ತವೆಂದು ಹೇಳಿದ ಮೇಲೆ, ನಾನು ಮತ್ತೆ ಇದನ್ನು Karnataka Divisional Benchಗೆ ತೆಗೆದುಕೊಂಡು ಹೋಗುವುದಕ್ಕಿಂತ ಮುಂಚೆ ಒಬ್ಬ ನ್ಯಾಯಮೂರ್ತಿಗಳಾದ Justice Rameshರವರು ಇದು ಬಹಳ ಗಂಭೀರವಾದಂಥ ವಿಚಾರವೆಂದು ಹೇಳುತ್ತಾರೆ. ಇದು ಸಾರ್ವಜನಿಕ ಹಿತಾಸಕ್ತಿ ಇರುವಂಥ ವಿಚಾರ. ಇದನ್ನು ಪೂರ್ಣ ಪ್ರಮಾಣದ ಬೆಂಚ್‌ನಲ್ಲಿ ಕೇಳುವುದು ಉತ್ತಮ. ಇದು ಬಹಳ ಗಂಭೀರವಾದಂಥ ವಿಚಾರವೆಂದು ಅವರು ಹೇಳಿದ್ದಕ್ಕೆ ನಾನು ಕರ್ನಾಟಕದಲ್ಲಿರುವಂಥ Division Benchಗೆ ಹೋಗುವುದಕ್ಕಿಂತ ನೇರವಾಗಿ Supreme Courtಗೆ ಹೋದರೆ ಅದು ಇಡೀ ದೇಶಕ್ಕೆ ಒಂದು ಮಾದರಿಯಾಗಲಿ ಎಂದು ನಾವು ಎಲ್ಲಾ ಸಾಕ್ಷಿಗಳ ಸಮೇತ ಇವತ್ತು ಹೆಚ್ಚು ಕಡಿಮೆ 600 ಪುಟಗಳ ಸಾಕ್ಷಿ ಸಮೇತ ನಾನು ಭ್ರಷ್ಟಚಾರದ ಬಗ್ಗೆ ಏನು ಆರೋಪವನ್ನು ಮಾಡಿದ್ದೇನೆ, ಅದೆಲ್ಲವನ್ನು ಸಾಕ್ಷಿಗಳ ಸಮೇತ, 9 C.D.ಗಳ ಸಮೇತ, ನಾನು ಅವತ್ತು ಹೊರಗಡೆ ಪತ್ರಿಕೆಗಳಿಗೆ ಹೇಳಿದ್ದೆ. ಇವತ್ತು ಸದನದ ಒಳಗೂ ಹೇಳುತ್ತಿದ್ದೇನೆ. ಇವತ್ತು ಈ ಎಲ್ಲಾ ಸಾಕ್ಷಿಗಳನ್ನು ನಾನು Supreme Courtಗೆ ಕೊಟ್ಟಿದ್ದೇನೆ. ಹೋದ ಸಾರಿ ಹೇಳಿದಂತೆ ನಂಬಿಕೆ ಇರುವ ನನಗೆ ಇವತ್ತು ನಾನು ಕೊನೆಯ ಹಂತಕ್ಕೆ ಬಂದು ತಲುಪಿದ್ದೇನೆ. ಅದುದರಿಂದ ಅದರ ಬಗ್ಗೆ ನಾನು ಇಲ್ಲಿ ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಇವತ್ತು ಲೋಕಾಯುಕ್ತರ enquiry ಎಂಬುದು ಹೇಗೆ ಬಂತು? ನಾನು ಇವತ್ತು ನಿಮ್ಮ ಮೇಲೆ ಆರೋಪ ಮಾಡಿದಾಗ U.L.Bhat Commission ಎಂದು ನೀವು ನೇಮಕ ಮಾಡಿದ್ದಿರಿ. U.L.Bhat ರವರು Investigation ಮಾಡುತ್ತಾ ಮಾಡುತ್ತಾ ನನ್ನ ಕಡೆಯಿಂದ ಏನೇನು records ಅವರಿಗೆ ಸಿಕ್ಕಿತೋ, ಆಗ ಅದರ ಗಂಭೀರತೆ ಗೊತ್ತಾಯಿತು. ಅವರಿಗೆ ಅದು ಗೊತ್ತಾದ ತಕ್ಷಣ CBI ಅಧಿಕಾರಿಗಳ ಒಂದು ಸಹಕಾರದಿಂದ ಮಾತ್ರ ಇದನ್ನು ನಾನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂದು ಸರ್ಕಾರಕ್ಕೆ ಅವರೇ ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಅವರು

ನನಗೆ CBI Officials ಸಹಕಾರ ಬೇಕು. ತಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿಯೆಂದು U.L.Bhatರವರು ಕೇಳಿದ ತಕ್ಷಣ, ಇವರು ಯಾವಾಗ CBI ಅಧಿಕಾರಿಗಳ ಸಹಕಾರವನ್ನು ಕೇಳಿದರೋ, ತಕ್ಷಣ ಇವರು ಅಯಿತು, ನಮ್ಮ ಬಣ್ಣ ಏನಾಗುತ್ತದೋ, ಏನು ತೊಂದರೆಯಾಗುತ್ತದೋ, ಎಂದು ಗಾಬರಿಯಾಗಿ ಇದ್ದಕ್ಕಿದ್ದ ಹಾಗೆ U.L.Bhat ಅವರಿಗೆ ಏನೂ ಸಹಕಾರವನ್ನು ಕೊಡದೇ Justice U.L.Bhatರವರು ಪತ್ರಿಕಾ ಮಾಧ್ಯಮದ ಪ್ರತಿನಿಧಿಗಳ ಮುಂದೆ ಬಂದು ಹೇಳುತ್ತಾರೆ. ನನಗೆ ಈ ಸರ್ಕಾರದ ಕಡೆಯಿಂದ ಸಹಕಾರ ಸಿಗುತ್ತಿಲ್ಲ. ನಾನು ಈ ಸೀಟನ್ನು ಬಿಟ್ಟು ಹೋಗುತ್ತಿದ್ದೆನೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಒಂದು Cabinet Meeting ಅನ್ನು ಕರೆದು ಆಗ ಇವರು ಇದನ್ನು ಲೋಕಾಯುಕ್ತರಿಗೆ ವಹಿಸಿದರು. ಇವತ್ತು ಈ ಆಕ್ರಮ ಗಣಿಗಾರಿಕೆ ಬಗ್ಗೆ ಅವತ್ತಿನ ಹೋರಾಟ ಏನು ಇತ್ತು. ತಾವು U.L.Bhat Commission ಮಾಡಿದಿರಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಸಭಾಧ್ಯಕ್ಷರೆ, ...

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವಾಗ ನಾನು ಏನೂ ಮಾತನಾಡಲಿಲ್ಲ. ನಾನು ಒಂದೇ ಒಂದು ವಿಷಯವನ್ನು ಹೇಳುತ್ತಿದ್ದೇನೆ. ಅವರೇ appointment ಮಾಡಿದಂಥ U.L.Bhat ರವರೇ CBI ಅಧಿಕಾರಿಗಳ ಸಹಕಾರ ಬೇಕಾಗಿದೆಯೆಂದು ಕೇಳಿದಾಗ, ತರಾತುರಿಯಲ್ಲಿ ಅವರಿಗೆ ಅಸಹಕಾರ ಕೊಟ್ಟಿದ್ದಾರೆಂದು ಮಾಧ್ಯಮಗಳ ಮುಂದೆ ಹೇಳಿರುವಂಥಾದ್ದು, ಎಲ್ಲಾ T.V.Channalಗಳ ಮುಂದೆ ಒಬ್ಬ ನ್ಯಾಯಮೂರ್ತಿಗಳು ಬಂದು ನೇರವಾಗಿ ಈ ಸರ್ಕಾರದ ಕಡೆಯಿಂದ ನನಗೆ ಸಹಕಾರ ಸಿಗುತ್ತಿಲ್ಲವೆಂದು ಹೇಳುತ್ತಾರೆ. ನಾನು resign ಮಾಡುತ್ತಿದ್ದೇನೆಂದು ಹೇಳಿ, ಅವರು resign ಮಾಡಿದ ಮೇಲೆ ತಾವು ಇದನ್ನು ಲೋಕಾಯುಕ್ತರಿಗೆ ವಹಿಸಿದ್ದೀರಿ. ಇದನ್ನು ಲೋಕಾಯುಕ್ತರಿಗೆ ವಹಿಸುವಂಥ ಸಮಯದಲ್ಲಿ ನಾನು ಆರೋಪ ಮಾಡಿದಂಥ 150 ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಬಗ್ಗೆ ಅದರಲ್ಲಿ add ಮಾಡದೇ ಇಡೀ ರಾಜ್ಯದಲ್ಲಿರುವಂಥ ಜನರನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುವಂಥ ಸಂದರ್ಭದಲ್ಲಿ, ಬರೀ ಅಕ್ರಮ ಗಣಿಗಾರಿಕೆ ಬಗ್ಗೆ ಮಾತ್ರ ತನಿಖೆ ಮಾಡಿಯೆಂದು ಒಂದು letter ಅನ್ನು ಕೊಟ್ಟು ಬಿಟ್ಟು, 150 ಕೋಟಿ ರೂಪಾಯಿಗಳ ಭ್ರಷ್ಟಚಾರದ ನನ್ನ ಆರೋಪದ ಬಗ್ಗೆ ಎಲ್ಲೂ ಕೂಡ ಲೋಕಾಯುಕ್ತರ ವಿಷಯದಲ್ಲಿ ತಾವು refer ಮಾಡಲಿಲ್ಲ. ಇದು ಒಂದು ವಿಷಯ, ಆದರೆ ಜನರನ್ನು confusion

ಮಾಡುವುದಕ್ಕೆ 150 ಕೋಟಿ ರೂಪಾಯಿಗಳ issue ಅನ್ನೇ ಬಿಟ್ಟು ಬಿಟ್ಟಿದ್ದೀರಿ. ಲೋಕಾಯುಕ್ತರಿಗೆ ಅಕ್ರಮ ಗಣಿಗಾರಿಕೆ ಎಂದು ಕೊಟ್ಟಿದ್ದೀರಿ. ಅದು ಸಂತೋಷವಾಯಿತು, ಏಕೆಂದರೆ ಆ ಅಕ್ರಮ ಗಣಿಗಾರಿಕೆಯಿಂದ ಇವತ್ತು ಯಾರ್ಯಾರು ಏನೇನು, ಹೇಗೆ, ಎನ್ನುವಂಥಾದ್ದನ್ನು ಮಾನ್ಯ ಮುಖ್ಯಮಂತ್ರಿಯವರು ಅವರು ಉತ್ತರ ಕೊಡುವಾಗ ಹೇಳುತ್ತಾರೆ. ಈ ಎಲ್ಲಾ reports ಇಡೀ ರಾಜ್ಯದಲ್ಲಿರುವಂಥ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿ ಕೈಯಲ್ಲೂ ಕೂಡ public document ಆಗಿ ಸಿಗುವಂಥ ವ್ಯವಸ್ಥೆ ಇದೆ. ಅದರಲ್ಲಿ ಯಾರ್ಯಾರ ಹೆಸರುಗಳಲ್ಲಿ, ಯಾರ್ಯಾರು ಎಷ್ಟೆಷ್ಟು encroachment ಮಾಡಿಕೊಂಡಿದ್ದಾರೆಂಬುದನ್ನು ನಂತರ ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ. ಅದರೆ ಇವತ್ತು ಯಾವುದೇ ಒಂದು ವಿಷಯದಲ್ಲಿ, ನಮ್ಮ ಕುಟುಂಬದವರಿಗೆ mining ವಿಷಯದಲ್ಲಿ ಸಂಬಂಧವಿಲ್ಲ. ನಾನು ನನ್ನ ಕುಟುಂಬದವರಿಗೆ ಯಾರಿಗಾದರೂ lease ಕೊಟ್ಟಿದ್ದೀನಾ? ಅಂಥಾ ಹೇಳಿ ಹೇಳುತ್ತಾ ಇದ್ದರು. ಇವತ್ತು ಬೇನಾಮಿ ಹೆಸರು, ಇನ್ನೊಂದು ಹೆಸರು, ಯಾವುದನ್ನೂ ಕೂಡ ನಾನು ಹೇಳುವುದಿಲ್ಲ. ಅದರೆ ಇವತ್ತು ನಿಮ್ಮ ಹತ್ತಿರ ಸಾಕ್ಷಿಗಳಿದ್ದರೆ ದಾಖಲಾತಿಗಳನ್ನು ಕೊಡಿಯೆಂದು ಹೇಳಿದರು. ಆ ಕಾಲದಲ್ಲಿ ನಾನು ಕೆಲವೊಂದು propertyಗಳ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಬಿಡುಗಡೆ ಮಾಡಿದಾಗ, ಇವರು ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬರೆದರು. ಇವತು ನಾನು Document ಕೊಟ್ಟ ತಕ್ಷಣ ಮಾರನೇ ದಿವಸವೇ ಹೋಗಿ ವಾಪಸ್ಸು registration ಮಾಡಿಸಿ, ಅವರು ಅಲ್ಲಿಂದ ಕೈ ತೊಳೆದು ಕೊಳ್ಳಬೇಕೆಂಬ ಪ್ರಯತ್ನ ಏನು ಇದೆ, ಅದೆಲ್ಲವನ್ನು ಕೂಡ ನಾನು Supreme Courtನಲ್ಲಿ ಕೊಟ್ಟಿದ್ದೇನೆ. ಇದರ ಜೊತೆಗೆ ಒಂದು B.S.K.Trading Company ಎಂದು ನೇರವಾಗಿ ಅವರ ಸ್ವಂತ ಒಡಹುಟ್ಟಿದವರ ಕುಟುಂಬದ ಸದಸ್ಯರೇ.. .. ..

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು .. ..

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ನನ್ನ ಮಾತನ್ನು ನೆನಪು ಇಟ್ಟು ಕೊಳ್ಳಲಿ. ನಾನು ಯಾರ ಹೆಸರನ್ನು ಹೇಳುತ್ತಿಲ್ಲ. ಅವರು ಓಬಳಾಪುರ ಮೈನಿಂಗ್ ಕಂಪನಿ ಜನಾರ್ಧನ ರೆಡ್ಡಿ ಎಂದು ಹೇಳಿದಾಗ ನಾನು ಸುಮ್ಮನೆ ಇದ್ದೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಅವರು ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ಹೇಳುತ್ತಿದ್ದಾರೆ, ಸದನದಲ್ಲಿರುವವರ ಹೆಸರನ್ನು ಹೇಳಲಿ.

ಶ್ರೀ ಜನಾರ್ಧನ ರೆಡ್ಡಿ :- ಅಯಿತು, ಇವತ್ತು ಆ Companyಗಳಲ್ಲಿ ನೂರಾರು ಕೋಟಿ ವ್ಯವಹಾರಗಳು cash withdrawals ಎಷ್ಟೆಷ್ಟು ದೊಡ್ಡ ಪ್ರಮಾಣದಲ್ಲಿ ಇವರು ಮಾಡಿದರೆಂಬುದನ್ನು with Bank Documents ಸಮೇತ ನಾನು Supreme Courtನಲ್ಲಿ ಕೊಟ್ಟಿದ್ದೇನೆ. ತಾವು ಅದರ ಬಗ್ಗೆ ಮಾತನಾಡಬೇಡಿಯೆಂದು ಹೇಳಿದರೆ ನಾನು ಮಾತನಾಡುವುದಿಲ್ಲ. ಇವತ್ತು ಯಾವುದೇ ನಿಮಿಷದಲ್ಲಿ ಮಾತೆತ್ತಿದರೆ ಪಾಳೆಗಾರಿಕೆ ಎಂದು ಹೇಳುತ್ತೀರಿ. ನಿಮ್ಮ ಕುಟುಂಬದ ಬಗ್ಗೆ, ಆಂಧ್ರದಿಂದ, ನಿಮ್ಮ ಕತೆ ಏಕೆ, ಬೇಡ ಬಿಡಿ, ಅಂದರೆ ಏನು suspense ಇದು? ಏಕೆ? ಇವತ್ತು ನಾನು ಹೇಳುತ್ತೇನೆ. ನಾನು 1967ರಲ್ಲಿ ಹುಟ್ಟಿರಬಹುದು, ಕರುಣಾಕರ ರೆಡ್ಡಿಯವರು 1962ರಲ್ಲಿ ಹುಟ್ಟಿರಬಹುದು. ನಾವು ಬಳ್ಳಾರಿ ಜಿಲ್ಲೆಯ ಒಬ್ಬ Police Constable ಮಕ್ಕಳಾಗಿ ಹುಟ್ಟಿದ್ದೇವೆ. ನಮ್ಮ ತಂದೆ-ತಾಯಿಯವರ ಆಶೀರ್ವಾದದಿಂದ ಮತ್ತು ನಮಗೆ ಒಳ್ಳೆಯ ಸಂಸ್ಕಾರ ಮತ್ತು ವಿದ್ಯೆಯನ್ನು ಕಲಿಸಿಕೊಟ್ಟ ಮೇಲೆ, ಅದನ್ನು ನಾವು ಮೈಗೂಡಿಸಿಕೊಂಡು ಮೇಲೆ ಬಂದಿರುವಂಥಾದ್ದು. ನಾವು ಶ್ರೀರಾಮುಲು ಅಂಥವರ ಒಬ್ಬ ಉತ್ತಮ ಸ್ನೇಹಿತನನ್ನು ಪಡೆದುಕೊಂಡು ಜೊತೆಗೆ ಮಾನ್ಯ ಯಡಿಯೂರಪ್ಪನವರ ಸಮ್ಮುಖದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಸೇರಿ, ರಾಜಕೀಯದಲ್ಲಿ ಒಂದು ಕಡೆ ನಾವು ಬೆಳೆದರೆ, ಇನ್ನೊಂದು ಕಡೆ ಒಬ್ಬ ವಾಣಿಜ್ಯೋದ್ಯಮಿಯಾಗಿ ಭಗವಂತನ ಆಶೀರ್ವಾದದಿಂದ, ನಮ್ಮ ಹಣೆ ಬರಹ ಮತ್ತು ನಮ್ಮ ಅದೃಷ್ಟದಿಂದ ಇವತ್ತು ನಾವು ಬರೀ ನೂರಾರು ಕೋಟಿಗಳಿಗಲ್ಲ, ಸಾವಿರಾರು ಕೋಟಿಗಳಿಗೆ ಭಗವಂತನು ನಮಗೆ ಆಶೀರ್ವಾದವನ್ನು ಮಾಡಿದ್ದಾನೆ. ನಾವು ಬಡ ಕುಟುಂಬದಿಂದ ಬಂದು ಇವತ್ತು ಸಾವಿರಾರು ಕೋಟಿ ರೂಪಾಯಿ ಗಳಿಗೆ accountನಲ್ಲಿ ತೋರಿಸಿದಂಥ ವ್ಯಾಪಾರ ವ್ಯವಹಾರಗಳನ್ನು ನಾವು ಇವತ್ತು ಎದೆಗಾರಿಕೆಯಿಂದ ಮಾಡುತ್ತಿದ್ದೇವೆ. ಈ ಪಾಳೆಗಾರಿಕೆ, ಬಳ್ಳಾರಿ, ದೌರ್ಜನ್ಯ, ರೆಡ್ಡಿಗಳು, ರೌಡಿಗಳು, ಏನು ಇದು ಭಾಷೆ? ಈ ರಾಜ್ಯದಲ್ಲಿ ಇವತ್ತು ಮುಖ್ಯ ಮಂತ್ರಿಗಳಾಗುವುದಕ್ಕೆ ಅಥವಾ ಮಂತ್ರಿಗಳಾಗುವುದಕ್ಕೆ, ರೌಡಿಗಳನ್ನು ಸೇರಿಸಿಕೊಂಡು ಯಾರು ಯಾರ ಮೇಲೆ ಕಲ್ಲೇಟು ಹೊಡೆದು, ಚಪ್ಪಲಿ ಏಟುಗಳನ್ನು ಹಾಕಿ, ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ, ಯಾವ ಯಾವ ಅಡ್ಡ ದಾರಿಗಳಲ್ಲಿ ಎಂಥ ಎಂತಹ ವರಿಗೆ ದ್ರೋಹ ಮಾಡಿ ಮುಖ್ಯಮಂತ್ರಿಗಳಾಗಿದ್ದಾರೆಂಬುದು ಇಡೀ ಕರ್ನಾಟಕ ರಾಜ್ಯಕ್ಕೆ ಗೊತ್ತಾಗಿದೆ. ಹಾಗಾಗಿ ಪಾಳೆಗಾರಿಕೆ ಎನ್ನುವಂಥಾದ್ದು ವಿಧಾನಸೌಧದ ಮುಂದೆಯಿಂದ ಪ್ರಾರಂಭವಾಗಿರುವಂಥ ಸಂಸ್ಕೃತಿ ನಿಮ್ಮದಾಗಿರಬಹುದು. ಅದರೆ ಇವತ್ತು ಬಳ್ಳಾರಿಯಲ್ಲಿ

ಒಬ್ಬ ಕ್ರಿಮಿನಲ್ಸ್ ಬಗ್ಗೆ ಹೇಳುತ್ತಿದ್ದರು. ಆಂಧ್ರ ಗಡಿ ವಿಚಾರದಲ್ಲಿ ಇವತ್ತು ನಮ್ಮ ಹಿರಿಯರಾದ ಮಾನ್ಯ ಜಯಚಂದ್ರರವರು ಮಾತನಾಡುವಾಗ ಗಣಿ ವಿಚಾರವಾಗಿ ನೇರವಾಗಿ ಕರುಣಾಕರ ರೆಡ್ಡಿ ಮತ್ತು ಜನಾರ್ಧನ ರೆಡ್ಡಿ ಮಾಲೀಕರಾಗಿರುವಂಥ ಸಂಸ್ಥೆಯೆಂದು ತಾವು ಹೇಳಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ನಾನು ಓಬಳಾಪುರ ಮೈನ್ಸ್ ಎಂದು ಹೇಳಿದ್ದೇನೆಯೇ ಹೊರತು, ಅದರಲ್ಲಿ ಯಾರ್‍ಯಾರಿದ್ದಾರೆಂಬುದು ನನಗೆ ಗೊತ್ತಿಲ್ಲ.

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ಕಡತಗಳನ್ನು ತೆಗೆದರೆ ಅದರಲ್ಲಿ ನನ್ನ ಮತ್ತು ಕರುಣಾಕರ ರೆಡ್ಡಿಯವರ ಹೆಸರುಗಳನ್ನು ಹೇಳಿರುವುದು ಇದೆ. ಇವತ್ತು ಬೆಳಿಗ್ಗೆ ನಡೆದ ಚರ್ಚೆಯಲ್ಲಿ ಇದೆ. ಅದು ಕಡತದಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ :- ಓಬಳಾಪುರ ಮೈನ್ಸ್‌ನಲ್ಲಿ ಯಾರ್‍ಯಾರಿದ್ದಾರೆಂಬುದು ನನಗೆ ಗೊತ್ತಿರಲಿಲ್ಲ. ನನ್ನ ಹತ್ತಿರ ಓಬಳಾಪುರದ ದಾಖಲೆಗಳು ಏನು ಇತ್ತು, ಅದನ್ನು ನಾನು ಹೇಳಿದ್ದೇನೆ.

ಶ್ರೀ ಜನಾರ್ಧನ ರೆಡ್ಡಿ :- ಸರ್ ಶಾಂತವಾಗಿ ನಾನು ಹೇಳುವುದನ್ನು ಕೇಳಿ, ಅದರಲ್ಲಿ ಏನಾದರೂ mistake ಇದ್ದರೆ, ಜನಾರ್ಧನ ರೆಡ್ಡಿ ಇದನ್ನು ಸರಿ ಮಾಡಿಕೊ ಎಂದು ಹೇಳಿದರೆ, ನಾನು ಕೇಳುತ್ತೇನೆ. ಅದರಲ್ಲಿ ಏನೂ ತೊಂದರೆ ಇಲ್ಲ. ನಾನು ಹೇಳುವುದೇನೆಂದರೆ ಅದರಲ್ಲಿ ಇರುವುದು ಜನಾರ್ಧನ ರೆಡ್ಡಿ ಒಬ್ಬರೇ ಮಾಲೀಕರು. ಅದರಲ್ಲಿ ಶ್ರೀರಾಮುಲುರವರು ಇಲ್ಲ, ಕರುಣಾಕರ ರೆಡ್ಡಿಯವರು ಇಲ್ಲ, ಯಾವುದೇ ಒಂದೂ ವಿಚಾರದಲ್ಲೂ ಕೂಡ ನಾನು ಹೇಳುತ್ತಿರುವುದೇನೆಂದರೆ, ಕಾಂಗ್ರೆಸ್ ಪಕ್ಷದಿಂದ ಸತ್ಯ ಶೋಧನ ಸಮಿತಿಯೆಂದು ತಾವು ಮಾಡಿದ್ದೀರಿ. ನಮ್ಮವರೆಲ್ಲಾ ಅಲ್ಲಿ ಹೋಗಿ ನೋಡಿ ಬಂದಿದ್ದಾರೆಂದು ಹೇಳಿದ್ದೀರಿ. ಅವರ ಜೊತೆಯಲ್ಲಿ ಇವತ್ತಿನ ಬಳ್ಳಾರಿ ಜಿಲ್ಲೆಯ ಒಬ್ಬ ಕಾಂಗ್ರೆಸ್ ಅಧ್ಯಕ್ಷರು ಹೋಗಿದ್ದರು.

ಮದ್ರಾಸ್ ಪ್ರೆಸಿಡೆನ್ಸಿಯಿಂದ ಕರ್ನಾಟಕ, ಆಂಧ್ರ, ತಮಿಳುನಾಡು ರಾಜ್ಯಗಳು ಬೇರ್ಪಡುವಂಥ ಸಂದರ್ಭದಲ್ಲಿ, ಇವತ್ತು ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರು ಯಾರಿದ್ದಾರೆ, ಅವರ ತಂದೆಯವರು ಬಳ್ಳಾರಿಯನ್ನು ಸಂಪೂರ್ಣವಾಗಿ ಆಂಧ್ರ ರಾಜ್ಯಕ್ಕೆ ಸೇರಿಸಬೇಕು ಎಂದು ಹೇಳಿ, ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಸೋತಿರುವಂಥ ಒಬ್ಬ ವ್ಯಕ್ತಿಯ ಮಗನನ್ನು ತಾವು ಹಿಂದೆ ಮಂತ್ರಿಗಳಾಗಿ ಮಾಡಿದ್ದಿರಿ,

ಇವತ್ತು ಅವರನ್ನು ಕಾಂಗ್ರೆಸ್ ಅಧ್ಯಕ್ಷರಾಗಿ ಮಾಡಿದ್ದೀರಿ. ಇನ್ನೊಬ್ಬರು ಹೇಳುತ್ತಾರೆ, ಕರ್ನಾಟಕ ರಾಜ್ಯದಲ್ಲಿ ಹುಟ್ಟಿ ಬೆಳೆದಿರತಕ್ಕಂಥ ತಾವು ಕರ್ನಾಟಕ ರಾಜ್ಯದ ಗಣಿ ಸಂಪತ್ತನ್ನು ಕಾಪಾಡುವಂಥ responsibility ತಮ್ಮ ಮೇಲಿದೆ ಎಂದು ಹೇಳುತ್ತಾರೆ. ನಿನ್ನೆ ನಾನು ಸದನದಲ್ಲಿ ಬಹಳಷ್ಟು ಸ್ಪಷ್ಟವಾಗಿ ಹೇಳಿದೆ, ಪಾಳೇಗಾರಿಕೆ ಎನ್ನುವ ಒಂದು ವಿಚಾರ ಬಂದಾಗ ಅವರು ಹೇಳಿದರು, ಮುಖ್ಯಮಂತ್ರಿಗಳ ಮೇಲೆ ಒಬ್ಬ ಕ್ಯಾಬಿನೆಟ್ ಮಂತ್ರಿ ಪೊಲೀಸ್ ಸ್ಟೇಷನ್‌ಗೆ ಹೋಗಿ complaint ಮಾಡಿದ್ದಾರೆ ಎಂದು ಹೇಳಿದರು. ಗಣಿ ವಿಚಾರದಲ್ಲಿ ಅಧಿಕಾರಿಗಳ ಬಗ್ಗೆ ತಾವು ಕೆಲವೊಂದು ಪ್ರಸ್ತಾಪ ಮಾಡಿದ್ದೀರಿ. ನಾನು 150 ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪವನ್ನು ತಮ್ಮ ಮೇಲೆ ಮಾಡಿದ ಮೇಲೆ, ತಾವು ಅದಕ್ಕೆ ಸಿದ್ಧರಾಗಿಲ್ಲದಂತೆ, ನನ್ನ ಮೇಲೆ ಸೇಡು ತೀರಿಸಿಕೊಳ್ಳುವಂಥ ಒಂದು ಕಾರ್ಯಕ್ರಮದಲ್ಲಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು, ಆರು ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಪೊಲೀಸರನ್ನು, ಒಂದು ತಪ್ಪು ಕೇಸಿನಲ್ಲಿ ನನ್ನನ್ನು ಅರೆಸ್ಟ್ ಮಾಡಬೇಕೆಂದು ಬಳ್ಳಾರಿ ಜಿಲ್ಲೆಯ ತುಂಬ ಪೊಲೀಸರನ್ನು ತುಂಬಿಸಿಬಿಟ್ಟು, ನನ್ನ ಬಗ್ಗೆ ಪ್ರಯತ್ನ ಮಾಡಿದ್ದು ಇಡೀ ಪತ್ರಿಕಾ ಮಾಧ್ಯಮಗಳಲ್ಲಿ ಬಂದಿದ್ದು, ಅದು ಇಡೀ ರಾಜ್ಯಕ್ಕೇ ಗೊತ್ತಿದೆ. ಇನ್ನು, ಶ್ರೀರಾಮುಲು ಅವರ ಬಗ್ಗೆ ಮಾತನಾಡುವುದಾದರೆ, ಶ್ರೀರಾಮುಲುರವರಲ್ಲಿರುವಂಥ ಮುಗ್ಧತೆ, ಮತ್ತು ಅವರು ನಿಜವಾದ ಒಬ್ಬ ಮನುಷ್ಯ, ನಿಜವಾದ ಒಬ್ಬ ರಾಜಕಾರಣಿ. ಮುನಿಸಿಪಲ್ ಕಾರ್ಪೊರೇಷನ್ ಎಲೆಕ್ಷನ್ ಆಗುವಂಥ ಸಂದರ್ಭದಲ್ಲಿ, ಒಬ್ಬ ಮುಖ್ಯಮಂತ್ರಿಗಳಾಗಿದ್ದುಕೊಂಡೂ ಕೂಡ ಬಳ್ಳಾರಿಗೆ ಬಂದು, ನಮ್ಮ ಮನೆ ಮುಂದೆಯಿಂದ ಹಿಡಿದು ಎಲ್ಲ ಕಡೆ ಬೇಕೆಂದೇ ರೊಚ್ಚಿಗೆಬ್ಬಿಸುವ ರೀತಿಯಲ್ಲಿ ಸಭೆ, ಸಮಾವೇಶಗಳನ್ನು ಮಾಡಿ ಅಲ್ಲಿ, ನಮಗೆ ದುರಹಂಕಾರ, ಬುದ್ಧಿ ಕಲಿಸಬೇಕು, ಅದು ಮಾಡಬೇಕು, ಇದು ಮಾಡಬೇಕು ಎಂದು ಪ್ರಚಾರ ಮಾಡಿದಾಗಲೂ ಕೂಡ ನಾವು 35 ಸೀಟುಗಳಲ್ಲಿ 30 ಸೀಟುಗಳನ್ನು ಗೆದ್ದರೆ ನಿಮ್ಮ ಪಕ್ಷ ಕೇವಲ 3 ಸೀಟುಗಳನ್ನು ಗೆದ್ದಿರುವುದನ್ನು ನೀವು ಮರೆಯಬಾರದು. ಬಳ್ಳಾರಿ ಪಾಳೇಗಾರಿಕೆ, ಯಾವುದೋ ಕೊಲೆಯ ವಿಚಾರಗಳೆಲ್ಲಾ ನಿನ್ನೆ ಪ್ರಸ್ತಾಪವಾಗುತ್ತಿತ್ತು. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಅವರು ವಿಶ್ವಾಸದಿಂದ ನನ್ನನ್ನು ಮಂತ್ರಿಯನ್ನಾಗಿ ಮಾಡಿ, ಬಳ್ಳಾರಿ ಜಿಲ್ಲಾ ಉಸ್ತುವಾರಿ ಮಂತ್ರಿಯನ್ನಾಗಿ ಮಾಡಿದ ಮೇಲೆ ನಾಲ್ಕು ಲಕ್ಷ ಟನ್ ಅದಿರನ್ನು ವಶಪಡಿಸಿಕೊಂಡಿದ್ದೇವೆ. ಆ digging ore ನಲ್ಲಿಯೇ ನಿಮ್ಮ ಹಿಂಬಾಲಕರೆಲ್ಲಾ ಏನು ಬದುಕುತ್ತಿದ್ದರು, ಅದೆಲ್ಲವನ್ನೂ ಬ್ಯಾನ್ ಮಾಡಿ, ಇವತ್ತು ಎಲ

ಲಾರಿಗಳನ್ನು, 4 ಲಕ್ಷ ಟನ್ ಮೆಟೀರಿಯಲ್‌ಗಳನ್ನು ಸೀಜ್ ಮಾಡಿ ಪಬ್ಲಿಕ್‌ಆಗಿ 20 ಕೋಟಿ ಹಣಕ್ಕೆ ಹರಾಜು ಮಾಡಿದ್ದು, ಇವತ್ತು ನಾವು ನಿಜವಾದ ಬಳ್ಳಾರಿ ಜಿಲ್ಲೆಯನ್ನು ನೋಡುತ್ತಿದ್ದೇವೆ, ನಮಗೆ ಒಂದಿಷ್ಟು ರೊಟ್ಟಿ ಚಟ್ನಿ ಇದ್ದರೂ ಕೂಡ ನಾವು ಸಮಾಧಾನವಾಗಿ ಬದುಕುತ್ತಿದ್ದೇವೆ ಎಂದು ಬಳ್ಳಾರಿ ಜಿಲ್ಲೆಯ ಜನರು ಹೇಳುತ್ತಿದ್ದಾರೆ. ಪತ್ರಿಕೆಗಳಲ್ಲಿ ಬರೆದಿದ್ದರು. ಮಣ್ಣಿನ ಮನೆಗಳಲ್ಲಿ ಮಲಗಿಕೊಂಡರೆ ನಿದ್ರೆ ಬರುವುದಿಲ್ಲವೆಂದು Scorpio ಗಳಲ್ಲಿ AC ಹಾಕಿಕೊಂಡು ಮಲಗಿಕೊಳ್ಳುವಂಥ ಒಂದು ಸ್ಥಿತಿಯನ್ನು ಹಿಂದೆ ಏನು ನಿಮ್ಮ ಹಿಂಬಾಲಕರು, ನಿಮ್ಮವರೆಲ್ಲಾ ನಿರ್ಮಾಣ ಮಾಡಿದ್ದರು, ಅದನ್ನು ನಾವು ತಪ್ಪಿಸಿದ್ದೇವೆ. ಇವತ್ತು ಬಳ್ಳಾರಿ ಜಿಲ್ಲೆಯ ಗಡಿ ವಿಚಾರದಲ್ಲಿ, ಎಲ್ಲ ಪಕ್ಷಗಳು, international, national, Bangalore, Belgaum, Bellaryಗಳ ಎಲ್ಲಾ ಮೀಡಿಯಾದವರು, ಎಲ್ಲ ಪಕ್ಷದ ನಾಯಕರುಗಳು, ಯಾವ ಲೇಟೆಸ್ಟ್ ಎಕ್ವಿಪ್‌ಮೆಂಟ್‌ಗಳಿಂದಾದರೂ ಸರಿ, ಎಂಥ ಸರ್ವೆ ಮಾಡಿಸಬೇಕು ಎಂದು ನಿರ್ಧಾರ ಮಾಡಿದರೆ, ಅದೇ ರೀತಿಯ ಸರ್ವೆಯನ್ನು ಎಲ್ಲರ ಸಮ್ಮುಖದಲ್ಲಿ ಮಾಡಿಸುತ್ತೇವೆ. ಏಕೆಂದರೆ, ಹಿಂದೆ ಆಂಧ್ರ ರಾಜ್ಯದಲ್ಲಿ ಇವರ ವಿರುದ್ಧ ನಾನು ಹೋರಾಟ ಮಾಡಿದಂಥ ಸಂದರ್ಭದಲ್ಲಿ, ಕರ್ನಾಟಕದಲ್ಲಿ ಇವನ ಮೈನ್ಸ್ ಏನಾದರೂ ಇದ್ದಿದ್ದರೆ ಇವನನ್ನು ನಾವು ಚೆನ್ನಾಗಿ ಆಟ ಆಡಿಸಬಹುದಿತ್ತು, ಇವನ ಮೈನ್ ನಮ್ಮ ಕರ್ನಾಟಕದಲ್ಲಿ ಇಲ್ಲ ಎಂದೆಲ್ಲಾ ಪೇಚಾಡಿಕೊಂಡು, ಕರ್ನಾಟಕದಲ್ಲಿ ಅವನ ಮೈನ್‌ಗಳಿದ್ದರೆ ಎಲ್ಲವನ್ನೂ ಬಂದ್ ಮಾಡಿಸೋಣ ಹೇಳಿ ಎಂದು ಗಣಿ ಇಲಾಖೆಯ ಅಧಿಕಾರಿಗಳನ್ನು ಕೇಳಿದರಂತೆ. ಅದಕ್ಕೆ ಅವರು, Sir, ಕರ್ನಾಟಕದಲ್ಲಿ ಅವರದ್ದು ಯಾವುದೇ ಮೈನ್ಸ್ ಇಲ್ಲ ಎಂದು ಹೇಳಿದ ತಕ್ಷಣ, ಆಂಧ್ರದಲ್ಲಿ ಚಂದ್ರಬಾಬು ನಾಯ್ಡುರವರ ಸಹಕಾರವನ್ನು ತೆಗೆದುಕೊಳ್ಳುವಂಥ ಒಂದು ಪ್ರಯತ್ನವನ್ನು ಮಾಡಿದರು. ಅಲ್ಲಿ ಎಲ್ಲ ಪಕ್ಷಗಳು ನಮ್ಮ ವಿರುದ್ಧ, ಜಗಳ, ಗಲಾಟೆಯನ್ನು ಮಾಡಿದವು. ಅಲ್ಲಿನ ಪ್ರತಿಪಕ್ಷಗಳು ಸರ್ವ ಪಕ್ಷಗಳ ನಿಯೋಗವನ್ನು demand ಮಾಡಿದ್ದರು. ಆಗ ಅಲ್ಲಿದ್ದಂಥ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ನಿಯೋಗವನ್ನು announce ಮಾಡಿದರು. T.D.P., B.J.P., Congress, C.P.I., C.P.M., T.R.S.P. ಈ ಎಲ್ಲ ಪಕ್ಷಗಳ ನಿಯೋಗವನ್ನು ಮಾಡಿದರು. ಸುಮಾರು 40 ಮಂದಿ M.L.A. ಗಳು . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಏನು ಅಧ್ಯಕ್ಷರೇ ಇದು, ಆಂಧ್ರದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಗಡಿ ವಿಚಾರಕ್ಕೆ ಸಂಬಂಧಪಟ್ಟಂತೆಯೇ ಇದನ್ನು ಹೇಳುತ್ತಿದ್ದೇನೆ. ಅವರು ಹೇಳಿದಂಥ ತುಮಟಿ ಮತ್ತು ಓಬಳಾಪುರಂ ಗಣಿ ಗಡಿ ವಿಚಾರದಲ್ಲಿ ಆಗಿರುವಂಥ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಅಲ್ಲಿನ 40 ಮಂದಿ ಶಾಸಕರು, 8 ಮಂದಿ ರಾಜ್ಯಸಭಾ ಸದಸ್ಯರು, 5 ಮಂದಿ ಲೋಕಸಭಾ ಸದಸ್ಯರು ಬಂದು ನನ್ನ ಗಣಿ ಎದುರಿಗೇ ಟೆಂಟ್ ಹಾಕಿಕೊಂಡು, ಶಾಮಿಯಾನಗಳನ್ನು ಹಾಕಿಕೊಂಡು ಧರಣಿ ಮಾಡಿದ ಮೇಲೆ, ಅಲ್ಲಿನ ಮುಖ್ಯಮಂತ್ರಿಗಳು ಒಂದು ಅಖಿಲ ಪಕ್ಷಗಳ ಕಮಿಟಿ ಎಂದು ಹಾಕಿದರು. ಹೈದರಾಬಾದಿನಿಂದ, ದೆಹಲಿಯಿಂದ ಹೀಗೆ ಎಲ್ಲ ಮೀಡಿಯಾದವರೂ ಬಂದರು. ಎಲ್ಲರೂ ಅಲ್ಲಿಗೆ ಬಂದು, ಎಲ್ಲ ವಿಚಾರಗಳನ್ನು ನೋಡಿದ ಮೇಲೆ, ಅವರಿಗೆ ಎಲ್ಲ ರೆಕಾರ್ಡ್‌ಗಳನ್ನು ತೋರಿಸಿದ ಮೇಲೆ, along with the surveyors, ಸರ್ವೆ ಡಿಪಾರ್ಟ್‌ಮೆಂಟಿನವರು ಮತ್ತು ಇತರ ಅಧಿಕಾರಿಗಳೂ ಅಲ್ಲಿಗೆ ಬಂದಿದ್ದರು. ಅವತ್ತು ಕರ್ನಾಟಕ ರಾಜ್ಯದಲ್ಲಿ ಇದ್ದದ್ದು ಯಾವ ಮುಖ್ಯಮಂತ್ರಿಗಳೆಂದರೆ, ಯಾರ ವಿರುದ್ಧ ನಾನು ಹೋರಾಟ ಮಾಡುತ್ತಿದ್ದೆನೋ ಅದೇ ವ್ಯಕ್ತಿ ಮುಖ್ಯಮಂತ್ರಿಯಾಗಿದ್ದರು. ಅವರು ಎಷ್ಟೆಲ್ಲಾ ತಲೆಕೆಡಿಸಿಕೊಂಡು, ಎಷ್ಟೆಲ್ಲಾ ಮಾಡಿ, ಆ ಕಡೆಯಿಂದ ನೀವು ಬನ್ನಿ, ಈ ಕಡೆ ನಾನು ಇರುತ್ತೇನೆ, ಅವರ ಕಥೆಯನ್ನು ನೋಡೇಬಿಡೋಣ ಎಂದು ಮಾಡಿದರೂ ಅವರಿಂದ ಏನೂ ನೋಡಲಿಕ್ಕಾಗಲಿಲ್ಲ. ಜನಾರ್ಧನ ರೆಡ್ಡಿಯವರ ಓಬಳಾಪುರ ಮೈನಿಂಗ್ ಕಂಪನಿ ಗಡಿ ರೇಖೆಯನ್ನು ದಾಟಿಲ್ಲ ಎಂದು ಎಲ್ಲ ಪಕ್ಷಗಳವರು ಹೇಳಿದರು. ಇವತ್ತು ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಸುಮಾರು 78 ಮೈನ್‌ಗಳ ಬಗ್ಗೆ ಸನ್ಮಾನ್ಯ ಲೋಕಾಯುಕ್ತರು ಪ್ರಸ್ತಾಪಿಸಿದ್ದಾರೆ. ಕುಮಾರಸ್ವಾಮಿಯವರು ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಓಬಳಾಪುರ ಮೈನಿಂಗ್ ಕಂಪನಿಯಿಂದ ಒತ್ತುವರಿಯಾಗಿದೆ ಎಂದೆಲ್ಲಾ ರಿಪೋರ್ಟ್‌ನಲ್ಲಿ ಇದೆ ಎಂದು ಹೇಳಿದರು. ಎಲ್ಲಿ ಹೇಳಿದ್ದಾರೆ? ಲೋಕಾಯುಕ್ತರ ರಿಪೋರ್ಟ್ ಅನ್ನು ತಾವು ಓದಿರುವಿರಾ? 1700 ಪುಟಗಳ ಲೋಕಾಯುಕ್ತ ವರದಿಯಲ್ಲಿ ನಮ್ಮ ಹೆಸರುಗಳಾಗಲೀ, ನಮ್ಮ ಸಂಸ್ಥೆಯ ಹೆಸರಾಗಲೀ ಎಲ್ಲಿಯೂ ಇಲ್ಲ. ಅವರು ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಹೇಳಿರುವಂಥ ಒಂದೇ ಒಂದು ವಿಷಯವನ್ನು ನಾನು ತಮಗೆ ತಿಳಿಸುತ್ತೇನೆ. "Requirement of a joint survey of inter state border between Karnataka and Andhra Pradesh by the Government of India" ಎಂದು ಹೇಳಿದ್ದಾರೆ.

ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ವಿಧಾನ ಪರಿಷತ್ತಿನಲ್ಲಿ ಹೇಳಿದರು, ಕರ್ನಾಟಕ ರಾಜ್ಯ ಸರ್ಕಾರದ ಕಡೆಯಿಂದ ಕೇಂದ್ರ ಸರ್ಕಾರಕ್ಕೆ, ಗಡಿ ಒತ್ತುವರಿ ವಿಚಾರದಲ್ಲಿ ಜಂಟಿ ಸಮೀಕ್ಷೆ ಮಾಡಲಿಕ್ಕೆ ಕರ್ನಾಟಕ ರಾಜ್ಯದಿಂದ ಯಾವುದೇ ರೀತಿಯ ತೊಂದರೆಯಿಲ್ಲ. ಈಗಾಗಲೇ ಎರಡು ಲೆಟರ್‌ಗಳನ್ನು ಕಳುಹಿಸಿದ್ದೇವೆ. ಇವತ್ತು ಸರ್ವೆ ಮಾಡಲಿ, ಎಲ್ಲರೂ ಬನ್ನಿ ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿ ಇವತ್ತು ಯಾರಾದರೂ ಒತ್ತುವರಿ ಮಾಡಿದ್ದಾರೆಯೇ ಎನ್ನುವುದು ಇವತ್ತು ಇಡೀ ನಮ್ಮ ರಾಜ್ಯಕ್ಕೆ ಗೊತ್ತಾಗಬೇಕಾಗಿರುವಂಥ ವಿಚಾರವಾಗಿದೆ. ಇವತ್ತು ಏನಾಗಿದೆ ಎಂದರೆ, ಲೋಕಾಯುಕ್ತರ ರಿಪೋರ್ಟ್‌ನಿಂದ ಅವರ ಕುತ್ತಿಗೆಗೆ ಬಂದಿದೆ. ಇಡೀ ಮೈನಿಂಗ್ ಸೆಕ್ಟಾರ್‌ನಲ್ಲಿರುವಂಥ 75-80% ವ್ಯಕ್ತಿಗಳೆಲ್ಲರೂ ಅವರಿಗೆ ಸಂಬಂಧಪಟ್ಟಂಥ ವ್ಯಕ್ತಿಗಳೇ ಆಗಿದ್ದಾರೆ. ಹೀಗಾಗಿ, ಇವತ್ತು ಅದನ್ನು ದಾರಿ ತಪ್ಪಿಸುವ ರೀತಿಯಲ್ಲಿ, ವಿಷಯಾಂತರ ಮಾಡಬೇಕು ಎಂದು ಹೇಳಿ ನಮ್ಮ ಕಡೆಗೆ ಬೆರಳು ತೋರಿಸುವುದು ಬೇಡ. ನಾನು ಹೇಳುತ್ತಿದ್ದೇನೆ, ತಾವೆಲ್ಲರೂ ಸಿದ್ಧವಾಗಿದ್ದರೆ, ಎಲ್ಲರೂ ಬನ್ನಿ, ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲವನ್ನೂ ಸರ್ವೆ ಮಾಡಿಸೋಣ.

ಶ್ರೀ ಸೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ಗಡಿ ಒತ್ತುವರಿಯಾಗಿದೆಯೇ, ಇಲ್ಲವೇ ಎನ್ನುವುದನ್ನು ಮಾನ್ಯ ಉಸ್ತುವಾರಿ ಸಚಿವರು ಅವರ ಉತ್ತರದಲಿ ಹೇಳಬೇಕು. ಗಡಿ ಒತ್ತುವರಿಯಾಗಿದೆಯೇ, ಇಲ್ಲವೇ ಎನ್ನುವುದನ್ನು ಹೇಳಲಿ, ಅದು ಸದನಕ್ಕೂ ಗೊತ್ತಾಗಲಿ. ಈ ಬಗ್ಗೆ ದಯವಿಟ್ಟು ಬೆಳಕನ್ನು ಚೆಲ್ಲಿ. ಅವರು ಬಳ್ಳಾರಿಯಲ್ಲಿಯೇ ಹುಟ್ಟಿ ಬೆಳೆದಂಥವರು. ನಮ್ಮ ಕರ್ನಾಟಕದ ಗಡಿ ಒತ್ತುವರಿಯಾಗಿದೆಯೇ, ಇಲ್ಲವೇ ಎನ್ನುವ ಬಗ್ಗೆ ದಯವಿಟ್ಟು ಮಾಹಿತಿಯನ್ನು ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತಂದವರು ನಾವು. ಆದರೆ ಇವರಿಬ್ಬರದ್ದನ್ನೇ ಕೇಳುತ್ತಿದ್ದೇವೆ. ಅವರು ಒಂದು ವಿಷಯವನ್ನು ಶುರು ಮಾಡಿದರು.

ಶ್ರೀ ಜಿ. ಜನಾರ್ಧನ ರೆಡ್ಡಿ :- ನನ್ನ ಮಾತು ಇನ್ನೂ ಮುಗಿದಿಲ್ಲ, ಇನ್ನು ಹತ್ತು ಸೆಕೆಂಡುಗಳಲ್ಲಿ ಮುಗಿಸಿಬಿಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು :- ನಾವೂ ಸಹಿ ಹಾಕಿದ್ದೇವೆ, ದಯವಿಟ್ಟು ಅವಕಾಶ ಕೊಡಿ. ಆಮೇಲೆ ಉತ್ತರ ಕೊಡಲಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ನಾನು ಇನ್ನೂ ಮುಗಿಸಿಲ್ಲ, ಇನ್ನು ಹತ್ತು ಸೆಕೆಂಡುಗಳಲ್ಲಿ ಮುಗಿಸಿ ಬಿಡುತ್ತೇನೆ.

ಅಧ್ಯಕ್ಷರು :- ಆಯಿತು, ಮುಗಿಸಿಬಿಡಿ.

ಶ್ರೀ ಟಿ.ಬಿ. ಜಯಚಂದ್ರ :- ನಾನು ಕೆಲವು ವಿಚಾರಗಳನ್ನು ಹೇಳುತ್ತೇನೆ. ಏನೆಂದರೆ, ಇವರು ಅವರ ಮನೆಗೆ ಹೋದರು. Bed roomಗೆ ಕರೆದುಕೊಂಡು ಹೋದವರು ನೀವು. ಆ bed roomನಲ್ಲಿ ಏನಾಯಿತು ಎನ್ನುವುದು ಗೊತ್ತಾಗಲಿಲ್ಲ. 150 ಕೋಟಿ ರೂಪಾಯಿ ಲಂಚದ ಪ್ರಕರಣ full benchನಲ್ಲಿ hear ಆಗಬೇಕು ಎಂದು High Court single judge ಹೇಳಿದರು, ಆಮೇಲೆ Supreme Courtಗೆ ಹೋದೆ ಎಂದು ಹೇಳಿದರು. High Courtನಲ್ಲೂ ಕೂಡ ಅದನ್ನು exhaust ಮಾಡಬಹುದಾಗಿತ್ತು. Supreme Court ಗೆ ಏಕೆ ಹೋದಿರಿ? ಇದು ನಮಗೆ ಗೊತ್ತಾಗಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಜಡ್ಜ್‌ನ ಹೆಸರನ್ನೇ ಇಲ್ಲಿ ತಂದುಬಿಟ್ಟರು. ಆ ಜಡ್ಜ್ ಮನೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದ ಮೇಲೆ, ಜಡ್ಜ್ ಜೊತೆ ಏನೇನು ಚರ್ಚೆ ಮಾಡಿದರು? ಜಡ್ಜ್ ಹೆಸರನ್ನು ಈ ಸಭೆಗೆ ತಂದರು. ಜಡ್ಜ್ ತೀರ್ಮಾನ ಕೊಟ್ಟುಬಿಟ್ಟರು, ಇದು ದೇಶಕ್ಕೆ, ವಿದೇಶಗಳಿಗೆ ಲಂಚ ಕೊಡತಕ್ಕಂಥ ಸಬ್ಜೆಕ್ಟ್ ಎಂದು ಜಡ್ಜೇ ಹೇಳಿದ್ದಾರೆ ಎಂದು ಹೇಳಿದರು. ಯಾವ ಸಬ್ಜೆಕ್ಟನ್ನು ಇಲ್ಲಿ ತರಬೇಕು ಎನ್ನುವುದು ಗೊತ್ತಿಲ್ಲ. ಜಡ್ಜ್ ಹೆಸರನ್ನು ಇಲ್ಲಿ ಅನೌನ್ಸ್ ಮಾಡುತ್ತಾರೆ ಎಂದರೆ, ಅವರು ಹೀಗೆ ಹೇಳಿದ್ದಾರೆ ಎಂದು ಹೇಳುತ್ತಾರೆಂದರೆ, ನೀವು ಅದನ್ನು ರೆಕಾರ್ಡ್ ಮಾಡುವುದಕ್ಕೆ ಬಿಟ್ಟಿರಲ್ಲ ಅಧ್ಯಕ್ಷರೆ.

ಅಧ್ಯಕ್ಷರು :- ಅದನ್ನು ಈಗ ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಅದು ಈಗಾಗಲೇ ರೆಕಾರ್ಡ್‌ಗೆ ಹೋಗಿದೆ. ದಯಮಾಡಿ ಅದನ್ನು ತೆಗೆಸುವಂಥಾದ್ದನ್ನು ನೀವು ಮಾಡಬೇಡಿ. ನೀವು ಸಭಾಧ್ಯಕ್ಷರಿದ್ದೀರಿ, ಸಭಾಧ್ಯಕ್ಷರ ಕೆಲಸ ಮಾಡಿ.

ಅಧ್ಯಕ್ಷರು :- ಒಂದು ನಿಮಿಷ, ಅವರನ್ನು ಕ್ಲಿಯರ್ ಮಾಡಿ ಎಂದು ಹೇಳಿ ಬಿಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳಿದ್ದಾರೆ ಬಿಡಿ. ನ್ಯಾಯಾಧೀಶರು ನನ್ನ ಜೊತೆ ಮಾತನಾಡಿದ್ದಾರೆ, ಇಡೀ ರಾಷ್ಟ್ರದ ಜನತೆಗೆ ಗೊತ್ತಾಗಬೇಕು, ನಾನು ಸುಪ್ರೀಂ ಕೋರ್ಟ್‌ಗೆ ಹೋದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು :- High Courtನ ತೀರ್ಪಿನಲ್ಲಿ ಆ ರೀತಿ observation ಮಾಡಿದ್ದಾರೋ, ಅಥವಾ personally ಮಾತನಾಡಿದ್ದಾರೋ ಎನ್ನುವುದನ್ನು ಅವರು ಹೇಳಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅಧ್ಯಕ್ಷರೆ, ದಯವಿಟ್ಟು ಕಡತ ತೆಗೆಸಿ, ಏನು ರೆಕಾರ್ಡ್ ಆಗಿದೆ ಎಂದು ತಿಳಿಯುತ್ತದೆ.

ಅಧ್ಯಕ್ಷರು :- ಜನಾರ್ಧನ ರೆಡ್ಡಿಯವರು ಹೇಳಬೇಕು, High Courtನಲ್ಲಿ ತೀರ್ಮಾನವಾದಂಥ ಸಂದರ್ಭದಲ್ಲಿ ಅದನ್ನು observation ಮಾಡಿದ್ದಾರೋ ಅಥವಾ ವೈಯಕ್ತಿಕವಾಗಿ ಮಾತನಾಡಿದರೋ ಎನ್ನುವುದನ್ನು ಹೇಳಲಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಜಸ್ಟೀಸ್ ರಮೇಶ್ ಎನ್ನುವಂಥ ನ್ಯಾಯಮೂರ್ತಿಗಳು ಅವರೇ ಆರ್ಡರೇ ಮಾಡಿದ್ದಾರೆ.

ಅಧ್ಯಕ್ಷರು :- Order ಮಾಡಿದ್ದಾರೆಯೇ? Orderನಲ್ಲಿ ಆ ರೀತಿ observation ಇದೆಯೇ?

ಶ್ರೀ ಜಿ. ಜನಾರ್ಧನ ರೆಡ್ಡಿ :- Orderನಲ್ಲಿ ಈ observation ಮಾಡಿದ್ದಾರೆ. ಇದು ಬಹಳ ಗಂಭೀರವಾದಂಥ ಒಂದು ವಿಚಾರ, ಇದನ್ನು ಪೂರ್ಣ ಪ್ರಮಾಣದ ಬೆಂಚ್‌ಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :- ನಿಮಗೆ ಆ ಬೆಂಚ್ ಮೇಲೆ ನಂಬಿಕೆಯಿಲ್ಲ. ಹೈಕೋರ್ಟ್ ಜಡ್ಜ್ ಹೇಳಿದ್ದಾರೆ, ಅದಕ್ಕೋಸ್ಕರ ಸುಪ್ರೀಂ ಕೊರ್ಟಿಗೆ ಹೋದೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರೇನು ಮಾತನಾಡಿದ್ದಾರೆಂದು ಹಳೆಯ records ತೆಗೆಸಿ ನೋಡಿ.

ಅಧ್ಯಕ್ಷರು :- ತೆಗೆಸಿ ನೋಡುತ್ತೇನೆ.

ಶ್ರೀ ಜಿ. ಜನಾರ್ಧನ ರೆಡ್ಡಿ :- ನಾನು ಸ್ಪಷ್ಟವಾಗಿ ಹೇಳಿದ್ದು ಅದೇ ಮಾತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಓಬಳಾಪುರಂ ಮೈನಿಂಗ್‌ನಲ್ಲಿ ಆಂಧ್ರ ಸರ್ಕಾರದವರು ಅವರಿಗೆ ಎಷ್ಟು ಲಕ್ಷ ಟನ್ ತೆಗೆಯಲಿಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ, ಈಗ ಎಷ್ಟು ಲಕ್ಷ ಟನ್ ಸಾಗಿಸಿದ್ದಾರೆ, ಅದರ ಬಗ್ಗೆ ಸದನಕ್ಕೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಶ್ರೀ ಟಿ.ಬಿ. ಜಯಚಂದ್ರ :- ಅದೇನಾಗಿದೆಯೆಂದರೆ, ರೇವಣ್ಣನವರು ಅವರ ಬೆಡ್‌ರೂಮಿಗೆ ಹೋಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ಇಲ್ಲ ಸ್ವಾಮಿ ನಾನು ಯಾವತ್ತೂ ಅವರ ಬೆಡ್‌ರೂಮಿಗೆ ಹೋಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನೀವು ಅವರನ್ನು ಕರೆದುಕೊಂಡು ಹೋಗಿದ್ದರೆ ಇತ್ಯರ್ಥವಾಗಿಬಿಡುತ್ತಿತ್ತು.

ಶ್ರೀ ಹೆಚ್.ಡಿ. ರೇವಣ್ಣ :- ಇದು ಕಡತಕ್ಕೆ ಹೋಗುವುದು ಬೇಡ. ಯಾರೇ ಗಣಿ ಧಣಿ ದೊರೆಗಳ ಬೆಡ್‌ರೂಮಿಗೆ ಹೋಗುವ ಅಭ್ಯಾಸವಿಟ್ಟುಕೊಂಡಿಲ್ಲ ಅಥವಾ Contractors ಬೆಡ್‌ರೂಮಿಗೆ ಹೋಗಿಲ್ಲ ಸ್ವಾಮಿ.

ಶ್ರೀ ಟಿ.ಬಿ. ಜಯಚಂದ್ರ :- ಸರ್ಕಾರದ ಮಂತ್ರಿಗಳು ಅಧಿಕೃತವಾದ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರೊಬ್ಬರಲ್ಲ it is the joint responsibility of the Cabinet and as the Minister he is replying to the allegations also. ಆ connection ನಲ್ಲಿ, CBI ಗೆ refer ಆಗಬೇಕೆಂದು ನಾನು ಮನವಿ ಮಾಡಿಕೊಂಡಿದ್ದೆ, High Court ನವರು ಈ ತರಹ ಮಾಡಿದರು, U.L. Bhat Commission ನವರು ಕೂಡ CBI ಗೆ refer ಆಗಬೇಕೆನ್ನುವ ಮಾತನ್ನು ಹೇಳಿದರೆಂದು ಅವರೇ ಹೇಳಿದರು. ಏಕೆಂದರೆ, ಅವರು ಮಂತ್ರಿಯಾಗದೇ ಇದ್ದಾಗ request ಮಾಡಿದ್ದರು. ಈಗ ಅವರು ಮಂತ್ರಿಯಾಗಿದ್ದಾರೆ. ಸರ್ಕಾರದಿಂದ ಹೇಳಿಕೆ ಕೊಟ್ಟಿದ್ದಾರೆ. CBI ಗೆ ಒಪ್ಪಿಸಿದರೆ ಬಹುಶ: ಎಲ್ಲರೂ ಒಪ್ಪಿಕೊಂಡ ಹಾಗಾಗುತ್ತದೆ. ನೀವೂ ಒಪ್ಪುತ್ತೀರಿ, ಅವರೂ ಒಪ್ಪುತ್ತಾರೆ, ನಾವೂ ಒಪ್ಪುತ್ತೇವೆ. ಹೀಗಾಗಿ, ಚರ್ಚೆ ಏತಕ್ಕೆ ಬೇಕು? CBI ಗೆ ವಹಿಸಿಬಿಡಿ. ಅಲ್ಲಿಗೆ ಇದು ಮುಗಿದುಹೋಗುತ್ತದೆ. ಬೇರೆ business ಆದರೂ ತೆಗೆದುಕೊಳ್ಳಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- Supreme Court ನಿಂದ ಒಂದು ಬಾರಿ ಛೀಮಾರಿ ಹಾಕಿಸಿಕೊಂಡಿದ್ದಾರೆ. ಇದರ ಹಿಂದೆ ಯಾರ್‍ಯಾರಿದ್ದಾರೆ,

ಇದೆಲ್ಲ ಇಲ್ಲಿ ತರಬೇಕಾಗಿಲ್ಲವೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿರುವುದನ್ನು ಇಲ್ಲಿಟ್ಟಿದ್ದೇನೆ, ಅದನ್ನು ತಮಗೆ ಕೊಡುತ್ತೇನೆ. ಇವರು ನಮ್ಮ ಮೇಲೆ ಏನು ದೊಡ್ಡ ಕತೆ ಮಾಡುತ್ತೇವೆಂದು ಹೊರಟದ್ದಾರೆ. . . .

ಶ್ರೀ ಜಿ. ಜನಾರ್ಧನ ರೆಡ್ಡಿ :- Supreme Court ನಲ್ಲಿ ಅವರಿಗೆ ಎಷ್ಟು ಬಾರಿ ನನ್ನ ವಿಚಾರದಲ್ಲಿಯೂ ಛೀಮಾರಿ ಆಗಿದೆ ಎನ್ನುವುದನ್ನು ಕೂಡ ನಾನೂ ತೋರಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನನ್ನ ವಿಷಯದಲ್ಲೇನೂ ಛೀಮಾರಿ ಆಗಿಲ್ಲ. ನನ್ನ ವಿಷಯದಲ್ಲಿ ಛೀಮಾರಿ ಏಕೆ ಹಾಕುತ್ತಾರೆ?

ಶ್ರೀ ಜಿ. ಜನಾರ್ಧನ ರೆಡ್ಡಿ :- ಅವರು ನನ್ನ ಮೇಲೊಂದು allegations ಮಾಡಿದಾಗ Supreme Court ಎಷ್ಟು ಗಂಭೀರವಾಗಿ ತೆಗೆದುಕೊಂಡು ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿಯವರು ಯಾವ ರೀತಿ ನಡೆದುಕೊಂಡಿದ್ದೀರಿ ಎನ್ನುವುದನ್ನು ಹೇಳಿರುವ ಬಗ್ಗೆ ಕೂಡ Judgment copy ಯನ್ನು ನಾನು ನಾಳೆ ಬೆಳಗ್ಗೆ ತಮಗೆ ಸಲ್ಲಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಹೇಳುವುದನ್ನು ಸ್ವಲ್ಪ ಕೇಳಿ. ಕಸುಪ್ರೀಂ ಕೋರ್ಟಿನಿಂದ ಅರ್ಜಿ ವಜಾಕಿ ಎಂದು ಪತ್ರಿಕೆಯಲ್ಲಿ ಬಂದಿದೆ. ಅದಿಲ್ಲಿಯೇ ಇದೆ. ಮಾಡಿ, ನಾನು ಹೆದರುತ್ತೇನೆಯೇ? ನಾನು ಇಲ್ಲಿಯೇ ಇರುತ್ತೇನೆ.

ಶ್ರೀ ಜಿ. ಜನಾರ್ದನರೆಡ್ಡಿ :- Judgment ಅನ್ನು ಯಾವುದಕ್ಕೆ reserve ಮಾಡಿದ್ದಾರೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಭಟ್‌ರವರ ಕಮಿಷನ್ ಏನು ಮಾಡಿದೆವು ಎನ್ನುವ ಬಗ್ಗೆ ಅವರೊಂದು ಮಾತು ಹೇಳಿದ್ದಾರೆ. ನಮ್ಮ ಸಚಿವ ಸಂಪುಟದಲ್ಲಿ ಅವರಿಗೆ 3 ತಿಂಗಳಲ್ಲಿ ಪ್ರಾಥಮಿಕ ಹಂತದ ರಿಪೋರ್ಟ್, 6 ತಿಂಗಳಲ್ಲಿ ಅಂತಿಮ ಹಂತದ ರಿಪೋರ್ಟ್ ಕೊಡಬೇಕೆಂದು guidelines ಕೊಟ್ಟಿದ್ದೆವು. ಅವರು 9 ತಿಂಗಳಾದರೂ ಕೆಲಸವನ್ನೇ ಪ್ರಾರಂಭ ಮಾಡಲಿಲ್ಲ. ಆಮೇಲೆ, ಇವರೇನು ನನ್ನ ಮೇಲೆ 150 ಕೋಟಿ ರೂಪಾಯಿಗಳು ಲಂಚ ಪಡೆದರೆಂದು ಹೇಳಿದರಲ್ಲ, ಅಲ್ಲಿ Judge ಮುಂದೆ ಹೋಗಲಿಕ್ಕೆ ಯಾರೂ ತಯಾರಾಗಿರಲಿಲ್ಲ. ನ್ಯಾಯಾಂಗ ತನಿಖೆಗೆ ಹೊರಟಾಗ ಯಾರೂ ಅದರ ಮುಂದೆ ಹೋಗಲಿಲ್ಲ. ಸರ್ಕಾರದಿಂದ ಎಲ್ಲಾ

ಸೌಲಭ್ಯವನ್ನೂ ಕೊಟ್ಟಿದ್ದೆವು. ಸರ್ಕಾರ ಸೌಲಭ್ಯ ಕೊಡಲಿಲ್ಲವೆಂದು ಅವರು ಹೇಳಿದರು. ಎಲ್ಲಾ ಸೌಲಭ್ಯ ಕೊಟ್ಟರೂ ಯಾರೂ ಅಲ್ಲಿ ಹೋಗಲಿಲ್ಲ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾಧ್ಯಮದ ಮುಂದೆ ಸನ್ಮಾನ್ಯ ಯು.ಎಲ್. ಭಟ್ ನ್ಯಾಯಮೂರ್ತಿಗಳೇ ಬಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಏನಿದೆ ಎಂದು ನಿಮ್ಮ ಸರ್ಕಾರದ ಕಡತ ತೆಗೆದು ನೋಡಿ.

ಶ್ರೀ ಜಿ. ಜನಾರ್ಧನ ರೆಡ್ಡಿ :- ಮಾಧ್ಯಮದ ಮುಂದೆ ಸನ್ಮಾನ್ಯ ಯು.ಎಲ್. ಭಟ್ ಕಮಿಷನ್‌ರವರು ಬಂದು ಇವರ ಕಡೆಯಿಂದ ಸಹಕಾರ ಸಿಗಲಿಲ್ಲ, ನಾನು ಬಿಡುತ್ತಿದ್ದೇನೆಂದು ನೇರವಾಗಿ ಹೇಳಿದರು.

(ಗೊಂದಲ)

ಶ್ರೀ ಬಿ.ಕೆ. ಸಂಗಮೇಶ್ವರ್ :- ಮಾಜಿ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು, ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ. . .

(ಗೊಂದಲ)

ಅಧ್ಯಕ್ಷರು :- ನಿಮಗೆ permission ಕೊಟ್ಟಿಲ್ಲ.

ಶ್ರೀ ಬಿ.ಕೆ. ಸಂಗಮೇಶ್ವರ್ :- ಅವರಿಗೆ ಕೊಟ್ಟಿದ್ದೇನೆ, ಇವರಿಗೆ ಕೊಟ್ಟಿದ್ದೇನೆಂದು ಹೇಳಿದರು, ಸಂತೋಷ. ಆದರೆ, ನನ್ನ ಕ್ಷೇತ್ರದ VISL ಕಾರ್ಖಾನೆಗೆ ಮೈನ್ಸ್ ಕೊಡಿ ಎಂದು ಹೇಳಿದಾಗ ನೀವು ಕಾಂಗ್ರೆಸ್‌ನವರ ಜೊತೆಗೆ ಬಂದರೆ ಮೈನ್ಸ್ ಕೊಡುವುದಿಲ್ಲವೆಂದು ಅವರು ಕಳುಹಿಸಿದರು. ಈಗ ಈ ತರಹ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ :- ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ನಿಯಮ 69ರ ಅಡಿಯಲ್ಲಿ ಏನು ಚರ್ಚೆಯಾಗುತ್ತಿದೆ ಇದರಲ್ಲಿ ನನಗೆ ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದಕ್ಕೆ ನಾನು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ವಿರೋಧ ಪಕ್ಷದ ಉಪ ನಾಯಕರಾದಂಥ ಸನ್ಮಾನ್ಯ ಟಿ.ಬಿ. ಜಯಚಂದ್ರರವರ ದೀರ್ಘವಾದ ಮಾತುಗಳನ್ನು

ಈ ಸದನದಲ್ಲಿ ಆಡಿದ್ದನ್ನು ನಾನು ಕೇಳಿದ್ದೇನೆ. ಹಾಗೆಯೇ, ರಾಜ್ಯದ ಮಾಜಿ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು ಆಡಿದ ಮಾತುಗಳನ್ನು ಸಹ ಕೇಳಿದೆ. ಜಯಚಂದ್ರರವರು ಮಾತನಾಡುತ್ತಾ, ಗಣಿಗಾರಿಕೆಯಿಂದ ಪರಿಸರದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ, ಜನರ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ, ನೀರಿನ ಮೂಲಗಳು ಹೇಗೆ ಬತ್ತಿ ಹೋಗಿವೆ, ಹಳ್ಳಿ ಜನರ ಬದುಕು ಹೇಗೆ ಸಂಕಷ್ಟಕ್ಕೆ ಸಿಲುಕಿದೆ, ಯಾವ ಪರಿಸ್ಥಿತಿಯಲ್ಲಿ ಜನ ಇವತ್ತು ದುಸ್ಥಿತಿಯಲ್ಲಿ ಬದುಕುತ್ತಿದ್ದಾರೆನ್ನುವುದನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹಾಗೆಯೇ, ಮಾಜಿ ಮುಖ್ಯಮಂತ್ರಿಯವರು ಕೂಡ ಮಾತನಾಡುತ್ತಾ, ಈ ಹಗರಣಗಳ ಬಗ್ಗೆ ಬೆಳಕು ಚೆಲ್ಲುವಂಥ ಕೆಲಸ ಮಾಡಿದರು. ಈ ಅಕ್ರಮ ಗಣಿಗಾರಿಕೆಯೆನ್ನುವ ಗುಡಿ ಕಟ್ಟಿ, ಅದರೊಳಗೆ ಅಕ್ರಮ ಗಣಿಗಾರಿಕೆ ಮಾಡತಕ್ಕಂಥವರನ್ನು ಗುಡಿಯೊಳಗೆ ದೇವರಾಗಿ ಇಟ್ಟು, ಅಲ್ಲಿ ತಟ್ಟೆ ಕಾಣಿಕೆ, ಮಂಗಳಾರತಿ, ಡಬ್ಬಿ, ಗಡಿಗೆ ಎಲ್ಲಾ ಇಟ್ಟು ಪೂಜಾರಿಯಾಗಿ ಕೆಲಸ ಮಾಡಿದವರು ಈ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜನತಾದಳ. ಅಲ್ಲಿ ಆ ಗುಡಿ ಕಟ್ಟಿ (ಗೊಂದಲ) ನಾನು ಹೇಳುವುದಕ್ಕೆ ಅವಕಾಶವೇ ಕೊಡುತ್ತಿಲ್ಲವಲ್ಲ. (ಗೊಂದಲ) "ಇದ್ದದ್ದು ಇದ್ದಹಂಗೆ ಹೇಳಿದರೆ ಅದೇನೋ ಮಾಡಿದರು" ಎನ್ನುವ ಹಾಗೆ ಇವರೇಕೆ ಹೀಗೆ ಆಡುತ್ತಾರೆ? ನಾನು ಇರುವ ಸತ್ಯ ಹೇಳುತ್ತಿದ್ದೇನೆ. ನಾನು ದೇವರಾಣೆ ಸುಳ್ಳು ಹೇಳುತ್ತಿಲ್ಲ.

(ಗೊಂದಲ)

ಶ್ರೀ ನೆ.ಲ ನರೇಂದ್ರಬಾಬು :- ಕರ್ನಾಟಕದ ಗಡಿ ಬಗ್ಗೆ ಮಾತನಾಡಿ. ಮೊದಲು ಗಣಿ ಉಳಿಸಬೇಕು. ಪೂಜಾರಿ ಕೆಲಸ ಆಮೇಲೆ ಮಾಡಿ.

ಶ್ರೀ ಸಿ.ಟಿ. ರವಿ :- ಇವರು ಇಷ್ಟು ಏಕೆ ಬಿ.ಪಿ. ರೈಸ್ ಮಾಡಿಕೊಳ್ಳುತ್ತಾರೆ? ನಾನು ಸುಳ್ಳು ಹೇಳುತ್ತಿಲ್ಲ, ದೇವರಾಣೆ ಸತ್ಯ ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ಗಣಿಗಾರಿಕೆ ಗುತ್ತಿಗೆಗೆ ಅನುಮತಿ ನೀಡಿದವರಾರು? ಅಕ್ರಮ ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟವರಾರು? ಗಣಿಗಾರಿಕೆ ಕಪ್ಪವನ್ನು ತೆಗೆದುಕೊಂಡು ಅಕ್ರಮಗಳನ್ನು ಮುಚ್ಚಿಹಾಕತಕ್ಕಂಥ.. . . (ಗೊಂದಲ)

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) :- ನನಗೂ ಮಾತನಾಡಲು ಹಕ್ಕಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ :- ಪಾಟೀಲರಿಗೆ, ಎಲ್ಲಿ ನನ್ನ ಬುಡಕ್ಕೇ ಬಂದುಬಿಡುತ್ತದೆಯೋ ಎನ್ನುವ ಭಯ. ನಾನು ದೇವರಾಣೆ ನಿಮ್ಮ ಬುಡಕ್ಕೆ ಬರುವುದಿಲ್ಲ. ನಿಮ್ಮ ಬಗ್ಗೆ ನಾನು ಏನೂ ಹೇಳುವುದಿಲ್ಲ. ಸಣ್ಣ ಮೀನಿನ ಬಗ್ಗೆ ನಾನು ಯೋಚನೆಯೇ ಮಾಡುವುದಿಲ್ಲ. ನಾನು ದೊಡ್ಡ ಮೀನನ್ನು ಹಿಡಿಯುವುದಕ್ಕೆ ಹೊರಟಿದ್ದೇನೆ. ನೀವು ಚಿಂತೆ ಮಾಡಬೇಡಿ. ಯಾವ ಕಾರಣಕ್ಕೂ ಪಾಟೀಲರ ಬುಡಕ್ಕೆ ಬರುವುದಿಲ್ಲ. ದೊಡ್ಡ ಮೀನು ತಪ್ಪಿಸಿಕೊಳ್ಳಬಾರದೆನ್ನುವುದಷ್ಟಕ್ಕೇ ನನ್ನ ಪ್ರಯತ್ನ. ಗುಡಿ ಕಟ್ಟಿ, ಮಂಗಳಾರತಿ ತಟ್ಟೆ ಇಟ್ಟು, ಡಬ್ಬಿ, ಗಡಿಗೆ ಇಟ್ಟು, ಡಬ್ಬಿ, ಗಡಿಗೆಗೂ ದುಡ್ಡು ಹಾಕಿಸಿಕೊಂಡು, ಮಂಗಳಾರತಿ ತಟ್ಟೆಗೂ ದುಡ್ಡು ಹಾಕಿಸಿಕೊಂಡು, ವರ ಕೊಟ್ಟುಕೊಂಡು, ಅಕ್ರಮ ಗಣಿಗಾರಿಕೆಗೆ ರಕ್ಷಣೆ ಮಾಡಿದವರು ಈಗ ಅಕ್ರಮ ಗಣಿಗಾರಿಕೆ ಬಗ್ಗೆ ಮಾತನಾಡುತ್ತಿದ್ದರಲ್ಲಾ, ಈಗೇನಾದರೂ ತಪ್ಪೊಪ್ಪಿಗೆ ಹೇಳಿಕೆ ಕೊಡುತ್ತಿದ್ದಾರೇನೋ ಎಂದು ನನಗೆ ಅನಿಸುತ್ತಿದೆ. ಪ್ರಾಮಾಣಿಕವಾಗಿ ತಾವು ತಮ್ಮೆಲ್ಲ ಅಕ್ರಮಗಳಿಗೆ ಈ ಸದನದ ಮುಂದೆ ತಪ್ಪೊಪ್ಪಿಗೆ ಹೇಳುತ್ತಿದ್ದಾರೇನೋ ಎಂದು ನನಗೆ ಸಂತೋಷವಾಯಿತು. ಬಹುಶ: ಈ ಎರಡೂ ಪಕ್ಷಗಳ ಮುಖಂಡರುಗಳು. . . . (ಗೊಂದಲ) ಶಿವಲಿಂಗೇಗೌಡರೆ, ಇದು ಜಿಲ್ಲಾ ಪಂಚಾಯಿತಿ ಅಲ್ಲವೆಂದು ನೀವೇ ಹೇಳಿದ್ದಿರಿ. ಏಕೋ ಜಿಲ್ಲಾಪಂಚಾಯಿತಿಯಲ್ಲಿ ಮಾತನಾಡಿದ ಹಾಗೆ ಮಾತನಾಡಲು ಶುರು ಮಾಡಿದಿರಲ್ಲ. ಅಕ್ರಮ ಗಣಿಗಾರಿಕೆಗೆ ರಕ್ಷಣೆ ಕೊಟ್ಟವರು ಇವತ್ತು ಅಕ್ರಮ ಗಣಿಗಾರಿಕೆಯಲ್ಲಿ ಆಗುತ್ತಿರುವಂಥ ಪರಿಸರದ ಹಾನಿ, ಜನರ ಮೇಲಿನ ಹಾನಿ, ಆರೋಗ್ಯದ ದುಸ್ಥಿತಿ, ಈ ರಾಷ್ಟ್ರೀಯ ಸಂಪತ್ತು ಹೇಗೆ ಲೂಟಿಯಾಗುತ್ತಿದೆ ಈ ಎಲ್ಲಾ ಪ್ರಶ್ನೆಗಳನ್ನೂ ಮುಂದಿಟ್ಟಾಗ ಏನಾದರೂ ಕಾಂಗ್ರೆಸ್ ಈ ಸದನದ ಮುಂದೆ ತಾವು ಮಾಡಿರುವ ತಪ್ಪನ್ನು ಒಪ್ಪಿಕೊಂಡು ಪ್ರಾಯಶ್ಚಿತ್ತ ಆಗಬೇಕೆಂದು ಬಯಸಿದ್ದಾರೋ, ಏನೋ ಎನ್ನುವ ವಿರೋಧ ಪಕ್ಷದ ಉಪನಾಯಕರಾದ ಜಯಚಂದ್ರರವರ ಹೇಳಿಕೆ ಕೇಳಿದ ಮೇಲೆ ಬಹುಶ: ಈ ಎಲ್ಲಾ ಅಕ್ರಮಕ್ಕೆ foundation ಹಾಕಿದ್ದು ಕಾಂಗ್ರೆಸ್ ಪಾರ್ಟಿ. ಏಕೆಂದರೆ, ಈ ರಾಜ್ಯದಲ್ಲಿ ಇದುವರೆಗಿನ ಎಲ್ಲಾ ಗಣಿಗಾರಿಕೆಗಳಿಗೆ ಅನುಮತಿ ನೀಡಿರುವುದು, ಗೊಂದಲ) ನನಗೆ ಅಪರೂಪಕ್ಕೆ ಮಾತನಾಡಲು ಅವಕಾಶ ಸಿಗುವುದು. ನಾನು ಮಾತನಾಡಿ ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ನಮ್ಮ ಕಾಲದಲ್ಲಿ ಆಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆ ತರಹವಿದ್ದರೆ, ನನ್ನನ್ನು ಜೈಲಿಗೆ ಕಳುಹಿಸಬಹುದು.

ಶ್ರೀ ಸಿ.ಟಿ. ರವಿ :- ನಿಮ್ಮ ಕಾಲದಲ್ಲಿ ನೀವಲ್ಲದಿರಬಹುದು, ನಿಮ್ಮ ಪಾರ್ಟಿ ಕಾಲದಲ್ಲಿ ಆಗಿದೆ ಎಂದು ಹೇಳಿದೆ. ಬುದ್ಧಿವಂತರಾಗಿದ್ದರೆ ನೀವೇ ಒಂದು ಗಣಿ ಮಾಡಿಕೊಳ್ಳುತ್ತಿದ್ದಿರಿ. ನೀವು ಅಷ್ಟು ಬುದ್ಧಿವಂತರಲ್ಲ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ :- ಕುಮಾರಸ್ವಾಮಿಯವರು ಈ ಮನೆಯ ಗೌರವಾನ್ವಿತ ಸದಸ್ಯರು. ಇದು ಪ್ರಾರಂಭವಾಗಿದ್ದು 2004ರಲ್ಲಿ. ನಾನು ಮುಖ್ಯಮಂತ್ರಿಯಾದ ಮೇಲೆ ಶುರುವಾಗಿದ್ದು ಇದು ಎನ್ನುವ ಮಾತನ್ನು ಅವರು ಹೇಳಿದರು. ಆಗ ನಾವು ಅಧಿಕಾರದಲ್ಲಿರಲಿಲ್ಲ.

ನಿರಂತರವಾಗಿ ಯಾವುದು ಅಕ್ರಮವಾಗಿ ನಡೆಯುತ್ತಿರುವುದು ಎಂದರೆ ನಮ್ಮ ಕಾಲದಲ್ಲಾಯಿತು ಎನ್ನುವ ಪ್ರಶ್ನೆ ಬಂತು. ನೀವು ಅಧಿಕಾರಕ್ಕೆ ಬಂದು 8 ತಿಂಗಳಾಯಿತಲ್ಲಾ, ಇದನ್ನು ನಿಲ್ಲಿಸುವುದಕ್ಕೆ ಆಯಿತೇ? ಇನ್ನೂ ಜಾಸ್ತಿಯಾಗಿದೆಯಲ್ಲಾ? ನೀವು ಮಾಡಿದ್ದು ಏನು? ನೀವು ಅಧಿಕಾರದಲ್ಲಿ ಇದ್ದೀರಲ್ಲಾ. ಕುಮಾರಸ್ವಾಮಿಯವರು ಆರೋಪ ಮಾಡಿದರು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಹಂಡೆ, ಡಬ್ಬ, ಮಂಗಳಾರತಿ ಕಾಸು ವಿಗ್ರಹದ ಸಮೇತ ಎತ್ತಿಕೊಂಡು ಹೋಗಿಬಿಟ್ಟರು.

ಶ್ರೀ ಸಿ.ಟಿ. ರವಿ :- ತಾವು ಹಿರಿಯ ಸದಸ್ಯರಿದ್ದೀರಿ. ನಾವು ಹೇಳುವ ಮಾತನ್ನು ಕೇಳುವಷ್ಟು ತಾಳ್ಮೆ ಅನುಭವದ ಆಧಾರದ ಮೇಲೆ ತಮಗೆ ಬಂದಿದೆ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ರಾಜ್ಯಕ್ಕೆ ಲಾಭವಾಗಬೇಕು ಎನ್ನುವ ದೃಷ್ಟಿಯಿಂದ ಸತ್ಯಾಂಶ ಹೊರಬರಬೇಕು.

ಶ್ರೀ ಸಿ.ಟಿ. ರವಿ :- ನನಗೆ ತಮ್ಮೆಲ್ಲ ಹೇಳಿಕೆ ಕಂಡಾಗ ಇದು ನಿಮ್ಮೊಬ್ಬರದೇ ತಪ್ಪೊಪ್ಪಿಗೆಯೇ? ಇಡೀ ಕಾಂಗ್ರೆಸ್ ಪಕ್ಷದ ತಪ್ಪೊಪ್ಪಿಗೆಯ ಹೇಳಿಕೆಯೇನೋ ಎಂಬ ಅನುಮಾನವಾಗಿದೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ಸತ್ಯ ನ್ಯಾಯಕ್ಕೆ ಹೊರಟಿದ್ದೀರಲ್ಲಾ, ಸತ್ಯವನ್ನು, ಗಡಿಯನ್ನು ಉಳಿಸುವ ಬಗ್ಗೆ ಮಾತನಾಡುತ್ತೀರಿ ಎಂದು ಇದುವರೆಗೆ ಭಾವಿಸಿದ್ದೆ. (ಗೊಂದಲ) ಚಿಕ್ಕ ವಯಸ್ಸಿನ ಒಬ್ಬ ಶಾಸಕ ಗೆಳೆಯ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ :- ಇದುವರೆಗೆ ಕಬ್ಬಿಣದ ಅದಿರಿಗೆ 178, Manganese ಗೆ 37, ಸುಣ್ಣದ ಕಲ್ಲು ಇತ್ಯಾದಿ ಎಲ್ಲಾ ಸೇರಿ 580 ಗಣಿ ಲೈಸೆನ್ಸ್ ಕೊಟ್ಟಿದೆ. ಈ ಗಣಿ ಲೈಸೆನ್ಸ್ ಕೊಟ್ಟಿರುವುದರೊಳಗೆ ಬಿಜೆಪಿ ಸರ್ಕಾರದ ಪಾಲೆಷ್ಟು? ಯಡಿಯೂರಪ್ಪನವರ ಪಾಲೆಷ್ಟು ಎಂದು ಅವರು ಹೇಳುತ್ತಾರೆಯೇ? ಇಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಗುಡಿಯನ್ನೂ ಕಟ್ಟಲಿಲ್ಲ, ಇವರು ಕಟ್ಟಿದ್ದ ಗುಡಿಯ ಬಾಗಿಲನ್ನೂ ತೆಗೆಯಲಿಲ್ಲ. ನಮ್ಮ ಮೇಲೆ ಹೇಗೆ ಅಕ್ರಮದ ಆರೋಪ ಹೊರಿಸುತ್ತಾರೆ? (ಗೊಂದಲ) ನಾವು ಹೇಳುವುದನ್ನೂ ಕೇಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- Licence ಕೊಡಬಾರದೆಂದು ಇಲ್ಲ. ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶವಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ :- ನೀವು ಈ ವಯಸ್ಸಿನಲ್ಲಿ ಪದೇ ಪದೇ ತಾಳ್ಮೆ ಕಳೆದುಕೊಳ್ಳಬಾರದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- Recommendations ಅನ್ನು ವಾಪಸ್ಸು ತರಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ :- ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು :- ಅವರು yield ಆಗಿಲ್ಲ. ಮಧ್ಯದಲ್ಲಿ ಮಾತನಾಡಬೇಡಿ. ಕುಳಿತುಕೊಳ್ಳಿ,

(ಗೊಂದಲ)

ಶ್ರೀ ಸಿ.ಟಿ. ರವಿ :- ಇವರ ಪಾಪದ ಕೂಸನ್ನು ನಮ್ಮ ಸರ್ಕಾರದ ತಲೆಗೆ ಕಟ್ಟಲಿಕ್ಕೆ ಬಂದರೆ ಅದನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ಪಾಪದ ಕೂಸು ಇವರದೇ ಆಗಿದೆ. ಏಕೆಂದರೆ, ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದ ಕಥೆ ಗೊತ್ತಲ್ಲವೇ. ಅವರು ಕೋತಿ ಇರಬಹುದು, ನಾವು ಮೇಕೆ ಅಲ್ಲ. ನಾವು ಒಪ್ಪುವುದಕ್ಕೆ ತಯಾರಿಲ್ಲ. ರಾಜ್ಯದ ಜನರ ಮುಂದೆ ಅಕ್ರಮ ಯಾವಾಗಿನಿಂದ ಆಗಿದೆ, ಈ ಅಕ್ರಮದ ಪಾಲುದಾರರು ಯಾರ್ಯಾರಾಗಿದ್ದಾರೆ ಎನ್ನುವ ಸತ್ಯ ಗೊತ್ತಾಗಬೇಕು. ಆ ಸತ್ಯ ಗೊತ್ತಾಗಬೇಕೆನ್ನುವ ಹಿನ್ನೆಲೆಯಲ್ಲಿಯೇ ಈ ಚರ್ಚೆ ನಡೆದು ಈ ಚರ್ಚೆ ಮೂಲಕ ಸಾರ್ವಜನಿಕರಿಗೆ ಗೊತ್ತಾಗಬೇಕೆನ್ನುವ ಕಾರಣಕ್ಕೋಸ್ಕರ ನಾನು ಹೇಳಬಯಸುತ್ತೇನೆ. ಇಡೀ ಮೈನಿಂಗ್ ಲೀಸ್ ಕೊಡುವ ಅಧಿಕಾರ ರಾಜ್ಯಸರ್ಕಾರಕ್ಕೆ ಇಲ್ಲ. ನನಗೆ ಗೊತ್ತು. Recommend ಮಾಡುವುದು ರಾಜ್ಯ ಸರ್ಕಾರ. ಅದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಡಬೇಕು. ನಮ್ಮ ಸರ್ಕಾರ ಕಳೆದ 7-8 ತಿಂಗಳ ಹಿಂದೆ ಅಧಿಕಾರಕ್ಕೆ ಬಂದಮೇಲೆ ಎಷ್ಟು file ಗಳನ್ನು ನಾವು recommend ಮಾಡಿದ್ದೇವೆ ಎಂದು ಅವರು ಹೇಳಬೇಕಲ್ಲವೇ? ಸದನದ ಮುಂದೆ ಇಡಬೇಕಲ್ಲವೇ? ಹೇಳಲಿಕ್ಕೆ ಏನೂ ಇಲ್ಲ. ಏಕೆಂದರೆ, ಕಳೆದ 7-8 ತಿಂಗಳ ಅವಧಿಯಲ್ಲಿ ಯಾವೊಂದು file ಅನ್ನೂ ಸಹ ಕೇಂದ್ರ ಸರ್ಕಾರಕ್ಕೆ recommend ಮಾಡಿಲ್ಲ, ಹೊಸ ಗಣಿಗೆ, ಗಣಿ ಗುತ್ತಿಗೆಗೆ ಅನುಮತಿ ಕೊಡುವ ಯಾವುದೇ ಕೆಲಸ ಮಾಡಿಲ್ಲ. ಬದಲಿಗೆ, ಅಕ್ರಮ ಗಣಿಗಾರಿಕೆಯನ್ನು ತಡೆಯುವ ಕೆಲಸ ನಮ್ಮ ಸರ್ಕಾರದ ಅವಧಿಯಲ್ಲಿ ನಡೆಯಿತು. ಅಕ್ರಮ ಗಣಿಗಾರಿಕೆ ತಡೆದಿದ್ದರಿಂದಾಗಿ ಸಂಕಟ ಹೆಚ್ಚಾಗಿ ಈ ಪ್ರಶ್ನೆ ಎತ್ತಿರಬಹುದು. ನಾವು ಯಾವುದಕ್ಕೂ ಇದಕ್ಕೆ ಅವಕಾಶ ಕೊಟ್ಟಿಲ್ಲ. ಇವರು ಗಣಿಯಿಂದ ಏನೇನು ಲೂಟಿಯಾಗುತ್ತಿದೆ, 8 ರೂ. ನಿಂದ 27 ರೂ. ವರೆಗೆ royalty ಇದೆ ಎನ್ನುವ ಇನ್ನೊಂದು ಪ್ರಶ್ನೆಯನ್ನು ಪ್ರಸ್ತಾಪಿಸಿದರು. ಓಬಿರಾಯನ ಕಾಲದ ಗಣಿ royalty 8 ರೂ. ನಿಂದ 27 ರೂ. ಇದೆ. ಆದರೆ, ಅದರಿಂದ ಕನಿಷ್ಟ 1500 ರೂ.ನಿಂದ ಗರಿಷ್ಠ 7000 ರೂ. ವರೆಗೆ ಲಾಭ ಮಾಡಿಕೊಂಡಿದ್ದಾರೆಂದು ಪ್ರಶ್ನೆ ಮಾಡಿದರು. Royalty ಅನ್ನು ಪರಿಷ್ಕರಣೆ ಮಾಡಬೇಕೆಂದು ಹತ್ತಾರು ಬಾರಿ ಪತ್ರ ಬರೆದಿದ್ದೆವು ಎಂದು ಮಾಜಿ ಮುಖ್ಯಮಂತ್ರಿಯವರು ಹೇಳಿದರು. Royalty ಅನ್ನು ಪರಿಷ್ಕರಣೆ ಮಾಡಬೇಕಾದವರು ಯಾರು? ಪರಿಷ್ಕರಣೆ ಮಾಡಿಲ್ಲ, ಏಕೆ? ಎಷ್ಟು ಕಪ್ಪ ತೆಗೆದುಕೊಂಡು ಸುಮ್ಮನಿದ್ದಾರೆಂದು ನಾವು ಕೇಳಬೇಕಲ್ಲವೇ? ನೀವೇಕೆ ಪರಿಷ್ಕರಣೆ ಮಾಡಲಿಲ್ಲ? ಏಕಾಗಿ ಸುಮ್ಮನಿದ್ದೀರಿ? ಒಳ ಕಪ್ಪ ಎಷ್ಟು ಸಿಕ್ಕಿತು? ಕಪ್ಪ

ತೆಗೆದುಕೊಂಡು 8 ರೂ.ನಿಂದ 27 ರೂ. ವರೆಗೆ ಹಳೆಯ royalty ಮುಂದುವರೆದು ರಾಷ್ಟ್ರೀಯ ಸಂಪತ್ತನ್ನು ಲೂಟಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎಂದು ನಾವು ಈ ಸದನದ ಮೂಲಕ ಪ್ರಶ್ನೆ ಮಾಡಬೇಕಲ್ಲವೇ? ಯಾರಾದರೂ ಲೂಟಿ ಹೊಡೆಯಲಿಕ್ಕೆ ಸೃಷ್ಟಿ ಮಾಡಿದ್ದೇ ಈ ಸಂಪತ್ತು? ಇವತ್ತು ರಾಷ್ಟ್ರ ಕಟ್ಟಲಿಕ್ಕೆ ಉಪಯೋಗವಾಗಬೇಕಾದಂಥ ಈ ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಅನುಮತಿ ಮಾಡಿಕೊಟ್ಟವರು ಯಾರು? ಅನಾವಶ್ಯಕವಾಗಿ ಗಣಿ ಗುತ್ತಿಗೆಗೆ ಏಕೆ ಅನುಮತಿ ಕೊಟ್ಟಿರಿ? ಈ ರಾಷ್ಟ್ರಕ್ಕೆ ಉಪಯೋಗ ಆಗುತ್ತದೆಯೇ, ಇಲ್ಲವೇ ಎಂದು ನೋಡಬೇಕಿತ್ತು ತಾನೆ? ಇವತ್ತು ಖಾಸಗಿಯವರು ಬಂಡವಾಳ ಮಾಡಿಕೊಳ್ಳಲಿಕ್ಕೆ ಆ ಮೂಲಕ ಲೂಟಿ ಹೊಡೆಯುವುದಕ್ಕೆ ಅನುಮತಿ ಮಾಡಿಕೊಟ್ಟು ಅದನ್ನು ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ 7-8 ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರದ ತಲೆಗೆ ಕಟ್ಟಲಿಕ್ಕೆ ಹೊರಡುತ್ತೀರಾ? ಇದಕ್ಕೆ ಉತ್ತರ ಕೊಡಬೇಕಲ್ಲವೇ? ಅವರು ಈ ಪ್ರಶ್ನೆಯನ್ನು ಪ್ರಸ್ತಾಪಿಸಲೇ ಇಲ್ಲ. ಜಾಣ ಮರೆವು, ಜಾಣ ಕುರುಡು. ಏಕೆಂದರೆ, ಗೊತ್ತು. ನಾವು ಯಾರಿಗಾದರೂ ಹಗ್ಗ ಬೀಸುವುದಕ್ಕೆ ಹೋದರೆ ಎಲ್ಲಿ ತಮ್ಮ ಕುತ್ತಿಗೆ ಸುತ್ತ ಸುತ್ತಿಕೊಂಡು ಬಿಡುತ್ತದೋ ಎಂದು ಈ ಪ್ರಶ್ನೆಯನ್ನು ಮರೆಮಾಚಿ ಇನ್ನೆಲ್ಲಿಗೋ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತಾರೆ. ಬಹುಶ: ಓಬಳಾಪುರಂ ಮೈನಿಂಗ್ ಲೈಸೆನ್ಸ್ 2003 ರಲ್ಲಿಯೋ, 2004ರಲ್ಲಿಯೋ ಸಿಕ್ಕಿರಬೇಕು. ನನಗೆ ಅದು ಗೊತ್ತಿಲ್ಲ. ಆಂಧ್ರದಲ್ಲೂ ನಮ್ಮ ಪಾರ್ಟಿಯ ಸರ್ಕಾರವಿರಲಿಲ್ಲ. ಕರ್ನಾಟಕದಲ್ಲಿಯೂ ನಮ್ಮ ಪಾರ್ಟಿಯ ಸರ್ಕಾರವಿರಲಿಲ್ಲ. ಆ ಮೈನಿಂಗ್ ಲೈಸೆನ್ಸ್ ಕೊಡಬೇಕಾದರೆ, ಆ digging ಮಾಡಬೇಕಾದರೆ ಇಲ್ಲಿದ್ದವರು ನಿದ್ರೆ ಮಾಡುತ್ತಿದ್ದರೇ? ಈಗ ಗಡಿ ಒತ್ತುವರಿಯಾಗಿದೆ, ರಾಜ್ಯದ ಸಂಪತ್ತಿನ ಲೂಟಿಯಾಗುತ್ತಿದೆ ಎಂದು ಬೊಬ್ಬೆ ಹೊಡೆಯುವವರು, ಆಗ ಏಕೆ ಸುಮ್ಮನಿದ್ದಿರಿ? ನಿದ್ರೆ ಮಾಡುತ್ತಿದ್ದಿರಾ? ಆರೋಪಕ್ಕೋಸ್ಕರ ಆರೋಪ ಮಾಡುವುದು ಬೇಡ. ಇಲ್ಲಿ ರಾಜ್ಯದ ಗಣಿ ಸಂಪತ್ತಿನ ಸಂರಕ್ಷಣೆ ಮಾಡುವ ಪ್ರಾಮಾಣಿಕ ಉದ್ದೇಶವಿದ್ದರೆ ಏನು ಪರಿಹಾರವಿರಬೇಕೆಂದು ನೀವು ಹೇಳಬೇಕಾಗಿತ್ತು. ಆದರೆ, ನೀವು ಹೇಳಲಿಲ್ಲ. ನಮ್ಮ ಸರ್ಕಾರ ಗಣಿ ನೀತಿ ಮೂಲಕ ಹೇಳಿದೆ. ಅನಾವಶ್ಯಕವಾಗಿ ಈ ರಾಷ್ಟ್ರೀಯ ಸಂಪತ್ತು ರಫ್ತು ಆಗಬಾರದು, ಇಲ್ಲಿ ಅದು value added ಆಗಿ ಬಳಕೆಯಾಗಬೇಕೆನ್ನುವುದನ್ನು ನಮ್ಮ ಗಣಿ ನೀತಿ ಮೂಲಕ ಹೇಳಿದ್ದೇವೆ. ಇದು ನಿಮ್ಮ ಕಣ್ಣಿಗೆ ಕಾಣಲಿಲ್ಲವೇ? ಯಾವುದೇ ಒಂದು ದೇಶ ಕಚ್ಚಾ ವಸ್ತುವನ್ನು ರಫ್ತು ಮಾಡಿದರೆ

ಆ ದೇಶಕ್ಕೆ ಭವಿಷ್ಯವಿಲ್ಲ. ಬರ್ಬಾದ್ ಆಗಿಹೋಗುತ್ತದೆ. ನಮ್ಮಲ್ಲಿ ಎಲ್ಲಾ ರೀತಿಯ ತಂತ್ರಜ್ಞಾನ, ಮಾನವ ಸಂಪನ್ಮೂಲ, ಎಲ್ಲಾ ರೀತಿಯ ಸೌಕರ್ಯ ಇದ್ದಾಗಲೂ ಕೂಡ ಕಚ್ಚಾ ವಸ್ತುವನ್ನು ನಿರ್ಬಂಧಿಸಿ ಅದಕ್ಕೆ value add ಮಾಡಿ ಇಲ್ಲಿಯೇ ಅದನ್ನು ಪರಿಷ್ಕರಣೆ ಮಾಡಿ ಅದನ್ನು ಹೆಚ್ಚು ಲಾಭದಾಯಕವಾಗಿ ರಾಷ್ಟ್ರ ಕಟ್ಟಲಿಕ್ಕೆ ಉಪಯೋಗ ಮಾಡಿಕೊಳ್ಳಬೇಕೆನ್ನುವ ಪ್ರಜ್ಞೆ ಇರಬೇಕಾಗಿತ್ತಲ್ಲವೇ? ಏಕೆ ಅನುಮತಿ ಕೊಟ್ಟರು? ಏಕೆ ರಫ್ತು ನಿಷೇಧ ಮಾಡುವ ಕೆಲಸ ಮಾಡಲಿಲ್ಲ? ಇಲ್ಲಿಯೇ ಕೈಗಾರಿಕೆ ಆಗಬೇಕು, ಆ ಮೂಲಕ ಇಲ್ಲಿರತಕ್ಕ ನಿರುದ್ಯೋಗಿ ಯುವಕರಿಗೆ ಕೆಲಸ ಸಿಗಬೇಕು, ಮೌಲ್ಯವರ್ಧನೆ ಆಗಬೇಕು ಎಂದು ಗಣಿ ನೀತಿಯಲ್ಲಿ ಹೇಳಿದ್ದೇವಲ್ಲಾ. ಇದು ಕಣ್ಣಿಗೆ ಕಾಣಲಿಲ್ಲವೇ? ಆ ರೀತಿ ಪ್ರಾಮಾಣಿಕ ಹಿನ್ನೆಲೆ ಇಟ್ಟುಕೊಂಡು ಗಣಿನೀತಿಯನ್ನು ಇಲ್ಲಿ ನಮ್ಮ ಸರ್ಕಾರ ರಚನೆ ಮಾಡಿದೆ. ಈಗಲಾದರೂ ಅಷ್ಟೇ. ನಾನು ನಿನ್ನೆ ಒಂದು ಸಂವಾದದಲ್ಲಿ ಮಾತನಾಡುವಾಗ ಕೂಡ ಸ್ಪಷ್ಟಪಡಿಸಿದ್ದೆ. ರಾಷ್ಟ್ರೀಯ ಸಂಪತ್ತು ರಾಷ್ಟ್ರ ಕಟ್ಟಲಿಕ್ಕೆ ಉಪಯೋಗವಾಗಬೇಕು. ಮುಂದಿನ ಪೀಳಿಗೆಗೂ ಕೂಡ ಅದನ್ನು ಉಳಿಸಬೇಕು. ಮಿತವಾದ ಬಳಕೆಯಾಗಬೇಕು. ಆ ಮಿತವಾದ ಬಳಕೆಯಾಗಬೇಕೆನ್ನುವ ಹಿನ್ನೆಲೆಯಲ್ಲಿ ಕೇವಲ ಲಾಭದಾಯಕ ಉದ್ದಿಮೆ ದೃಷ್ಟಿಯಿಂದ ಯೋಚನೆ ಮಾಡಬಾರದು. ಅದು ಲಾಭದಾಯಕ ಉದ್ದಿಮೆಯಲ್ಲ. ಮನುಷ್ಯ ಸೃಷ್ಟಿ ಮಾಡಲಿಕ್ಕೆ ಆಗುವುದಿಲ್ಲ. ಇವತ್ತು ಗುಡ್ಡಗಳನ್ನೇನು ಖಾಲಿ ಮಾಡಿದ್ದೇವೆ ಅದಕ್ಕೆ ಸಾವಿರ, ಲಕ್ಷ, ಕೋಟಿ ರೂ. ಸುರಿದರೂ ಒಂದು ಗುಡ್ಡವನ್ನು ನಿರ್ಮಾಣ ಮಾಡುವಂಥ ಸಾಮರ್ಥ್ಯ ನಮಗ್ಯಾರಿಗೂ ಇಲ್ಲ. ಹಾಗಿರುವುದರಿಂದ, ಆ ರಾಷ್ಟ್ರೀಯ ಸಂಪತ್ತು ಹಿತವಾಗಿ, ಮಿತವಾಗಿ ಬಳಕೆಯಾಗಬೇಕು. ಒಂದು ಗಾದೆ ಮಾತು ನನಗೆ ನೆನಪಿಗೆ ಬರುತ್ತದೆ. ಅದೇನೆಂದರೆ, ಚಿನ್ನದ ಮೊಟ್ಟೆಯನ್ನು ಇಡುತ್ತಿದ್ದ ಕೋಳಿಯನ್ನು ಹಿಡಿಯಾಗಿ ಒಟ್ಟಾಗಿ ಮೊಟ್ಟೆ ಸಿಗಬೇಕೆಂದು ಕೋಳಿ ಹೊಟ್ಟೆಯನ್ನು ಬಗೆದಿದ್ದರಿಂದ ಮೊಟ್ಟೆಯೂ ಇಲ್ಲ, ಕೋಳಿಯೂ ಇಲ್ಲ ಎನ್ನುವ ಸ್ಥಿತಿ ಆಗಿತ್ತಂತೆ. ಇಲ್ಲಿ ಕೋಳಿ ಹೊಟ್ಟೆಯನ್ನು ಬಗೆದು ಕೋಳಿಯನ್ನು ಕೊಂದರೆ ಒಂದಷ್ಟು ಮೊಟ್ಟೆ ಸಿಗಬಹುದು. ಆದರೆ, ಪ್ರತಿನಿತ್ಯ ಸಿಗುತ್ತಿದ್ದ ಚಿನ್ನದ ಮೊಟ್ಟೆ ಇಲ್ಲದಂತಾಗಿದೆ. ಇವತ್ತು ಈ ರೀತಿಯ ರಾಷ್ಟ್ರೀಯ ಸಂಪತ್ತನ್ನು ಅದು ಕಬ್ಬಿಣದ ಅದಿರು ಇರಬಹುದು, Manganese ಇರಬಹುದು, ಆ ರೀತಿಯ ಅದಿರನ್ನು ಮಿತವಾಗಿ ಬಳಸಿಕೊಳ್ಳಬೇಕು. ದಿನಕ್ಕೊಂದು ಮೊಟ್ಟೆ ಸಿಗುವ ರೀತಿ ಬಳಸಿಕೊಳ್ಳಬೇಕು. ಅದನ್ನು ರಾಷ್ಟ್ರದ ಉಪಯೋಗಕ್ಕೆ ಬಳಸಿಕೊಳ್ಳಬೇಕು. ಆ ರೀತಿ ನಾವೆಲ್ಲರೂ ಕೂಡ ಪ್ರಾಮಾಣಿಕ ಚಿಂತನೆ ಮಾಡಿ ಗಣಿ ನೀತಿಯಲ್ಲಿ ಮಾರ್ಪಾಟು

ಮಾಡಿ ಅದಕ್ಕೇನಾದರೂ ಒಂದು ಸಲಹೆ ಕೊಡಿ, ಈ ರೀತಿ ಅಕ್ರಮಗಳನ್ನು ತಡೆಯಬಹುದು ಎನ್ನುವಂಥ ಸಲಹೆ ಬಹುಶಃ ಇಷ್ಟು ವರ್ಷ ಅಕ್ರಮಕ್ಕೆ ಅವಕಾಶ ಮಾಡಿಕೊಟ್ಟಂಥ ಅನುಭವಸ್ಥರಿಂದ ಬರುತ್ತದೆಂದು ನಾನು ಭಾವಿಸಿದ್ದೆ. ಆದರೆ, ಅದು ಬರಲಿಲ್ಲ. ಆದರೆ, ನಾವು ಹೆಚ್ಚು ಅಬ್ಬರಿಸುವುದರಿಂದ, ನಾವು ಹೆಚ್ಚು ಆರೋಪ ಮಾಡುವುದರಿಂದ ನಮ್ಮ ತಪ್ಪನ್ನು ಮುಚ್ಚಿಹಾಕಿಕೊಳ್ಳಬಹುದು ಎಂದು ಅಬ್ಬರಿಸುವ ತಂತ್ರ ಇಲ್ಲಿ ಇತ್ತೇ ಹೊರತು ಗಣಿ ಸಂರಕ್ಷಣೆಗೆ ಪ್ರಾಮಾಣಿಕವಾಗಿ ಏನು ಸಲಹೆ ಕೊಡಬೇಕೆನ್ನುವುದನ್ನು ಮಾಡಲಿಲ್ಲವೆನ್ನುವುದು ಬಹಳ ದು:ಖದ ಸಂಗತಿ. ಅವರು ಇನ್ನೊಂದು ಮಾತನ್ನು ಹೇಳಿದರು. ರಸ್ತೆಗಳು ಬಹಳ ಕುಲಗೆಟ್ಟು ಹೋಗಿವೆ, traffic jam ಆಗಿದೆ.

ಆ ಟ್ರಾಫೀಕ್ ಜಾಮ್‌ನಿಂದಾಗಿ ರಸ್ತೆಗಳು ಕುಲಗೆಟ್ಟು ರಸ್ತೆಗಳು, ಗುಂಡಿಗಳು ನೋಡುವಂಥ ಸ್ಥಿತಿಯಲ್ಲಿ ಇಲ್ಲ, ಜನಗಳು ಓಡಾಡುವಂಥ ಸ್ಥಿತಿಯಲ್ಲಿಯೇ ಇಲ್ಲ, ಆ ಲಾರಿ ಮತ್ತು ಟ್ರಕ್‌ಗಳ ಓಡಾಟದಿಂದಾಗಿ ರಸ್ತೆಯ ತುಂಬಾ ಹೊಂಡಗಳು ಬಿದ್ದಿವೆ ಎನ್ನುವ ಮಾತನ್ನು ಹೇಳಿದರು. ನಾನು ಶಾಸಕನಾಗದೇ ಇದ್ದಾಗ ಮತ್ತು ಶಾಸಕ ಆಗಿದ್ದಾಗ ವಿಧಾನ ಸಭೆಯಿದ ಹಿಡಿದು ಜಿಲ್ಲಾ ಪರಿಷತ್ತಿನ ಕೆಡಿಪಿ ಸಭೆಯಲ್ಲೂ ಕೂಡ ಪ್ರಶ್ನಿಸಿ ಈ ಟ್ರಕ್‌ಗಳನ್ನು ನಿಲ್ಲಿಸಿ ಎಂದು ಹೋರಾಟ ಮಾಡಿದಾಗ, ಅಸಹಾಯಕರಾಗಿ ಆರ್‌ಟಿಓ ರವರು ಏನು ಹೇಳಿಕೊಂಡರು ಎಂದರೆ, ಏನು ಮಾಡುವುದು ಸಾರ್, ಮೇಲಿನವರಿಂದಲೇ ಒಂದು ಕಾರ್ಡು ಕಳುಹಿಸಿದ್ದಾರೆ, ನಾನು ಏನಾದರೂ ಈ ಕಾರ್ಡು ಇರುವ ಲಾರಿಯನ್ನು ಬಿಡದೆ ಹೋದರೆ ಇವತ್ತೆ ನನ್ನ ಕೆಲಸ ಹೋಗುತ್ತೆ, ನನ್ನನ್ನು ಸಸ್‌ಪೆಂಡ್ ಮಾಡುತ್ತಾರೆ ಇಲ್ಲಾಂದ್ರೆ ಇಲ್ಲಿಂದ ಎತ್ತಂಗಡಿ ಮಾಡಿ ಬಿಡುತ್ತಾರೆ, ನನ್ನನ್ನು ಕ್ಷಮಿಸಿ ಬಿಡಿ ಸಾರ್, ನೀವು ಏನಾದರೂ ಹೋರಾಟ ಮಾಡುವುದಾದರೆ, ಮೇಲಿನವರ ಜೊತೆಯಲ್ಲಿ ಹೋರಾಟ ಮಾಡಿ ಎಂದು ತನ್ನ ಅಸಹಾಯಕತೆಯನ್ನು ತೋರಿಸಿಕೊಂಡ. ಆ ಮೇಲಿನವರು ಯಾರು? ಆತ ಹೇಳಿದ ಮಾತು ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಆವತ್ತಿನ ಕಾಲದಲ್ಲಿ ಮುಖ್ಯಮಂತ್ರಿಗಳಿಂದ ಕಾರ್ಡು ಬರುತ್ತಿತ್ತಂತೆ. ಅದಕ್ಕೆ ಟಿಕ್ ಹಾಕಿದ್ದರೆ..

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರು ಯೀಲ್ಡ್ ಆಗಬೇಕು. ರಿನ್ಯೂವಲ್‌ಗೆ ಯಾರು ಅರ್ಜಿ ಕೊಟ್ಟಿದ್ದಾರೆ ಹೇಳಿ. ದಯಮಾಡಿ ಮೊದಲು ಇದನ್ನು ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ರೇವಣ್ಣನವರೆ ನಿಮ್ಮ ಮೇಲೆ ನನ್ನ ಕಂಪ್ಲೇಂಟ್ ಇಲ್ಲ. ನೀವು ಮುಖ್ಯಮಂತ್ರಿಯಾಗಿರಲಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಈಗ ಕಾರ್ಡ್ದು ಇಲ್ಲ, ಸಂಪೂರ್ಣವಾಗಿ ಹೊಡೆಯುತ್ತಿದ್ದಾರೆ. ಮೊದಲು ಕಾರ್ಡಾದರೂ ಇತ್ತು, ಈಗ ಕಾರ್ಡೇ ಇಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ :- ಇವರು ಏಕೆ ಈ ರೀತಿ ಮಾಡುತ್ತಾರೆ. ತುರಿಕೆ ಗಿಡ ಇರುತ್ತದೆ. ಅದರ ಸೊಪ್ಪು ಸೋಕಿದರೆ ಸಾಕು ಮೈಯೆಲ್ಲಾ ಕೆರೆದುಕೊಳ್ಳುತ್ತಿರುತ್ತಾರಂತೆ. ಏಕೆ ಇವರು ಹೀಗೆ ಆಡುತ್ತಿದ್ದಾರೆ? ನಾನು ಇರುವ ವಿಷಯವನ್ನು ಹೇಳುತ್ತಿದ್ದೇನೆ. ಅದು ಏನಾದರೂ ತುರಿಕೆ ಗಿಡದ ಮುಳ್ಳು ಚುಚ್ಚಿದ ಹಾಗೆ ಆಗುತ್ತಿದೆಯೆ? ಆ ರೀತಿ ಆಗುತ್ತಿಲ್ಲ ತಾನೆ? ಆ ರೀತಿ ಆಗುತ್ತಿಲ್ಲ ಎನ್ನುವುದಾದರೆ ನಾನು ಹೇಳುವ ಮಾತನ್ನು ಸ್ವಲ್ಪ ಸಮಾಧಾನದಿಂದ ಕೇಳಿ. ಕೇಳಲಿಕ್ಕೆ ತಯಾರಿಲ್ಲದಿದ್ದರೆ ಹೇಗೆ? ಆ ರೀತಿಯಾಗಿ ಕಾರ್ಡ್ದು ಕೊಟ್ಟು ಅಕ್ರಮ ಗಣಿಗಾರಿಕೆಯನ್ನು ಪ್ರೋತ್ಸಾಹಿಸಿದ ಜನ ಇವತ್ತು ರಾಜ್ಯದ ಜನರೆದುರು ತಪ್ಪು ಒಪ್ಪಿಕೊಳ್ಳಬೇಕಾಗುತ್ತದೆ. ವೈಯಕ್ತಿಕ ಲಾಭಕ್ಕಾಗಿ ಏಕೆ ಅಕ್ರಮಕ್ಕೆ ಪ್ರೋತ್ಸಾಹ ಕೊಟ್ಟಿರಿ? ಏಕೆ ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿದಿರಿ? ಈ ಪ್ರಶ್ನೆಯನ್ನು ಮುಂದಿಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ :- ಅಕ್ರಮದ ಬಗ್ಗೆ ಅವರಿಗೆ ಅರ್ಥವೇ ಆಗಿಲ್ಲ. ನಿಮಗೆ ಗೊತ್ತಾಗಿರುವುದು ಅಕ್ರಮವಾಗಿ ಎಸ್ಟೇಟ್‌ನ್ನು ಒತ್ತುವರಿ ಮಾಡುವುದಿದೆಯೆಲ್ಲಾ ಅದು ಒಂದೇ ಅಲ್ಲ. ಅಕ್ರಮ ಗಣಿ ಎಂದರೆ ಬಹಳ ಸೂಕ್ಷ್ಮವಾದ ವಿಚಾರ. ಅದು ಅಕ್ರಮ ಗಣಿಗಾರಿಕೆ ಆಗುವುದಿಲ್ಲ.

ಶ್ರೀ ಸಿ.ಟಿ. ರವಿ :- ಅದು ನಿಮ್ಮ ಕಾಲದಲ್ಲಿಯೇ ಆಗಿರುವುದು.

ಶ್ರೀ ನೆ.ಲ. ನರೇಂದ್ರಬಾಬು :- ರವಿ ಅವರು ಅದನ್ನು ಮುಚ್ಚುವುದಕ್ಕೆ ಇಷ್ಟೊಂದು ಪೀಠಿಕೆ ಹಾಕುತ್ತಿರುವುದು.

ಶ್ರೀ ಸಿ.ಟಿ. ರವಿ:- ನಮ್ಮ ಸರ್ಕಾರದಲ್ಲಿ ಅಕ್ರಮ ಒತ್ತುವರಿಗೂ ಅವಕಾಶವಿಲ್ಲ. ಅದು ಆಗಿದ್ದೂ ನಿಮ್ಮ ಕಾಲದಲ್ಲಿ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಇದು ನಿಮ್ಮ ಬುಡಕ್ಕೆ ಬಂದಿದೆ. ಪಶ್ಚಿಮ ಘಟ್ಟ ರಕ್ಷಣೆ ಮಾಡಿ ಎಂದು ಹೋರಾಟ ಮಾಡುತ್ತಿದ್ದೀರಲ್ಲಾ ಪಶ್ಚಿಮ ಘಟ್ಟಕ್ಕೆ ಕೊಡಬೇಕೆಂದು ತೀರ್ಮಾನಿಸಿದ್ದೀರಲ್ಲಾ ನಿಮ್ಮ ಬುಡಕ್ಕೆ ಬಂದಿದೆ. ಸುಪ್ರೀಂ ಕೋರ್ಟ್ ಏನು ಹೇಳಿತು?

ಶ್ರೀ ಸಿ.ಟಿ. ರವಿ :- ನಾನು ಅದೇ ವಿಷಯಕ್ಕೆ ಬರುತ್ತೇನೆ. ನೀವು ಹೇಳಿದಿರಿ, ನಾನೂ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಹಾಡು ಹಗಲೇ ಹೊಡೆದಾಕಿಸುವುದಕ್ಕೆ ತೀರ್ಮಾನ ಕೊಟ್ಟಿತು. ಮೈನಿಂಗ್‌ಗೆ ಕೊಡುತ್ತಿದ್ದೇವೆಂದು ಹೇಳಿದರೆ, ನೀವು ಪಶ್ಚಿಮ ಘಟ್ಟ ರಕ್ಷಿಸುತ್ತೀರಾ? ಈ ಭಾಷಣವನ್ನು ಚಿಕ್ಕಮಗಳೂರಿನಲ್ಲಿ ಕೇಳಿದರೆ ಜನ ಏನು ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಸ್ವಲ್ಪ ಯೋಚಿಸಿ. ಪಶ್ಚಿಮ ಘಟ್ಟಕ್ಕೆ ವಿರೋಧ ಆಗಬೇಡಿ. ಅಲ್ಲಿರತಕ್ಕಂಥ ಸಂಪತ್ತನ್ನು ಲೂಟಿ ಮಾಡುವುದಕ್ಕೆ ಬಿಡಬೇಡಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ನಿಮ್ಮ ಪಕ್ಷದ ಪಶ್ಚಿಮಘಟ್ಟದ ಬಗ್ಗೆ ಇರುವ ಕಾಳಜಿ ನನಗೆ ಗೊತ್ತು. ಹೊಗರೆ ಕಾಮಗಿರಿಗೆ ಗಣಿಗಾರಿಕೆ ನಡೆಸಲಿಕ್ಕೆ ಯಾರು ಅನುಮತಿ ಕೊಟ್ಟವರು ಎಂಬುದು ನನಗೆ ಗೊತ್ತು. ಇದು ಪಶ್ಚಿಮಘಟ್ಟದ ತಪ್ಪಲಿನಲ್ಲಿ ಬರುತ್ತದೆ ಎನ್ನುವ ಸತ್ಯ ಗೊತ್ತಿದ್ದಾಗಲೂ ಕೂಡ ಚಿಕ್ಕಮಗಳೂರಿನ ಹೊಗರೆ ಕಾಮಗಾರಿಗೆಯಲ್ಲಿ ಏಕೆ ಅನುಮತಿ ಕೊಟ್ಟಿರಿ? ಪಶ್ಚಿಮಘಟ್ಟದ ಬಗ್ಗೆ ನಿಮ್ಮ ಪ್ರಾಮಾಣಿಕತೆ ಎಷ್ಟು ಎಂಬುದು ನನಗೆ ಗೊತ್ತು. ಹೀಗಾಗಿ ನಿಮ್ಮ ಪಕ್ಷದ ಪ್ರಾಮಾಣಿಕತೆಯ ಬಗ್ಗೆ ನಾನೇನು ಸಾರಿ ಹೇಳಬೇಕಾಗಿಲ್ಲ. ಹೀಗಾಗಿ ಪಶ್ಚಿಮಘಟ್ಟದಲ್ಲಿ ನಿಮ್ಮ ಪ್ರಾಮಾಣಿಕತೆ ನನಗೆ ಗೊತ್ತಿದೆ. ಈ ಚರ್ಚೆ ಈಗ ಬೇಡ. ಅದು ಬಹಳ ದೊಡ್ಡದಾಗುತ್ತದೆ. ಆದರೆ, ಪಶ್ಚಿಮಘಟ್ಟದ ಸಂರಕ್ಷಣೆಗೆ ಟಾಸ್ಕ್ ಫೋರ್ಸ್ ರಚಿಸಿರುವುದು ನಮ್ಮ ಸರ್ಕಾರ.

ಶ್ರೀ ಟಿ.ಬಿ. ಜಯಚಂದ್ರ :- ನೋಡಿ ರವಿಯವರೆ, ದಯಮಾಡಿ ಪಾಲಿಸಿಯ ಪ್ರತಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದಯಮಾಡಿ ಓದಿ ನೋಡಿ ಆಗ ನಿಮಗೆ ಗೊತ್ತಾಗುತ್ತದೆ, ಅದರಲ್ಲಿ value added ಎನ್ನುವ ಶಬ್ದಗಳು ಎಲ್ಲಿವೆ? ಅಲ್ಲಿ ಚೈನಾಕ್ಕೆ ಎಕ್ಸ್‌ಪೋರ್ಟಿಗೆ ಎಂದು ಹೇಳುತ್ತಿರುವುದು.

ಶ್ರೀ ಸಿ.ಟಿ. ರವಿ :- ನನ್ನ ಹತ್ತಿರ ಅದರ ಪ್ರತಿ ಇದೆ. ನಾನು ಹೇಳುತ್ತೇನೆ ಸ್ವಲ್ಪ ಕೇಳಿ. Value added ಅದರಲ್ಲಿ ಇದೆ. ನೀವು ಪೂರ್ತಿಯಾಗಿ ಅದನ್ನು ಓದಿ. ಯಾವುದೋ ಒಂದು ಪೇಜ್ ಓದಿಕೊಂಡರೆ ನಿಮಗೆ ಗೊತ್ತಾಗುವುದಿಲ್ಲ. ಪೂರ್ತಿ ಪೇಜ್ ಓದಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಜಯಚಂದ್ರರವರ ಹತ್ತಿರ ಇರುವ ಪಾಲಿಸಿಯೇ ಬೇರೆ, ಅವರ ಹತ್ತಿರ ಇರುವ ಪಾಲಿಸಿಯೇ ಬೇರೆ. ರವಿಯವರು ಎರಡು ಪಾಲಿಸಿ ಮಾಡಿಕೊಂಡಿರುವ ಹಾಗೆ ಕಾಣಿಸುತ್ತದೆ.

(ಗೊಂದಲ)

ಉಪಾಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ಬೇಡ. ರವಿಯವರೆ ನೀವು ಮುಂದುವರಿಸಿ.

ಶ್ರೀ ಸಿದ್ದು ಸವದಿ :- ಕಾಂಗ್ರೆಸ್‌ನವರಿಗೆ ಜಯಚಂದ್ರರವರು ಹೇಳುವುದು ಸತ್ಯವಿದೆ. ಏಕೆಂದರೆ ಕಾಂಗ್ರೆಸ್ ವಿರೋಧ ಮಾಡಿ ಈ ರೀತಿ ಸುಳ್ಳು ಆರೋಪ ಮಾಡಿ ಈಗ ಜೀರೋಗೆ ಬಂದಿದೆ. ಲೋಕಸಭೆಯ ಚುನಾವಣೆಯಲ್ಲಿಯೂ ಸಹಿತ ಕಾಂಗ್ರೆಸ್ ಜೀರೋ ಮಾಡುವ ಉದ್ದೇಶದಿಂದ ಅವರು ಗಣಿ ಹಗರಣವನ್ನು ಬೆಳಕಿಗೆ ತರುತ್ತಿದ್ದಾರೆ. ಆ ಗಣಿ ಹಗರಣ ಆಗಿದ್ದು ಅವರ ಕಾಲದಲ್ಲಿ ಎಂಬುದು ಅವರಿಗೆ ಪಕ್ಕಾ ಗೊತ್ತಿದೆ. ರಾಜ್ಯದ ಜನತೆಗೆ ಗೊತ್ತು ಮಾಡಲಿಕ್ಕಾಗಿ ಅವರು ಹೇಳುತ್ತಿದ್ದಾರೆ.

ಶ್ರೀ ಸಿ.ಟಿ. ರವಿ :- ವಿರೋಧ ಪಕ್ಷದ ಉಪ ನಾಯಕರು ಇನ್ನೊಂದು ಮಾತನ್ನು ಹೇಳಿದರು. ಅಧಿಕಾರಿಗಳು ಅನಧಿಕೃತ ಹೆಸರಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ. ಅನಧಿಕೃತ ಹೆಸರುಗಳನ್ನು ಪರಿಶೀಲಿಸಬೇಕಾದ ಜವಾಬ್ದಾರಿ ಆಳುವವರಿಗೆ ಇತ್ತಲ್ಲವೆ? ಏಕೆ ಮಾಡಲಿಲ್ಲ? ಈಗಲ್ಲ. ಅನಧಿಕೃತ ಹೆಸರಿನಲ್ಲಿ ಗಣಿ ಲೈಸನ್ಸ್ ಪಡೆದುಕೊಂಡಿದ್ದಾರೆಂದು...

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು :- ಅದಕ್ಕೆ ಸಿಬಿಐಗೆ ಒಪ್ಪಿಸಿ ಎಂದು ಹೇಳುತ್ತಿರುವುದು.

(ಗೊಂದಲ)

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ತಾವು ಯೀಲ್ಡ್ ಆದರೆ ಒಂದು ಮಾತು ಹೇಳುತ್ತೇನೆ. ಸಮ್ಮಿಶ್ರ ಸರಕಾರದಲ್ಲಿ ಇದ್ದಾಗ ಸಿಬಿಐಗೆ ಒಪ್ಪಿಸಿ ಎಂದು ಹೇಳಿದರೂ ನೀವು ಏಕೆ ಅದನ್ನು ಸಿಬಿಐ ಗೆ ಒಪ್ಪಿಸಲಿಲ್ಲ?

ಶ್ರೀ ನೆ.ಲ. ನರೇಂದ್ರ ಬಾಬು :- ಸಿಬಿಐಗೆ ಒಪ್ಪಿಸಿದರೆ ಎಲ್ಲರ ಬಂಡವಾಳ ಗೊತ್ತಾಗುತ್ತದೆ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನೀವು ಆಗ ಸರ್ಕಾರದಲ್ಲಿ ಇದ್ದೀರಿ. ಆಗ ನೀವು ಏಕೆ ಹೆದರಿಕೊಂಡಿರಿ?

ಶ್ರೀ ಟಿ.ಬಿ. ಜಯಚಂದ್ರ :- ರವಿಯವರೆ, ಅನಧಿಕೃತ ಗಣಿಗಾರಿಕೆಗಳಿಗೆ ದಾಖಲೆಗಳು ಬೇಕಿಲ್ಲ. ದಾಖಲೆಗಳು ಸಿಗುವುದಿಲ್ಲ. ರೇಂಜ್ Forest Officer ಒಬ್ಬ ಮತ್ತೊಬ್ಬರು ಸಬ್ ಇನ್ಸ್‌ಪೆಕ್ಟರ್ ಇವರಿಬ್ಬರನ್ನು ನೀವು ಜೊತೆಯಲ್ಲಿಟ್ಟುಕೊಂಡು ಬಿಟ್ಟರೆ ನೀವು ಏನು ಬೇಕಾದರೂ ಮಾಡಬಹುದು. ದಾಖಲೆಗಳೇ ಬೇಕಾಗಿಲ್ಲ.

ಶ್ರೀ ಸಿ.ಟಿ. ರವಿ :- ತಾವು ಏನು ಹೇಳಿದಿರಿ ಎಂದರೆ, ಅಧಿಕಾರಿಗಳು ತಮ್ಮ ಅನಧಿಕೃತ ಹೆಸರುಗಳಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ :- ಪರ್ಮಿಟ್‌ಗೆ ಅಧಿಕೃತ ಹೆಸರುಗಳು ಬೇಕಾಗುತ್ತದೆ. ನಿಮಗೆ ಇನ್ನು ಅನುಭವ ಇಲ್ಲ. ಮೈನಿಂಗ್ ಇದು ದೊಡ್ಡ ಸಬ್ಜೆಕ್ಟ್.

ಶ್ರೀ ಸಿ.ಟಿ.ರವಿ :- ಇಲ್ಲ ಇಲ್ಲ ನಾನು ಗಣಿಯ ಹಗರಣದೊಳಗೆ ಇಲ್ಲ, ಗಣಿಯೊಳಗೂ ಇಲ್ಲ. ಅದು ನಿಮಗೆ ಮಾತ್ರ ಗೊತ್ತಿರುವುದು, ನನಗೆ ಅದು ಗೊತ್ತಿಲ್ಲ.

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು :- ರವಿಯವರೆ, ನೀವು ಯಾರನ್ನೋ ಡಿಫೆಂಡ್ ಮಾಡುವುದಕ್ಕೆ ಹೋಗಿ ಏನೇನು ಮಾತನಾಡಬೇಡಿ.

ಶ್ರೀ ಸಿ.ಟಿ.ರವಿ :- ನರೇಂದ್ರ ಬಾಬುರವರ ಹತ್ತಿರ ನನಗೆ ಸಿನಿಮಾ ಡೈಲಾಗ್ ಹೊಡೆದು ಅಭ್ಯಾಸವಿಲ್ಲ. ಹೀಗಾಗಿ ಡೈಲಾಗ್ಸ್ ಹೇಳುವುದಕ್ಕೆ ಬರುವುದಿಲ್ಲ. ಏನಿದ್ದರೂ ಮನಸ್ಸಿನಲ್ಲಿರವ ಪ್ರಾಮಾಣಿಕತೆ ಮಾತ್ರ ಹೊರಗೆ ಬರುತ್ತದೆ, ಬಾಬುರವರೆ ನನಗೆ ಡೈಲಾಗ್‌ಗಳು ಬರುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಜಯಚಂದ್ರರವರು ಏನು ಹೇಳಿದರು ಎಂದರೆ,

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಅವರಿಗೆ ಇನ್ನು ವಯಸ್ಸು ಚಿಕ್ಕದು ಇದೆ. ಅನಧಿಕೃತ ಯಾವುದು ಎಂದು ಗೊತ್ತಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ :- ಈಗ ಅನಧಿಕೃತ ಗಣಿಗಾರಿಕೆಗೆ ಸಂಬಂಧಪಟ್ಟಂತೆ ಒಂದು ಮಾತು ಹೇಳಿದರು. ಇದರ ಜೊತೆಗೆ ಮತ್ತೊಂದು ಪ್ರಶ್ನೆ ಬಂತು. ಸರ್ಕಾರದಲ್ಲಿ ಗಣಿ ಲಾಬಿಯ ಕಂಟ್ರೋಲ್ ಇದೆ ಎನ್ನುವ ಪ್ರಶ್ನೆಯನ್ನು ತಾವು ಮುಂದಿಟ್ಟಿರಿ. ರಾಜಕಾರಣದೊಳಗೆ ಎಕ್ಸೈಜ್ ಲಾಬಿಯನ್ನು ಒಳಗಡೆ ಬಿಟ್ಟುಕೊಂಡವರು ಯಾರು? ಆಗ ಜಗತ್ತೇ ಎಕ್ಸೈಜ್ ಲಾಬಿ ಹೇಳಿದ ಹಾಗೆ ಕೇಳುತ್ತಿತ್ತು. ಎಕ್ಸೈಜ್ ಲಾಬಿಯನ್ನು ಒಳಗಡೆ ಬಿಟ್ಟುಕೊಂಡು, ಶಾಸಕರನ್ನು ಮಾಡಿ, ಸಚಿವರನ್ನು ಮಾಡಿ, ಆ ಲಾಬಿ ಹೇಳಿದ ಹಾಗೆ ಕೇಳಿ ಅಧಿಕಾರ ನಡೆಸಿದವರು ಯಾರು? ಅದನ್ನು ಇಲ್ಲಿ ಹೇಳಬೇಕಲ್ಲವೆ?

ಶ್ರೀ ನೆ.ಲ. ನರೇಂದ್ರ ಬಾಬು :- ಗಣಿ ಬಗ್ಗೆ ಮಾತನಾಡಿ.

ಶ್ರೀ ಸಿ.ಟಿ. ರವಿ :- ಗಣಿಯ ಬಗ್ಗೆ ಹಾಗೂ ಎಕ್ಸೈಜ್ ಬಗ್ಗೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು :- ಅವರು ಬೇರೆ ವಿಷಯ ತಿಪ್ಪೆ ಸಾರಿಸಲಿಕ್ಕೆ ಮಾತನಾಡುತ್ತಿದ್ದಾರೆ, ಹೀಗಾಗಿ ನಾವು ಅದಕ್ಕೆ ಸಹಿ ಮಾಡಿದ್ದೇವೆ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ.ಸಿ.ಟಿ. ರವಿ :- ಯಾರು ಈ ಅಕ್ರಮಗಳಿಗೆ ಅವಕಾಶ ಕೊಟ್ಟರು? ಹೇಗೇಗೆ ರಾಜಕಾರಣವನ್ನು ಕುಲಗೆಡಿಸತಕ್ಕಂಥ ಕೆಲಸ ಮಾಡಿದ್ದಾರೆನ್ನುವ ಸತ್ಯ ಗೊತ್ತಾಗಬೇಕಲ್ಲ? ಬರೀ ಅಕ್ರಮ ಗಣಿಗಾರಿಕೆಗೆ ಸಂಬಂಧಪಟ್ಟಂತೆ ಸತ್ಯ ಗೊತ್ತಾಗಬೇಕಲ್ಲ? ಎಜುಕೇಷನ್ ಲಾಬಿಗೆ ಮಣಿದು ಎಜುಕೇಷನ್ ಲಾಬಿಯನ್ನು ವಿಧಾನ ಸೌಧದ ಒಳಗಡೆ ಬಿಟ್ಟುಕೊಂಡವರು ಯಾರು?

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಿಮ್ಮಷ್ಟು ಕುಲಗೆಡಿಸಿದವರು ಯಾರೂ ಇಲ್ಲ.

ಶ್ರೀ ಸಿ.ಟಿ. ರವಿ :- ಅಗ್ರಜ ನಮ್ಮ ನಿಮ್ಮ ಸಂಬಂಧದ ಬಗ್ಗೆ ಆಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಲೂಟಿ ಮಾಡಿದ್ದೀರಾ.

ಶ್ರೀ ಸಿ.[illegible] :- ನಿಮ್ಮ ಕಷ್ಟ ನನಗೆ ಗೊತ್ತಾಗುತ್ತದೆ. ರಾಜಕೀಯ ನತದೃಷ್ಟರು [illegible] ಕಷ್ಟ ನನಗೆ ಗೊತ್ತಾಗುತ್ತದೆ. ನಿಮ್ಮ ಬಗ್ಗೆ ನನಗೆ ಸಿಂಪಥಿ ಇದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಿಮಗೆ ಇನ್ನು ಬಹುಮತ ಬಂದಿಲ್ಲ. ಆರು ಜನ ಪಕ್ಷೇತರ ಸದಸ್ಯರನ್ನು ಇಟ್ಟುಕೊಂಡು ನೀವು ಸರ್ಕಾರ ನಡೆಸುತ್ತಿದ್ದೀರಿ. ನಿಮಗೆ ಬಹುಮತ ಪೂರ್ತಿಯಾಗಿ ಬಂದಿಲ್ಲ. ನಿಮ್ಮ ಹಾಗೆ ಆಪರೇಷನ್ ಈ ಪ್ರಪಂಚದಲ್ಲಿ ಯಾರು ಮಾಡಲಿಲ್ಲ.

(ಗೊಂದಲ)

ಉಪಾಧ್ಯಕ್ಷರು :- ಯಾರು ಮಾತನಾಡಬೇಡಿ. ಎಲ್ಲರು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಎಜ್ಯುಕೇಷನ್ ಲಾಬಿ, ಎಕ್ಸೈಜ್‌ಲಾಬಿ ಎಂದು ಹೇಳುತ್ತೀರಲ್ಲಾ ನಿಮ್ಮಲ್ಲಿ ಇಲ್ಲವೇ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ರವಿಯವರೆ, ಅಕ್ರಮ ಗಣಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ತಮ್ಮ ಮಾತನ್ನು ಸೀಮಿತ ಮಾಡಿ. ಬೇರೆ ವಿಷಯಗಳ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಸಿ.ಟಿ. ರವಿ :- ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನು ವಿವರಕ್ಕೆ ಹೋಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:- Educationನಲ್ಲಿ ಲಾಬಿ ಮಾಡತಕ್ಕಂಥವರನ್ನು ನೀವು ಕರೆದುಕೊಂಡು ಹೋಗಿ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ್ದೀರಿ.

ಶ್ರೀ ಸಿ.ಟಿ. ರವಿ :- ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನು ಪೂರ್ಣ ವಿವರಕ್ಕೆ ಹೋಗಿಲ್ಲ. Excise, Education, Mines, Land ಲಾಬಿಯನ್ನು ಯಾರ್‍ಯಾರು ಒಳಗೆ ಬಿಟ್ಟುಕೊಂಡರು ಎಂಬುದನ್ನು ಮಾತ್ರ ನಾನು ಇಲ್ಲಿ ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :- ಎಲ್ಲಾ ಲಾಬಿಯನ್ನು ಬೆಳಸಿ ಪೋಷಣೆ ಮಾಡುತ್ತಿರುವವರು ನೀವೆ.

ಶ್ರೀ ಸಿ.ಟಿ. ರವಿ :- 60 ವರ್ಷಗಳವರೆಗೆ ಅಧಿಕಾರದಲ್ಲಿ ನಾವು ಇರಲಿಲ್ಲ. ಅಧಿಕಾರದಲ್ಲಿ ನೀವಿದ್ದಿರಿ. ಆದ್ದರಿಂದ, ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿಕೊಟ್ಟವರು ನೀವು. ಆದ್ದರಿಂದ, ನಾಚಿಕೆಯಿಂದ ತಲೆ ತಗ್ಗಿಸಬೇಕಾದವರು ನೀವು. ಕಳೆದ 8 ತಿಂಗಳಿಂದ ನಾವೇನು ಮಾಡಿಲ್ಲ. ಈ ಅವಕಾಶವನ್ನು ನೀವು ಮಾಡಿಕೊಟ್ಟಿದ್ದೀರಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು :- ಬಳ್ಳಾರಿ ಗಣಿಯ ಹಣದಿಂದ ವಂಚನೆಯನ್ನು ನೀವು ಮಾಡುತ್ತಿದ್ದೀರಿ. ಸುಮ್ಮನೆ ನಾಲಿಗೆ ಹೋದ ಹಾಗೆ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಖಮರುಲ್ ಇಸ್ಲಾಂ :- ಬೇರೆ ವಿಷಯದ ಬಗ್ಗೆ ಮಾತನಾಡುವುದು ಬೇಡ.

ಉಪಾಧ್ಯಕ್ಷರು :- ಮಾನ್ಯ ರವಿಯವರು ಯೀಲ್ಡ್ ಆಗಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ :- ಮಾನ್ಯ ಉಪಾಧ್ಯಕ್ಷರೆ, ಕಾಂಗ್ರೆಸ್ ಸತ್ಯ ಶೋಧನ ಸಮಿತಿಯನ್ನು ರಚನೆ ಮಾಡಿತ್ತಂತೆ. ಇದು ಯಾವ ರೀತಿ ಇದೆ ಎಂದರೆ, ಈ ಪೊಲೀಸ್‌ನವರು ಯಾವ ರೀತಿಯಾಗಿ ಕಳ್ಳತನ ಆಗಿದೆ ಎಂಬ ಆಧಾರದ ಮೇಲೆ ಕಳ್ಳರನ್ನು ಹಿಡಿದುಕೊಂಡು ಬರುತ್ತಾರೆ. ಕನ್ನ ಹಾಕಿರುವ ಕಳ್ಳ ಯಾರೆಂದು ನೋಡುವುದಕ್ಕೆ ಹಳೆಯ ಲಿಸ್ಟ್ ತೆಗೆಸಿ ಹಳೆಯ ಲಿಸ್ಟ್ ಆಧಾರದ ಮೇಲೆ ಈ ನಾಲ್ಕೈದು ಜನರನ್ನು ತನಿಖೆ ಮಾಡಿ ಎಂದು ಹೇಳುತ್ತಾರೆ. ಬೀಗ ಒಡೆದಿದ್ದರೆ, ಬೀಗಒಡೆಯುವ ಮೆಥೆಡ್ ಈ ತರದವನೇ ಇರಬೇಕೆಂದು ಪೊಲೀಸ್‌ನವರು ಆತನನ್ನು ಹಿಡಿದುಕೊಂಡು ಬರುವುದಕ್ಕೆ ಹೇಳುತ್ತಾರೆ. ಸತ್ಯ ಶೋಧನ ಸಮಿತಿಯು ಹಳೆಯ ಕಳ್ಳರ ಒಂದು ತಂಡ..

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಅವರು ಏನು ಮಾತನಾಡುತ್ತಿದ್ದಾರೆ. ಅದರ ಬಗ್ಗೆ I am on point of order. No, we can't allow this. ಅವರು ಏನು ಮಾತನಾಡುತ್ತಿದ್ದಾರೆ ಎಂಬುದನ್ನು ನೋಡಿ. ಸತ್ಯ ಶೋಧನ ಸಮಿತಿಯವರು ಏನು ಮಾಡಿದ್ದಾರೆಂಬುದರ ಬಗ್ಗೆ ಕ್ಲಾರಿಫೈ ಮಾಡಲಿ. ಯಾರು ಹಳೆಯ ಕಳ್ಳರು ಯಾರು ಹೊಸ ಕಳ್ಳರು ಎನ್ನತಕ್ಕಂಥದ್ದು ಈ ಸದನಕ್ಕೆ ಗೊತ್ತಾಗಲಿ. ಈ ರೀತಿಯಾಗಿ ಅವರು ಮಾತನಾಡುವುದಕ್ಕೆ ನೀವು allow ಮಾಡಿದರೆ ನಾವು allow ಮಾಡುವುದಿಲ್ಲ. He is misleading this House. ಉಪಾಧ್ಯಕ್ಷರಾಗಿ ನೀವು ಈ ರೀತಿಯಾಗಿ allow ಮಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ :- ಕೇಂದ್ರ ಸರ್ಕಾರದ ಕುತ್ತಿಗೆಗೆ ಬರುತ್ತದೆಂದು ನನಗೆ ಗೊತ್ತು.

ಶ್ರೀ ಟಿ.ಬಿ. ಜಯಚಂದ್ರ :- ಸತ್ಯ ಶೋಧನ ತಂಡ ಎಲ್ಲಾ ದಾಖಲಾತಿಗಳನ್ನು ಕೊಟ್ಟಿದೆ. ತಾಕತ್ ಇದ್ದರೆ ಬಂದು ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಸುಮ್ಮನೆ ಏನೇನೋ ಮಾತನಾಡುತ್ತಿದ್ದೀರಷ್ಟೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಉಪಾಧ್ಯಕ್ಷರೆ, ಕಳ್ಳರ ಸತ್ಯ ಶೋಧನ ತಂಡ ಎಂದು ಮಾನ್ಯ ಸದಸ್ಯರು ಹೇಳಿರುವುದನ್ನು ಕಡತದಿಂದ ತೆಗಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರವಿಯವರು ಹಿರಿಯ ಸದಸ್ಯರು. ಅವರೇನು ಹೊಸದಾಗಿ ಈ ಸದನಕ್ಕೆ ಬಂದವರೇನು ಅಲ್ಲ. ಆದ್ದರಿಂದ, ಅವರು ನಾಲಿಗೆಯ ಮೇಲೆ ಹಿಡಿತ ಇಟ್ಟುಕೊಂಡು ಸ್ವಲ್ಪ ಮಾತನಾಡಿದರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ, ನಮಗೂ ಕೂಡ ಅವರಿಗಿಂತ ಜೋರಾಗಿ ಭಾಷೆಯನ್ನು ಬಳಸತಕ್ಕಂಥದ್ದು ಗೊತ್ತಿದೆ. ಅವರು ಇತಿಮಿತಿಯಲ್ಲಿ ಮಾತನಾಡುತ್ತಾ ಅವರು ಏನು ಹೇಳಬೇಕಾಗಿದೆಯೋ ಅದನ್ನು ಪ್ರಬಲವಾಗಿ ಟೀಕೆ ಮಾಡಲಿ, ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಅದನ್ನು ಬಿಟ್ಟು ಹಳೆಯ ಕಳ್ಳರು ಎಂದು ಹೇಳುವುದಕ್ಕೆ ಹೋಗಬೇಡಿ. ನೀವು ಎಂಥಾ ಕಳ್ಳರೆಂಬುದು ನಮಗೆ ಗೊತ್ತಿದೆ. ಆದ್ದರಿಂದ, ಸುಮ್ಮನೆ ಹೆಚಿಗೆ ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಉಪಾಧ್ಯಕ್ಷರೆ, ನಾನು ನಿಮಗೆ ಕೈ ಜೋಡಿಸಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ನೀವು ನಿಯಂತ್ರಣ ಮಾಡಿ. ಇದಕ್ಕೆ ಪ್ರಚೋದನೆ ಮಾಡುವುದಕ್ಕೆ ಹೋಗಬೇಡಿ. ಅದರ ಬಗ್ಗೆ ಏನಿದೆ, ಅದನ್ನು ಸದನದ

ಮುಂದಿಟ್ಟಿದ್ದೇವೆ. ಇದರ ಮೇಲೆ ನಿಮ್ಮ ಹತ್ತಿರ ಏನಾದರು ಡಾಕ್ಯುಮೆಂಟ್ ಅಥವಾ contradictory ಇದ್ದರೆ ಹೇಳಿ. ಇದನ್ನು ಬಿಟ್ಟು ಅದು ಇದು ಎಂದು ಪ್ರತಿವರ್ತನೆಯಾಗಿ ಮಾತನಾಡಿದರೆ ಇಲ್ಲಿ ನಡೆಯುವುದಿಲ್ಲ.

ಶ್ರೀ ಸಿ.ಟಿ. ರವಿ :- ಮಾನ್ಯ ಕೃಷ್ಣಮೂರ್ತಿಯವರೆ, ನಾನು ಯೀಲ್ಡ್ ಆಗಿಲ್ಲ. ನೀವು ನಮ್ಮ ಜಿಲ್ಲೆಗೆ ಹಿರಿಯ ಶಾಸಕರೆಂದು ನಾವು ಒಪ್ಪಿಕೊಂಡಿದ್ದೇವೆ. ದಯಮಾಡಿ ತಾವು ಕುಳಿತುಕೊಳ್ಳಿ. ನಾನು ನಿಮ್ಮ ಹಿರಿತನದ ಪ್ರಶ್ನೆ ಮಾಡಿಲ್ಲ.

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ. ಆದ್ದರಿಂದ, ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಸಿ.ಟಿ. ರವಿ :- ನಮ್ಮ ಜಿಲ್ಲೆಯ ಹಿರಿಯ ಶಾಸಕರೆಂದು ಮತ್ತು ನೀವು ನಮ್ಮ ಅಗ್ರಜ ಎಂದು ಒಪ್ಪಿಕೊಂಡಿದ್ದೇವೆ. ಮತ್ತೆ ನಿಮಗೆ ಧರ್ಮರಾಯನ ಪಟ್ಟವನ್ನು ಕಟ್ಟಿದ್ದೇವೆ. ಆದ್ದರಿಂದ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನೀವು ಕಳ್ಳತನ ಮಾಡಿ ನನಗೆ ಧರ್ಮರಾಯನ ಪಟ್ಟ ನನಗೆ ಕೊಡುತ್ತಿದ್ದೀರಿ.

ಉಪಾಧ್ಯಕ್ಷರು :- ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಅವರು ಟೀಕೆ ಮಾಡುವುದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ. ಸತ್ಯ,ಧರ್ಮ, ನೀತಿ ಎಂಬುದು ಏನಾದರು ಇದ್ದರೆ ಮತ್ತು ಈ ಸರ್ಕಾರದ ಬಗ್ಗೆ ನಂಬಿಕೆ ಅಥವಾ ಅಪನಂಬಿಕೆ ಕಳೆದುಕೊಂಡಿದ್ದರೆ ಈಗ ನಮ್ಮ ಉಪನಾಯಕರು ಮಾತನಾಡಿರುವ ವಿಷಯದ ಬಗ್ಗೆ ಅವರು ಚರ್ಚೆ ಮಾಡಲಿ. ಅದನ್ನು ಬಿಟ್ಟು ಕಳ್ಳರು,ಸುಳ್ಳರು ಎಂದು ಹೇಳುವುದಲ್ಲ. ಇವರ ಕಾಲದಲ್ಲಿ ಇವರು ಹಗಲು ದರೋಡೆ ಮಾಡುತ್ತಿದ್ದಾರೆ. (ಗೊಂದಲ) ಇವರು ಹಗಲಿನಲ್ಲಿ ಕಳ್ಳತನ ,ದರೋಡೆ ಮತ್ತು ಬೀಗ ಒಡೆಯುವಂಥ ಕೆಲಸ ಮಾಡುತ್ತಿದ್ದಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿ.ಟಿ.ರವಿಯವರು..

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ. ಮಾನ್ಯ ಪ್ರಕಾಶ್ ಹುಕ್ಕೇರಿಯವರೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರವಿಯವರೆ ತಾವು ಮಾತನಾಡಿ.

ಶ್ರೀ ಸಿ.ಟಿ. ರವಿ:- ಮಾನ್ಯ ಉಪಾಧ್ಯಕ್ಷರೆ, ನಾನು ಸತ್ಯ ಶೋಧನೆಯ ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತಿದ್ದೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ರಾಜ್ಯ ಸಭಾ ಸದಸ್ಯತ್ವಕ್ಕೆ ಅವರಿಗೆ ಹೇಗೆ ಟಿಕೆಟ್ ಕೊಟ್ಟಿದ್ದೀರಿ? ಮೊದಲು ಇದಕ್ಕೆ ಉತ್ತರ ಕೊಡಿ.

ಶ್ರೀ ಸಿ.ಟಿ. ರವಿ : ಅದಕ್ಕೂ ಕೂಡ ಖಂಡಿತ ಉತ್ತರ ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು :- ಮಾನ್ಯ ಕೃಷ್ಣಮೂರ್ತಿಯವರೆ, ನಿಮಗೆ ಈಗಾಗಲೇ ಅವಕಾಶ ಕೊಟ್ಟಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ನಿಮ್ಮದು ಮಾತನಾಡಿ ಮುಗಿಯಿತಲ್ಲವೇ? ಸತ್ಯ ಶೋಧನೆಯ ಪ್ರಾಮಾಣಿಕತನದ ಬಗ್ಗೆ ಹೇಳುತ್ತಿದ್ದೇನೆ. ಅದನ್ನು ಬ್ರಾಂಡ್ ಮಾಡಿ ಲೀಸ್ಟ್ ಮಾಡಬೇಕೆಂಬ ಉದ್ದೇಶ ನನಗೆ ಇರಲಿಲ್ಲ. ಆದರೆ, ಸತ್ಯ ಶೋಧನೆಯ ಹಿಂದಿನ ಪ್ರಾಮಾಣಿಕತೆಯನ್ನು ಬಿಚ್ಚಿಡುವುದಕ್ಕೋಸ್ಕರ ಆ ಪದವನ್ನು ನಾನು ಪ್ರಯೋಗ ಮಾಡಿದೆ. ಬೇರೆ ಯಾವುದೇ ಉದ್ದೇಶದಿಂದ ನಾನು ಮಾಡಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಸಚಿವರಾದಂಥ ಶ್ರೀ ಅಶೋಕ್‌ರವರು ಮಾನ್ಯ ರವಿರವರ ಪಕ್ಕದಲ್ಲಿ ಏಕೆ ಕುಳಿತುಕೊಂಡಿದ್ದಾರೆಂಬುದು ಗೊತ್ತಿಲ್ಲ. ಮಾತನಾಡುವುದಕ್ಕೆ ಅವರಿಗೇನಾದರು ತಯಾರಿ ಕೊಡುತ್ತಿದ್ದೀರಾ?

ಶ್ರೀ ಸಿ.ಟಿ. ರವಿ :- ಮಾನ್ಯ ಉಪಾಧ್ಯಕ್ಷರೆ, ನಾನು ಏತಕ್ಕಾಗಿ ಆ ಮಾತನ್ನು ಹೇಳಿದೆ ಎಂದರೆ, 43 ಹೊಸ ಗಣಿಯ ಲೈಸೆನ್ಸ್‌ಗೆ ಶಿಫಾರಸ್ಸನ್ನು ಮಾಜಿ ಮುಖ್ಯ ಮಂತ್ರಿಯಾಗಿರುವ ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಆಗಿದೆ ಎನ್ನುವ ಸತ್ಯ ಗೊತ್ತಿದೆ. ಮಾಜಿ ಮುಖ್ಯ ಮಂತ್ರಿಗಳಾದಂಥ ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ 44 ಗಣಿಗಳಿಗೆ ಲೈಸೆನ್ಸ್ ಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರತಕ್ಕಂಥ ಸತ್ಯ ಕೂಡ ಗೊತ್ತಿದೆ. ಆದರೆ, ಗಣಿಯ ಗುತ್ತಿಗೆ ಅವಧಿ ಮುಗಿದು ಹೋಗಿದ್ದರೆ ಅವಧಿ ಮುಗಿಯುವುದಕ್ಕಿಂತ ಮುಂಚೆ ಅಂದರೆ ಒಂದು ವರ್ಷದ ಮುಂಚೆ

ಅನುಮತಿಗೆ ಅರ್ಜಿ ಸಲ್ಲಿಸಬೇಕೆಂದು ನಿಯಮದಲ್ಲಿದೆ. ರಾಜ್ಯ ಸರ್ಕಾರ ಒಂದು ವರ್ಷದ ಅವಧಿಗೆ ಮಾತ್ರ ನಿಯಮ 24(ಎ)ಪ್ರಕಾರ ವಿಳಂಬ ಮನ್ನಾ ಮಾಡಲು ಅವಕಾಶ ಇರುತ್ತದೆ. ಹಿಂದಿನ ಸರ್ಕಾರಗಳು ಈ ಕೆಳಕಂಡ 7 ಪ್ರಕರಣಗಳಲ್ಲಿ ನಿಯಮ ಉಲ್ಲಂಘಿಸಿ ಗಣಿ ಗುತ್ತಿಗೆಯನ್ನು ನವೀಕರಣ ಮಾಡಿದೆ. ಅಂದರೆ, ಒಂದು ವರ್ಷದ ಅವಧಿಯಲ್ಲಿ ಅವರು ಅರ್ಜಿ ಹಾಕಿ ಗಣಿ ಗುತ್ತಿಗೆಯ ಅವಧಿಯನ್ನು ನವೀಕರಣ ಮಾಡಿಸಿಕೊಳ್ಳಬಹುದು. ಆರ್.ಚಾರುಚಂದ್ರ ಮಿನರಲ್ಸ್ ಕಂಪನಿಯದು ಎರಡೂವರೆ ವರ್ಷ ವಿಳಂಬವಾಗಿದೆ. ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಈ ಕಂಪನಿಯ ಗಣಿ ಗುತ್ತಿಗೆಯ ನವೀಕರಣ ಮಾಡಲಾಗಿದೆ. ಮತ್ತೆ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಅಂದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಂಥ ಕಾಲದಲ್ಲಿ 23.1.2006 ರಲ್ಲಿ ಕೆನರಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್‌ನ ಲೈಸೆನ್ಸ್‌ನ್ನು ನವೀಕರಣ ಮಾಡಿದ್ದಾರೆ. ಆರ್ ಚಾರುಚಂದ್ರರವರದು 1-11-2002ರಲ್ಲಿ ನವೀಕರಣ ಮಾಡಿದ್ದಾರೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಯಾವ ಸರ್ಕಾರ ಇತ್ತು? ಅದನ್ನು ನಾನು ಇಲ್ಲಿ ಬಾಯಿ ಬಿಟ್ಟು ಹೇಳಬೇಕಾಗಿಲ್ಲ. ಸತ್ಯ ಶೋಧನ ಸಮಿತಿಯ ಪ್ರಾಮಾಣಿಕತೆ ಏನೆಂಬುದನ್ನು ಹೇಳುವುದಕ್ಕೋಸ್ಕರ ಆ ಪದವನ್ನು ನಾನು ಉಪಯೋಗ ಮಾಡಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಸಮ್ಮಿಶ್ರ ಸರ್ಕಾರ ಇದ್ದಂಥ ಅವಧಿಯಲ್ಲಿ ದಿನಾಂಕ 23-1-2006ರಲ್ಲಿ ಮತ್ತೊಂದು ಕೆನರಾ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್‌ದು 15 ವರ್ಷ ವಿಳಂಬವಾಗಿದೆ. ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಂಥ ಅವಧಿಯಲ್ಲಿ ಇದಕ್ಕೆ ಕೊಡಲಾಗಿದೆ. ಮೂಕಾಂಬಿಕ ಮಿನರಲ್ಸ್ (ಗೊಂದಲ) ಯಾರ್‍ಯಾರ ಕೈಯಲ್ಲಿ ಅಧಿಕಾರ ಇತ್ತು, ಯಾರದು ನಡೆಯುತ್ತಿತ್ತು ಎಂಬುದು ನಿಮಗೂ ಸಹ ಗೊತ್ತಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಆಗ ಯಾವ ಸಮ್ಮಿಶ್ರ ಸರ್ಕಾರ ಇತ್ತೆಂದು ಹೇಳಿ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸರ್ಕಾರ ಇತ್ತೆಂದು ಅವರು ಹೇಳುತ್ತಿಲ್ಲ.

ಶ್ರೀ ಸಿ.ಟಿ. ರವಿ :- ಆಗ ದಳ ಮತ್ತು ಬಿಜೆಪಿ ಪಕ್ಷದ ಸಮ್ಮಿಶ್ರ ಸರ್ಕಾರ ಇದ್ದ ಅವಧಿಯಲ್ಲಿ ಕೆನರಾ ಮಿನಿರಲ್ಸ್ ಪ್ರೈವೇಟ್ ಲಿಮಿಟೆಡ್‌ದು 15 ವರ್ಷ ವಿಳಂಬವಾಗಿದೆ. ಇದು ಯಾವ ಬಿಜೆಪಿ ಶಾಸಕರದೆಂದು ನನಗೆ ಗೊತ್ತಿಲ್ಲ. ಮೂಕಾಂಬಿಕ ಮಿನರಲ್ಸ್‌ದು ಎರಡೂವರೆ ವರ್ಷಗಳು ವಿಳಂಬವಾಗಿದೆ. ಇದು ಕೂಡ ನೀವು ಹೇಳಿದ ಹಾಗೆ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಯಾಗಿದ್ದ ಅವಧಿಯಲ್ಲಿ ಅಲ್ಲ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಮ್ಮಿಶ್ರ ಸರ್ಕಾರ ಮಾಡಿದಂಥ ಅವಧಿಯಲ್ಲಿ ಆಗಿದೆ.

ವಿ.ಎಸ್.ಸುಗುಣರಾಜ್ ಕಂಪನಿ, ಮೂರು ವರ್ಷ ವಿಳಂಬ ಅದು ಕೂಡ ನಿಮ್ಮ ನೇತೃತ್ವದ ಅವಧಿಯಲ್ಲಿಯೇ? ಕೆ.ನಿರಂಜನ್ ಕಂಪನಿ, 11 1/2 ವರ್ಷ ವಿಳಂಬ ತಮ್ಮ ನೇತೃತ್ವದ ಅವಧಿಯಲ್ಲಿಯೇ ಆಗಿರುವುದು. ಯಾವ ನಿಯಮವನ್ನು ಇಲ್ಲಿ ಪಾಲಿಸಿದ್ದೀರಿ. "ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?"

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಿಯಮ ಏನು ಉಲ್ಲಂಘನೆ ಯಾಗಿದೆ ಎನ್ನುವುದರ ಬಗ್ಗೆ ದಯವಿಟ್ಟು explain ಮಾಡುವುದಕ್ಕೆ ಹೇಳಿ.

ಶ್ರೀ ಸಿ.ಟಿ. ರವಿ :- ನಿಯಮ ಉಲ್ಲಂಘನೆ ಅಂದರೆ, ಅಪ್ಲಿಕೇಷನ್ ಹಾಕಲಿಕ್ಕೆ ಒಂದು ವರ್ಷದ ಅವಧಿಯಲ್ಲಿ ಮಾತ್ರ ಅವಕಾಶ ಇರುತ್ತದೆ. ಎರಡೂವರೆ ವರ್ಷ ಆದವುಗಳನ್ನು ಹೇಗೆ ಕೊಡುವುದಕ್ಕೆ ಬರುತ್ತದೆ. 13-14 ವರ್ಷ ಆಗಿರುವುದನ್ನು ಕೊಡುವುದಕ್ಕೆ ಬರುತ್ತದೆಯೇ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅಪ್ಲಿಕೇಷನ್ ಆ ಅವಧಿಯಲ್ಲಿಯೇ ಹಾಕಿರುತ್ತಾರೆ. ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಇಟ್ಟುಕೊಂಡು ಮಾನ್ಯ ರವಿಯವರು ಹೇಳಬೇಕು. ಅವರು ವೀರಾವೇಶದಿಂದ ಹೇಳುತ್ತಿದ್ದಾರೆ. ಬಾಯಿಗೆ ಬಂದಂತೆ ಏನು ಬೇಕಾದರೂ ಹೇಳಬಹುದೆ?

ಶ್ರೀ ಸಿ.ಟಿ. ರವಿ :- ನಾನು renewal ಬಗ್ಗೆ ಮಾತ್ರ ಸಂಬಂಧಪಟ್ಟಂತೆ ಹೇಳಿರುವುದು. ನಾನು ಸ್ಯಾಂಪಲ್ ಮಾತ್ರ ಹೇಳಿದ್ದೇನೆ. ಇದೆಲ್ಲವನ್ನು ಯಾವ ಆಧಾರದಲ್ಲಿ ಕೊಟ್ಟರು? ಈ ದೇಶದ ರಾಷ್ಟ್ರೀಯ ಸಂಪತ್ತು ಉಳಿಯಬೇಕೆಂದು ಅನುಮತಿಯನ್ನು ಕೊಟ್ಟಿದ್ದೀರಾ? ಅಥವಾ ಇದರಿಂದ ರಾಜ್ಯದ ಬೊಕ್ಕಸಕ್ಕೆ ತುಂಬಾ ಲಾಭವಾಗುತ್ತದೆಂದು ಕೊಟ್ಟಿರುತ್ತೀರಾ? ಏಕೆ ಕೊಟ್ಟರು. ಅಥವಾ ಇಲ್ಲಿರುವ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಕೊಟ್ಟಿರುತ್ತಾರಾ? ಪರಿಸರ ಉತ್ತಮವಾಗುತ್ತದೆಂದು ಕೊಟ್ಟಿರುತ್ತಾರಾ? ಯಾವ ಆಧಾರದ ಮೇಲ ಅನುಮತಿಯನ್ನು ಕೊಟ್ಟರು. ಮಾನ್ಯ ಜಯಚಂದ್ರರವರೆ, ನಾನು ತಾವು ಎತ್ತಿರತಕ್ಕಂಥ ಪ್ರಶ್ನೆಗೆ ತಮಗೆ ಬೆಂಬಲವನ್ನು ಕೊಡುತ್ತಿದ್ದೇನೆ. ತಾವು ಸಂಕಟದಿಂದ ಯಾವ ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಅಸಹಾಯಕತೆಯಿಂದ ಇದ್ದೀರಿ ಆ ಪ್ರಶ್ನೆಗಳಿಗೆ ನಾನು ನಿಮಗೆ ಬೆಂಬಲವನ್ನು ಕೊಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :- ತಾವು ಜವಾಬ್ದಾರಿಕೆಯಿಂದ ಮಾತನಾಡಬೇಕು.

ಶ್ರೀ ಸಿ.ಟಿ. ರವಿ :- ಮಾನ್ಯ ಉಪಾಧ್ಯಕ್ಷರೆ, ನಾನು ಏನು ತಪ್ಪು ಮಾತನಾಡಿದ್ದೇನೆ?

ಶ್ರೀ ಟಿ.ಬಿ. ಜಯಚಂದ್ರ :- ನಾನು ನಿಮಗೆ ಸಹಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಟಿ. ರವಿ :- ನೀವು ನನಗೆ ಸಹಾಯ ಮಾಡಿದರೆ..

ಶ್ರೀ ಟಿ.ಬಿ. ಜಯಚಂದ್ರ :- ಇನ್ನೊಂದು ತಿಂಗಳಾಗಲಿ ನಿಮಗೆ ಗಣಿಗಾರಿಕೆ ಬಗ್ಗೆ ಅರ್ಥವೇ ಆಗುವುದಿಲ್ಲ. ನೀವು ವಿಷಯವನ್ನು ಅರ್ಥ ಮಾಡಿಕೊಂಡಿಲ್ಲವೆಂದು ನಾನು ಹೇಳುತ್ತಿದ್ದೇನೆ. Joint responsibility ಇತ್ತು ಎನ್ನುವುದರ ಬಗ್ಗೆ ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಸಿ.ಟಿ. ರವಿ :- ನಿಮ್ಮ ಬಗ್ಗೆ ನನಗೆ ಅರ್ಥಮಾಡಿಕೊಳ್ಳುವುದಕ್ಕಾಗಿಲ್ಲ. ಇನ್ನು ಅಕ್ರಮ ಗಣಿಗಾರಿಕೆಯ ಬಗ್ಗೆ ಹೇಗೆ ಗೊತ್ತಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ :- ಆಗ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳು ಆಗಿದ್ದರು ಎನ್ನುವುದನ್ನು ಮರೆಯಬೇಡಿ. ಅದಕ್ಕಾಗಿ joint responsibility ಇದೆ ಎಂದು ಹೇಳಿದೆ. It is the joint responsibility of the cabinet.

ಶ್ರೀ ಸಿ.ಟಿ. ರವಿ :- ಇವೆಲ್ಲಾ ಅರಿವು ಇದ್ದೇ ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಮತ್ತು ತಾವು ಕಾಂಗ್ರೆಸ್ ಪಕ್ಷದಲ್ಲಿದ್ದು ಅಸಹಾಯಕರಾಗಿ ಪ್ರಾಮಾಣಿಕತೆಯ ಉದ್ಧೇಶದಿಂದ ತಾವು ಪ್ರಶ್ನೆಗಳನ್ನು ಮುಂದಿಟ್ಟು ಜನರ ಬದುಕು ಹಳ್ಳಿಯಲ್ಲಿ ದುಸ್ಥರವಾಗಿದೆ, ಅವರು ಯಾವ ಪರಿಸ್ಥಿತಿಯಲ್ಲಿದ್ದಾರೆ, ಅವರು ಧೂಳು ಕುಡಿದುಕೊಂಡು ಹೇಗೆ ಬದುಕುತ್ತಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರು ಇಲ್ಲ. ಇವೆಲ್ಲಾ ಪ್ರಶ್ನೆಯನ್ನು ಮುಂದಿಟ್ಟಿದ್ದೀರಿ. ಆ ಪ್ರಶ್ನೆಗೆ ಬೆಂಬಲಾರ್ಥವಾಗಿ ನಾನು ಹೇಳಿದ್ದು. ಇವುಗಳಿಗೆ ನವೀಕರಣವನ್ನು ಮಾಡಬೇಕಾದರೆ ಹೊಸ ಗಣಿಗಾರಿಕೆಗೆ ಶಿಫಾರಸ್ಸು ಕೊಡಬೇಕಾದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ. ಹಳ್ಳಿಗಳ ಜನರ ಬದುಕು ಸುಧಾರಿಸುತ್ತದೆ. ರಸ್ತೆಗಳು ಸುಧಾರಣೆಯಾಗುತ್ತವೆಂದು ಏನಾದರೂ ಕೊಟ್ಟಿದ್ದೀರಾ, ಇದು ನನಗೆ ಗೊತ್ತಿಲ್ಲ. ನನಗೆ ಗಣಿಗಾರಿಕೆ ಬಗ್ಗೆ ಬಹಳ ಅನುಭವ ಇದೆ. ನಾನು ಆಳವಾಗಿ ಅಧ್ಯಯನ ಮಾಡಿದ್ದೇನೆ, ದೇವರಾಣೆ ಇಲ್ಲ. ಆದರೆ ಯಾವ ಉದ್ದೇಶದಿಂದ ಕೊಟ್ಟಿರುತ್ತೀರಿ ಎನ್ನುವುದು ನನಗೆ ಅರ್ಥವಾಗಬೇಕಲ್ಲ. ನಾಳೆ ನಾನು ಹೊರಗಡೆ ಹೋಗಿ ಹೇಳಬೇಕಲ್ಲವೆ? ಇಲ್ಲಾ ಮಾಜಿ ಮುಖ್ಯಮಂತ್ರಿಗಳಾದ

ಧರ್ಮಸಿಂಗ್‌ರವರ ಕಾಲದಲ್ಲಿ 43 ಗಣಿಗಳಿಗೆ ಶಿಫಾರಸ್ಸು ಮಾಡಿದ್ದು, ಈ ಜನರ ಉದ್ಧಾರ ಮಾಡುವುದಕ್ಕೆ ಎಂದು ಹೇಳಬೇಕಲ್ಲವೆ?

ಶ್ರೀ ಟಿ.ಬಿ. ಜಯಚಂದ್ರ :- ಈಗಲೂ ಅವುಗಳನ್ನು ವಾಪಸ್ಸು ತರಿಸುವುದಕ್ಕೆ ಅವಕಾಶವಿದೆ. ವಾಪಸ್ಸು ತರಿಸಿ.

ಶ್ರೀ ಸಿ.ಟಿ. ರವಿ : ನೀವು ಅದನ್ನು ಕೇಳಲಿಲ್ಲವೆ?

(ಗೊಂದಲ)

ಉಪಾಧ್ಯಕ್ಷರು :- ನೀವು ಈ ರೀತಿ ಮಧ್ಯೆದಲ್ಲಿ ಅವರಿಗೆ disturb ಮಾಡಿದರೆ ಅವರು ಬೇಗ ಮುಗಿಸುವುದೇ ಇಲ್ಲ. ಅವರು ಮುಗಿಸಿ ಬಿಡಲಿ.

ಶ್ರೀ ಟಿ.ಬಿ. ಜಯಚಂದ್ರ :- ಒಂದು ಕೆಲಸವನ್ನು ಅವರು ಮಾಡಲಿ. ರಾಜ್ಯದ ಸಂಪತ್ತು ಉಳಿಯಬೇಕಾದರೆ, ಬಳ್ಳಾರಿಯಲ್ಲಿ ಕೊಡುತ್ತಿರುವ ಪರ್ಮಿಟ್‌ನ್ನು ನೀವು ರದ್ದು ಮಾಡಿಬಿಡಿ. ಅಲ್ಲಿಗೆ ಒಬ್ಬ ಪೋಲೀಸ್‌ರನ್ನು ಹಾಕಿ ಟೈಟ್ ಮಾಡಿಬಿಡಿ, ಅಲ್ಲಿ ಪರಿಸ್ಥಿತಿ ಎಲ್ಲಿಗೆ ಬರುತ್ತದೆ ನೋಡೋಣ. ಅದನ್ನು ಮಾಡಿ ಎಂದು ಹೇಳಿದರೆ, ಅದನ್ನು ಬಿಟ್ಟು ಏನೆಲ್ಲಾ ಹರಿಕತೆಯನ್ನು ನೀವು ಹೇಳುತ್ತಿದ್ದೀರಿ. ಧಾರ್‌ವಾಹಿಯ ತರಹ ಹೇಳಿದರೆ ನಾವೆಲ್ಲಾ ಕೇಳುವುದಿಲ್ಲ. ನಾನು ತಮಗೆ ಒಂದು ಕಿವಿಮಾತು ಹೇಳುತ್ತಿದ್ದೇನೆ. ದಯವಿಟ್ಟು ನೀವು ಆ ಕೆಲಸವನ್ನು ಮಾಡಿ. ತಾವು ಪೋಲೀಸ್‌ರಿಂದ ಟೈಟ್ ಮಾಡಿಸಿ. ಎಲ್ಲಾ ವಿಷಯ ಈಚೆಗೆ ಬಂದು ಬಿಡುತ್ತದೆ.

ಶ್ರೀ ಸಿ.ಟಿ. ರವಿ :- ತಾವು ಹಿರಿಯ ನಾಯಕರು, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಅದಕ್ಕೆ ಮುಂಚೆ ನೀವು ಒಪ್ಪಿಕೊಳ್ಳಬೇಕಲ್ಲವೆ? ನಮ್ಮ ಸರ್ಕಾರ ಈ ರಾಜ್ಯದ ಗಣಿ ಸಂಪತ್ತು ಲೂಟಿ ಆಗುವುದಕ್ಕೆ ಅವಕಾಶ ಕೊಡದೆ ಏನು ಟೈಟ್ ಮಾಡಬೇಕೆಂದು ನೀವು ಹೇಳುತ್ತಿದ್ದೀರಿ, ಆ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ. ಆದರೆ ಅದಕ್ಕೆ ಮುಂಚೆ ನಾವು ಅಸಹಾಯಕರಾಗಿ ನಮ್ಮಿಂದ ತಪ್ಪಾಯಿತು. ನಾನು ಒಬ್ಬ ಪ್ರಭಾವಿ ಸಚಿವನಾಗಿದ್ದಾಗಲೂ ಕೂಡ ನನ್ನ ಪಕ್ಕದ ಚಿಕ್ಕನಾಯಕನಹಳ್ಳಿಯಲ್ಲಿ ಗಣಿಗಾರಿಕೆ ನಡೆಯುತ್ತಿದ್ದಾಗ ನಾನು ಅಸಹಾಯಕನಾಗಿ ಕೂಡಬೇಕಾಗಿತ್ತು ಎನ್ನುವುದನ್ನು ನೀವು ಹೇಳಬೇಕಲ್ಲವೆ?

ಉಪಾಧ್ಯಕ್ಷರು :- ಮಾನ್ಯ ಜಯಚಂದ್ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ಅವರು ಮಾತುಮಾತಿಗೂ ನನ್ನ ಹೆಸರು ತೆಗೆದುಕೊಂಡು ಹೇಳುತ್ತಿರುವುದರಿಂದ ನಾನು ಹೇಳಬೇಕಲ್ಲವೆ? 2007ರಲ್ಲಿ ಗಣಿಗಾರಿಕೆಯ ಬಗ್ಗೆ ಕೇಳುವವರು ಇರಲಿಲ್ಲ. ಮಾನ್ಯ ಕುಮಾರಸ್ವಾಮಿಯವರು ಮಾತನಾಡುವಾಗ ಮಧ್ಯೆದಲ್ಲಿ ಅವರಿಗೆ ಹೇಳುವುದಕ್ಕೆ ಹೇಗೆ ಅವಕಾಶವನ್ನು ಕೊಟ್ಟಿರಿ. ಅವರು ನಮ್ಮ ಹೆಸರನ್ನು ಹೇಳುವಾಗ ನಾವು ಸುಮ್ಮನೆ ಕೂಡಬೇಕೆ? ಅದಕ್ಕೆ ನಾವು ಹೇಳದಿದ್ದರೆ ಸರಿಯಾಗುವುದಿಲ್ಲ.

ಉಪಾಧ್ಯಕ್ಷರು :- ನೀವು ಹೇಳುವುದರಿಂದ ಅವರು ಹೇಳುತ್ತಿದ್ದಾರೆ ನೀವು ಸುಮ್ಮನೆ ಇದ್ದರೆ ಅವರು ಮುಗಿಸುತ್ತಾರೆ.

ಶ್ರೀ ಸಿ.ಟಿ. ರವಿ :- ನಾನು ಅನನುಭವಿ, ಗಣಿಯ ಬಗ್ಗೆ ನನಗೆ ಏನು ಗೊತ್ತಿಲ್ಲ. ಗೊತ್ತಿದ್ದವರೆಲ್ಲಾ ಏಕೆ ಸುಮ್ಮನೆ ಇದ್ದರು. ನಾನು ಅಷ್ಟೆ ಕೇಳಿದ್ದು ಬೇರೆ ಏನನ್ನು ಪ್ರಶ್ನೆ ಮಾಡುವುದಕ್ಕೆ ಹೋಗಿಲ್ಲ. ಹಾಗಾಗಿ ಇವತ್ತು ಯಾವುದೇ ರೀತಿಯ ಅಕ್ರಮ ಗಣಿಗಾರಿಕೆಗೆ ಆಸ್ಪದ ಇಲ್ಲದಂತೆ ನೋಡಿಕೊಳ್ಳಬೇಕಾದಂಥದ್ದು ಮತ್ತು ರಾಷ್ಟ್ರದ ಸಂಪತ್ತು ಲೂಟಿಯಾಗದಂತೆ ನೋಡಿಕೊಳ್ಳಬೇಕಾದಂಥ ಜವಾಬ್ದಾರಿ ಖಂಡಿತಾ ನಮ್ಮೆಲ್ಲರ ಮೇಲೆ ಇದೆ. ತಮ್ಮಲ್ಲಿ ಇನ್ನೊಂದು ವಿನಂತಿ ಏನೆಂದರೆ, ಅವರು ಇಲ್ಲಿ ಒಂದು ಬೆಳಕನ್ನು ಚೆಲ್ಲಿದರು. ಪಶ್ಚಿಮ ಘಟ್ಟ ಪ್ರದೇಶ ನಿಜವಾಗಲೂ ಸೂಕ್ಷ್ಮ ಪ್ರದೇಶ. Supreme Court ಕೂಡ ಇದನ್ನು ಉಲ್ಲೇಖ ಮಾಡಿದೆ. ಕುದುರೆಮುಖ ಗಣಿಗಾರಿಕೆಯನ್ನು ನಿಲ್ಲಿಸುವುದರ ಮೂಲಕ ಪಶ್ಚಿಮಘಟ್ಟದಂಥ ಸೂಕ್ಷ್ಮ ಪ್ರದೇಶದಲ್ಲಿ ಯಾವುದೇ ರೀತಿಯಾದ ಗಣಿಗಾರಿಕೆಗೆ ಆಸ್ಪದವನ್ನು ಮಾಡಬಾರದೆಂದು ಹೇಳಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಯಾವುದೇ ಪರಿಸ್ಥಿತಿಯಲ್ಲಿ ಅದರಲ್ಲಿ ಎಷ್ಟು ಕೋಟಿ ಸಂಪತ್ತು ಹುದುಗಿದ್ದರು ಪರವಾಗಿಲ್ಲ. ಆದರೆ ಪಶ್ಚಿಮಘಟ್ಟ ಮುಂದಿನ ಪೀಳಿಗೆಗೂ ಉಳಿಯಬೇಕು. ಆ ಗಣಿ ನೀತಿಯ ಪಾಲಿಸಿಯಲ್ಲಿ ಯಾವುದೆ ಕಾರಣಕ್ಕೂ ಪಶ್ಚಿಮಘಟ್ಟ ಪ್ರದೇಶಕ್ಕೆ ಯಾವುದೆ ರೀತಿಯ ಅನುಮತಿಯನ್ನು ಕೊಡದೇ ನಿರ್ಬಂಧಿಸಬೇಕು ಎನ್ನತಕ್ಕಂಥ ಒಂದು ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಅವರ ಮಾತಿಗೆ ಪೂರಕವಾಗಿ ನಾನು ಮನವಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ. ನೀವು ಹೇಳುವುದು ನನಗೆ ಅರ್ಥವಾಗಿದೆ. ಈಗ ಅನುಮತಿಯನ್ನು ಕೊಟ್ಟಿಲ್ಲ, ಅನುಮತಿಯನ್ನು ಕೊಟ್ಟವರು ತಾವು ಅದರ ಬಗ್ಗೆ ಮಾತನಾಡುವ ನೈತಿಕತೆ ನಿಮಗೆ ಇಲ್ಲ. ತಮ್ಮ ಪಕ್ಷ ಅನುಮತಿಯನ್ನು ಕೊಟ್ಟಿತ್ತಲ್ಲ ಕೇಳುವುದಕ್ಕೆ ತಮಗೆ ನೈತಿಕತೆ

ಇಲ್ಲ ಅಂತ. ಮಾಜಿ ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಕುಮಾರಸ್ವಾಮಿಯವರು ಈ ರಾಜ್ಯದ ಗಣಿ ನೀತಿಯ ಬಗ್ಗೆ ಹೇಳುತ್ತಾ ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸಲಹೆಯನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೆ ಆದರೆ ಅವರಿಂದ ಕಡೆಯವರೆಗೆ ಸಲಹೆಗಳು ಬರಲಿಲ್ಲ. ಬದಲಿಗೆ ತಮ್ಮ ಆಡಳಿತಾವಧಿಯ postmortem ಆಯಿತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ಹೋದ ಕಾರಣಕ್ಕೆ ನನ್ನ ಮೇಲೆ 150 ಕೋಟಿ ರೂ.ಗಳ ಆಪಾದನೆಯನ್ನು ಮಾಡಿದರು. ಅದನ್ನು ತಡೆಯುವ ಬಗ್ಗೆ ಸಲಹೆಯನ್ನು ಕೊಡುವದಕ್ಕೆ ಹೋದರೆ ಇನ್ನಾವ ಆಪಾದನೆ ಮಾಡುತ್ತಿದ್ದರೂ ಗೊತ್ತಿಲ್ಲ.

ಶ್ರೀ ಸಿ.ಟಿ. ರವಿ :- ಅಂದರೆ ಪ್ರಾಮಾಣಿಕವಾಗಿ ಜನರ ಸೇವೆ ಮಾಡಬೇಕು ಎಂದು ಬಯಸುವವರು ಆಪಾದನೆಗೆ ಏಕೆ ಹೆದರಬೇಕು? ಆಪಾದನೆ ಬಿಟ್ಟು ರಾಜಕೀಯವನ್ನು ನೀವು ಬಿಟ್ಟಿದ್ದೀರಾ? ಆಪಾದನೆಯನ್ನು ಹಿಡಿದುಕೊಂಡು ರಾಜಕಾರಣವನ್ನು ಮಾಡುತ್ತಿಲ್ಲವೆ? ಮತ್ತೆ ಏಕೆ ಹೆದರಬೇಕು. ತಮ್ಮ ಉದ್ದೇಶ ಪ್ರಾಮಾಣಿಕವಾಗಿದ್ದರೆ, ಏಕೆ ಹೆದರುತ್ತೀರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ದತ್ತಪೀಠದ ಬಗ್ಗೆ ನಿಮಗೆ ವಿಷಯ ಗೊತ್ತಿರುತ್ತದೆ. ಗಣಿ ಬಗ್ಗೆ ಚರ್ಚೆ ಮಾಡಬೇಕೆಂದರೆ ನಿಮಗೆ ಏನು ಗೊತ್ತಿದೆ. ಸ್ವಲ್ಪ ಮಾತನಾಡಬೇಕಾದರೆ ನೀವು ಹೋಗಿ ದತ್ತಪೀಠದ ಮುಂದೆ ಕುಣಿಯುತ್ತೀರಿ ಅಲ್ಲ, ಆ ದೇವರ ಮೇಲೆ ನಿಮಗೆ ನಂಬಿಕೆ ಇದ್ದರೆ; ಈಗ 7 ತಿಂಗಳಿಂದ ಬಳ್ಳಾರಿಯಲ್ಲಿ ನಡೆಯುತ್ತಿದೆ ಅಲ್ಲಾ ನಿಮ್ಮ ಆತ್ಮವನ್ನು ಮುಟ್ಟಿ ನೋಡಿಕೊಂಡು ಕೆಲಸವನ್ನು ಮಾಡಿ.

ಶ್ರೀ ನೆ.ಲ. ನರೇಂದ್ರಬಾಬು :- ಮಾನ್ಯ ಅಧ್ಯಕ್ಷರೆ, ಸಮಯವನ್ನು ನಿಗದಿ ಮಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಾವು ಸಿಗ್ನೇಟರ್ಸ್ ಇರುವುದರಿಂದ ತಾವು ಸಮಯವನ್ನು ನಿಗದಿ ಮಾಡಿ.

ಶ್ರೀ ಸಿ.ಟಿ.ರವಿ :- ರಾಜಕಾರಣ ನನಗೆ ಪಿತ್ರಾರ್ಜಿತವಾಗಿ ಆಸ್ತಿಯಾಗಿ ಬಂದಿಲ್ಲ. ಏನು ಮಾಡುತ್ತೀರಿ ಹೇಳಿ? ಎಲ್ಲ ಅನುಭವವನ್ನು ಗಳಿಸಿಕೊಳ್ಳುವುದಕ್ಕೆ ರಾಜಕಾರಣ ನನಗೆ ಪಿತ್ರಾರ್ಜಿತ ಆಸ್ತಿಯಾಗಿ ಬಂದಿಲ್ಲ. ಅದು ನಮಗೆ

ಸ್ವಯಾರ್ಜಿತವಾದ ಬಳುವಳಿ. ನಮ್ಮ ಅಪ್ಪ ರಾಜಕೀಯದಲ್ಲಿ ಇರಲಿಲ್ಲ, ನಮ್ಮ ಅವ್ವ ರಾಜಕೀಯದಲ್ಲಿ ಇರಲಿಲ್ಲ. ಅವರು ಹೆಸರು ಮತ್ತು ಅಧಿಕಾರದ ಬಲ ಅವರ ಹಣದ ಬಲ ಇದ್ದಿದ್ದರೆ ಎಲ್ಲಾ ಅನುಭವ ನನಗೆ ಆಗಿಯೇ ಆಗುತ್ತಿತ್ತು. ಆದರೆ ನನಗೆ ನಾನೆ ಅನುಭವವನ್ನು ಗಳಿಸಿಕೊಳ್ಳಬೇಕು. ಹಾಗಾಗಿ ಎಲ್ಲವೂ ನನಗೆ ಗೊತ್ತಿದೆ ಎಂದು ನಾನು ಹೇಳುತ್ತಿಲ್ಲ. ಆದ್ದರಿಂದ ನಾನು ನನ್ನ ಅನುಭವವನ್ನು ಗಳಿಸಿಕೊಳ್ಳಬೇಕು.

ಲಾಟರಿ ಹೊಡೆದ ಹಾಗೆ ನಮಗೆ ಅಧಿಕಾರ ಒದಗಿ ಬರಲಿಲ್ಲ. ನಮ್ಮ ಅಪ್ಪ ಸಾಮಾನ್ಯ ಮಧ್ಯಮ ವರ್ಗದ ರೈತ. ನಾನು Government school product. ನಾನು convent school product ಕೂಡ ಅಲ್ಲ. ನನಗೆ ಎಲ್ಲ ಅರ್ಥವಾಗುವುದಕ್ಕೆ ನಾನು convent product ಕೂಡ ಅಲ್ಲ. ನಾನು Government school product. ನನಗೆ ಎಷ್ಟು ಅರ್ಥವಾಗುತ್ತದೆ ಹೇಳಿ. ಜನಸಾಮಾನ್ಯರ ನಡುವೆ ನಾನು ಬೀದಿಯಲ್ಲಿ ಹೋರಾಟ ಮಾಡಿದ್ದೇ ಹೆಚ್ಚು ಹೊರತು ನನಗೆ ಅಧಿಕಾರದ ಅನುಭವ, ಈ ಯಾವ ಅನುಭವಗಳು ಕೂಡ ನನಗೆ ಇಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರವಿಯವರು Government school product ಎಂದು ಹೇಳುತ್ತಿದ್ದಾರೆ. ಸರಿಯಾದ product ಆಗಬೇಕಾದರೆ ಅನುಭವ ಇರಬೇಕು.

ಶ್ರೀ ಸಿ.ಟಿ. ರವಿ :- ನಾನು ನಿಮಗೆ ಈಗ ಹೇಳಿಬಿಟ್ಟಿದ್ದೇನೆ. ನಿಮ್ಮ ಹಿರಿತನದ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ.ಆದರೂ ಸಹ ನೀವು ಏತಕ್ಕಾಗಿ ನನ್ನ ಮೇಲೆ ಮೇಲುಗೈ ಸಾಧಿಸುವುದಕ್ಕೆ ಬರುತ್ತೀರಿ? ನಾನು ಒಪ್ಪಿಕೊಂಡು ಬಿಟ್ಟಿದ್ದೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ :- ಅಧ್ಯಕ್ಷರೇ, ಇನ್ನು ಗಡಿ ಸಂಬಂಧ ಇರಬಹುದು, ಗಣಿ ಸಂಬಂಧ ಇರಬಹುದು. ಯಾರು ಈ ಅಕ್ರಮ ಗಣಿಗಾರಿಕೆಗೆ ಕಾರಣೀಭೂತರಾಗಿದ್ದಾರೆ? ಇದು ನಮ್ಮ ಕುತ್ತಿಗೆಗೆ ಸುತ್ತಿಕೊಳ್ಳಬಾರದು, ಲೋಕಾಯುಕ್ತ ವರದಿ ಈಗ ಉರುಳಾಗುತ್ತಿದೆ ಎಂಬ ಸತ್ಯ ಈಗ ಅವರೆಲ್ಲರಿಗೂ ಗೊತ್ತಾಗಿದೆ. ಇದು ಅವರಿಗೆ ಗೊತ್ತಾಗಿ ದೊಡ್ಡ ಬಾಯಿಯಿಂದ ತಮ್ಮ ಆರೋಪದಿಂದ ಮುಕ್ತರಾಗಬಹುದು ಎಂದು ಹೇಳಿ ಬಯಸಿದ್ದಾರೆ. ಆ ರೀತಿಯಾಗಿ ಅವರು ಭಾವಿಸಿದ್ದಾರೆ. ಈ ದೊಡ್ಡ ಬಾಯಿಯನ್ನು ಮಾಡುವುದರಿಂದ ಆರೋಪಗಳಿಂದ ಮುಕ್ತರಾಗುವುದಿಲ್ಲ. "ಉಪ್ಪು

ತಿಂದವನು ನೀರನ್ನು ಕುಡಿಯಲೇಬೇಕು". ಇದು ಸತ್ಯ. ಅಕ್ರಮಗಳಿಗೆ ಅವಕಾಶವನ್ನು ಮಾಡಿಕೊಟ್ಟಿರುವಂತಹವರನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೇ ರೀತಿಯಲ್ಲಿ ಅವರು ಎಷ್ಟೇ ದೊಡ್ಡವರಿರಲಿ, ಅವರನ್ನು ಬಯಲಿಗೆಳೆಯುವ ಕಾರಣಕ್ಕೋಸ್ಕರ, ನಮ್ಮ ಅಧಿಕಾರ ಹೋಗುತ್ತದೆ ಎಂದರೂ ಚಿಂತೆಯಿಲ್ಲ, ಅವರನ್ನು ಬಯಲಿಗೆಳೆದು ಶಿಕ್ಷಿಸತಕ್ಕಂತಹ ಕೆಲಸವನ್ನು ಮಾಡುತ್ತೀರೆಂಬ ವಿಶ್ವಾಸದಿಂದ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಸದಸ್ಯರಾದ ಶ್ರೀ ರವಿಯವರು ಬಹಳ ಚೆನ್ನಾಗಿ ಭಾಷಣವನ್ನು ಮಾಡಿದರು. ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸುತ್ತಾ ಕಡೆಗೆ CBI enquiryಯನ್ನು ಮಾಡಿಸೇ ಮಾಡಿಸುತ್ತೇವೆಂದು ಹೇಳಿ ಅವರು ಕೂಡ ನಮ್ಮ ಪರವಾಗಿ ನಿಲ್ಲುತ್ತಾರೆಂದು ತಿಳಿದುಕೊಂಡಿದ್ದೆವು. ಕಡೆಗೆ ಅವರು twist ಮಾಡಿ lastನಲ್ಲಿ ಅವರಿಗೆ ಬೇಕಾಗಿರುವುದನ್ನು ಹೇಳಿ ಮುಗಿಸಿದರು.

ಶ್ರೀ ಸಿ.ಟಿ. ರವಿ :- ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣರವರು ಈಗ CBI ಎಂದು ಕೇಳುತ್ತಿದ್ದಾರೆ. ಆಗ ಏತಕ್ಕಾಗಿ ಸುಮ್ಮನಾಗಿದ್ದೀರಿ

ಶ್ರೀ ಹೆಚ್.ಸಿ. ಬಾಲಕೃಷ್ಣ :- ಆಗಲೂ ಸಹ ನಾವು ಇದನ್ನೇ ಕೇಳುತ್ತಿದ್ದೆವು.

(ಗೊಂದಲ)

ಉಪಾಧ್ಯಕ್ಷರು :- ಧ್ರುವನಾರಾಯಣರವರು... ಈಗ ಮಾನ್ಯ ಪಾಟೀಲ್‌ರವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಎ.ಎಸ್ ಪಾಟೀಲ್ ನಡಹಳ್ಳಿ (ದೇವರಹಿಪ್ಪರಗಿ) :- ಮಾನ್ಯ ಉಪಾಧ್ಯಕ್ಷರೆ, ಬಹುಶ: ನಮ್ಮ ಸ್ನೇಹಿತರಾಗಿದ್ದಂತಹ ಶ್ರೀ ಸಿ.ಟಿ.ರವಿಯವರು ಚೆನ್ನಾಗಿ ಮಾತನಾಡಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಬಹುಶ: ಅವರು ಏನು ಸಲಹೆಗಳನ್ನು ಕೊಡಬೇಕು, ನೀವು ಏತಕ್ಕಾಗಿ ಸಲಹೆಗಳನ್ನು ಕೊಟ್ಟಿಲ್ಲ, ಸಲಹೆಗಳನ್ನು ಕೊಡಿ ಎಂದು ನಮ್ಮನ್ನು ಕೇಳಿದರು. ನಾವೆಲ್ಲರೂ ಯುವ ಶಾಸಕರಾಗಿ ಆಯ್ಕೆಯಾಗಿ ಬಂದು ಇಲ್ಲಿ ಕುಳಿತಿದ್ದೇವೆ. ಬಹುಶಃ ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಬೇಕಾಗಿದ್ದರೆ ಬಹುಶ: ಇದಕ್ಕಾಗಿ ಸ್ಪಷ್ಟವಾದ ಗಣಿ ನೀತಿಯನ್ನು

ತರಬೇಕಾಗಿದ್ದರೆ ನಾನು ಯುವ ಶಾಸಕನಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ, ಸನ್ಮಾನ್ಯ ರವಿಯುವರನ್ನು ತಕ್ಷಣ ಗಣಿ ಮಂತ್ರಿಗಳನ್ನಾಗಿ ಮಾಡಿ ಬಹುಶ: ಗಣಿ ನೀತಿಯನ್ನು ಅವರು ರೂಪಿಸಬೇಕೆಂದು ಹೇಳಿ ಮೊಟ್ಟಮೊದಲನೆಯದಾಗಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ. ರವಿ :- ನಾನು ತಮ್ಮ ಸಲಹೆಯನ್ನು ತೆಗೆದುಕೊಳ್ಳುವುದಿಲ್ಲ.

ಶ್ರೀ ಎ.ಎಸ್. ಪಾಟೀಲ್ :- ತಮಗೆ ಮಂತ್ರಿಪದವಿ ಬೇಡವೆ? ಸರಿ, ಬೇಡವೆಂದರೆ ಬೇಡ. ಅದರ ಬಗ್ಗೆ ನನಗೆ ಜಾಸ್ತಿ ಗೊತ್ತಿಲ್ಲ. ಕಳೆದ 4-5 ವರ್ಷಗಳ ಹಿಂದೆ ಈ ಗಣಿ ಬಗ್ಗೆ ಇಷ್ಟೊಂದು ಚರ್ಚೆಗಳು ಪ್ರತಿನಿತ್ಯ ಪತ್ರಿಕೆಗಳಲ್ಲಿ ಬರುವುದನ್ನು ನಾವು ಯಾರೂ ಕೂಡ ನೋಡಿರಲಿಲ್ಲ. ಬಹುಶಃ ಈ ಗಣಿಗಾರಿಕೆ ಕರ್ನಾಟಕ ರಾಜ್ಯದಲ್ಲಿ ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಯಾವಾಗ ಎಲ್ಲೆಲ್ಲಿ ಒಂದು ಗಣಿಗಾರಿಕೆ ನಡೆಯುವಂತಹ ಸಂದರ್ಭದಲ್ಲಿ ಈ ಕರ್ನಾಟಕದಲ್ಲಿ ಕೇವಲ ಕಬ್ಬಿಣದ ಅದಿರಿನ ಗಣಿಗಾರಿಕೆ ಮಾತ್ರ ನಡೆಯುತ್ತಿಲ್ಲ. ಕರ್ನಾಟಕದಲ್ಲಿ lime Stone, Dolomite, Gold, Chromite, Chromium, Magnetite ಅಕ್ರಮ ಗಣಿಗಾರಿಕೆ ಎಂಬ ಶಬ್ದ ಬಂದಿದೆ. ಈ ಗಣಿಗಾರಿಕೆಯನ್ನು ಬಹಳಷ್ಟು ಜನ ನಾವು ಸೀಮಿತವಾಗಿ ಮಾತನಾಡುತ್ತಿದ್ದೇವೆ. ಇಲ್ಲಿ ಎರಡು ರೀತಿಯಾದಂತಹ ಗಣಿಗಾರಿಕೆಗಳು ಇದೆ. ಸನ್ಮಾನ್ಯ ರವಿಯವರು ಮಾತನಾಡುವಂತಹ ಸಂದರ್ಭದಲ್ಲಿ ಬಹಳ ಗಮನವನ್ನಿಟ್ಟು ನಾನು ಕೇಳುತ್ತಿದ್ದೆ. ನಾವು ಇಲ್ಲಿ ಮಂಡನೆ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ಮಂಡನೆ ಮಾಡುತ್ತಿದ್ದೆವು.ಆದರೆ ಅವರು ಪ್ರಶ್ನೆಯನ್ನು ಮಾಡುತ್ತ ಕೇಳಿದರು. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಇಷ್ಟು ಲೈಸೆನ್ಸ್ ಗಳನ್ನು ಕೊಟ್ಟಿದ್ದಾರೆ, ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇಷ್ಟು ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆ. ಲೈಸೆನ್ಸ್‌ಗಳನ್ನು ಕೊಡುವುದನ್ನು ತಡೆಯುವಂತಹ ಅಧಿಕಾರ ಒಂದು ವೇಳೆ ಕಾನೂನು ಬದ್ದವಾಗಿದ್ದರೆ ಈ ದೇಶದ ಯಾವ ಒಬ್ಬ ಪ್ರಜೆಯೂ ಕೂಡ ಭಾರತ ದೇಶದ ಸಂವಿಧಾನಬದ್ಧವಾಗಿ ಗಣಿ/ಗುತ್ತಿಗೆಯನ್ನು ಪಡೆಯುವುದಕ್ಕೆ ಖಂಡಿತವಾಗಿ ಅರ್ಹರಾಗಿದ್ದಾರೆ. ಒಂದು ವೇಳೆ ಗಣಿ ಗುತ್ತಿಗೆಯನ್ನು ಕೊಟ್ಟಂತಹ ಸಂದರ್ಭದಲ್ಲಿ ಕಾನೂನಿನ ಚೌಕಟ್ಟನ್ನು ಮೀರಿದ್ದರೆ, ಕಾನೂನನ್ನು ಮೀರಿ ಗಣಿಗಾರಿಕೆಯನ್ನು ಮಾಡುವುದಕ್ಕೆ ಯಾವುದೇ ಸರ್ಕಾರ ಬಹುಶಃ ಅದಕ್ಕೆ ಪರವಾನಿಗೆಯನ್ನು ನೀಡಿದ್ದರೆ ತಾವು ಇವತ್ತು ಅಧಿಕಾರದಲ್ಲಿದ್ದೀರಿ, ತಮಗೆ

ಪರಮಾಧಿಕಾರವಿದೆ, ಪ್ರಜಾಪ್ರಭುತ್ವದ ವ್ಯವಸ್ಥೆ ತಮಗೆ ಸಂಪೂರ್ಣವಾದಂತಹ ಅಧಿಕಾರವನ್ನು ಕೊಟ್ಟಿದೆ. ಅದರ ಬಗ್ಗೆ ತನಿಖೆಯನ್ನು ಮಾಡಿ. ಈಗಾಗಲೇ ಕಾಂಗ್ರೆಸ್ ಪಕ್ಷ, ನಾವೆಲ್ಲ ಸದಸ್ಯರು ಮತ್ತು ನಮ್ಮ ನಾಯಕರು ನಾವು ತಮ್ಮ ಸರ್ಕಾರಕ್ಕೆ ಅಗ್ರಹವನ್ನು ಮಾಡಿದ್ದೇವೆ, ಇದರ ಬಗ್ಗೆ ಸಂಪೂರ್ಣವಾದಂತಹ ತನಿಖೆಯನ್ನು ಮಾಡುವ ಬಗ್ಗೆ CBI ತನಿಖೆಯನ್ನು ಮಾಡಿ ಎಂದು ಆಗ್ರಹವನ್ನು ನಾವು ಈಗಾಗಲೇ ಮಾಡಿದ್ದೇವೆ. ಇನ್ನು ಈ ಅಕ್ರಮ ಗಣಿಗಾರಿಕೆ ಎಂದರೇನು? ಹೇಗೆ ಈ ಅಕ್ರಮ ಗಣಿಗಾರಿಕೆ ಬಂತು? ಇದು ಎಲ್ಲಿಂದ ಬಂತು? ಬಹುಶಃ 1994ರಿಂದ ನಾನು ಕರ್ನಾಟಕದ ಚಿಕ್ಕನಾಯಕನಹಳ್ಳಿ, ಚಿತ್ರದುರ್ಗ, ಸಂಡೂರು ಮತ್ತು western ghatsನಲ್ಲಿರತಕ್ಕಂತಹ ಮೂಕಾಂಬಿಕಾ ಭಾಗದಲ್ಲಿ ಗಣಿಗಾರಿಕೆ ಪ್ರದೇಶವನ್ನು ಸ್ವತ: ಒಬ್ಬ ಭೂವಿಜ್ಞಾನಿಯಾಗಿ ಸರ್ವೆ ಮಾಡಿದ್ದೇನೆ. ಆದರೆ ಇದು ಹೇಗೆ ಅಕ್ರಮ ಗಣಿಗಾರಿಕೆ? ಇಲ್ಲಿ ಎರಡು ಪ್ರಶ್ನೆಗಳು ಬರುತ್ತದೆ. ಒಂದು ಅಕ್ರಮ ಗಣಿಗಾರಿಕೆ, ಇನ್ನೊಂದು ಗಣಿ ಒತ್ತುವರಿ. ಒಂದನ್ನು encroachment mining ಎಂದು ಕರೆಯುತ್ತೇವೆ. ಇನ್ನೊಂದು without getting the clearance from the Forest Department or without getting the clearance from the Mines & Geological Department, entering the Government land and doing the mining. ಈ ರೀತಿ 2-3 ರೀತಿಯಾದಂತಹ ವಿಷಯಗಳನ್ನು ನಾನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ encroachment of mining ಎಂದು ಹೇಳಿ ನಾವು ಏನು ಕರೆಯುತ್ತೇವೆ, ಇದರಲ್ಲಿ ಎರಡು ರೀತಿಯಾದಂತಹ encroachmentಗಳು ಆಗುತ್ತವೆ. ಒಂದು ಅರಣ್ಯ ಇಲಾಖೆಯು ಯಾವುದೇ ಒಂದು ಗಣಿ ಲೈಸೆನ್ಸ್‌ನ್ನು ಕೊಡುವಂತಹ ಸಂದರ್ಭದಲ್ಲಿ ತೆಗೆದಿರುವಂತಹ ಅದಿರನ್ನು ಸಂಗ್ರಹ ಮಾಡುವಂತಹ ಜಾಗ ಯಾವುದು ಇದೆ, Mining ಮಾಡುವಂತಹ ಜಾಗ ಯಾವುದು ಇದೆ. ಅದಿರನ್ನು ತೆಗೆಯುವಂತಹ ಸಂದರ್ಭದಲ್ಲಿ ಯಾವುದು waste ಎಂದು ನಾವು ಕರೆಯುತ್ತೇವೆ, ಯಾವುದು ಅದಿರಿಲ್ಲ ಎಂದು ನಾವು ಕರೆಯುತ್ತೇವೆ, ಅದನ್ನು ಸಂಗ್ರಹಣೆ ಮಾಡುವಂತಹ ಸ್ಥಳವನ್ನು ಸಂಪೂರ್ಣವಾಗಿ mapನಲ್ಲಿ ದಿಕ್ಕುಗಳ ಸಮೇತ, angleಗಳ ಸಮೇತ ಅದನ್ನು ಸ್ಪಷ್ಟಪಡಿಸಿದ ನಂತರ Forest Department, Mines & Geology Department, Department of Mines Safety ಯ ಎಲ್ಲಾ

ಅಧಿಕಾರಿಗಳು ಅಲ್ಲಿಗೆಹೋಗಿ ಅಲ್ಲಿ ಸ್ವತಃ ಸರ್ವೆ ಮಾಡಿ, ಅಲ್ಲಿ ವಾಸ್ತವಿಕವಾಗಿ ಸತ್ಯವಾಗಿ ಇದೆಯೇ ಎಂಬುದನ್ನು ನೋಡಿ ನಂತರ ಅಲ್ಲಿ ಗಣಿಗಾರಿಕೆಯನ್ನು ಮಾಡುವುದಕ್ಕೆ ಕಾನೂನು ಬದ್ಧವಾಗಿ ಸರ್ಕಾರ ಲೈಸೆನ್ಸ್‌ನ್ನು ಕೊಡುತ್ತದೆ.

ಲೈಸನ್ಸ್ ಕೊಟ್ಟ ನಂತರವೂ ಕೂಡ ಪ್ರತಿ ತಿಂಗಳೂ Forest Department, Department of Mines and Geology, Department of Mines Safety ಈ ಮೂರು ಇಲಾಖೆಗಳು ಪ್ರತಿ ತಿಂಗಳು ಗಣಿ ಪ್ರದೇಶಕ್ಕೆ ಭೇಟಿಯನ್ನು ಕೊಡುತ್ತಾರೆ. ಒಂದು ವೇಳೆ ಅದರ ಜೊತೆಯಲಿ ಪ್ರತಿ ತಿಂಗಳು ಗಣಿ ಮಾಲೀಕರಾದಂಥವರು, ಗಣಿ ಗುತ್ತಿಗೆಯನ್ನು ಪಡೆದಿರುವಂಥವರು ಅಲ್ಲಿ ರಿಪೋರ್ಟ್‌ಗಳನ್ನು ಕೊಡಬೇಕಾಗುತ್ತದೆ, ಎಷ್ಟು ಸಾರಿ ಅದಿರನ್ನು ತೆಗೆದಿದ್ದಾರೆ? ಎಷ್ಟು waste ತೆಗೆದಿದ್ದಾರೆ ? ಎಷ್ಟು ಮೀಟರ್ ಆಳದಲ್ಲಿ ನಾವು ಗಣಿಗಾರಿಕೆಯನ್ನು ಮಾಡಿದ್ದೇವೆ ಎನ್ನುವುದರ ಬಗ್ಗೆ ಸಂಪೂರ್ಣವಾದಂಥ ವರದಿ ಸರ್ಕಾರದ ಮುಂದೆ ಹಾಗು ಪ್ರತಿ ಇಲಾಖೆಗಳ ಮುಂದೆ ಇರುತ್ತದೆ.

(ಗೊಂದಲ)

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ :- ಸಭಾಧ್ಯಕ್ಷರೆ, ನಾನು ವಾಸ್ತವವಾಗಿ ಮಾತನಾಡುತ್ತಿದ್ದೇನೆ. ಅದು ಸರ್ಕಾರಕ್ಕೆ ಬಿಟ್ಟಿದ್ದು. ನಾವು ಮಾತನಾಡುವಂಥ ಸಂದರ್ಭದಲ್ಲಿ ಮೊದಲು ಗಣಿಗಾರಿಕೆ ಎಂದರೆ ಏನು ಎಂದು ತಿಳಿದು ಕೊಳ್ಳಬೇಕಾಗಿದೆ.

ಉಪಾಧ್ಯಕ್ಷರು :- ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ :- ರಾಜುರವರೇ ನಾನು ಅಕ್ರಮ ಗಣಿಗಾರಿಕೆಗೆ ಬರುತ್ತೇನೆ. ನಾವು ಮೊದಲು ಅಕ್ರಮ ಗಣಿಗಾರಿಕೆ ಎಂದರೆ ಯಾವುದು ಸಕ್ರಮ ಗಣಿಗಾರಿಕೆ ಎಂದರೆ ಯಾವುದು ಎಂದು ತಿಳಿದುಕೊಳ್ಳಬೇಕು. ಅದು ಗೊತ್ತಿಲ್ಲದೇನೇ ಸುಮ್ಮನೆ ಅಕ್ರಮ, ಅಕ್ರಮ ಎಂದು ಹೇಳಿ ಇಡೀ ಕರ್ನಾಟಕದ ತುಂಬಾ 5 ವರ್ಷಗಳಿಂದ ಎಲ್ಲಾ ಸದನಗಳಲ್ಲಿ ಏನು ಅಕ್ರಮ, ಅಕ್ರಮವೆಂದು ಹೇಳುತ್ತಿದ್ದಾರೆ. ಅಕ್ರಮ ಯಾವುದು? ಸಕ್ರಮ ಯಾವುದು ಎಂದು ಹೇಳುವುದಕ್ಕೆ ನನ್ನನ್ನು ಜನ ಆರಿಸಿ

ಕಳುಹಿಸಿದ್ದಾರೆ. ನನಗೆ ಹಕ್ಕಿದೆ ಆದುದರಿಂದ ನನಗೆ ಹೇಳುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ. ಅಧ್ಯಕ್ಷರೆ, ಈ ರೀತಿಯಾಗಿ ಗಣಿಗಾರಿಕೆ ನಡೆಯುವಂಥ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿಯೂ ಕೂಡ ಈ ಗಣಿಗಾರಿಕೆ ಬಹಳ ಮಟ್ಟದಲ್ಲಿ ನಡೆಯುತ್ತಿತ್ತು. ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕೂಡ ಗಣಿಗಾರಿಕೆ ನಡೆಯುತ್ತಿತ್ತು. ಬ್ರಿಟಿಷರ ಕಾಲದಿಂದ ಕೂಡ ಗಣಿಗಾರಿಕೆ ನಡೆದುಕೊಂಡು ಬಂದಿದೆ. ಆದರೆ ಈ ಗಣಿಗಾರಿಕೆ ಬಿಸಿ ಬಿಸಿ ಚರ್ಚೆ, ಪ್ರತ್ಯಾರೋಪ ಹಾಗು ಆರೋಪಗಳು ಅಕ್ರಮ ಗಣಿಗಾರಿಕೆಯ ಬಗ್ಗೆ ಆರೋಪಗಳು ಎಲ್ಲಿಂದ ಪ್ರಾರಂಭವಾಯಿತು? ಏಕೆ ಪ್ರಾರಂಭವಾಯಿತು? ಎಂದು ಹೇಳಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಏಕೆ? ಯಾವ ಕಾರಣಕ್ಕಾಗಿ ಈ ವಿಷಯದ ಬಗ್ಗೆ ನಾವೆಲ್ಲಾ ಇವತ್ತು ಈ ಸದನದಲ್ಲಿ ಬಹಳ ಗಂಭೀರವಾಗಿ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೇವೆ. ಇದಕ್ಕೆ ಒಂದು ಕೊನೆ ಹಾಡಬೇಕಾಗಿದೆ. ಒಬ್ಬ ಯುವ ಶಾಸಕನಾಗಿ ನಾನು ಈ ಸದನದಲ್ಲಿ ಮನವಿ ಮಾಡುತ್ತೇನೆ, ಅಕ್ರಮ ಯಾವುದು? ಸಕ್ರಮ ಯಾವುದು? ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದಾರೆ, ದಯಮಾಡಿ ಇದಕ್ಕೆ ಒಂದು ಕೊನೆ ಹಾಡಿ. ಕರ್ನಾಟಕದ ಜನತೆಗೆ ಯಾವುದು ಸಕ್ರಮ? ಯಾವುದು ಅಕ್ರಮ ಎನ್ನುವುದನ್ನು ನಿರ್ದಿಷ್ಟವಾಗಿ ಒಂದು ತನಿಖೆ ಮಾಡಿ ಸ್ಪಷ್ಟವಾದ ಸಂದೇಶವನ್ನು ಜನಕ್ಕೆ ಕೊಡುವುದರ ಮೂಲಕ ಕರ್ನಾಟಕದ ಆಸ್ತಿ, ಸಂಪತ್ತು, ನೆಲವನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಬೇಕೆಂದು ಮನವಿಯನ್ನು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ. ಅಕ್ರಮ ಎನ್ನುವುದರ ಬಗ್ಗೆ ಈ ಅಕ್ರಮ ಎಂದರೆ ಏನು? ಎಲ್ಲಿಂದ ಪ್ರಾರಂಭವಾಗುತ್ತದೆ ? ಒಬ್ಬ ಗಣಿ ಮಾಲೀಕರು ಕಾನೂನು ಬದ್ಧವಾಗಿ ಪಡೆದಿರತಕ್ಕಂಥ ಲೈಸೆನ್ಸ್ ಮುಖೇನವಾಗಿ ಗಣಿಯನ್ನು ಮಾಡುವಂಥ ಸಂದರ್ಭದಲ್ಲಿ encroachment ಎಂದು ಕರೆಯುತ್ತೇವೆ. ಒಂದು ವೇಳೆ 100 ಎಕರೆಗಳಷ್ಟು ಗಣಿ ಲೈಸೆನ್ಸ್ ಪಡೆದಿದ್ದರೆ ಅವನು ಹಾಕಿರತಕ್ಕಂಥ dump ಅಥವಾ ಶೇಖರಣೆ ಮಾಡಿರುವಂಥ ಅದಿರು ಕಾನೂನು ಬದ್ಧವಾಗಿ ಲೈಸೆನ್ಸ್ ಪಡೆದಿರುವಂಥ ವ್ಯಾಪ್ತಿಯನ್ನು ಮೀರಿ ಬೇರೆ ಪ್ರದೇಶದಲ್ಲಿ ಮಾಡುತ್ತಿದ್ದರೆ ತಕ್ಷಣ ಆ ಗಣಿಯನ್ನು ನಿಲ್ಲಿಸುವುದಕ್ಕೆ ಕಾನೂನು ಬದ್ಧವಾಗಿ Department of Mines and Geology, Forest Department, Department of Mines Safety

ಇವೆಲ್ಲಾ ಸರ್ಕಾರದ ಇಲಾಖೆಗಳು ಇದ್ದರೂ ಕೂಡ ಇವತ್ತು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಲೋಕಾಯುಕ್ತರು ವರದಿಯನ್ನು ಕೊಟ್ಟಿದ್ದಾರೆನ್ನತಕ್ಕಂಥ ಸತ್ಯವನ್ನು ಇವತ್ತು ನಾವೆಲ್ಲರೂ ಕೂಡ ನೋಡುತ್ತಿದ್ದೇವೆ. ಏಕೆ ಅಕ್ರಮ ಗಣಿಗಾರಿಕೆ ನಡೆಯುತ್ತದೆ? ಯಾವಾಗ ಅಧಿಕಾರಿಗಳು ಸರ್ಕಾರದಲ್ಲಿ ಇರತಕ್ಕಂಥವರು ಅಥವಾ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಾಗ ಮಾತ್ರ ಅಕ್ರಮ ಗಣಿಗಾರಿಕೆಗೆ ಅವಕಾಶವಾಗುತ್ತದೆಯೇ ವಿನಃ , ಎಲ್ಲಿ ಅಕ್ರಮ ಗಣಿಗಾರಿಕೆಗೆ ರಕ್ಷಣೆ ಸಿಗುತ್ತದೆ, ಅಲ್ಲಿ ಮಾತ್ರ ಅಕ್ರಮ ಗಣಿಗಾರಿಕೆ ನಡೆಯುತ್ತದೆ ವಿನಃ ಸಕ್ರಮವಾಗಿ ಗಣಿಗಾರಿಕೆ ಮಾಡುವಂಥ ಇಡೀ ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯನ್ನು ಅಕ್ರಮ ವ್ಯಕ್ತಿಗಳು ಎಂದು ಹೇಳಿ ಇವತ್ತು ಈ ಸದನದ ಮೂಲಕ ಕರ್ನಾಟಕದ ಜನತೆಗೆ ಸಂದೇಶವನ್ನು ಕೊಡುತ್ತಿದ್ದೇವೆ ಈ ಒಂದು ತಪ್ಪು ಸಂದೇಶ ಹೋಗಬಾರದು. ಯಾರು ಅಕ್ರಮವಾಗಿ ಗಣಿಗಾರಿಕೆಯನ್ನು ಮಾಡಿದ್ದಾರೆ, ಎಲ್ಲಿ ಅಕ್ರಮವಾಗಿದೆ, ಎನ್ನುವ ಬಗ್ಗೆ ಸ್ಪಷ್ಟವಾಗಿ ತನಿಖೆಯನ್ನು ಮಾಡಬೇಕು ಎನ್ನುವ ದೃಷ್ಟಿಕೋನದಿಂದ ನಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಸನ್ಮಾನ್ಯ ಉಗ್ರಪ್ಪನವರ ನೇತೃತ್ವದಲ್ಲಿ ಒಂದು ಸತ್ಯ ಸಂಶೋಧನೆ ವರದಿಯನ್ನು ಕೊಡಬೇಕೆಂದು ಹೇಳಿ ಏಕೆ ಕಾಂಗ್ರೆಸ್ ಪಕ್ಷ ತೀರ್ಮಾನ ತೆಗೆದುಕೊಂಡಿತು ಎಂದರೆ..

ಉಪಾಧ್ಯಕ್ಷರು :- ಪಾಟೀಲ್‌ರವರೇ ಬೇಗ ಮುಗಿಸಿ, ಹದಿನೈದು ನಿಮಿಷಗಳಾಯಿತು.

ಶ್ರೀ ಎ.ಎಸ್. ಪಾಟೀಲ್ :- ಅಧ್ಯಕ್ಷರೇ, ಸನ್ಮಾನ್ಯ ರವಿಯವರು ಮಾತನಾಡಬೇಕಾದರೆ ಸಮಯವನ್ನು ನಿಗದಿಪಡಿಸಿಲ್ಲ. ನನಗೆ ಮಾತನಾಡಲಿಕ್ಕೆ ಟೈಮ್ ಫಿಕ್ಸ್ ಮಾಡಿದರೆ ಅದು ಸರಿಯಲ್ಲ. ಎಲ್ಲರಿಗೂ ಟೈಮ್ ಫಿಕ್ಸ್ ಮಾಡಿ, ನಾನು ಈಗಲೇ ಮುಗಿಸುತ್ತೇನೆ ನನ್ನದೇನು ಅಭ್ಯಂತರವಿಲ್ಲ. ಏಕೆಂದರೆ ನಾವು ಸುಮ್ಮನೆ ಕೇವಲ ಯಾವುದೋ ಒಂದು ರಾಜಕಾರಣಕ್ಕೋಸ್ಕರ ಯಾವುದೋ ಪಕ್ಷದ ಮೇಲೆ ಕೂಡ ಗೂಬೆ ಕೂರಿಸುವ ಕೆಲಸ ಮಾಡಬಾರದು. ಏಕೆಂದರೆ ಇವತ್ತು ಕಾಂಗ್ರೆಸ್ ಪಕ್ಷದ ಸತ್ಯ ಸಂಶೋಧನೆಯ ನಾಯಕರ ಮೇಲೆ ಸನ್ಮಾನ್ಯ ರವಿಯವರು ಒಂದು ಆರೋಪವನ್ನು ಮಾಡಿದರು. ಅವರು ನಮ್ಮ ಪಕ್ಷದ ಮಹಾನ್ ನಾಯಕರು. ನಿಮ್ಮ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ನಾವು ಇಷ್ಟು ಯುವ ಶಾಸಕರು ಇಲ್ಲಿ ಕುಳಿತಿದ್ದೇವೆ. ಒಬ್ಬರೂ ಕೂಡ ನಾವು ಆ ಶಬ್ಧಗಳನ್ನು ಉಪಯೋಗಿಸಿಲ್ಲ. ಸನ್ಮಾನ್ಯ ಸಭಾನಾಯಕರು ಎದ್ದು ನಿಂತು ಮಾತನಾಡುವ ಸಂದರ್ಭದಲ್ಲಿ ನಾವು ಹಿಂದೆ ಕುಳಿತಿರುವ ಯಾವ

ಶಾಸಕರು ಕೂಡ ಎದ್ದು ನಿಂತಿಲ್ಲ. ಇಲ್ಲಿ ನಮ್ಮ ಉಪ ನಾಯಕರು ಮಾತನಾಡುವ ಸಂದರ್ಭದಲ್ಲಿ ಗೌರವ ಕೊಡುವುದಕ್ಕೆ ದಯಮಾಡಿ ತಾವು ಅವಕಾಶ ಮಾಡಿ ಕೊಡಬೇಕು. ಇಷ್ಟು ಜನ ಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ನಾವು ಯಾರೂ ಕೂಡ ತೊಂದರೆಯಾಗುವ ರೀತಿಯಲ್ಲಿ, ಅಗೌರವ ತೋರುವ ರೀತಿಯಲ್ಲಿ ನಾವು ಯಾವತ್ತೂ ವರ್ತನೆ ಮಾಡಿಲ್ಲ. ಸನ್ಮಾನ್ಯ ರವಿಯವರಲ್ಲಿ ನಾನ್ಯಾಕೆ ಅವರು ಮಾತನಾಡುವ ಸಂದರ್ಭದಲ್ಲಿ ಅನೇಕ ಸಾರಿ ನಮ್ಮ ಉಪ ನಾಯಕರು ಎದ್ದು ನಿಂತು ಮಾತುಗಳನ್ನು ಕೇಳಿ ಎಂದಾಗಲೂ ಕೂಡ, ಯಾರೂ ಕೂಡ ಅವರ ಕಿವಿಗೆ ಮಾತು ಕೊಡುವಂಥ ವಿಚಾರವನ್ನು ತಾವು ಮಾಡಲಿಲ್ಲ. ಏಕೆಂದರೆ ತಾವು ಎರಡನೇ ಬಾರಿ ಸದಸ್ಯರು. ನಾವು ಮೊದಲನೇ ಬಾರಿ ಆರಿಸಿ ಬಂದಿದ್ದೇವೆ. ಬಹುಶಃ ಸದನದ ಗೌರವವನ್ನು ಕಾಪಾಡುವಂಥದ್ದು. ಸದನದಲ್ಲಿರುವಂಥ ಹಿರಿಯ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಬಹುಶಃ ಅವರಿಗೆ ಗೌರವವನ್ನು ಕೊಟ್ಟು ನಾವು ಅವರಿಗೆ ಅವಕಾಶವನ್ನು ಕೊಡದೇ ಹೋದರೆ ಈ ಸದನಕ್ಕೆ ಅಗೌರವವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಕಾಂಗ್ರೆಸ್ಸಿನ ಸತ್ಯ ಸಂಶೋಧನೆ ವರದಿ ಏಕೆ ಈ ತೀರ್ಮಾನವನ್ನು ತೆಗೆದುಕೊಂಡಿತು ಎಂದರೆ ಇದು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿ ಭಾಗದಲ್ಲಿರುವಂಥ ಪ್ರದೇಶ. ಸನ್ಮಾನ್ಯ ಹಿರಿಯ ಸಚಿವರು ಇಲ್ಲಿದ್ದಾರೆ. ಅವರಿಗೂ ಕೂಡ ಗಣಿಗಾರಿಕೆಯ ಬಗ್ಗೆ ಬಹಳಷ್ಟು ಚೆನ್ನಾಗಿ ಗೊತ್ತಿದೆ. ಅಲ್ಲಿ ಕೇವಲ ಒಂದು ಕಂಪೆನಿಗೆ ಸೀಮಿತವಾದಂಥ ಗಣಿ ಪ್ರದೇಶವಿಲ್ಲ. ಅಲ್ಲಿ 1956 ರಿಂದಲೂ ಕೂಡ ಅನೇಕ ಕಂಪೆನಿಗಳಿಗೆ ಲೈಸೆನ್ಸ್ ಕೊಟ್ಟಿರುವಂಥ ಒಂದು ಜಾಗವಿದೆ. ಆ ಒಂದು dispute ಏನಿದೆ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿ ಪ್ರದೇಶವೇನಿದೆ, ಅಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂಬುದನ್ನು ಕಾಂಗ್ರೆಸ್ ಪಕ್ಷ ತನ್ನ ಸತ್ಯ ಸಂಶೋಧನಾ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆ ಕಾರಣಕ್ಕಾಗಿ ಈ ಮನೆಯಲ್ಲಿರುವಂಥ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಈ ಸರ್ಕಾರಕ್ಕೆ ನಾವು ಮನವಿ ಮಾಡುತ್ತೇವೆ. ತಾವು ಇದರ ಬಗ್ಗೆ ಸಿ.ಬಿ.ಐ.ತನಿಖೆ ಮಾಡಬೇಕು ಮತ್ತು ಇದರ ಬಗ್ಗೆ ಸ್ಪಷ್ಟವಾದಂಥ ಒಂದು ಸಂದೇಶವನ್ನು ಜನತೆಗೆ ಕೊಡಬೇಕು. ಇದರ ಜೊತೆ ಜೊತೆಯಲ್ಲಿ ಅಧಿಕಾರದ ದುರುಪಯೋಗದಿಂದ ಕಾನೂನು ಬದ್ಧವಾಗಿ ಗಣಿ ಲೈಸೆನ್ ಅನ್ನು ಪಡೆದು ಗಣಿಗಾರಿಕೆ ಮಾಡುವಂಥ ವ್ಯಕ್ತಿಗಳಿಗೆ ಬಳ್ಳಾರಿಯಲ್ಲಿ ತಾವು ಕಾನೂನು ಬದ್ಧವಾಗಿ ಗಣಿಗಾರಿಕೆ ಮಾಡುವುದಕ್ಕೆ, ರಾಷ್ಟ್ರೀಕರಣ ಮಾಡುವುದಕ್ಕೆ ವೈಯಕ್ತಿಕವಾಗಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ಅಧಿಕಾರ ಬಲದಿಂದ ಕಾನೂನು ಬದ್ಧವಾಗಿ

ಗಣಿಗಾರಿಕೆ ಮಾಡುವಂಥ ವ್ಯಕ್ತಿಗಳಿಗೆ ಅಕ್ರಮ ಗಣಿಗಾರಿಕೆಯ ನೆಪವನ್ನೊಡ್ಡಿ ಅಧಿಕಾರದ ದುರುಪಯೋಗದಿಂದ ಅಲ್ಲಿ ಗಣಿಗಾರಿಕೆಯನ್ನು ಮಾಡುವಂಥ ವ್ಯಕ್ತಿಗಳಿಗೆ ತೊಂದರೆಯಾಗದಂಥ ರೀತಿಯಲ್ಲಿ ರಕ್ಷಣೆ ಕೊಡಬೇಕಾದಂಥ ಜವಾಬ್ಧಾರಿಯನ್ನು ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ಅಧಿಕಾರದಲ್ಲಿರುವಂಥ ಭಾರತೀಯ ಜನತಾ ಪಕ್ಷದ ಮೇಲೆ ಇದೆಯೆನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿ ಕೊಟ್ಟಂಥ ಸಭಾಧ್ಯಕ್ಷರಿಗೆ, ನನ್ನ ಮಾತುಗಳನ್ನು ತಾಳ್ಮೆಯಿಂದ ಕೇಳಿರುವಂಥ ಎಲ್ಲಾ ಸದಸ್ಯರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಶ್ರೀ ಶಿವಲಿಂಗೇಗೌಡರೆ, 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :- ಮಾನ್ಯ ಉಪಾಧ್ಯಕ್ಷರೆ, ಅರ್ಥಂಬರ್ಥ ಮಾತನಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಮಾತನಾಡುವುದಕ್ಕೆ ಎಷ್ಟು ಸಮಯಾವಕಾಶ ಕೊಡುತ್ತೀರೊ, ಅಷ್ಟೆ ಸಮಯಾವಕಾಶವನ್ನು ನನಗೂ ಕೊಡಬೇಕು. 10 ನಿಮಿಷ ಸಮಯ ಕೊಡುತ್ತೇವೆ ಎಂದು ಹೇಳಿದರೆ ಹೇಗೆ? ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಬೆಳಿಗ್ಗೆಯಿಂದ ಏನು ಗಣಿಗಾರಿಕೆ ವಿಚಾರದಲ್ಲಿ ಸವಿಸ್ತಾರವಾದಂಥ ಚರ್ಚೆ, ಆರೋಪಗಳು, ಪ್ರತ್ಯಾರೋಪಗಳು ನಡೆಯುತ್ತಿವೆ. ಇದನ್ನು ನಾವೆಲ್ಲಾ ಕುಳಿತು ಕೇಳುತ್ತಿದ್ದೇವೆ. ಬಹುಶಃ ಈ ರಾಷ್ಟ್ರದ ಸಂಪತ್ತು, ಈ ರಾಜ್ಯದ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳುವುದು ಇಡೀ ಸದನದಲ್ಲಿರತಕ್ಕಂಥ ಈ ಸರ್ಕಾರದ ಹಾಗೂ ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎನ್ನುವ ವಿಚಾರವನ್ನು ನಾವು ಮನಗಂಡು, ಇದರಲ್ಲಿರುವ ಸತ್ಯಾಸತ್ಯತೆಗಳನ್ನು ತಿಳಿದು, ಈ ರಾಜ್ಯದಲ್ಲಿ ಗಣಿಗಾರಿಕೆಗೆ ಏಕೆ ಇಷ್ಟೊಂದು ಮಹತ್ವ ಬಂದಿದೆ ಎಂದು ನೋಡಬೇಕು. ನಾನು ನೋಡಿದ ಮಟ್ಟಿಗೆ ಈ ಹಿಂದೆ ಒಬ್ಬ ಮಂತ್ರಿಗಳಿಗೆ ಗಣಿಗಾರಿಕೆ ಖಾತೆ ಕೊಟ್ಟರು. ಆಗ ಅವರು ಅಯ್ಯೊ, ನನಗೆ ಗಣಿಗಾರಿಕೆ ಖಾತೆ ಬೇಡ ಎಂದು ಹೇಳಿದರು ಹಾಗೂ ಗಣಿಗಾರಿಕೆ ಖಾತೆಯನ್ನು ನನಗೆ ಕೊಟ್ಟಿದ್ದಾರೆ, ಬನ್ನಿ ನಾವೆಲ್ಲಾ ಹೋಗಿ, ಅದನ್ನು change ಮಾಡಿಸಿಕೊಂಡು ಬರೋಣ ಎಂದು ಹೇಳಿದಂಥ ಕಾಲವೊಂದು ಇತ್ತು. ಆದರೆ, ಈ ಸಂದರ್ಭದಲ್ಲಿ ಗಣಿಗಾರಿಕೆಗೆ ಇಷ್ಟೊಂದು ಮಹತ್ವ ಬಂದಿದ್ದು ಯಾವಾಗ? ಈ ಜಗತ್ತಿನ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಲ್ಲಿ ಕಂಡಂಥ ಏರಿಳಿತದಲ್ಲಿ, ಚೀನಾ ದೇಶದವರಿಗೆ ಬಂದಂಥ ಈ ಬುದ್ಧಿ. ಚೀನಾ ದೇಶದವರು ಬಹಳ ಖನಿಜ ಸಂಪತ್ತನ್ನು ಇಟ್ಟುಕೊಂಡಿದ್ದಾರೆ. ಆದರೆ, ಖನಿಜ ಸಂಪತ್ತನ್ನು ಉಪಯೋಗ ಮಾಡಿಕೊಳ್ಳದೆ, ಅವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ, ಬಹಳಷ್ಟು

ಮಟ್ಟದ ಈ ಕಬ್ಬಿಣದ ಅದಿರನ್ನು ಕೊಂಡು, ಅವರು stock ಮಾಡಿಕೊಳ್ಳುವ ದೃಷ್ಟಿಗೆ ಹೋಗಿದ್ದರಿಂದ, ಇಂದು ಈ ಗಣಿಗಾರಿಕೆಗೆ ಹೆಚ್ಚಿನ ಮಹತ್ವ ಬಂತು. ನಮ್ಮ ನಾಯಕರಾದಂಥ ಕುಮಾರ ಸ್ವಾಮಿಯವರು ಹೇಳಿದ ಹಾಗೆ, ಬಹುಶ: ಅವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಹಾಗೂ ಧರ್ಮಸಿಂಗ್‌ರವರ ಕಾಲದಲ್ಲಿ ಗಣಿಗಾರಿಕೆ ಪ್ರಾರಂಭವಾಯಿತು. ಅವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಬಹಳ ಹೆಚ್ಚಿನ ಮಟ್ಟದ ದರ ಸಿಕ್ಕಿತು. ದರ ಸಿಕ್ಕಿದಾಗ, 1956ರಿಂದ ಗಣಿಗಾರಿಕೆ ಮಾಡುತ್ತಿದ್ದಂಥವರು, ಹಿಂದೆ ಗಣಿಗಾರಿಕೆ ಮಾಡುತ್ತಿದ್ದಂಥವರು, ಎಲ್ಲಾ licenceದಾರರು ಗಣಿಗಾರಿಕೆಗೆ ಬಹಳ ಮಹತ್ವ ಬಂದಿದೆ, ಹಣ ಹೆಚ್ಚಿಗೆ ಸಿಗುತ್ತದೆ ಎಂದು ನಾವೆಲ್ಲರೂ licence ತೆಗೆದುಕೊಳ್ಳಬೇಕೆಂದು ನುಗ್ಗಿದರು. ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವ್ಯವಸ್ಥೆಯೊಳಗೆ, ಕಾನೂನಿನ ಚೌಕಟ್ಟಿನ ಅಡಿಯಲ್ಲಿರತಕ್ಕಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರ leaseಅನ್ನು ಕೊಡಬೇಕಾದರೆ, ನಿಬಂಧನೆಗಳನ್ನು ಏನು ವಿಧಿಸಿದೆ, ರಾಜ್ಯ ಸರ್ಕಾರ ಏನು ಒಂದು ಅನುಮೋದನೆಯನ್ನು ಮಾಡಿ, ಕೇಂದ್ರ ಸರ್ಕಾರವನ್ನು ಕೇಳುವಂತಹ ಸಂದರ್ಭದಲ್ಲಿ ಆಗುವ ಕೆಲವೊಂದು ದೋಷಗಳನ್ನು ಅರಿತು, ರಾಜ್ಯದ ಸಂಪತ್ತನ್ನು ರಾಜ್ಯಕ್ಕೆ ಬಿಡಬೇಕೆಂದು, ರಾಜ್ಯದ ಆರ್ಥಿಕ ಮಟ್ಟದ ಸುಧಾರಣೆಗೆ ವ್ಯವಸ್ಥೆ ಆಗಬೇಕೆಂಬ ನಿಟ್ಟಿನಲ್ಲಿ, ನಾವೆಲ್ಲಾ ಸೇರಿ ಗಣಿಗಾರಿಕೆಗೆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ, ಉತ್ತಮವಾದ ವ್ಯವಸ್ಥೆಯನ್ನು ಮಾಡುವುದಕ್ಕೆ, ರಾಷ್ಟ್ರೀಕರಣ ಮಾಡಬೇಕು ಎಂದು ತೀರ್ಮಾನ ಮಾಡಿದರು. ಈ ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು. ರಾಷ್ಟ್ರೀಕರಣ ಮಾಡಿ ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಒಂದು ಉತ್ತಮವಾದ ಭದ್ರ ಬುನಾದಿಯನ್ನು ಹಾಕಿದರು. ಅದೇ ರೀತಿಯಲ್ಲಿ ಕೆಲವೊಂದು ನೀತಿಗಳನ್ನು ಬದಲಾವಣೆ ಮಾಡಿ, ದೇಶದಲ್ಲಿ ಈ ಒಂದು ರಾಷ್ಟ್ರೀಕರಣ ಮಾಡುವುದರ ಮುಖಾಂತರ, ಗಣಿ ನೀತಿಗೆ ಹೆಚ್ಚಿನ ಕಾನೂನನ್ನು ವ್ಯವಸ್ಥೆ ಮಾಡುವುದರ ಮುಖಾಂತರ, ರಾಜ್ಯದ ಸಂಪತ್ತಿಗೆ ಮತ್ತು ಆರ್ಥಿಕ ಪರಿಸ್ಥಿತಿಗೆ ಒಂದು ಉತ್ತಮವಾದಂಥ ಬುನಾದಿಯನ್ನು ಹಾಕಿಕೊಡುವುದರಲ್ಲಿ ನಾವೆಲ್ಲಾ ಸೇರಿ ಹೋರಾಟ ಮಾಡುವುದಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ ಎಂದರೇನು? ಅಕ್ರಮ ಗಣಿಗಾರಿಕೆ ಯಾವಾಗ ಪ್ರಾರಂಭವಾಗುತ್ತದೆ? ಅದು ಯಾವಾಗ ಪ್ರಾರಂಭವಾಗುತ್ತದೆ ಎಂದರೆ,

ದೊಡ್ಡ ಮೀನುಗಳು ಸಮುದ್ರದಲ್ಲಿರುತ್ತವೆ, ಆ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದು ಹಾಕುತ್ತವೆ. ಹಾಗೆಯೇ, ಕೆಲವು ದೊಡ್ಡ ಗಣಿಗಾರಿಕೆದಾರರು, ತಾವು ಬಹಳ ಬಂಡವಾಳಗಾರರಾಗಬೇಕು ಎನ್ನುವ ದೃಷ್ಟಿಯಿಂದ ಕೆಲವೊಂದು ಸಣ್ಣ ಗಣಿಗಾರಿಕೆದಾರರನ್ನು, ಅವರ ಆರ್ಥಿಕ ಪರಿಸ್ಥಿತಿಗನುಗುಣವಾಗಿ, ಅವರನ್ನು ಕೊಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇವತ್ತು ಚಿಕ್ಕನಾಯಕನಹಳ್ಳಿಯಲ್ಲಿ ಸ್ವಂತ ಜಮೀನಿಗೆ ಗಣಿಗಾರಿಕೆಯನ್ನು ಕೊಡುವುದಕ್ಕೆ ಅವಕಾಶವಿಲ್ಲ. ಆದರೆ, ಇವತ್ತು ರಾಜಾರೋಷವಾಗಿ ನಡೆಯುತ್ತಿದೆ. ಇದಕ್ಕೆ ಕಾರಣ ಯಾರು? ರಾಜಾರೋಷವಾಗಿ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಇವತ್ತು ಸಾವಿರ ಟನ್ ಲೋಡ್‌ಗೆ permit ತೆಗೆದುಕೊಂಡು, 10,000 ಟನ್ ಲೋಡನ್ನು ಹೊರಗಡೆ ಕಳುಹಿಸುತ್ತಾರೆ. ಮಾನ್ಯ ರವಿಯವರು ಹೇಳಿದರು, ನಮ್ಮ ಸರ್ಕಾರ ಇದಕ್ಕೆ ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲ ಎಂದು. ಅವರ ಸರ್ಕಾರ ಬಂದು 8 ತಿಂಗಳುಗಳು ಆಯಿತು. ನಾನು ಪ್ರತಿನಿತ್ಯ ನೋಡುತ್ತಿದ್ದೇನೆ, 5000 ಲಾರಿಗಳು ನಮ್ಮ areaದಲ್ಲಿ ಹೋಗುತ್ತಿವೆ. Permit ಇರುವ ಲಾರಿಗಳೆಷ್ಟು? ಆಯಿತು, ಹಿಂದೆ ನಡೆದು ಹೋಗಿದೆ. 1956ನೇ ಇಸವಿಯಿಂದ ಸರ್ಕಾರ ಬಂದಮೇಲೆ, ಮಾನ್ಯ ಕುಮಾರಸ್ವಾಮಿಯವರು lease ಕೊಟ್ಟಿರಬಹುದು. ಧರ್ಮಸಿಂಗ್‌ರವರು lease ಕೊಟ್ಟಿರಬಹುದು. ಗಣಿಗಾರಿಕೆಯಲ್ಲಿ ಯಾರು ತೊಡಗಿಸಿಕೊಂಡಿದ್ದರು, ಆ ವೃತ್ತಿಯನ್ನು ಯಾರು ಮಾಡುತ್ತಿದ್ದರು, ಅವರೂ ಬಂದರು. ಮಾನ್ಯ ಜನಾರ್ಧನ ರೆಡ್ಡಿಯವರು ಬಿ.ಜೆ.ಪಿ.ಯಲ್ಲಿ ಇದ್ದಾರೆ ಎಂದ ಮಾತ್ರಕ್ಕೆ ಅವರು ಗಣಿಗಾರಿಕೆ ಮಾಡಬಾರದು ಎಂದು ಅಲ್ಲ. ಅವರು ಬಹಳ ದೊಡ್ಡದಾಗಿ ಮಾಡುತ್ತಿದ್ದಾರೆ. ಗಣಿಗಾರಿಕೆ licence ಅನ್ನು ಪಡೆದು ಇವತ್ತು ಯಾವ ರೀತಿ ಮಾಡುತ್ತಿದ್ದಾರೆ ಎಂದರೆ, 10,000 ಟನ್ ಲೋಡ್ ಒಂದು ದಿವಸಕ್ಕೆ ಹೋಗಬೇಕಾದರೆ, ಅವರು ತೆಗೆದುಕೊಳ್ಳುವಂಥ permit ಎಷ್ಟು? ಪೊಲೀಸರೆಲ್ಲಾ ವಸೂಲಿ ಮಾಡಿಕೊಳ್ಳುತ್ತಾರೆ. ಎಲ್ಲಾ ಲಾರಿಗಳಿಗೆ 15 ಟನ್ ತುಂಬಬೇಕು ಎಂದು ಇದ್ದರೆ, 40 ಟನ್ ತುಂಬುತ್ತಾರೆ. ಮಾನ್ಯ ಕುಮಾರಸ್ವಾಮಿಯವರು lease ಕೊಡಬೇಕಾದರೆ, ನೀವು 40 ಟನ್ ತುಂಬಿಕೊಂಡು ಹೋಗಿ ಎಂದು ಗಣಿ ಮಾಲೀಕರಿಗೆ lease ಕೊಟ್ಟಿದ್ದರೇ? ಇವರ ಸರ್ಕಾರ ಬಂದು 8 ತಿಂಗಳುಗಳಾಗಿವೆ. ದೇಶಾಭಿಮಾನ, ಈ ದೇಶದಲ್ಲಿ ರಾಜ್ಯಾಭಿಮಾನ ಎನ್ನುವುದಿದ್ದರೆ, ಈ ರಾಜ್ಯದ ಸಂಪತ್ತನ್ನು ಕಾಪಾಡಬೇಕು ಎನ್ನುವ ಮನೋಭಾವನೆ ಇದ್ದಿದ್ದರೆ, ಅವರೂ ಸಹ ಈ 8 ತಿಂಗಳುಗಳಲ್ಲಿ ಒಳ್ಳೆಯದನ್ನು ಮಾಡುತ್ತಿದ್ದರು. ಇವತ್ತಿನ ದಿವಸ, ಈ ಒಂದು ಪ್ರವೃತ್ತಿ ಬೆಳೆದಿದೆ. ಅದನ್ನು ನಾವು

control ಮಾಡಬೇಕು. ಈ ರಾಜ್ಯದ ಆರ್ಥಿಕ ಸುಭದ್ರತೆಯನ್ನು ಉತ್ತಮಪಡಿಸಬೇಕು ಎನ್ನುವ ಭಾವನೆ ಇದ್ದರೆ, ಅವರು ಈ 8 ತಿಂಗಳುಗಳ ಆಡಳಿತದಲ್ಲಿ ಕಂಡುಹಿಡಿಯಬೇಕಾಗಿತ್ತು. ಎಷ್ಟು ಟನ್‌ಗಳು ಹೋಗುತ್ತಿದೆ ಎನ್ನುವುದನ್ನು ನಾನು ಅನೇಕ ಸಾರಿ ಪತ್ರಿಕೆಗಳಲ್ಲಿ ಓದಿದ್ದೇನೆ. ಮೊನ್ನೆ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಘೋಷಣೆಯನ್ನು ಮಾಡಿದರು. ಈ ದೇಶದ ಹಾಗೂ ರಾಜ್ಯದ ಹಿತದೃಷ್ಟಿಯಿಂದ, ಈ ರಾಜ್ಯದಲ್ಲಿ ಯಾರು ಉಕ್ಕನ್ನು ಉತ್ಪತ್ತಿ ಮಾಡುತ್ತಾರೆ, factoryಗಳನ್ನು ತೆರೆಯುತ್ತಾರೆ, ಅವರಿಗೆ ಮಾತ್ರ ಇನ್ನು ಮುಂದೆ ಪರವಾನಗಿಯನ್ನು ಕೊಡುತ್ತೇವೆ. ಉಳಿದಂಥವರಿಗೆ ಕೊಡುವುದಿಲ್ಲ ಎಂದು ಹೇಳಿದ್ದರು. ಬಹಳ ಹೋರಾಟ ಮಾಡಿ ಅಕ್ರಮವಾಗಿ ನಡೆಯುತ್ತಿದ್ದಂಥ ಹಾಗೂ ಅಕ್ರಮವಾಗಿ ಸಾವಿರಾರು ಟನ್‌ಗಳನ್ನು ದಾಸ್ತಾನು ಮಾಡಿದ್ದನ್ನು ಕಂಡುಹಿಡಿದಿರುವುದಾಗಿ ಹೇಳಿದ್ದರು. ನಾನು ಇದನ್ನು ಕೇಳಿ, ಪರವಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ಬಹಳ ಕಷ್ಟಪಟ್ಟು ಹೋರಾಟ ಮಾಡಿ, ಈ ಒಂದು ಉತ್ತಮ ವ್ಯವಸ್ಥೆಯನ್ನು ಮಾಡಿದ್ದಾರೆ, ಪರವಾಗಿಲ್ಲವೆಂದುಕೊಂಡರೆ, 4-5 ದಿನಗಳ ನಂತರ ಪತ್ರಿಕೆಯಲ್ಲಿ ಓದುತ್ತೇನೆ. 90 ಕೋಟಿ ರೂಪಾಯಿಗಳಿಗೆ ಹೋಗಬೇಕಾದ mining ನ ಕಬ್ಬಿಣದ ಅದಿರನ್ನು ಕೇವಲ 13 ಕೋಟಿ ರೂಪಾಯಿಗಳಿಗೊ ಅಥವಾ 18 ಕೋಟಿಗಳಿಗೊ ವ್ಯಾಪಾರ ಆಯಿತು. ಸರಿಯಾಗಿ ಜ್ಞಾಪಕವಿಲ್ಲ, ನಾನು ಮರೆತಿದ್ದೇನೆ. ಇವರು ಕಷ್ಟಪಟ್ಟು ಹೋರಾಟ ಮಾಡಿರುವುದೇನೆಂದರೆ, ಸಣ್ಣ ಮೀನುಗಳನ್ನು ನುಂಗಿ ಹಾಕಿ, ಯಾವುದೋ ಒಂದು ದೊಡ್ಡ ಮೀನು ಬದುಕಿತು ಎಂದು ಹೇಳಿ, ಪತ್ರಿಕೆಯಲ್ಲಿ ಮಾತನಾಡಿದಂಥ ಇತಿಹಾಸವನ್ನು ನಾನು ನೋಡಿದ್ದೇನೆ.

ಅದಕ್ಕೋಸ್ಕರವಾಗಿ ಯಾವ ಹಿತದೃಷ್ಟಿಯಿಂದ ಎಲ್ಲರೂ ಕರ್ನಾಟಕದಲ್ಲಿ ಸಮೃದ್ಧವಾಗಿ ಬಾಳಬೇಕು ಎನ್ನುವುದಾದರೆ ಎಲ್ಲ ವ್ಯವಸ್ಥೆಯೊಳಗೆ ಉತ್ತಮವಾದ ವ್ಯವಸ್ಥೆಯನ್ನು ಇವತ್ತು ಮಾಡಬೇಕು. ಇನ್ನೇನು ಮೈನಿಂಗ್‌ನಲ್ಲಿ ಅವ್ಯವಹಾರವಿಲ್ಲವೆಂದು ಬಹಳ ದೊಡ್ಡದಾಗಿ ಹೇಳಿಕೊಂಡಿರಿ. ಗಣಿಗಾರಿಕೆಯಲ್ಲಿ ನಾವು ಈಗಾಗಲೇ ಎಲ್ಲವನ್ನೂ ಸುಧಾರಿಸಿದೆವು. ಅಕ್ರಮವಾಗಿ ನಡೆಯುತ್ತಿದ್ದ ಎಲ್ಲಾ ಗಣಿಗಾರಿಕೆಯನ್ನು ತಂದು ಒಂದು ಕಡೆ ಸ್ಟಾಕ್ ಮಾಡಿದ್ದೇವೆ. ಅದನ್ನು ನಿಲ್ಲಿಸಿದ್ದೇವೆಂದು ಹೇಳಿದ್ದೀರಿ. ಆದರೆ, ಅದರಲ್ಲಿ ಸಾರ್ವಜನಿಕ ಹರಾಜನ್ನು ಇಟ್ಟಿದ್ದೀರಿ. ಆದರೆ, ಈ ರಾಜ್ಯ, ರಾಷ್ಟ್ರ ಮತ್ತು ಹೊರ ರಾಜ್ಯದಲ್ಲಿ ಅದಕ್ಕೆ ಒಂದು ಮಾರ್ಕೆಟ್ ಇದ್ದು ಒಂದು ದರವಿತ್ತು. ಇದು ಇಷ್ಟೊಂದು ಕಡಿಮೆ ಮಟ್ಟಕ್ಕೆ ಆಗಬೇಕಾಗಿದ್ದರೆ ಇದರಲ್ಲೇನೊ ಬ್ಲಾಕ್‌ಮೇಲ್ ನಡೆದಿದೆ. ಈ ರೀತಿಯ

ಬ್ಲಾಕ್‌ಮೇಲ್‌ನಿಂದ ಇಂಥ ಅಕ್ರಮ ನಡೆದಿದೆ. ಈ ರಾಜ್ಯಕ್ಕೆ ಬರುತ್ತಿದ್ದಂಥ ಹಣದ ಲೂಟಿಯಾಗಿದೆ. ಅಂದಿನ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಇವತ್ತು ಸಿ.ಟಿ.ರವಿಯವರದ್ದು ಏನೂ ಇಲ್ಲ, ಕಾಂಗ್ರೆಸ್‌ನವರು, ಜೆ.ಡಿ.ಎಸ್. ನವರು ಮಾತ್ರ ಈ ಗಣಿಗಾರಿಕೆಯಲ್ಲಿ ಬಹಳ ಲೂಟಿ ಮಾಡುತ್ತಿದ್ದಾರೆ ನಮ್ಮವರದ್ದು ಇದರಲ್ಲಿ ಏನೂ ಇಲ್ಲವೆಂದು ಹೇಳಿದರೆ ಹೇಗೆ? ನೀವೂ ಅಧಿಕಾರಕ್ಕೆ ಬಂದು ಈಗಾಗಲೇ ಎಂಟು ತಿಂಗಳುಗಳಾಗಿದೆ. ಜನಾರ್ದನ ರೆಡ್ಡಿಯವರು ನಮ್ಮ ನಾಯಕರಾದ ಕುಮಾರಸ್ವಾಮಿಯವರ ಮೇಲೆ ಆಗಾಗ್ಗೆ ಆಪಾದನೆಗಳನ್ನು ಮಾಡುತ್ತಿರುತ್ತಾರೆ. ಬಹಳ ಸಂತೋಷ. ಅವರು ಸಿ.ಡಿ. ತೋರಿಸುತ್ತೇನೆಂದು ಹೇಳಿದ್ದ ದಿವಸ ನಾನು ಎರಡು ದಿವಸ ಊಟ ಬಿಟ್ಟು ಕಾದು ಕುಳಿತಿದ್ದೆ. ಏನೋ ನಮ್ಮ ನಾಯಕರನ್ನು ಮುಗಿಸಿಬಿಟ್ಟರು, ನಾವು ಇನ್ನು ಮುಂದೆ ಎಲ್ಲಿಗೆ ಹೋಗುವುದು, ನಾವು ಹೇಗೆ ಇನ್ನು ಮುಂದೆ ರಾಜ್ಯವನ್ನು ಮಡುವುದು, ನನಗೆ ಇರುವುದು ಅದೊಂದೇ ಆಸ್ತಿ ಎಂದು ಬಹಳ ಯೋಚನೆ ಮಾಡುತ್ತಿದ್ದೆವು. ಅದು ನಮ್ಮ ಆಸ್ತಿಯೇ. ಅದನ್ನು ಈ ರಾಜ್ಯದಲ್ಲಿ ಯಾರೂ ಕಳೆಯಲು ಆಗುವುದಿಲ್ಲ. ಆವತ್ತು ಈ ಜನಾರ್ಧನ ರೆಡ್ಡಿಯವರು 150 ಕೋಟಿ ಹಿಡಿದುಕೊಟ್ಟು ನಮ್ಮ ನಾಯಕರನ್ನು ಮುಗಿಸುತ್ತಿದ್ದಾರಲ್ಲ ಎಂದು ಯೋಚನೆ ಮಾಡುತ್ತಿದ್ದೆವು. ಆಗ ಮಹಾಭಾರತದ ಧಾರಾವಾಹಿ ಬಂದಾಗ ಜನರು ಹೇಗೆ ಟಿ.ವಿ. ಯ ಮುಂದೆ ಹೋಗಿ ಕುಳಿತುಕೊಳ್ಳುತ್ತಿದ್ದರೋ ಆ ರೀತಿ ಅಂದು ಜನರೆಲ್ಲರೂ ಟಿ.ವಿ.ಯ ಮುಂದೆ ಓಡಿಹೋಗಿ ಏನು ತೋರಿಸುತ್ತಾರೆಂದು ಕುಳಿತುಕೊಳ್ಳುತ್ತಿದ್ದರು. ಈ ರಾಜ್ಯಕ್ಕೆ ಏನೋ ಆಗಿಹೋಯಿತು ಎಂದು ಕೆಲವು ಊರುಗಳಲ್ಲಿ ಊರಿನ ಮುಂದೆ ಟಿ.ವಿ.ಯನ್ನು ಹಾಕಿದ್ದರು. ಕೊನೆಗೆ ಆಗಿದ್ದೇನು? ಯಾರದೋ ಮುಖ ಕಾಣುತ್ತಿತ್ತು, ಟಿ.ವಿ. ಗುರ್ ಗುರ್ ಎಂದು ಹೇಳುತ್ತಿತ್ತು! ಅದರಲ್ಲಿ ಎಲ್ಲವೂ ಠುಸ್ ಆಯಿತು. ಎಂತಹದ್ದೂ ಇಲ್ಲ, ಅವರು ಈಗಲೂ ನನ್ನ ಹತ್ತಿರ ಇದೆಯೆಂದು ಸೂಟ್‌ಕೇಸ್ ಇಟ್ಟುಕೊಂಡು ಹೇಳುತ್ತಾರೆ. ಯಾವುದಾದರು ಸಾಕ್ಷ್ಯಾಧಾರಗಳಿದ್ದರೆ ಅದನ್ನು ಹೇಳಲು ಸೂಟ್‌ಕೇಸ್‌ನ್ನು ಮೇಲಕ್ಕೆ ಎತ್ತಿಹಿಡಿಯಬೇಕೇ? ಇದರಲ್ಲಿ ನೀವು ಸುಪ್ರೀಂಕೋರ್ಟ್‌ಗೆ ಹೋಗಿ ಸೂಕ್ತವಾದದ್ದು ಎಂದು ಹೇಳಿದರೆಂದು ಇಲ್ಲಿ ಸುಪ್ರೀಂಕೋರ್ಟ್‌ನ ಒಬ್ಬರು ನ್ಯಾಯಾಧೀಶರನ್ನು ಉಚ್ಚರಿಸುತ್ತಾರೆ. ಅದಾದ ಮೇಲೆ ಏನು ಹೇಳುತ್ತಾರೆಂದರೆ, ಈಗಾಗಲೇ ಸುಪ್ರೀಂಕೋರ್ಟ್‌ನ judgement ಗೆ ಇದೆ. ಗ್ಯಾರಂಟಿಯಾಗಿ ಕುಮಾರಸ್ವಾಮಿಯವರಿಗೆ ಈ ದೇಶದಲ್ಲಿ ಬಹಳ ಶಿಕ್ಷೆಯಾಗುತ್ತದೆ. ಏನೋ ಅವರನ್ನು ತೆಗೆದುಕೊಂಡು ಹೋಗಿ ಫಾಶಿಗೆ ಹಾಕುತ್ತಾರೇನೋ

ಎಂಬ ರೀತಿಯಲ್ಲಿ ಉಚ್ಚಾರಣೆ ಮಾಡುತ್ತಾರೆ. 1, 2, 3ನೇ ಸಿ.ಡಿ.ಯೆಂದು ರಾಜ್ಯದ ಜನರು ತಿಂಗಳಗಟ್ಟಲೆ ಕಾದಿದ್ದರು. ಮಾಧ್ಯಮದವರು ಅದನ್ನೇ ಗುರಿಯಾಗಿಟ್ಟುಕೊಂಡು ಬಳ್ಳಾರಿಗೆ ಹೋಗಿದ್ದರು. ಈ ರಾಜ್ಯ ಮತ್ತು ಈ ರಾಷ್ಟ್ರವೆಲ್ಲ ಇದರ ಬಗ್ಗೆ ಏನೋ ನೋಡಿದ್ದೇ ನೋಡಿದ್ದು. ಚನ್ನಿಗಪ್ಪನನ್ನು ಹೆದರಿಸಿಯೇ ಕರೆದುಕೊಂಡರು. ಅವರನ್ನೂ ಮಧುಗಿರಿಗೆ ಕರೆದುಕೊಂಡು ಹೋಗಿ ಮಾರಿಗೆ ಮರಿಯನ್ನು ಕಡಿದಂತೆ ಕಡಿದರು. ಇವೆಲ್ಲ ಏಕೆ? ಇವತ್ತಿನ ಪರಿಸ್ಥಿತಿಯಲ್ಲಿ ಪಕ್ಷದ ರಾಜಕಾರಣವನ್ನು ಮಡುವುದೇ ಆದರೆ ಎಲ್ಲರಿಗೂ ಅವರದ್ದೇ ಆದ ಘನತೆ, ಗೌರವ, ಇತಿಹಾಸ, ನೆಲೆಗಟ್ಟು ಇರುತ್ತದೆ. ಆ ನೆಲೆಗಟ್ಟಿನ ಮೇಲೆಯೇ ಇವತ್ತು ಪ್ರತಿಯೊಬ್ಬರು ರಾಜಕಾರಣವನ್ನು ಮಾಡುತ್ತಾರೆ. ಆ ನಿಟ್ಟಿನಲ್ಲಿ ಇವತ್ತು ಕುಮಾರಸ್ವಾಮಿಯವರ ಮೇಲೆ ಆಪಾದನೆಯನ್ನು ಸಾಬೀತು ಮಾಡುವುದಾದರೆ ಕೇವಲ ಕುಮಾರಸ್ವಾಮಿಯವರೊಬ್ಬರಲ್ಲ, ನಾವೆಲ್ಲರೂ ಆ ಶಿಕ್ಷೆಯನ್ನು ಎದುರಿಸಲು ಸಿದ್ಧರಾಗಿದ್ದೇವೆ. ಕುಮಾರಸ್ವಾಮಿಯವರಿಗೆ ನಾವು ಇವತ್ತು ಹೇಳುತ್ತಿದ್ದೆವು, ಅಣ್ಣಾ ನೀವು ಬಿ.ಜೆ.ಪಿ. ಯವರಿಗೆ ಆಶ್ರಯದಾತರಾಗಿ ಈ ರಾಜ್ಯದಲ್ಲಿ ರಾಜಕಾರಣವನ್ನು ಮಾಡತಕ್ಕ ವ್ಯವಸ್ಥೆಯುನ್ನು ಮಾಡಿಕೊಟ್ಟಿರಿ. ಆದರೆ ಇವತ್ತು ಈ ಸಂದಿಗ್ಧ ವಾತಾವರಣದಲ್ಲಿ ನಮಗೆ ಆಗುತ್ತಿರುವ ರಾಜಕೀಯ ಕಿರುಕುಳದಲ್ಲಿ ಎಂಥ ಸಂದಿಗ್ಧ ಪರಿಸ್ಥಿಗೆ ನಾವಲ್ಲ ಎಂಬ ಭಾವನೆ ನಮಗೆಲ್ಲ ಬರುತ್ತದೆ. ಈ ಶಾಸಕ ಸ್ಥಾನ ನಮಗೆ ಬೇಕಾ? ಶಾಸಕರಾಗಿ ವಿರೋಧಪಕ್ಷದಲ್ಲಿ ಬರುವುದಕ್ಕಿಂತ ಮನೆಯಲ್ಲಿ ಇರುವುದೇ ಮೇಲು ಎಂಬ ಭಾವನೆ ಈ ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ಸೃಷ್ಟಿಯಾಗಿದೆಯೆಂದರೆ ತಪ್ಪಾಗಲಾರದು. ಈ ಹಿಂದೆ ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷದಲ್ಲಿ ಗೆದ್ದುಹೋಗಬೇಕು ಎಂಬ ಭಾವನೆ ಜನರಲ್ಲ, ನಾಯಕರಲ್ಲಿ ಇತ್ತು. ಆದರೆ ಇವತ್ತಿನ ಪರಿಸ್ಥಿತಿಯನ್ನು ನೀವು ಯಾವ ಮಟ್ಟಕ್ಕೆ ತಂದಿದ್ದೀರಿ? ಇಂಥ ಪರಿಸ್ಥಿತಿಗೆ ಅವಕಾಶ ಕೊಡಬೇಡಿ. ದಯಮಾಡಿ ಶಾಸಕರ ಘನತೆ, ಗೌರವಗಳನ್ನು ಎತ್ತಿಹಿಡಿಯಿರಿ. ಆವತ್ತೇನು ಪ್ರಮಾಣ ವಚನ ಸ್ವೀಕಾರ ಮಾಡಬೇಕಾದರೆ ನಿರ್ವಂಚಿತನಾಗಿ, ಸಮಗ್ರವಾಗಿ ಸರ್ವ ಜನಾಂಗವನ್ನು ಸಮಾನವಾಗಿ ನೋಡುತ್ತೇನೆ ಎಂಬ ಭಾವನೆಯನ್ನೇನು ವ್ಯಕ್ತಪಡಿಸಿರುತ್ತೀರಿ, ಅದಕ್ಕೆ ಅನುಗುಣವಾಗಿ ಈ ರಾಜ್ಯದ ರಾಜಕಾರಣವನ್ನು ಮಾಡತಕ್ಕ ದೃಷ್ಟಿಯಲ್ಲಿ ಈ ಕ್ಷೇತ್ರಗಳನ್ನು ತಾರತಮ್ಯವಿಲ್ಲದೆ ಎಲ್ಲರನ್ನು ಒಂದಾಗಿ ಕಾಣತಕ್ಕ ಭಾವನೆ ಈ ಸರ್ಕಾರಕ್ಕೆ ಬರಲಿ ಎನ್ನತಕ್ಕ ದೃಷ್ಟಿಯಿಂದ ಹೇಳಬಯಸುತ್ತೇನೆ. ಇವತ್ತು ಪತ್ರಿಕೆಗಳಲ್ಲಿ ಓಬಳಾಪುರಂ ಮೈನ್ಸ್ ಬಗ್ಗೆ ಓದುತ್ತಿದ್ದೇವೆ. ನಾವೇನು ಅಲ್ಲಿಗೆ ಹೋಗಿ ನೋಡಿಲ್ಲ. ಕಾಂಗ್ರೆಸ್‌ನವರು ಸತ್ಯ ಸಂಶೋದನಾ

ಸಮಿತಿಯನ್ನು ಮಾಡಿಕೊಡು ಅಲ್ಲಿಗೆ ಹೋಗಿ ಬಂದಿದ್ದಾರೆ. ಓಬಳಾಪುರಂ ಮೈನ್ಸ್‌ನ ಜನರು ಹೇಳುತ್ತಾರೆ, ಪತ್ರಿಕೆಗಳಲ್ಲಿ ಓದಿದ್ದೇವೆ. ಆಂಧ್ರದಲ್ಲಿ ಲೈಸೆನ್ಸ್ ತೆಗೆದುಕೊಂಡು ಇಲ್ಲಿರತಕ್ಕ ಎಲ್ಲಾ ಸಣ್ಣಪುಟ್ಟ ಭಾಗಗಳಿಂದ ಅದಿರನ್ನು ತೆಗೆದುಕೊಂಡು ಆಂಧ್ರಕ್ಕೆ ಲಿಫ್ಟ್ ಮಾಡಿ ಅಲ್ಲಿಯ ಮೂಲಕ ಅಕ್ರಮವಾಗಿ ಹೊರದೇಶಕ್ಕೆ ಕಬ್ಬಿಣದ ಅದಿರನ್ನು ಮಾರುತ್ತಿದ್ದಾರೆ ಎನ್ನತಕ್ಕ ವಿಚಾರವನ್ನು ರಾಜ್ಯದ ಜನತೆ ಮಾತನಾಡುತ್ತಿದ್ದಾರೆ. ಇದನ್ನು ಯಾರೂ ತಡೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಸರ್ಕಾರದಿಂದಾಗಲಿ, ನಮ್ಮ ಬಿ.ಜೆ.ಪಿ.ಯವರಿಂದಾಗಲಿ ಏನೂ ಆಗಿಲ್ಲ ಎಲ್ಲದಕ್ಕೂ ಇವರೇ ಕಾರಣಕರ್ತರು ಎನ್ನುವುದಾದರೆ, ಓಬಳಾಪುರಂ ಮೈನಿಂಗ್ಸ್ ನಮ್ಮದೇ ಅದಕ್ಕೆ ನಾನೇ owner ಎಂದು ಅವರು ಹೇಳುತ್ತಿದ್ದಾರೆ. ಜೊತೆಗೆ ಅವರು ಸರ್ಕಾರದಲ್ಲಿ ಇದ್ದಾರೆ. ಈ ಅಕ್ರಮ ಗಣಿಗಾರಿಕೆಯ ಸತ್ಯಾಸತ್ಯತೆಯ ಬಗ್ಗೆ ತಿಳಿದು ಅದರ ಬಗ್ಗೆ ವಿಮರ್ಶೆಯಾಗುವವರೆಗೆ ಅವರು ಸರ್ಕಾರದಿಂದ ಹೊರಕ್ಕೆ ಬಂದು ಆ ಗಡಿ ರೇಖೆಗಳನ್ನು ತಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಎರಡೂ ರಾಜ್ಯಗಳು ಸೇರಿದಂತೆ ಜಂಟಿ ಸರ್ವೆಯನ್ನು ಮಾಡಿ ಅದನ್ನು ಅಳೆಸಿ ಅಕ್ರಮ ಮಾಡಿಲ್ಲ ಎಂಬುದು ಸಾಬೀತಾಗುವವರೆಗೆ ಅವರು ದಯಮಾಡಿ ಸರ್ಕಾರದಿಂದ ಹೊರಗೆ ಉಳಿಯಬೇಕಾಗುತ್ತದೆ. ಕರ್ನಾಟಕ ರಾಜ್ಯದ ಜನತೆಗೆ ಏನಾದರು ಒಳ್ಳೆಯ ಸಂದೇಶವನ್ನು ಕೊಡಬೇಕೆಂಬ ಭಾವನೆ ನಿಮಗಿದ್ದರೆ, ಬಿ.ಜೆ.ಪಿ.ಯವರು ಇದರಲ್ಲಿ ಯಾವುದೇ ಕಾರಣದಿಂದ ಶಾಮೀಲಾಗಿಲ್ಲ ಎನ್ನತಕ್ಕ ಭಾವನೆ ನಿಮಗೇನಾದರೂ ಇದ್ದರೆ ದಯಮಾಡಿ ಅವರನ್ನು ಸರ್ಕಾರದಿಂದ ಕೈ ಬಿಟ್ಟು ಸತ್ಯಾಸತ್ಯತೆಯನ್ನು ಕಂಡುಹಿಡಿದು, ಅದರಲ್ಲಿ ಅವರು ಅಕ್ರಮ ಮಾಡಿಲ್ಲ, ಯಾವುದೇ ಗಣಿಗಾರಿಕೆಯಲ್ಲಿ ಅಕ್ರಮ ನಡೆದಿಲ್ಲ ಎನ್ನುವುದಾದರೆ ಅನಂತರ ಬೇಕಾದರೆ ಅವರನ್ನು ನಿಮ್ಮ ಸರ್ಕಾರದಲ್ಲಿ ತೆಗೆದುಕೊಳ್ಳಿ. ಆದ್ದರಿಂದ, ಇಷ್ಟು ಹೇಳಿ ಇನ್ನುಮುಂದಾದರು ಈ ದೇಶದ, ರಾಜ್ಯದ ಭವಿಷ್ಯದ ದೃಷ್ಟಿಯಿಂದ ಗಣಿಗಾರಿಕೆಯನ್ನು ರಾಷ್ಟ್ರೀಕರಣ ಮಾಡಿ ಆ ಮೂಲಕ ಈ ದೇಶದಲ್ಲಿರತಕ್ಕ ಈ ಸಂಪತ್ತನ್ನು ಉತ್ತಮವಾಗಿ ಬಳಸಿಕೊಂಡು ಈ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಇದೊಂದು ಉತ್ತಮವಾದ ಸಾಧನೆಯಾಗಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ [ಹೊಳೆನರಸೀಪುರ] :- ಮಾನ್ಯ ಅಧ್ಯಕ್ಷರೆ, ಗಣಿ ವಿಚಾರದಲ್ಲಿ ನಮಗೆ ಅಷ್ಟೊಂದು ಅನುಭವವಿಲ್ಲ. ಏಕೆಂದರೆ, ...

[ಗೊಂದಲ]

ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಎದ್ದು ನಿಂತ ತಕ್ಷಣ ಆಡಳಿತ ಪಕ್ಷದವರೇಕೆ ಅಡ್ಡಿಪಡಿಸುತ್ತಾರೆ? ಅವರಿಗೆ ಸ್ವಲ್ಪ ಸುಮ್ಮನಿರಲು ಹೇಳಿ.

[ಗೊಂದಲ]

ಉಪಾಧ್ಯಕ್ಷರು :- ಮಾನ್ಯ ರೇಣುಕಾಚಾರ್ಯರವರೆ, ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಮೊನ್ನೆ ಒಂದು ವಾರದಿಂದ, ಲೋಕಾಯುಕ್ತರ ವರದಿ ಬಂದ ಮೇಲೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸಚಿವ ಸಂಪುಟ ಸಭೆಯಲ್ಲಿಟ್ಟು, 3 ಜನ ಹಿರಿಯ ಅಧಿಕಾರಿಗಳನ್ನು ನೇಮಿಸಿ, ಅದರಲ್ಲಿ ಏನು findings ಇದೆ, ಅದನ್ನು ಕೊಡಿ ಎಂಬ ಭಾವನೆಯನ್ನು ವ್ಯಕ್ತಪಡಿಸಿರುವುದನ್ನು ನಾನು ಪತ್ರಿಕೆ ಮುಖೇನ ಓದಿ ತಿಳಿದಿದ್ದೇನೆ. ಈ ರಾಷ್ಟ್ರದ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿದ್ದವರು ಮತ್ತು ಲೋಕಾಯುಕ್ತರಾಗಿದ್ದು ಈ ರಾಜ್ಯದಲ್ಲಿ ಗೌರವ ಸಂಪಾದಿಸಿರುವವರು ಕೊಟ್ಟಂತಹ ವರದಿ ಬಗ್ಗೆ ಮತ್ತೆ ಮೂರು ಜನ ಅಧಿಕಾರಿಗಳು findings ಕೊಡುವುದಾದರೆ, ಆ ಲೋಕಾಯುಕ್ತ ಹುದ್ದೆಯನ್ನು ದಯಮಾಡಿ ತೆಗೆಯುವುದು ಒಳ್ಳೆಯದೆಂದು ನನ್ನ ಭಾವನೆ. ಒಬ್ಬ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಅವರು ಕೊಟ್ಟಂತಹ ವರದಿಯನ್ನು ಉಳಿದ ಅಧಿಕಾರಿಗಳು ಮತ್ತೆ ಅದನ್ನು ಇನ್ನೊಮ್ಮೆ screen ಮಾಡುತ್ತಾರೆಂದರೆ, ಅದಕ್ಕೇನಾದರೂ ಅರ್ಥ ಇದೆಯೇ? ಅಧಿಕಾರಿಗಳು ಏನು ಮಾಡುತ್ತಾರೆಂದು ಎಲ್ಲರಿಗೂ ಗೊತ್ತು. ನಾನು ಸರ್ಕಾರದಲ್ಲಿ ಎರಡು ಸಾರಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಅವರೇನು ಮಾಡುತ್ತಾರೆಂದರೆ, ಸರ್ಕಾರ ಏನು ಹೇಳುತ್ತದೋ, ಅದನ್ನೇ ಅಧಿಕಾರಿಗಳು ಮಾಡುತ್ತಾರೆಯೇ ಹೊರತು, findings ಕೊಡುವಾಗ ಸರ್ಕಾರದ ವಿರುದ್ಧ findings ಕೊಡುವುದಿಲ್ಲ. ನ್ಯಾಯಾಧೀಶರಾಗಿದ್ದಂತಹ ಲೋಕಾಯುಕ್ತರು ವರದಿಯೊಂದನ್ನು ಕೊಟ್ಟ ಮೇಲೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅದನ್ನು law departmentಗೆ ಕಳುಹಿಸಬೇಕು. Law Department ಕಾರ್ಯದರ್ಶಿ ಅವರ ಕಡೆಯಿಂದ ಅದರ ಬಗ್ಗೆ ಸ್ಪಷ್ಟವಾದಂತಹ ಅಭಿಪ್ರಾಯವನ್ನು ಪಡೆದುಕೊಂಡು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕೋ, ಅದನ್ನು ಮಾಡಬೇಕು. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕೋ? ಅಥವಾ

ಯಾವ ರೀತಿಯ ಕೇಸ್ ಹಾಕಬೇಕೆಂಬುದರ ಬಗ್ಗೆ ಅಭಿಪ್ರಾಯ ಪಡೆಯಬೇಕು. ಮೂರು ಜನ ಹಿರಿಯ ಅಧಿಕಾರಿಗಳೇನು ಕಾನೂನು ತಜ್ಞರೇ? ದಯವಿಟ್ಟು ಸನ್ಮಾನ್ಯ ಮುಖ್ಯಮಂತ್ರಿಗಳು, ಈ ವಿಷಯದ ಬಗ್ಗೆ ಮಾನ್ಯ ಲೋಕಾಯುಕ್ತರು ಏನೊಂದು ವರದಿಯನ್ನು ಕೊಟ್ಟಿದ್ದಾರೋ, ಅದರ ಬಗ್ಗೆ...

[ಗೊಂದಲ]

ಉಪಾಧ್ಯಕ್ಷರು :- ದಯವಿಟ್ಟು ಮಧ್ಯೆ ಮಾತನಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಮತ್ತು ಕೆಲವು ಪತ್ರಿಕೆಗಳ ಮುಖೇನ ನಾನು ವರದಿಯನ್ನು ನೋಡಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ 43 ಪ್ರಕರಣಗಳಲ್ಲಿ 2973.72 ಎಕರೆ ಭೂಮಿ ಗಣಿ ಗುತ್ತಿಗೆಗೆ ಶಿಫಾರಸ್ಸು ಮಾಡಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ 44 ಪ್ರಕರಣಗಳಲ್ಲಿ 3524.77 ಎಕರೆ ಭೂಮಿ ಗಣಿ ಗುತ್ತಿಗೆಗೆ ಶಿಫಾರಸ್ಸು ಮಾಡಿದ್ದಾರೆ. ರಾಷ್ಟ್ರಪತಿಗಳ ಆಡಳಿತದ ಅವಧಿಯಲ್ಲಿ 8.43 ಹೆಕ್ಟೇರ್ಸ್ ಭೂಮಿಯನ್ನು ಗಣಿ ಗುತ್ತಿಗೆಗೆ ಶಿಫಾರಸ್ಸು ಮಾಡಿದ್ದಾರೆ. ಇದರಲ್ಲಿ ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಶಿಫಾರಸ್ಸು ಎಷ್ಟಕ್ಕೆ ಹೋಗಿದೆ ಎನ್ನುವುದನ್ನು ತಾವು ಹೇಳಿದ್ದೀರಿ. ಮಾನ್ಯ ಕುಮಾರಸ್ವಾಮಿಗಳ ಕಾಲದಲ್ಲಿ ಎಷ್ಟಕ್ಕೆ ಶಿಫಾರಸ್ಸು ಹೋಗಿದೆ ಎಂಬುದನ್ನು ಹೇಳಿದ್ದೀರಿ. ರಾಷ್ಟ್ರಪತಿಗಳ ಆಡಳಿತದ ಅವಧಿಯಲ್ಲಿ ಎಷ್ಟಕ್ಕೆ ಶಿಫಾರಸ್ಸು ಹೋಗಿದೆ ಎಂಬುದನ್ನು ಹೇಳಿದ್ದೀರಿ. ಈ ಶಿಫಾರಸ್ಸುಗಳಲ್ಲಿ ಯಾರ್‍ಯಾರಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಅವರಿಂದ ಅನುಮತಿ ಬಂದಿದೆ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು. ಏನೋ ಕುಮಾರಸ್ವಾಮಿಯವರು ಇದ್ದಾಗ ಮಾಡಿದ್ದಾರೆ, 2044 ಜನರಿಗೆ 3524 ಎಕರೆ ಮಾಡಿದ್ದಾರೆ ಎನ್ನುತ್ತಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಕಳುಹಿಸಿದಾಗ, ಅವತ್ತು ಕುಮಾರಸ್ವಾಮಿಯವರ partner ಆಗಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು. ಈ ಪ್ರಕರಣದಲ್ಲಿ ಅವರೂ ಭಾಗಿಯಾಗಬೇಕಾಗುತ್ತದೆ. ಅವರು ರಾಜೀನಾಮೆ ಕೊಟ್ಟೇ ಈ ತನಿಖೆಯನ್ನು ಎದುರಿಸಬೇಕಾಗುತ್ತದೆ. ಕುಮಾರಸ್ವಾಮಿಯವರು ಈಗ ಅಧಿಕಾರದಲ್ಲಿ ಇಲ್ಲ. ಈಗ ಮಾನ್ಯ ಯಡಿಯೂರಪ್ಪನವರು ರಾಜೀನಾಮೆ ಕೊಡಬೇಕಾಗುತ್ತದೆ. ಆಗ ಅವರಿಬ್ಬರೂ partners ಆಗಿದ್ದರು. ಮಾನ್ಯ ಯಡಿಯೂರಪ್ಪನವರು ಆಗ Deputy CM

ಆಗಿದ್ದರು, ಮಾನ್ಯ ಕುಮಾರಸ್ವಾಮಿಯವರು CM ಆಗಿದ್ದರು. ಅವರಿಬ್ಬರೂ ಸೇರಿ ಮಾಡಿರುವಾಗ,

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಪಾಪ, ಮಾನ್ಯ ಶಿವಣ್ಣರಿಗೆ ವಿಷಯ ಗೊತ್ತಿಲ್ಲ.

[ಗೊಂದಲ]

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಉಪಾಧ್ಯಕ್ಷರೆ, ಇದೊಂದು ಫೈಲ್ ಮಾನ್ಯ ರೇವಣ್ಣನವರ ಹತ್ತಿರ ಹೋಗಿಲ್ಲ. ಮಾನ್ಯ ರೇವಣ್ಣನವರ ಹತ್ತಿರ ಹೋಗಿದ್ದರೆ ಇದನ್ನು ಸರಿ ಮಾಡಿ ಕಳುಹಿಸುತ್ತಿದ್ದರು. ಅವರ ಹತ್ತಿರಕ್ಕೆ ಇದು ಹೋಗಿಯೇ ಇಲ್ಲ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಈಶ್ವರಗೌಡ ಚಿಕ್ಕನಗೌಡ್ರರಿಗೆ ಬೇರೆ ವಿಷಯ ಗೊತ್ತಿದೆ. ಆದರೆ ಅವರಿಗೆ ಗಣಿಗಾರಿಕೆ ವಿಷಯ ಗೊತ್ತಿಲ್ಲ. ಗೊತ್ತಿಲ್ಲದ ವಿಷಯದ ಬಗ್ಗೆ ಅವರೇಕೆ ಮಾತನಾಡಲು ಹೋಗುತ್ತಾರೆ?

[ಗೊಂದಲ]

ಉಪಾಧ್ಯಕ್ಷರು :- ಮಾನ್ಯ ರೇಣುಕಾಚಾರ್ಯರವರೆ, ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಎಂ.ಪಿ. ರೇಣುಕಾಚಾರ್ಯ :- ಅವರಿಗೆ ಲೂಟಿ ಹೊಡೆಯುವುದು ಗೊತ್ತಿಲ್ಲ. ನಿಮಗೆ ಲೂಟಿ ಹೊಡೆಯುವುದು ಗೊತ್ತಿದೆ. ನಮ್ಮ ಶಾಸಕರು ಅವರ ಕ್ಷೇತ್ರದ ಅಭಿವೃದ್ಧಿಗಷ್ಟೇ ಸೀಮಿತವಾಗಿರುತ್ತಾರೆ. ನಿಮ್ಮ ಹಾಗೆ ಲೂಟಿ ಹೊಡೆಯುವುದು ನಮಗೆ ಗೊತ್ತಿಲ್ಲ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ನಾವು ಮಾತನಾಡುವಾಗ ಬೇರೆಯವರು disturb ಮಾಡಬಾರದು. ಆಗಲೇ ಮಾನ್ಯ ಜನಾರ್ಧನ ರೆಡ್ಡಿಯವರು ಮಾತನಾಡುವಾಗ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ನೀವು ಪೂರ್ಣ

ಮಾತನಾಡಿ ಎಂದು ತಾವು ಹೇಳಿದ್ದಿರಿ. ನಾನು ಮಾತನಾಡಿದ ಮೇಲೆ ಒಬ್ಬರಲ್ಲ, ಹತ್ತು ಜನ ಬೇಕಾದರೂ ಮಾತನಾಡಲಿ. ನಾಳೆಯವರೆಗೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಅದಕ್ಕೆ ನಾನು ರೆಡಿಯಿದ್ದೇನೆ. ನಾನು ಮೂರು ಬಾರಿ ಶಾಸಕನಾಗಿದ್ದೇನೆ. COD ತನಿಖೆ ಎದುರಿಸಿದ್ದೇನೆ, ಲೋಕಾಯುಕ್ತ ತನಿಖೆ ಎದುರಿಸಿದ್ದೇನೆ, ಎಲ್ಲಾ ಎದುರಿಸಿಯೂ ನನಗೇನಾಗಿದೆ?...

[ಗೊಂದಲ]

ಮೈಸೂರು ನಗರದಲ್ಲಿ ನನಗೆ 54 ಸೈಟುಗಳಿವೆ ಎಂದರು. ಈ ರಾಜ್ಯದಲ್ಲಿ ಒಂದು ಸೈಟಾದರೂ ಇದ್ದರೆ, ನಾನು ಇವತ್ತೇ ರಾಜಕೀಯ ಬಿಟ್ಟು ಹೋಗುತ್ತೇನೆ. ಯಾರ್‍ಯಾರು ಯಾರ್‍ಯಾರ ಮನೆ ಬಾಗಿಲಿಗೆ ಹೋಗಿ ಸೈಟು ಬರೆಸಿಕೊಂಡಿದ್ದಾರೆ ಎಂಬುದನ್ನು ಹೇಳಲೇ?

[ಗೊಂದಲ]

ಶ್ರೀ ಎಂ.ಪಿ. ರೇಣುಕಾಚಾರ್ಯ :- ... ಸೈಟು ಲೆಕ್ಕ ನಿಮಗೆ ಗೊತ್ತಿಲ್ಲ. ನಿಮಗೆ ಎಕರೆಗಳ ಲೆಕ್ಕದಲ್ಲೇ ಎಲ್ಲವೂ ಗೊತ್ತಾಗುತ್ತದೆ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ನಾನು ಮಾತನಾಡುವುದನ್ನು ಬಹಳ ಗಂಭೀರವಾಗಿ ಕೇಳುತ್ತಿದ್ದಾರೆ. ಆದರೆ ಶಾಸಕರು ಏಕೆ ಎದ್ದು ನಿಂತುಕೊಳ್ಳುತ್ತಿದ್ದಾರೆ? ಅವರಿಗೆ ತಾವು ದಯಮಾಡಿ ಸ್ವಲ್ಪ ಕುಳಿತುಕೊಳ್ಳಲು ಹೇಳಿ.

[ಗೊಂದಲ]

ಉಪಾಧ್ಯಕ್ಷರು :- Please, ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ನಾನೇನು ಯಾವ ಮುಖ್ಯಮಂತ್ರಿಗಳ ಮನೆಗೆ ಹೋಗಿ ಎಂ.ಎಲ್.ಎ. ಕೋಟಾದಲ್ಲಿ ಬರೆಯಿರಿ ಎಂದು ಹೇಳಿಲ್ಲ. ಇವತ್ತು ಬೇನಾಮಿಯಾಗಿ ಒಂದಾದರೂ ಆಸ್ತಿ ಇದ್ದರೆ, ಬೇಕಾದರೆ ಅಷ್ಟನ್ನೂ ಮುಟ್ಟುಗೋಲು ಹಾಕಿಕೊಳ್ಳಲಿ.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ದಯವಿಟ್ಟು ನಾನು ಶಾಸಕರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾರೂ ಕೂಡ ಲಘುವಾಗಿ ಮಾತನಾಡುವುದು ಬೇಡ. ನಮ್ಮ ಬಳಿ ಸಾವಿರಾರು ಎಕರೆ ಭೂಮಿ ಇದೆ ಎಂಬ ಮಾತನ್ನು ಇಲ್ಲಿ ನಿಂತುಕೊಂಡು ಹೇಳುತ್ತಿದ್ದಾರೆ. ನಮ್ಮ ಬಳಿ ಸಾವಿರಾರು ಎಕರೆ ಇಲ್ಲ. ನಮ್ಮ ಬಳಿ ಇರುವ ಆಸ್ತಿಯನ್ನು ನಾವು declare ಮಾಡಿದ್ದೇವೆ. ಅದರ ಮೇಲೆ ಇನ್ನೇನಾದರೂ ಆಸ್ತಿ ಇದ್ದರೆ, ಅದನ್ನು ನಿಮ್ಮ ಹೆಸರಿಗೆ ಬರೆಸಿಕೊಂಡು ಬಿಡಿ. ದಯುವಿಟ್ಟು ಲಘುವಾಗಿ ಮಾತನಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಕಷ್ಟಪಟ್ಟು ದುಡಿದಿದ್ದೇವೆ. ಮಾತನಾಡುವಾಗ ಲಘುವಾಗಿ ಮಾತನಾಡುವುದನ್ನು ನಿಲ್ಲಿಸಬೇಕಾಗುತ್ತದೆ.

[ಗೊಂದಲ]

Election contest ಮಾಡಬೇಕಾದರೆ false certificate ಕೊಟ್ಟಿರುವ ಇವರು ಇವತ್ತು ನಮ್ಮ ಆಸ್ತಿ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ.

[ಗೊಂದಲ]

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾತನಾಡಬೇಕಾದರೆ, ಸ್ವಲ್ಪ ಗಂಭೀರವಾಗಿ ಮಾತನಾಡುವುದನ್ನು ಕಲಿಯಿರಿ. ಶಾಸಕರುಗಳು ಲಘುವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. University Senate Member ಗಳಾಗಿ marks card ತಿದ್ದುವಂತಹ ವ್ಯಕ್ತಿಗಳೆಲ್ಲಾ ಇಲ್ಲಿ ಬಂದು ಕುಳಿತುಕೊಂಡು ಚರ್ಚೆ ಮಾಡುತ್ತಾರೆ.

[ಗೊಂದಲ]

ಉಪಾಧ್ಯಕ್ಷರು :- ವಿಷಯಾಂತರ ಮಾಡುವುದು ಬೇಡ.

[ಗೊಂದಲ]

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಪೂರ್ತಿ ಮಾತನಾಡುವುದನ್ನು ಕೇಳಿಸಿಕೊಂಡ ನಂತರ ನೀವು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ.

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಸದಸ್ಯರುಗಳು ನನ್ನ ಮೇಲೆ ಏನೇನು ಆರೋಪ ಮಾಡುತ್ತಾರೋ, ಅದೆಲ್ಲಕ್ಕೂ ಉತ್ತರ ಕೊಡಲು ನಾನು ರೆಡಿಯಿದ್ದೇನೆ. ಈ ಸಭೆಯ ಮುಖೇನ ನಾನು ಹೇಳಬಯಸುತ್ತೇನೆ. ನಾನು ಮಾನ್ಯ ಕುಮಾರಸ್ವಾಮಿಯವರ ಜೊತೆಗೆ 18-20 ತಿಂಗಳು ಮತ್ತು ಮಾನ್ಯ ಧರ್ಮಸಿಂಗ್‌ರವರ ಜೊತೆಗೆ 17 ತಿಂಗಳು ಕೆಲಸ ಮಾಡಿದ್ದೇನೆ. ನಾನು ಕಾರ್ಯನಿರ್ವಹಿಸುತ್ತಿದ್ದ ಲೋಕೋಪಯೋಗಿ ಇಲಾಖೆ, ಇಂಧನ ಇಲಾಖೆ ಮತ್ತು ಡೈರಿ ಇದೆಲ್ಲದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ತನಿಖೆ ಮಾಡಿಸುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ನೀವು ಇದರ ತನಿಖೆಯನ್ನು ಸಿ.ಬಿ.ಐ.ಗೆ ಕೊಡುವುದಾದರೆ, ನಾನು ಅದಕ್ಕೂ ರೆಡಿಯಿದ್ದೇನೆ...

ಉಪಾಧ್ಯಕ್ಷರು :- ವಿಷಯಾಂತರ ಮಾಡಬೇಡಿ. ಕೇವಲ ಗಣಿ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ :- ... ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿ ಏನು ಮಾಡಿದ್ದಾರೆ, ಅದನ್ನೂ ಬೇಕಾದರೆ ಸಿಬಿಐಗೆ ರೆಫರ್ ಮಾಡಲಿ. ಮಾನ್ಯ ಕುಮಾರಸ್ವಾಮಿಯವರು 20 ತಿಂಗಳು ಏನು ಮಾಡಿದ್ದಾರೆ ಅದನ್ನೂ ಬೇಕಾದರೆ ಸಿಬಿಐ ಗೆ ರೆಫರ್ ಮಾಡಲಿ. ಮೂರೂ ಜನರದ್ದನ್ನೂ ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಸಿಬಿಐಗೆ ರೆಫರ್ ಮಾಡಲಿ. ಅದಕ್ಕೆ ನಾನು ರೆಡಿ ಇದ್ದೇನೆ. ಇಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಿ. ಈಗಲೇ ಬೇಕಾದರೆ ರೆಫರ್ ಮಾಡಿ. ಅದರ ಬಗ್ಗೆ ನಾನೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅದರ ವಿರುದ್ಧ ಯಾವ ಕೋರ್ಟಿಗೂ ಕೂಡ ನಾನು ಹೋಗುವುದಿಲ್ಲ. ನಾನು ರೆಡಿ ಇದ್ದೇನೆ. ಇಲ್ಲದಿದ್ದರೆ ನೀವು ಸುಮ್ಮನೆ ಭ್ರಷ್ಟಾಚಾರಿಗಳು ಎಂದು ಹೇಳಿಕೊಂಡು ಕುಳಿತುಕೊಳ್ಳಿ. ನಾನು ಯಾವುದಕ್ಕೂ ಅಂಜಿ ಹೋಗುವುದಿಲ್ಲ. ನಾನು ಪ್ರತಿ ಬಾರಿ ಎಲೆಕ್ಷನ್‌ಗೆ ನಿಲ್ಲುವಾಗಲೂ ನನ್ನ ಆಸ್ತಿ declaration ಕೊಟ್ಟಿದ್ದೇನೆ. ನಾನೇನು ಹೆದರಿಕೊಂಡು ಓಡಿ ಹೋಗುವುದಿಲ್ಲ.

[ಗೊಂದಲ]

ಸಿ.ಬಿ.ಐ. ತನಿಖೆಗೆ ಕೊಡಲಿ. ಮಾನ್ಯ ಶಿವಣ್ಣನವರ ಕೇಸ್ ಕಂಪ್ಲೀಟ್ ಆದ ಮೇಲೆ ಅವರು ಮಾತನಾಡಲಿ. ಅವರ ಕೇಸ್ ಇನ್ನೂ ಕೋರ್ಟಿನಲ್ಲೇ ಇದೆ. ಕಂಪ್ಲೀಟ್ ಆದಮೇಲೆ, ಪರವಾಗಿಲ್ಲ ಅವರು ಪ್ರಾಮಾಣಿಕರು ಎಂದು ಪ್ರೂವ್ ಆದ ಮೇಲೆ ಅವರು

ಮಾತನಾಡಲಿ. ಅವರ ಹುಳುಕು ಇಟ್ಟುಕೊಂಡು ಅವರು ನನ್ನ ವಿರುದ್ಧ ಏಕೆ ಮಾತನಾಡುತ್ತಿದ್ದಾರೋ ಗೊತ್ತಿಲ್ಲ.

ನನ್ನ ಬಗ್ಗೆ ಏಕೆ ಮಾತನಾಡಲು ಹೋಗುತ್ತೀರಿ, ನಾನು ಯಾವ ರಾಜಕಾರಣಿಯ ಮನೆಯ ಹತ್ತಿರ ಹೋಗಿ ತಲೆ ಕೆರೆದುಕೊಂಡು ನಿಂತಿಲ್ಲ ನನ್ನ ಜೀವನದಲ್ಲಿ. ಇಂಥಹದ್ದನ್ನು ನಾನು ಎಷ್ಟೋ ನೋಡಿದ್ದೇನೆ.

ಉಪಾಧ್ಯಕ್ಷರು :- ತಾವು ವಿಷಯಾಂತರ ಮಾಡಬೇಡಿ.

ಶ್ರೀ ಎಸ್. ಶಿವಣ್ಣ :- ನಾವು ಇವರಂತೆ ಗುಬರುಹಾಕಿಕೊಂಡು ಹೋಗುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ :- ನಾವು ಹೋರಾಟದಿಂದಲೇ ರಾಜಕೀಯಕ್ಕೆ ಬಂದಿರುವುದು.

ಶ್ರೀ ಎಂ.ಪಿ. ರೇಣುಕಾಚಾರ್ಯ :- ಕೇವಲ ಮೋಸ, ಕುತಂತ್ರ ಮಾಡಿಕೊಂಡೇ ಇವರು ರಾಜಕಾರಣಕ್ಕೆ ಬಂದಿದ್ದಾರೆ. ನೀವು ಜನ ಸೇವೆ ಮಾಡಿ ರಾಜಕಾರಣಕ್ಕೆ ಬಂದಿಲ್ಲ.

ಉಪಾಧ್ಯಕ್ಷರು :- ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಹೋರಾಟ ಮಾಡಿ ರಾಜಕಾರಣಕ್ಕೆ ಬಂದಿರುವವನು. ಅಗತ್ಯವಿದ್ದರೆ ವಿಚಾರಣೆ ಮಾಡಿಕೊಳ್ಳಲಿ. ನಾನು ಯಾವುದೇ ರಾಜಕೀಯ ಪಕ್ಷದ ಬಲದಿಂದ ಬಂದಿಲ್ಲ. ಇವತ್ತು ಒಂದು ಹೇಳಿಕೆಯನ್ನು ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಈ ಕಡೆ ಜನಾರ್ದನರೆಡ್ಡಿ ಮತ್ತು ಕಂದಾಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಎರಡೂ ಸದನದಲ್ಲು ಕೊಟ್ಟಿದ್ದಾರೆ. ಇವತ್ತು ಯಾರ್‍ಯಾರ ಸರ್ಕಾರದಲ್ಲಿ ಏನೇನಾಗಿದೆ ಈ ಶಿಫಾರಸ್ಸುಗಳಿಗೆ? ಕುಮಾರಸ್ವಾಮಿಯವರ ಕಾಲದಲ್ಲಿ ಶಿಫಾರಸ್ಸಾಗಿದೆಯಲ್ಲ, ಕೇಂದ್ರ ಸರ್ಕಾರವೇನಾದರೂ ಅನುಮತಿ ಕೊಟ್ಟಿದೆಯೆ? ರಾಷ್ಟಪತಿಗಳ ಕಾಲದಲ್ಲಾಗಿರುವುದಕ್ಕೆ ಕೇಂದ್ರ ಸರ್ಕಾರವೇನಾದರೂ ಅನುಮತಿ ಕೊಟ್ಟಿದೆಯೇ? ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಕುಮಾರಸ್ವಾಮಿಯವರ ಕಾಲದಲ್ಲಿ ಏನೇನು ಮಾಡಿದ್ದಾರೆ, ತನಿಖೆ ಮಾಡುವುದಕ್ಕೆ ಬಂದ ಎಂಟೇ ದಿವಸಗಳಲ್ಲಿ ಆದೇಶ ಮಾಡಿದ್ದಾರೆ. ಯಾರೇ ಈ ರಾಜ್ಯದ ಸ್ವತ್ತನ್ನು ಮಾಡಿದಾಗ, ಕುಮಾರಸ್ವಾಮಿ ಇರಬಹುದು, ರೇವಣ್ಣ ಇರಬಹುದು, ಯಾರೇ

ಇರಬಹುದು, ಅದಕ್ಕೆ ನಾವು ಎದುರಾಗಬೇಕು. ಏನು ಶಿಕ್ಷೆ ಕೊಟ್ಟರೂ ಅನುಭವಿಸೋಣ. ಕುಮಾರಸ್ವಾಮಿಯವರು ಬೇರೆಯಲ್ಲ, ಇತರರು ಬೇರೆ ಅಲ್ಲ. ಲೋಕಾಯುಕ್ತಕ್ಕೆ ಕಳುಹಿಸಿದ್ದಾರೆ, ಅಲ್ಲಿಂದ ಏನು ವರದಿ ಬರುತ್ತದೊ ನೋಡೋಣ. ಈಗ ಲೋಕಾಯುಕ್ತದಿಂದ ವರದಿ ಬಂದಿದೆ. ಉದಾಹರಣೆಗೆ ಹೇಳುವುದಾದರೆ ಒಂದು ದಿನಕ್ಕೆ 25 ಕೋಟಿ ರೂ. ಅಕ್ರಮ ಅದಿರು ಒಂದೇ ದಿನದಲ್ಲಿ ಜಪ್ತಿ. 11-08-2008ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿದೆ. ಅದೇ ರೀತಿ 55 ಕೋಟಿ ರೂ. ಮೌಲ್ಯದ ಅದಿರು 17-08-2008ರಂದು ಕೇವಲ 18 ಕೋಟಿಗೆ, ಅದೂ 18 ಕೋಟಿ ರೂಪಾಯಿಗೆ ನಾವು ಎಲ್ಲರನ್ನು ಸೇರಿಸಿ ಒಪ್ಪಿಸಿದೆವು ಎಂದು ಹೇಳುತ್ತಾರೆ. ಯಾರು ಇದನ್ನು ಹೇಳುತ್ತಾರೆಂದರೆ, ತದನಂತರ ಕಾರ್ಯಚರಣೆಯ ಮೂರನೆ ದಿವಸ ವಶಪಡಿಸಿಕೊಂಡ ಅಕ್ರಮ ಅದಿರು ಸಂಡೂರು ಗ್ರಾಮದಲ್ಲಿ 3.4 ಸಾವಿರ ಟನ್‌ನ ಹರಾಜಿನ ಪ್ರಕ್ರಿಯೆಯಲ್ಲಿ ನಮ್ಮ ಕಾರ್ಯದರ್ಶಿಯವರು ಜಿಲ್ಲಾಧಿಕಾರಿ ಬಿ.ಶಿವಪ್ಪ, ಜಿಲ್ಲಾ ಪೋಲೀಸ್ ಅಧಿಕಾರಿ ಸೀಮಂತ್‌ಕುಮಾರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಶಿವಲಿಂಗಸ್ವಾಮಿ ಉಳಿದವರೆಲ್ಲ ಸೇರಿ ಬಿಡ್ಡುದಾರರ ಮನವೊಲಿಸಿ, ಅವರಿಗೆ ಈಡುಗಾಯಿ ಹಾಕಿ 55 ಕೋಟಿ ಮಾಲನ್ನು 18 ಕೋಟಿಗೆ ತೆಗೆದುಕೊಳ್ಳಿ ಎಂದು ಕೇಳಿಕೊಂಡೆವು ಎಂದು ಅವರೇ ಹೇಳುತ್ತಾರೆ. ಇದು ನನ್ನದಲ್ಲ. ಈ ಬಿಡ್‌ಗೆ ಸಂಬಂಧಿಸಿದಂತೆ ಧಾರವಾಡ ಹೈಕೋರ್ಟ್‌ನಲ್ಲಿ ಸ್ಟೇ ಇದೆಯೋ ಎಂಬುದು ನನಗೆ ಗೊತ್ತಿಲ್ಲ. ಅದು ಏನಾಯಿತೋ ನನಗೂ ಗೊತ್ತಿಲ್ಲ. ಏಕೆಂದರೆ ನಾನು ಅಷ್ಟೊಂದು ಲೀಗಲ್ ಪರಿಣಿತನಲ್ಲ. ನಾನು ಕಾನೂನು ಪದವೀಧರನಲ್ಲ. ನಾನು ಓದಿರುವುದು ಇಷ್ಟೇ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನೀವು ಜಾಸ್ತಿ ಓದಿದ್ದರೆ ಲೋಕಸಭೆಯಲ್ಲಿ ಮಾತನಾಡಬಹುದಿತ್ತು. ಈಗ ಓದಿರುವುದೇ ಸಾಕು!

ಶ್ರೀ ಹೆಚ್.ಡಿ. ರೇವಣ್ಣ :- ಬಳ್ಳಾರಿ ಗಣಿಗಾರಿಕೆ. ಒಂದು ಸಾವಿರ ಹೆಕ್ಟೇರ್ ಕಾಡು ನಾಶ. ಇದನ್ನು ಯಾರು ಹೇಳಿದ್ದು? ಕುಮಾರಸ್ವಾಮಿಯವರು ಹೇಳಿದ್ದಾರೆಯೇ? ಖರ್ಗೆ ಸಾಹೇಬರು, ಜಯಚಂದ್ರ ಸಾಹೇಬರು ಹೇಳಿದ್ದಾರೆಯೇ? ಇದನ್ನು ಹೇಳಿರುವವರು ಲೋಕಾಯುಕ್ತದವರು. ಯಾವಾಗ ಹೇಳಿದ್ದಾರೆ? ಕನ್ನಡ ಪ್ರಭದಲ್ಲಿ 10-11-2008 ರಂದು ಬಂದಿದೆ. ಅಂದರೆ ತಮ್ಮ ಸರ್ಕಾರ ಬಂದ ಮೇಲೆ ಹೇಳಿದ್ದಾರೆ. ಇವತ್ತು ಬಳ್ಳಾರಿ ಜಿಲ್ಲೆ ಒಂದರಲ್ಲೇ ಕಾಡು ನಾಶವಾಗುತ್ತಿರುವುದು ಸುಮಾರು ಎರಡೂವರೆ ಸಾವಿರ ಎಕರೆ. ಇವತ್ತು ಒಂದು ದಿನಕ್ಕೆ 25 ಕೋಟಿ ಮೌಲ್ಯದ ಅಕ್ರಮ ಅದಿರು ಜಪ್ತಿಯಾಗುವುದಾದರೆ ಕಳೆದ 4-5 ವರ್ಷದಲ್ಲಿ ಎಷ್ಟಾಗಿದೆ?

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ :- ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಇವರು ಪ್ರತಿಯೊಂದಕ್ಕೂ ಎದ್ದು ಮಾತನಾಡುವುದಾದರೆ ಹೇಗೆ? ನಾನು ಈಲ್ಡ್ ಆಗಿಲ್ಲ. ಇವರು ಪ್ರತಿ ಹಂತದಲ್ಲಿ ಎದ್ದು ನಿಲ್ಲುವುದಾದರೆ ಹೇಗೆ? ಇದು ನಾಚಿಕೆಗೇಡು.

ಉಪಾಧ್ಯಕ್ಷರು :- ಅವರು ಯೀಲ್ಡ್ ಆಗಿಲ್ಲ. ಶ್ರೀನಿವಾಸ್‌ರವರೆ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :- ಅವರು ಹೇಳಿದರೆ ಮಾತನಾಡಿ. ನಾನು ಅದಕ್ಕೆ ಬೇಡವೆಂದು ಹೇಳಲಿಲ್ಲ. ಗಣಿ ವಿಚಾರ ಶ್ರೀನಿವಾಸ್‌ರವರಿಗೇನು ಗೊತ್ತು. ಬೆಂಗಳೂರಿನ ಸುತ್ತಮುತ್ತ ಜಮೀನಿನ ವಿಚಾರವನ್ನು ಬೇಕಾದರೆ ಹೇಳಲಿ.

ಶ್ರೀ ಎಂ. ಶ್ರೀನಿವಾಸ್ :- ಇದು ನಮ್ಮ ಸರ್ಕಾರ ಬಂದಾಗ ಆಗಿರುವುದಲ್ಲ. ಇದು ನಿಜವಾಗಿ ಬಂದಿರುವುದು ಈಗ. ಇದು ನಮ್ಮ ಸರ್ಕಾರ ಬಂದಾಗ ಆಗಿರುವುದಲ್ಲ.

(ಗೊಂದಲ)

ಡಾ॥ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಯವರು :- ಗೌರವಾನ್ವಿತ ಸದಸ್ಯರುಗಳು ಮಾತನಾಡಬೇಕಾದರೆ ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡು ಅಥವಾ ಅವರು ಯೀಲ್ಡ್ ಆದರೆ ತಮಗೆ ಅವಕಾಶ ಇದ್ದರೆ ಮಾತನಾಡಿ. ವಿರೋಧ ಪಕ್ಷದವರು ಏನು ಬೆಳಕು ಚೆಲ್ಲುತ್ತಿದ್ದಾರೆ ಅದನ್ನು ತಿಳಿದುಕೊಂಡು ನಂತರ ನೀವು ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಿ. ಮಧ್ಯದಲ್ಲಿ ಅನಿವಾರ್ಯವಾಗಿ ಪ್ರವೇಶ ಮಾಡಬೇಕಾದಾಗ ಮಾಡೋಣ. ಅದು ಬಿಟ್ಟು ಯಾರೂ ದಯಮಾಡಿ ಮಧ್ಯೆ ಪ್ರವೇಶ ಮಾಡಬಾರದು. ಉತ್ತರ ಕೊಡುವುದಕ್ಕೆ ನಾನಿದ್ದೇನೆ. ನೀವು ಏನಾದರೂ ಬೇಕಾದರೆ ಹೇಳಿ. ಆದರೆ, ದಯವಿಟ್ಟು ಯಾರೂ ಮಧ್ಯೆ ಪ್ರವೇಶ ಮಾಡಬೇಡಿ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ :- ಮುಖ್ಯಮಂತ್ರಿಯವರು ಎಷ್ಟು ತಾಳ್ಮೆಯಿಂದ ಈ ಮಾತನ್ನು ಹೇಳುತ್ತಿದ್ದಾರೆಂದರೆ, ನನಗೆ ಮಧ್ಯಾಹ್ನ ಯಾರೋ ಕೇಳಿದರು. ಯಡಿಯೂರಪ್ಪನವರಿಗೆ ಯಾರೋ ಒಬ್ಬರು ಅಡ್ವೈಸ್ ಮಾಡಿದಂತೆ ಇದೆ. ಅದೇನೆಂದು ಕೇಳಿದಾಗ, ನಿಮಗೆ ಸಿಟ್ಟು ಬೇಕೋ ಅಥವಾ ಕುರ್ಚಿ ಬೇಕೊ ಎಂದು

ಕೇಳಿದಾಗ ತಕ್ಷಣವೇ ನನಗೆ ಸಿಟ್ಟು ಬೇಡ ಕುರ್ಚಿ ಬೇಕು ಎಂದು ಹೇಳಿದರಂತೆ ಅಂದಿನಿಂದ ಅವರು ಸ್ವಲ್ಪ ಸಿಟ್ಟನ್ನು ಕಡಿಮೆ ಮಾಡಿದ್ದಾರಂತೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಮುಖ್ಯಮಂತ್ರಿಯವರಿಗೆ ವಿರೋಧ ಪಕ್ಷದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವ ಶಕ್ತಿ ಇರುವಾಗ ನಾನು ಸದಸ್ಯರುಗಳಲ್ಲಿ ಮನವಿ ಮಾಡುವುದೇನೆಂದರೆ, ಯಾರೂ ಸದಸ್ಯರು ಗಾಬರಿಯಾಗಬೇಕಾಗಿಲ್ಲ. ಅವರಿಗೆ ವಿರೋಧ ಪಕ್ಷದಲ್ಲಿ 20 ವರ್ಷಗಳ ಕೆಲಸ ಮಾಡಿ ಅನುಭವವಿದೆ. ಅವರೇನು ಏಕ್‌ದಂ ಮುಖ್ಯಮಂತ್ರಿಗಳಾಗಿ ಬಂದಿಲ್ಲ. ಅವರಿಗೆ ನೀವು ರಕ್ಷಣೆ ಮಾಡುವ ಅಗತ್ಯವಿಲ್ಲ. ಅವರು ಉತ್ತರ ಕೊಡುತ್ತಾರೆ. ಧೈರ್ಯವಾಗಿರಿ. ನೀವು ಏಕೆ ಹೆದರುತ್ತೀರಿ? ಇವತ್ತು ಎರಡು ಹೇಳಿಕೆಗಳನ್ನು ನೋಡಿದ್ದೇನೆ. ಕುಮಾರಸ್ವಾಮಿಯವರ ಕಾಲದಲ್ಲಿ ಯಾರ್‍ಯಾರಿಗೆ ಕೊಟ್ಟರು, ಶಾಸಕರಿಗೆ ಕೊಟ್ಟರು, ಅವರು ಇವರಿಗೆ ಕೊಟ್ಟರು, ಕಾಂಗ್ರೆಸ್‌ನವರ ಕಾಲದಲ್ಲಿ ಯಾರ್‍ಯಾರಿಗೆ ಕೊಟ್ಟರು, ನಮ್ಮ ಘೋರ್ಪಡೆಯಿಂದ ಹಿಡಿದು ಯಾರ್‍ಯಾರು ಇದ್ದಾರೆಂದು ಹೇಳಿದ್ದಾರೆ. ಕೆಲವು ಪಕ್ಷದ ಸ್ಥಿತಿಗತಿಗಳನ್ನು ಸಹ ಹೇಳಿದ್ದಾರೆ. ಹೇಳಿಕೊಳ್ಳಲಿ ಪರವಾಗಿಲ್ಲ. ಯಾವ್ಯಾವ ಪಕ್ಷದ ಸ್ಥಿತಿಗತಿ ಯಾವ್ಯಾವಾಗ ಏನೇನಾಯಿತು ಎಂಬುದನ್ನು ಹೇಳಿದ್ದಾರೆ. ನನಗೆ ಅಷ್ಟೊಂದು ದೀರ್ಘವಾಗಿ ಮಾತನಾಡುವ ಶಕ್ತಿ ಇಲ್ಲ. ಇದಲ್ಲದೆ ಮಾನ್ಯ ಮುಖ್ಯಮಂತ್ರಿಯವರು ಮೇಲ್ಮನೆಯಲ್ಲಿ ಹೇಳಿರುವ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಲೋಕಾಯುಕ್ತ ವರದಿಯ ಶಿಫಾರಸ್ಸನ್ನು ಯಾವ ರೀತಿಯಾಗಿ ಜಾರಿಗೆ ತರಬೇಕು ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರ ತಪ್ಪಿತಸ್ಥರು ಯಾರೇ ಆಗಿರಲಿ, ಎಷ್ಟು ದೊಡ್ಡ ವ್ಯಕ್ತಿಯೇ ಆಗಿರಲಿ, ಎಷ್ಟು ಪ್ರಭಾವ ಬೀರಿದರೂ ಕ್ರಮ ಕೈಗೊಳ್ಳಲು ಹಿಂದುಮುಂದು ನೋಡುವುದಿಲ್ಲವೆಂದು ಹೇಳಿದ್ದಾರೆ. ಒಬ್ಬರು ಹಾಲಿ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿ ಲೋಕಾಯುಕ್ತ ವರದಿಯನ್ನು ಕೊಟ್ಟಮೇಲೆ ಯಾರು ಅಧಿಕಾರಿಗಳಿದ್ದಾರೆ ಅವರನ್ನು pending enquiry ಇಟ್ಟು ವಿಚಾರಣೆ ವರದಿ ಬರುವವರೆಗೆ ಅವರನ್ನು ಅಮಾನತ್ತು ಮಾಡಲು ನಿಮಗೇನು ಕಷ್ಟ? ಅಂದರೆ ಸಂತೋಷ್ ಹೆಗಡೆಯ ಬಗ್ಗೆ ತಮಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಲೋಕಾಯುಕ್ತ ಸಂತೋಷ್ ಹೆಗಡೆ ಏನಿದ್ದಾರೆ ಅವರು ಕೊಟ್ಟ ವರದಿಯ ಬಗ್ಗೆ ತಮಗೆ ಸಹಮತವಿಲ್ಲ ಎನ್ನತಕ್ಕ ಭಾವನೆ ಸರ್ಕಾರಕ್ಕಿದೆಯೆಂದು ನಾನು ಭಾವಿಸುತ್ತೇನೆ. ಏಕೆಂದರೆ ವರದಿ ಬಂದು 2 ತಿಂಗಳುಗಳಾದರೂ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ನಿಮಗೇನು ತೊಂದರೆ? ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡವೇನಾದರೂ ಇದೆಯೇ? ರಾಜಕೀಯ ಒತ್ತಡ ಇದ್ದರೆ ಬೇಡ. ಅಥವಾ ವಿರೋಧ

ಪಕ್ಷದವರು ಯಾರಾದರೂ ಇವರನ್ನು ಉಳಿಸಿ ಎಂದು ಹೇಳಿದ್ದಾರೆಯೇ? ಇಂಥ ಒಂದು ಸ್ವಚ್ಛ ಸರ್ಕಾರವಿರುವಾಗ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಏಕೆ ಹೆದರಬೇಕು? ಲೋಕಾಯುಕ್ತ ವರದಿ ಬಂದ ತಕ್ಷಣ ವಿಚಾರಣೆಯನ್ನು ಪೆಂಡಿಗ್‌ನಲ್ಲಿಟ್ಟು ಅಮಾನತ್ತು ಮಾಡಬೇಕಾಗಿತ್ತು. ಅನಂತರ ಅದರಲ್ಲಿ ಏನಾದರೂ ಒಳ್ಳೆಯದಿದ್ದರೆ ಮಾಡಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಇದಲ್ಲದೆಯೇ 2006-2008 ರವರೆಗೆ ಏನೇನು ಗಣಿಗಾರಿಕೆಯಾಗಿದೆ ಎಂಬ ಬಗ್ಗೆ ತನಿಖೆ ಮಾಡಲು ಲೋಕಾಯುಕ್ತದವರಿಗೆ ಕೊಟ್ಟಿದ್ದೀರಿ. ಸಂತೋಷ. ಅದನ್ನು ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ರಾಜ್ಯ ಸರ್ಕಾರವು ಅಂತರರಾಜ್ಯ ಗಡಿ ಗುರುತಿಸಲು ಜಂಟಿ ಸರ್ವೆ ಮಾಡಬೇಕೆಂದು 28-07-2007ರಂದು ಆಂಧ್ರಪ್ರದೇಶಕ್ಕೆ ಪತ್ರವನ್ನು ಬರೆದಿರುತ್ತದೆ. ಅದನ್ನು ಕುಮಾರಸ್ವಾಮಿಯವರ ಸರ್ಕಾರವಿದ್ದಾಗಲೇ ಪತ್ರವನ್ನು ಬರೆದಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇದಲ್ಲದೇ ಲೋಕಾಯುಕ್ತ ವರದಿ ಬಂದ ನಂತರ ದಿನಾಂಕ 16-01-2009 ರಂದು ಕೇಂದ್ರ ಸರ್ಕಾರದ Survey of Indiaದ ಕಂದಾಯ ಇಲಾಖೆಗೆ ಪತ್ರ ಬರೆದಿದ್ದಾರೆ. ನಾನು ಹೇಳುವುದಿಷ್ಟೆ. ಕಂದಾಯ ಸಚಿವರ ಬಗ್ಗೆ ನನಗೆ ಗೌರವವಿದೆ. ಕಂದಾಯ ಸಚಿವರು ಮತ್ತು ಅವರ ಕುಟುಂಬದ ಮೇಲೆ ಆರೋಪ ಬಂದಾಗ, ಅವರೇ ಈಗ ಕಂದಾಯ ಸಚಿವರಾಗಿದ್ದು, ಅವರೇ ಸರ್ವೆ ಮಾಡುವುದೇಕೆ? ಅಧಿಕಾರಿಗಳು ಅಲ್ಲಿ ಯಾರೇ ಇರಲಿ, ನಾನೂ ಒಬ್ಬ ಮಂತ್ರಿಯಾಗಿದ್ದು, ನನ್ನ ಇಲಾಖೆಯ ಮೇಲೆ ನಾನು Survey of Indiaಗೆ ಪತ್ರ ಬರೆದಾಗ ಅಧಿಕಾರದಲ್ಲಿದ್ದರೆ, ಅದು ಅಧಿಕಾರದ ದುರುಪಯೋಗವಾಗುತ್ತದೆಯೇ ಇಲ್ಲವೇ ಎಂಬುದನ್ನು ಅಧ್ಯಕ್ಷರಾದ ತಾವೇ ಹೇಳಬೇಕು. ದಯಮಾಡಿ, ಅವರು ರಾಜೀನಾಮೆ ಕೊಟ್ಟು, Survey of Indiaಗೆ ಪತ್ರ ಬರೆದಿದ್ದರೆ, ನಾನು ಒಪ್ಪಬಹುದಿತ್ತು. ಲೋಕಾಯುಕ್ತರಿಂದ ಬಂದ ಮೇಲೆ . . . .

ಶ್ರೀ ಜಿ. ಕರುಣಾಕರರೆಡ್ಡಿ :- ನಾನೇಕೆ ರಾಜೀನಾಮೆ ಕೊಡಬೇಕು?

ಶ್ರೀ ಹೆಚ್.ಡಿ. ರೇವಣ್ಣ :- ದಯಮಾಡಿ yield ಆಗಿ ಬ್ರದರ್. ನೀವು ಒಳ್ಳೆಯವರು ಎಂದು ಹೇಳಿಕೊಳ್ಳುತ್ತಿದ್ದೀರಿ. . . .

ಶ್ರೀ ಜಿ. ಕರುಣಾಕರ ರೆಡ್ಡಿ :- ಮಾಡಬಾರದು ಎಂದರೆ ನೀವು ರಾಜೀನಾಮೆ ಕೇಳಬೇಕು. ಸರ್ವೆ ಮಾಡಬೇಕೆಂದು ನಾವು ಹೇಳುತ್ತಿದ್ದೇವಲ್ಲ. . .

ಶ್ರೀ ಹೆಚ್.ಡಿ. ರೇವಣ್ಣ :- ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ ಎಂದು ನಾನು ಹೇಳುತ್ತಿದ್ದೇನೆ. ನೀವು ಕೆಟ್ಟವರೆಂದು ಹೇಳುತ್ತಿಲ್ಲ.

ಶ್ರೀ ಜಿ. ಕರುಣಾಕರ ರೆಡ್ಡಿ :- ಧನ್ಯವಾದಗಳು ಸಾರ್.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಹೇಳುತ್ತಿರುವುದೇನೆಂದರೆ, Survey of Indiaದ ಕಂದಾಯ ಇಲಾಖೆಗೆ ಪತ್ರ ಬರೆದ ಮೇಲೆ, ಕಂದಾಯ ಇಲಾಖೆಯ ಮಂತ್ರಿಗಳು ರಾಜೀನಾಮೆ ಕೊಟ್ಟು, "ಸ್ವಾಮಿ, ಸರ್ವೆ ಮಾಡುವಾಗ ನಾನು ಕಂದಾಯ ಸಚಿವನಾಗಿ ನನ್ನ ಮೇಲೆ ರಾಜಕೀಯ ಒತ್ತಡವಿರುತ್ತದೆ" ಎನ್ನುವ ಭಾವನೆ ಬರಬಾರದು, ಅದಕ್ಕೋಸ್ಕರ ನಾನು ನೈತಿಕವಾಗಿ ರಾಜೀನಾಮೆ ಕೊಡುತ್ತೇನೆ. Survey of Indiaದಿಂದ ರಿಪೋರ್ಟ್ ಬಂದ ತಕ್ಷಣ 5 ನಿಮಿಷದಲ್ಲಿ ಮತ್ತೆ ಮಂತ್ರಿಯಾಗಿ. ನಾವೇನೂ ಬೇಡವೆನ್ನುವುದಿಲ್ಲ. ಇಲ್ಲವೆಂದರೆ, ನಮ್ಮದೇನೂ ತಕರಾರಿಲ್ಲ. Interference ಮಾಡಿ ಅವರು ಅಧಿಕಾರ ದುರುಪಯೋಗ ಮಾಡಿಕೊಂಡು Surveyಯಲ್ಲಿ ಗಡಿ ತೋರಿಸುವವರು ಯಾರು ಸ್ವಾಮಿ? ಕಂದಾಯ ಇಲಾಖೆಯವರೇ ತಾನೆ? ಕರ್ನಾಟಕದ ಗಡಿ ಎಲ್ಲಿದೆ ಎಂದು ತೋರಿಸುವವರಾರು? ನಾಳೆ ಅವರ ಮೇಲೆ ಆಪಾದನೆ ಬರಬಾರದೆಂದು ಕೂಡಲೇ ಅವರು ರಾಜೀನಾಮೆ ಕೊಡುವುದು ಸೂಕ್ತವೆಂಬುದು ನನ್ನ ಭಾವನೆ. ಇಲ್ಲವೇ, ಅದೂ ಬೇಡ, ಇದು ಭಂಡ ಸರ್ಕಾರ, ಮಾಡಿಕೊಳ್ಳಲಿ. ನಾವೇನೂ ಬೇಡವೆಂದು ಹೇಳುವುದಕ್ಕಾಗುವುದಿಲ್ಲ.

ಇದಲ್ಲದೆ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಗಡಿ ಭಾಗಗಳಲ್ಲಿ 1970ರಿಂದ ಜಂಟಿ ಸರ್ವೆ ಮಾಡಿದ್ದಾರೋ, ಇಲ್ಲವೋ ಅದು, ಮುಂದುವರಿಯಿತು. ಈಗ ಇಬ್ಬರದೂ ಜಂಟಿ ಸರ್ವೆ ಮುಂದುವರಿಯುತ್ತಿದೆ ಎನ್ನುವುದಾದರೆ, ಆ ದಿಕ್ಕಿನಲ್ಲಿ ಕೇಂದ್ರ ಸರ್ಕಾರ ಕೆಲಸ ಮಾಡುವುದರಲ್ಲಿ 1970ರಿಂದ ವಿಫಲವಾಗಿದೆಯೆಂದ ಮೇಲೆ. ಬೇಡ, ಸದನದಲ್ಲಿ ನಾವೇ Supreme Courtನ ಹಾಲಿ ನ್ಯಾಯಾಧೀಶರನ್ನು ಗಡಿ ನಿರ್ಣಯ ಮಾಡುವ ಸಂಬಂಧ ನೇಮಕ ಮಾಡಿ ಎಂದು ಕೇಳಿ. 1970ನೇ ಇಸವಿಯಿಂದ ನಾವು ಮಾಡುತ್ತಿದ್ದೇವೆ, ನಮಗೆ ಗಡಿ ನಿರ್ಧರಿಸುವುದಕ್ಕಾಗುತ್ತಿಲ್ಲ ವೆನ್ನುವುದಾದರೆ, Supreme Courtನ ಹಾಲಿ ನ್ಯಾಯಾಧೀಶರನ್ನು ನೇಮಕ ಮಾಡಿ ಎಂದು ಕೇಳಿ.

ಇದಲ್ಲದೆ, ಕೇಂದ್ರದಲ್ಲಿ UPA Government ಇದೆ, ನೀವು ಮಾಡಿ ಎಂದು ಹೇಳುತ್ತೀರಿ. UPA Government ಇದೆಯೆಂದರೆ, UPAನ

ಅಂಗಪಕ್ಷಗಳು ಇಲ್ಲಿ ಬೊಬ್ಬೆ ಹೊಡೆಯುವ ಬದಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಹೇಳಿ. ಕೇಂದ್ರ ಸರ್ಕಾರದ ಮೇಲೆ ಏನು ಒತ್ತಡ ತರೋಣ? ನೀವು CBI ತನಿಖೆಗೆ ಕಳುಹಿಸಿ. ನಾವು ಅವರ ಮೇಲೆ ಒತ್ತಡ ತರುತ್ತೇವೆ. ಸ್ವಾಮಿ, 6 ತಿಂಗಳಲ್ಲಿ ರಿಪೋರ್ಟ್ ಕೊಡುವುದನ್ನು 3 ತಿಂಗಳಿನಲ್ಲಿ ಕೊಡಿ ಎಂದು ನಾವು ಕೇಳುತ್ತೇವೆ. ಅದು ಬಿಟ್ಟು ನೀವು CBIಗೆ refer ಮಾಡುವುದಕ್ಕೆ ಹೆದರುತ್ತೀರಲ್ಲ? ಇದು ಈ ಸರ್ಕಾರದ್ದಲ್ಲ. ಇದು ಕುಮಾರಸ್ವಾಮಿಯವರ ಸರ್ಕಾರ, ಧರ್ಮಸಿಂಗ್‌ರವರ ಸರ್ಕಾರ, ರಾಷ್ಟ್ರಪತಿ ಆಡಳಿತವಿದ್ದ ಸರ್ಕಾರ ಎಂದ ಮೇಲೆ CBIಗೆ ತನಿಖೆಗೆ ವಹಿಸಿಕೊಡುವುದಕ್ಕೆ ಏಕೆ ಹೆದರುತ್ತೀರಿ? CBI ಎಂದರೆ ಹೆದರಿಕೆ ಏಕೆ? ಕುಮಾರಸ್ವಾಮಿಯವರ ಸರ್ಕಾರದಲ್ಲಿದ್ದಾಗ ನೀವು ಏನಾದರೂ ತಪ್ಪು ಮಾಡಿರಬೇಕೆಂಬ ಹೆದರಿಕೆ ಇದೆ. ಆ ಉದ್ದೇಶದಿಂದಲೇ ಹೆದರುತ್ತಿದ್ದೀರಿ ಎಂಬ ಭಾವನೆ ನನಗಿದೆ. CBIಗೆ ವಹಿಸಿಕೊಡುವುದಕ್ಕೆ ತೊಂದರೆ ಏನು ಸ್ವಾಮಿ? ನಾನು ಹೇಳುತ್ತಿಲ್ಲ, ನೀವು ಹೇಳುತ್ತಿದ್ದೀರಿ.

ಕುಮಾರಸ್ವಾಮಿ, ಧರ್ಮಸಿಂಗ್ ಮತ್ತು ರಾಷ್ಟ್ರಪತಿಯವರ ಆಡಳಿತದ ಅವಧಿಯಲ್ಲಿ ಸುಮಾರು 7000 ಎಕರೆ ಚಿಲ್ಲರೆ ಜಮೀನನ್ನು, 7300 ಹೆಕ್ಟೇರ್ ಪ್ರದೇಶವನ್ನು 109 ಜನರಿಗೆ ಕೊಟ್ಟಿದ್ದಾರೆಂದು ಹೇಳುತ್ತಿದ್ದೀರಿ. ಹಾಗಾದರೆ, CBIಗೆ ವಹಿಸಿ. ಕುಮಾರಸ್ವಾಮಿಯವರನ್ನು ಒಳಕ್ಕೆ ಹಾಕಲಿ. ಧರ್ಮಸಿಂಗ್‌ರವರನ್ನು ಒಳಕ್ಕೆ ಹಾಕಲಿ. ರಾಷ್ಟ್ರಪತಿಯವರ ಆಡಳಿತವಿದ್ದಾಗ ರಾಜ್ಯಪಾಲರು ಮಾಡಿರುವುದು ನಾನು ರಾಜ್ಯಪಾಲರ ಬಗ್ಗೆ ಲಘುವಾಗಿ ಮಾತನಾಡುವುದಿಲ್ಲ. ಯಾರಾರು ತಪ್ಪು ಮಾಡಿದ್ದಾರೆಂಬುದು ಹೊರಗಡೆ ಬರಲಿ. ಅದು ಬಿಟ್ಟು ಏಕೆ ಹೆದರುತ್ತೀರಿ? ನಿಮ್ಮ ಹತ್ತಿರ ಏನೂ ಇಲ್ಲವೆಂದ ಮೇಲೆ, ನೀವು ಅಧಿಕಾರಕ್ಕೆ ಬಂದ ನಂತರ ನಿಮ್ಮದು ತಪ್ಪೇ ಇಲ್ಲ. ಲಾರಿಗಳಿಗೆಲ್ಲ ಟೋಕನ್ ಇತ್ತೆಂದು ಮಾನ್ಯ ಸದಸ್ಯರಾದ ರವಿಯವರು ಹೇಳಿದರು.

ಇವತ್ತು ಹಾಸನದಲ್ಲಿ ತಿಪಟೂರು-ದುದ್ದ-ಹಾಸನ ರಸ್ತೆ ಇದೆ. ಈಗ ಮಾನ್ಯ ಸದಸ್ಯರಾದ ಶಿವಲಿಂಗೇಗೌಡರ ಕ್ಷೇತ್ರದ ಜಿಲ್ಲೆ ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಬರುತ್ತಿದೆ. ದಿನವೊಂದಕ್ಕೆ 20,000 ಲಾರಿಗಳು ಹೋಗುತ್ತಿದ್ದವು. ಡಾ॥ ವಿ.ಎಸ್.ಆಚಾರ್ಯರವರು Home Minister ಆಗಿದ್ದಾರೆ. ಅವರು ಹೇಳಲಿ. ನನಗೆ ಗೊತ್ತಿಲ್ಲ. ಡಾ॥ ವಿ.ಎಸ್. ಆಚಾರ್ಯರವರು ಈಗ ಆ ರಸ್ತೆ ಬಿಟ್ಟು ಶೃಂಗೇರಿ ಮಾರ್ಗವಾಗಿ ಬರುತ್ತಿದ್ದಾರೆ. ಅವರು ಆ ರೋಡ್‌ನಲ್ಲಿ ಸಂಚರಿಸುವುದನ್ನು ಬಿಟ್ಟುಬಿಟ್ಟಿದ್ದಾರೆ.

ನನಗೇಕೆ, ಹಾಳು ಬಿದ್ದು ಹೋಗಲಿ, ಬೇಕಾದರೆ ಮಂಗಳೂರಿವರು ಏನಾದರೂ ಮಾಡಿಕೊಳ್ಳಲಿ ಎಂದು ಹೇಳಿ ಅವರು ಆ ರೋಡ್‌ನಲ್ಲಿ ಹೋಗುವುದಕ್ಕಾಗದೆ ಆ ರಸ್ತೆಯ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಆಚಾರ್ಯರವರೇ ಹೇಳಲಿ. ಆ ರಸ್ತೆಯ ಪರಿಸ್ಥಿತಿ ಏನಿದೆ ಎನ್ನುವುದನ್ನು ಡಾ॥ ವಿ.ಎಸ್. ಆಚಾರ್ಯರವರು ಹೇಳಲಿ. ದಿನಕ್ಕೆ ಎಷ್ಟು ಲಾರಿಗಳು ಹೋಗುತ್ತಿವೆ? ದಿನಕ್ಕೆ ಎಷ್ಟು ಟನ್ ಲಾರಿಗಳು ಹೋಗುತ್ತಿವೆ? 40, 50, 60 ಟನ್‌ಗಳಷ್ಟು ತೂಕ ಹೊತ್ತ ಲಾರಿಗಳು ಸಂಚರಿಸುತ್ತಿವೆ. ಹಿಂದಿನ ಮುಖ್ಯಮಂತ್ರಿಯವರು ಎಂಥದ್ದೋ ಟೋಕನ್ ಕಾರ್ಡ್ ಕೊಟ್ಟಿದ್ದರು. ಇವರು ಯಾವ ಕಾರ್ಡ್ ಕೊಟ್ಟಿದ್ದಾರೆ? ಇವರು renewal ಮಾಡಿದ್ದಾರೆಯೇ? ಹಾಗಾದರೆ, 15,000 ಲಾರಿಗಳಿಗೆ renewal ಕೊಟ್ಟಿಲ್ಲವೆಂದಾಯಿತು. ಹಿಂದಿನ ಮುಖ್ಯಮಂತ್ರಿಯವರು ಟೋಕನ್ ಕೊಟ್ಟಿದ್ದಾರೆ, ಇವರು renewal ಕೊಟ್ಟಿದ್ದಾರೆಂದು ಆಗಬೇಕಾಗಿತ್ತು. 7 ತಿಂಗಳಲ್ಲಿ ಇವರ ಕೈಯಲ್ಲಿ ಏಕೆ ನಿಲ್ಲಿಸುವುದಕ್ಕಾಗುತ್ತಿಲ್ಲ? ಕಾರಣವೇನು?

ಜನಾರ್ಧನ ರೆಡ್ಡಿಯವರು ಮಾತನಾಡುವಾಗ, "ನಾನು constable ಒಬ್ಬರ ಮಗ, ನಾನು ಯಾವ ರೀತಿ ಬಂದೆ, ನಾನು ಇವತ್ತು ಸಾವಿರಾರು ಕೋಟಿ ರೂ.ಗಳಷ್ಟು ದುಡ್ಡು ಇಟ್ಟಿದ್ದೇನೆ. Income Tax ಕಟ್ಟಿದ್ದೇನೆ, ಎಲ್ಲವನ್ನೂ clearance ಮಾಡಿದ್ದೇನೆ" ಎಂದು ಹೇಳಿದರು. ಸಂತೋಷ. ಪಾಪ, ಅವರಿಗೆ 2004ರಿಂದ 2008ರವರೆಗೆ ಸಾವಿರಾರು ಕೋಟಿ ರೂ.ಗಳಷ್ಟು ಆದಾಯ ಬಂದಾಗ, ಈ ರಾಜ್ಯದಲ್ಲಿ ಎಷ್ಟು ಗಣಿಗಾರಿಕೆಯಾಗಿದೆ ಎನ್ನುವುದನ್ನು ಪತ್ತೆ ಹಚ್ಚಬೇಕಾಗಿದೆ. 2004ರಲ್ಲಿ ಅವರ ಆಸ್ತಿ ಎಷ್ಟಿತ್ತು ಎನ್ನುವುದನ್ನು ಅವರು ದಯಮಾಡಿ ಹೇಳಲಿ. ಅದೇ ರೀತಿ 2008ರಲ್ಲಿ ಎಷ್ಟಿತ್ತು? ನಮ್ಮ ಕುಟುಂಬದ ಬಗ್ಗೆ ಇದ್ದರೆ ಅದನ್ನೂ ನಾನು ಆಮೇಲೆ ಹೇಳುತ್ತೇನೆ. ಅದಕ್ಕೆ ನಾನೇನೂ ಹಿಂಜರಿಯುವುದಿಲ್ಲ. "ನಾನು constable ಒಬ್ಬರ ಮಗ. ಆದ್ದರಿಂದ ನನಗೇನೂ ಹೆದರಿಕೆಯಿಲ್ಲ" ಎಂದರು. ಅವರ ತಂದೆ ಕಾನ್ಸ್‌ಟೇಬಲ್ ಆಗಿರಬಹುದು, ಯಾರೇ ಆಗಿರಬಹುದು. ಅವರು ಈ ರಾಜ್ಯದ ಒಬ್ಬ ಪ್ರಜೆ: ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಅವರು ದುಡಿಯಲಿ. ಅಣ-ತಮ್ಮಂದಿರೆಲ್ಲರೂ ಕಷ್ಟ ಪಟ್ಟಿದ್ದಾರೆ, ದುಡಿದಿದ್ದಾರೆ. ಅದರ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ಈ ನಾಲ್ಕು ವರ್ಷಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವರಮಾನವನ್ನು declaration ಮಾಡಿದ್ದೇನೆಂದರೆ, ಇವತ್ತು ಎಷ್ಟು ಎಕರೆ ಗಡಿ ಪ್ರದೇಶವನ್ನು ಗಣಿಗಾರಿಕೆಗಾಗಿ ಅವರಿಗೆ ಕೊಟ್ಟಿದ್ದಾರೆ? ಆಂಧ್ರದಲ್ಲಿ ಎಷ್ಟು

ಕೊಟ್ಟಿದ್ದಾರೆ? ಕರ್ನಾಟಕದಲ್ಲಿ ಎಷ್ಟು ಕೊಟ್ಟಿದ್ದಾರೆ? ಅಥವಾ ಬೇರೆ ಮೂಲದಲ್ಲಿ ಯಾರ ಹತ್ತಿರವಾದರೂ sub leaseಗೆಂದು ಎಷ್ಟು ಮಾಡಿದ್ದಾರೆ? ಅದರಿಂದ ಒಟ್ಟು ಎಷ್ಟು ವರಮಾನ ಬಂದಿದೆ? ಎಷ್ಟು ಹೊರ ದೇಶಕ್ಕೆ ಕಳುಹಿಸಿದ್ದಾರೆ? ಎಲ್ಲೆಲ್ಲಿಗೆ ಕಳುಹಿಸಿದ್ದಾರೆ? ಇವೆಲ್ಲವೂ ತನಿಖೆಯಾಗಲಿ. ಏಕೆಂದರೆ, ಇದರಲ್ಲಿ ಹೆದರುವ ಪ್ರಮೇಯವೇನಿದೆ? ಎಲ್ಲಾ clean ಆಗಿರುವಾಗ ಅವರು income tax clearance ಮಾಡಿರುವಾಗ ಏಕೆ ಹೆದರಬೇಕು? ಒಂದು ಕಡೆ ಕಂದಾಯ ಇಲಾಖೆ ಬರುತ್ತದೆ. ನನಗೆ ಶಕ್ತಿ ಇದೆ. ಉತ್ತರ ಕೊಡುತ್ತೇನೆಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ. ನೀವೆಲ್ಲರೂ ಏಕೆ ತಲೆ ಕೆಡಿಸಿಕೊಳ್ಳುತ್ತೀರಿ? ನೀವು ಆರಾಮವಾಗಿರಿ. ಇದರಲ್ಲಿ ಹೆದರುವ ಪ್ರಮೇಯವೇನಿದೆ? ಈ ತರಹ ಮಾಡಿದರೆ ನಾನು ಕುಳಿತುಕೊಳ್ಳಬೇಕಾಗುತ್ತದೆ. ಒಂದು ಕಡೆ ಕಂದಾಯ ಸಚಿವರದು. ನಾನು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. Survey of Indiaಗೆ ಕಳುಹಿಸುವಾಗ, ಅವರ ಮೇಲೆಯೇ ಆರೋಪವಿದ್ದಾಗ ಅವರು ನೈತಿಕವಾಗಿ ರಾಜೀನಾಮೆ ಕೊಟ್ಟು ಸರ್ವೆ ಮಾಡಲಿ ಎಂದು ಹೇಳಬೇಕಾದ್ದು ಒಂದು ಭಾಗ.

ಎರಡನೆಯದಾಗಿ, ನಾಲ್ಕೇ ವರ್ಷಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಮಾಡಿದ್ದೇವೆಂದು ಅವರು ಸದನದಲ್ಲಿಯೇ ಹೇಳಿದ್ದಾರೆ, ಒಪ್ಪಿಗೆ ಕೊಟ್ಟಿದ್ದಾರೆ. Income tax ಕೊಟ್ಟಿದ್ದೇವೆಂದು ಹೇಳಿದವರು ಏಕೆ ಹೆದರಬೇಕು? ಮೂರನೆಯದು, ಇವತ್ತು ಎಂತಹುದೋ ಬಿ.ಎಸ್.ಕೆ. ಎಂದು ಹೇಳಿ ನೂರಾರು ಕೋಟಿ... ಅದನ್ನು ಸಭೆಯ ಮುಂದೆ ಇಟ್ಟು ಬಿಡಲಿ. ಮುಖ್ಯಮಂತ್ರಿಗಳ ಬಳಿಯೇ intelligence wing ಎಲ್ಲವೂ ಇದೆ. ರೇವಣ್ಣನ ಮೇಲೆ ಕೆಎಂಎಫ್‌ಗೆ ಸಂಬಂಧಿಸಿದಂತೆ 9 ಸಲ ತನಿಖೆ ಮಾಡಿಸಿದಿರಿ. 22 ಜನರ ಆಡಿಟರ್‌ಗಳನ್ನು ಕಳುಹಿಸಿದ್ದಾರೆ. ನಾನೇನಾದರೂ ಅದಕ್ಕೆ ಹೆದರಿ ಓಡಿ ಹೋಗಿದ್ದೇನೆಯೇ? ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ: "ಸ್ವಾಮಿ, ಯಾವತ್ತೂ ನಿಮ್ಮ ಹತ್ತಿರ ಏನೂ ಕೇಳುವುದಕ್ಕೆ ಬರುವುದಿಲ್ಲ. ನೀವಿರುವವರೆಗೆ ಭಗವಂತ ನಿಮಗೆ ಇನ್ನೂ 20 ವರ್ಷ ಬಿಜೆಪಿ ಈ ರಾಜ್ಯದಲ್ಲಿರುವಂತೆ ಮಾಡಲಿ. ನಾವೇನೂ ಬೇಡವೆನ್ನುವುದಿಲ್ಲ." ಯಡಿಯೂರಪ್ಪನವರೇ ಇರಲಿ, ಅದಕ್ಕೂ ನಾವು ಬೇಡವೆನ್ನುವುದಿಲ್ಲ. ಯಾರು ಬೇಕಾದರೂ ತನಿಖೆ ಮಾಡಲಿ. ನಾನೇನಾದರೂ ಅಂದಿದ್ದೇನೆಯೇ?

Engineers selectionಗೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ಕಳುಹಿಸುತ್ತೇವೆಂದರು. ಅದರ ಬಗ್ಗೆ ತನಿಖೆ ಮಾಡಲಿ. ನಾನು ತಪ್ಪು ಮಾಡಿದ್ದರೆ

ನನಗೆ ಶಿಕ್ಷೆ ಕೊಡಿ. PWD ಮತ್ತು KEBಯಲ್ಲಿ ತಪ್ಪು ಮಾಡಿದ್ದರೆ ತನಿಖೆಗೆ ವಹಿಸಿಕೊಡಿ. ನಾನು ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧನಿದ್ದೇನೆ. ಹೆದರಿಕೊಂಡು ನಾನು ಯಾರ ಮನೆ ಬಾಗಿಲಿಗೂ ಹೋಗಿಲ್ಲ. ನಾನೇಕೆ ಹೆದರಿಕೊಳ್ಳಲಿ? ಉದಾಹರಣೆಗೆ ಹೇಳುವುದಾದರೆ, **"The Hindu"** ಪತ್ರಿಕೆ ಬಗ್ಗೆ ಈ ರಾಷ್ಟ್ರದಲ್ಲಿ ಗೌರವವಿದೆ ಎಂದು ಎಲ್ಲರೂ ಹೇಳುತ್ತಾರೆ. ಇದರ ಮುಖಪುಟದಲ್ಲಿ, ಅರಣ್ಯ ಇಲಾಖೆಯ ಅಧಿಕಾರಿ ಲೋಕಾಯುಕ್ತಕ್ಕೆ ವರದಿ ಕಳುಹಿಸಿದ ಮೇಲೆ ಮತ್ತೆ ಇನ್ನೊಂದು ಸ್ಕೇಚ್ ಮಾಡುವ ಪ್ರಮೇಯ ಇತ್ತೇ? ಆ ಪ್ರಾಮಾಣಿಕ ಅಧಿಕಾರಿ ಸಹಿ ಹಾಕಲಿಲ್ಲವೆಂದು ಅವರನ್ನು ಎತ್ತಂಗಡಿ ಮಾಡಿದಿರಿ ಎಂದು ಹೇಳಿ ಇಲ್ಲಿ ಹೇಳುತ್ತಿದ್ದಾರೆ. ಇದಕ್ಕಿಂತ ಬೇರೆ ದಾಖಲೆ ಬೇಕೇ? ರೇವಣ್ಣನವರು ಹೇಳಬೇಕೆ? ಖರ್ಗೆಯವರು ಹೇಳಬೇಕೆ? ಜಯಚಂದ್ರರವರು ಹೇಳಬೇಕೆ? ದಯಮಾಡಿ ಹೇಳಿ. ರೇವಣ್ಣ, ಖರ್ಗೆ, ಜಯಚಂದ್ರರವರು ಹೇಳಿದರೆ ವಿರೋಧ ಪಕ್ಷದವರು ಹೇಳುತ್ತಿದ್ದಾರೆಂದು ಹೇಳುತ್ತಾರೆ. ನಾವಲ್ಲ, ಪತ್ರಿಕೆಯಲ್ಲಿ ಹಿರಿಯ ಅಧಿಕಾರಿಗಳು ಟಿಪ್ಪಣಿಗೆ ಸಹಿ ಹಾಕುವುದಿಲ್ಲವೆಂದು ಹೇಳಿದ ಮೇಲೆ ಅವರನ್ನು ವರ್ಗಾವಣೆ ಮಾಡಿದ್ದಾರೆ.

ಮತ್ತೆ ಯು.ವಿ. ಸಿಂಗ್ ಫಾರೆಸ್ಟ್ ಅಧಿಕಾರಿ ಇದ್ದಾರಂತೆ, ಅರಣ್ಯ ಇಲಾಖೆಯಲ್ಲಿ ಯಾವ ಸಿಂಗ್ ಇದ್ದಾರೊ ನನಗೆ ಗೊತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- 4 ಜನ ಅಧಿಕಾರಿಗಳನ್ನು ಓವರ್‌ಲುಕ್ ಮಾಡಿ, ಪ್ರೊಮೋಷನ್ ಅನ್ನು ಓವರ್‌ಲುಕ್ ಮಾಡಿ ಪೋಸ್ಟಿಂಗ್ ಮಾಡಿರುವುದು.

ಶ್ರೀ ಹೆಚ್.ಡಿ. ರೇವಣ್ಣ :- ಸರ್, ನನಗೂ ಗೊತ್ತಿದೆ, ಅಲ್ಲಿ 4 ಪೋಸ್ಟ್ ಇವೆ. 4 ರಲ್ಲಿ 1 ಉತ್ತಮವಾದ ಜಾಗ, ಇಂಥವನ್ನು ಬರೆಸಿಕೊಳ್ಳುವ ಜಾಗ, ಇನ್ನು ಉಳಿದದ್ದು ಡಬ್ಬಕ್ಕೆ ಹಾಕುವುದು ಎಂದು ಗೊತ್ತಿದೆ. ಒಂದೇ ಸ್ಕೇಲಿನ 4 ಪೋಸ್ಟ್ ಇವೆ ಅದರಲ್ಲಿ ಒಬ್ಬರನ್ನು ಬರೆದುಕೊಡುವಂಥವರನ್ನು ತಂದಿಟ್ಟುಕೊಂಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಾವ್ಯಾರು ಲೋಕಾಯುಕ್ತಕ್ಕೆ ಹೇಳಿಲ್ಲ, ಲೋಕಾಯುಕ್ತರವರೆ ಒಬ್ಬ ನಿಷ್ಠಾವಂತರು. ಅವರು ಒಂದು ಕಡೆ ಅಲ್ಲ, ಅವರು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆ, ಅವರು ಪ್ರಾಮಾಣಿಕರೋ ಇಲ್ಲವೋ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಉತ್ತರದಲ್ಲಿ ಹೇಳಬೇಕು. ಯಾರು ವರದಿಯನ್ನು ಕೊಟ್ಟಿದ್ದಾರೆ, ಅವರು ಪ್ರಾಮಾಣಿಕರಲ್ಲವೆನ್ನುವುದಾದರೆ ಅವರನ್ನು ಶಿಕ್ಷೆಗೆ ಒಳಪಡಿಸಿ. ಇದಲ್ಲದೆ ಇವತ್ತು ಇಷ್ಟೆಲ್ಲಾ ಆದರೂ, ಈ ಸರ್ಕಾರ ಏತಕ್ಕೆ ಹಿಂಜರಿಯುತ್ತಿದೆಯೋ ಗೊತ್ತಿಲ್ಲ, ಸಿಬಿಐ

ತನಿಖೆ ಮಾಡಲು ಈ ಸರ್ಕಾರಕ್ಕೆ ತೊಂದರೆ ಏನು ಇಲ್ಲ, ಈ ಸರ್ಕಾರ ಒಂದು ಗುಂಟೆ ಜಾಗ ಕೊಟ್ಟಿಲ್ಲ, ಮತ್ತೆ ಏತಕ್ಕೆ ಹೆದರಬೇಕಾಗುತ್ತದೆ? ಆದರು ಈ ಸರ್ಕಾರದಲ್ಲಿ ಯಾರು ಇನ್ವಾಲ್ವ್ ಆಗಿಲ್ಲ. ಹೀಗಿದ್ದಾಗ 7 ತಿಂಗಳುಗಳ ಒಳ್ಳೆಯ ಸರ್ಕಾರವಾಗಿರುವಾಗ, ಈ ಸರ್ಕಾರ ಬಂದ ಮೇಲೆ ಯಾವುದಕ್ಕೂ ಅಭಾವವಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಗೊಬ್ಬರಕ್ಕೆ ಅಭಾವ ಬಂತು, 2 ರೂಪಾಯಿಗೆ ಕೆ.ಜಿ ಅಕ್ಕಿ ಕೊಡುತ್ತೇವೆಂದರು, ಏನಾಯಿತು ಸ್ವಾಮಿ? ಅದು ಇರಲಿ ಅದನ್ನೆಲ್ಲಾ ಹೇಳುವುದು ಬೇಡ, ಅದನ್ನು ಬಿಟ್ಟುಬಿಡೋಣ. ಕೆಎಂಎಫ್, ಎಲ್ಲದ್ದು ಆಗಲಿ, ನಾನೇನು ಅದಕ್ಕೆ ಹೆದರಿಕೊಂಡು ಓಡಿಹೋಗುತ್ತೇನೆಯೇ? ನಾನು ಅಧಿಕಾರದಲ್ಲಿ ಇದ್ದು ನೋಡಿದ್ದೇನೆ, ಅಧಿಕಾರದಲ್ಲಿ ಇಲ್ಲದಿರುವಾಗಲೂ ನೋಡಿದ್ದೇನೆ, ಯಾವ ರೀತಿ ಎದುರಿಸಬೇಕೆಂದು ನನಗೆ ಗೊತ್ತಿದೆ. ನನ್ನನ್ನು ಎದುರು ಹಾಕಿಕೊಂಡು ಆ ಸರ್ಕಾರ 6 ತಿಂಗಳಿಗೆ ಮನೆಗೆ ಹೋಯಿತು, 125 ಇದ್ದದ್ದು 80ಕ್ಕೆ ಬಂತು, ನಿಮ್ಮದು ಅದೇ ಪರಿಸ್ಥಿತಿಯಾಗುತ್ತದೆ, ಅದಕ್ಕೆ ಏಕೆ ನೀವು ತಲೆ ಕೆಡಿಸಿಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ರೇವಣ್ಣ, ಪದೇ ಪದೇ ನಿಮ್ಮ ಮೇಲೆ ಬೀಳುತ್ತಿರಲ್ಲ, ಹಾಲು ಹಿಂಡುವುದು ನೀನು, ಅವರು ಕುಡಿಯುವವರು.

ಶ್ರೀ ಹೆಚ್.ಡಿ. ರೇವಣ್ಣ :- ಸರ್, ನಮ್ಮ ಮೇಲೆ ಅಷ್ಟು ಪ್ರೀತಿ ಇದೆ. ಏಕೆಂದರೆ, ಆ 2 ರೂಪಾಯಿಗಳ ಸಬ್ಸಿಡಿಯನ್ನು ತೆಗೆದುಕೊಳ್ಳಬೇಕಾದರೆ, ರೈತರು ಎಷ್ಟು ಒದ್ದಾಡಬೇಕಾಯಿತು ಎಂಬುದು ನಿಮಗೆ ಗೊತ್ತಿಲ್ಲ, ಅದನ್ನೆಲ್ಲ ಈಗ ಹೇಳುವುದು ಬೇಡ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಇಷ್ಟೇ ಕೇಳಿಕೊಳ್ಳುವುದು, ಇವತ್ತು ಹಿಂದೂ ಪತ್ರಿಕೆಯಲ್ಲಿ, ಅವರ್ಯಾರು ನಿಷ್ಠಾವಂತ ಅಧಿಕಾರಿ, 2ನೇ ಸಾರಿ ಸರ್ವೆಗೆ ನಾನು ಸಹಿ ಹಾಕಲಿಲ್ಲವೆಂದು ಹೇಳಿದ ಮೇಲೆ, ಬೇರೆ ಅಧಿಕಾರಿಯನ್ನು ಅಲ್ಲಲ್ಲೇ ರೀ-ಪೋಸ್ಟಿಂಗ್ ಮಾಡಿ, ಬೇರೆ ಅಧಿಕಾರಿಯಿಂದ ಮಾಡಿಸಿರುವುದು, ಇದಕ್ಕೆಲ್ಲಾ ಸರ್ಕಾರ ಇನ್ವಾಲ್ವ್ ಆಗಿದೆ ಎಂದ ಮೇಲೆ, ಇದರ ಹಿಂದೆ ಸರ್ಕಾರವಿದೆ. ನಮ್ಮ ಕಂದಾಯ ಸಚಿವರು ಮತ್ತು ಪ್ರವಾಸೋದ್ಯಮ ಸಚಿವರು ರಾಜೀನಾಮೆಯನ್ನು ಕೊಟ್ಟು, ತನಿಖೆಯನ್ನು ಎದುರಿಸಿ, ತನಿಖೆಯಲ್ಲಿ ಪ್ರೂವ್ ಆಗಲಿಲ್ಲವೆಂದ ಮೇಲೆ ಬೇಕಾದರೆ ವಿರೋಧಪಕ್ಷದ ನಾವೆಲ್ಲಾ ಕ್ಷಮೆ ಕೇಳುತ್ತೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಈ ರಾಜ್ಯದ ನೆಲ-ಜಲ, ಒಂದಿಂಚು ಹೋದರೂ, ನಾವು ನಮ್ಮ ಅಧಿಕಾರದ ಕುರ್ಚಿ ಹೋದರು

ಪರವಾಗಿಲ್ಲ, ಯಾವುದೇ ಕಾರಣಕ್ಕೂ ಇದಕ್ಕೆ ನಾನು ಯೀಲ್ಡ್ ಆಗುವುದಿಲ್ಲವೆಂದು ಹೇಳಿದ್ದಾರೆ. ಆಮೇಲೆ ಅವರು ಏನು ಬೇಕಾದರು ಮಾಡಿಸಿಕೊಳ್ಳಲಿ ನಾವು ಬೇಡವೆಂದು ಹೇಳುವುದಿಲ್ಲ. ಇನ್ನು ಮೂರು ತಿಂಗಳಲ್ಲಿ ಸಿಬಿಐ ವರದಿಯನ್ನು ತರಿಸಿ. ಅಥವಾ ಸಿಬಿಐ ಬೇಡವೆಂದರೆ, ಬೇಕಾದರೆ ಇಂಟರ್ ಪೋಲ್‌ನಿಂದಲಾದರೂ ತನಿಖೆ ಮಾಡಿಸಿ ನಾವೇನು ಬೇಡವೆಂದು ಹೇಳುವುದಿಲ್ಲ. ಅಥವಾ ಹಾಲಿ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಿಂದಲಾದರೂ ತನಿಖೆ ಮಾಡಿಸಿ, ನಾನು ಇಷ್ಟು ಆಗ್ರಹ ಮಾಡುತ್ತೇನೆ, ಈ ಸರ್ಕಾರಕ್ಕೆ ಏನಾದರೂ ಗೌರವವಿದ್ದು, ಮುಖ್ಯಮಂತ್ರಿಗಳು 7 ತಿಂಗಳ ಕಾಲ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದಾರೆ ಸಂತೋಷ. ಬಿಜೆಪಿ ಸರ್ಕಾರ ಈ ರಾಜ್ಯದಲ್ಲಿ 20 ವರ್ಷವಿರಲಿ.

ಶ್ರೀ ಆರ್. ಅಶೋಕ್ [ಸಾರಿಗೆ ಸಚಿವರು] :- ರೇವಣ್ಣನವರೆ, ಸಿಬಿಐ ಅಥವಾ ಎಫ್‌ಬಿಐ ಎಂದು ಹೇಳಲಿಲ್ಲ.

ಶ್ರೀ ಎಂ. ಶ್ರೀನಿವಾಸ್ :- 5 ವರ್ಷ ಸರ್ಕಾರ ಅಲ್ಲಾಡುವುದಿಲ್ಲ, ಅಧಿಕಾರದಲ್ಲಿ ಇದ್ದೇ ಇರುತ್ತದೆ, ರೇವಣ್ಣನವರೆ, ಇದ್ದೇ ಇರುತ್ತದೆ, ಭಯಪಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :- ಶ್ರೀನಿವಾಸ್ ಅವರೆ, ಗಣಿ ವಿಷಯವನ್ನು ಮಾತನಾಡುವುದಕ್ಕೆ ಹೋಗಬೇಡಿ, ಬೆಂಗಳೂರು ನಗರದ್ದು ಎಲ್ಲೆಲ್ಲಿ ಜಾಗವಿದೆ, ಸರ್ವೆ ನಂಬರ್ ಎಲ್ಲಿದೆ ಎಂಬುದನ್ನು ಕೇಳಲಿ. ನೀವು ಕಂಪ್ಯೂಟರ್ ಇಲ್ಲದೆ ಪ್ರತಿಯೊಂದು ವಿವರವನ್ನು ಹತ್ತು ನಿಮಿಷದಲ್ಲಿ ಕೊಡುತ್ತೀರಿ. ಕರುಣಾಕರ ರೆಡ್ಡಿಯವರಿಗೆ ಉತ್ತರ ಕೊಡಲು ಶಕ್ತಿ ಇದೆ, ನೀವೇ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಎಂ. ಶ್ರೀನಿವಾಸ್ :- ರೇವಣ್ಣನವರೆ, ನಾನು ನಿಮಗಿಂತ ಮೊದಲೇ ಈ ವಿಧಾನ ಸಭೆಗೆ ಆಯ್ಕೆಯಾಗಿದ್ದೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು] :- ಇಲ್ಲಿ ಅಧಿಕಾರಿಗಳ ಹೆಸರನ್ನು ಪ್ರಸ್ತಾಪ ಮಾಡಿದ್ದರಿಂದ ಮಧ್ಯಪ್ರವೇಶಿಸಿ, ಮಾಹಿತಿಯನ್ನು ಕೊಡಬೇಕಾಯಿತು. ಪಿಸಿಸಿಎಫ್, ದಿಲೀಪ್ ಕುಮಾರ್ ಅವರಿಗೆ ಓಬಳಾಪುರ ಮೈನ್ಸ್ ಕಂಪನಿಯ ಬಗ್ಗೆ ಯಾವುದೇ ವರದಿಯನ್ನು ನೀಡಲು ನಾವು ತಿಳಿಸಿಲ್ಲ, ಪತ್ರಿಕೆಗಳಲ್ಲಿ ಬಂದಿರುವುದು ಸತ್ಯಕ್ಕೆ ದೂರವಾದುದು. ದಿಲೀಪ್ ಕುಮಾರ್ ಅವರ ವರ್ಗಾವಣೆಗೂ, ಈ ವಿಷಯಕ್ಕೂ ಯಾವುದೇ ಸಂಬಂಧವಿಲ್ಲ. ಈಗಿನ ಪಿಸಿಸಿಎಫ್,

ಶ್ರೀ ನಾಗರಾಜ್ ಅವರು ಯಾವುದೇ ವರದಿಗೆ ಸಹಿ ಮಾಡಿಲ್ಲ, ಸರ್ಕಾರಕ್ಕೂ ವರದಿಯನ್ನು ಕಳುಹಿಸಿಲ್ಲ, ಈ ವಿಷಯದಲ್ಲಿ ಪತ್ರಿಕೆಗಳಲ್ಲಿ ಏನಾದರೂ ಸುದ್ದಿ ಬಂದಿದ್ದರೆ ಅದು ಸತ್ಯಕ್ಕೆ ದೂರವಾದುದು.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಸಭಾಧ್ಯಕ್ಷರೆ, ನಾನು ಪತ್ರಿಕೆಗಳಲ್ಲಿ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇಲ್ಲದಿದ್ದರೆ ನಾನೇನು ಹೇಳುತ್ತಿರಲಿಲ್ಲ. ಈ ಪತ್ರಿಕೆಯಲ್ಲಿ ಬಂದಾಗ ನಾನು ಕೇಳುವುದು ನನ್ನ ಕರ್ತವ್ಯ ಕೇಳಿದ್ದೇನೆ ಸರ್. ಇದು ಕುಮಾರ ಸ್ವಾಮಿ, ಧರ್ಮಸಿಂಗ್, ಕರುಣಾಕರ ರೆಡ್ಡಿ, ಮತ್ತು ಜನಾರ್ಧನ ರೆಡ್ಡಿಯವರ ಬಗ್ಗೆ ಇರುವುದರಿಂದ ಈ ಬಗ್ಗೆ ಕೂಡಲೇ ಸಿಬಿಐ ತನಿಖೆಯಾಗಬೇಕು. ಅವರು ರಾಜೀನಾಮೆಯನ್ನೂ ಕೊಡಬೇಕು, ಕೊಟ್ಟ ಮೇಲೆ ವರದಿ ಬಂದ ನಂತರ ಅವರನ್ನು ಬೇಕಾದರೆ ಸಂಪುಟಕ್ಕೆ ತೆಗೆದುಕೊಳ್ಳಿ ನಾವೇನು ಬೇಡವೆನ್ನುವುದಿಲ್ಲ, ಇದನ್ನು ದಯಮಾಡಿ ಈ ಸಭೆಯ ಮೂಖೇನ ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ [ಕಂದಾಯ ಸಚಿವರು] :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಸನ್ಮಾನ್ಯ ರೇವಣ್ಣನವರು ಮಾತನಾಡಬೇಕಾದರೆ, ಕಂದಾಯ ಸಚಿವರು ರಾಜೀನಾಮೆಯ ಪತ್ರವನ್ನು ಕಳುಹಿಸಬೇಕಾಗಿತ್ತೆಂದು ಹೇಳಿದ್ದಾರೆ. ಸನ್ಮಾನ್ಯ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ, ಸನ್ಮಾನ್ಯ ಜನಾರ್ಧನ ರೆಡ್ಡಿಯವರು 150 ಕೋಟಿಗಳ ಆರೋಪ ಮಾಡಿದಾಗ, ಅವರು ನಮ್ಮ ಮೇಲೆ ಆರೋಪ ಬಂದಿದೆ, ನಾನು ರಾಜೀನಾಮೆ ಕೊಡುತ್ತಿದ್ದೇನೆ, ತನಿಖೆ ಪೂರ್ಣಗೊಳ್ಳುವವರೆಗೆ ನಾನು ಆ ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಹೇಳಬೇಕಾಗಿತ್ತು. ಇವರ ಕುಟುಂಬಗಳ ಮೇಲೆ ಎಷ್ಟು ಸಾರಿ ಆರೋಪಗಳು ಬಂದಿದ್ದವು, ಇವರಿಬ್ಬರು ಎಷ್ಟು ಸಾರಿ ರಾಜೀನಾಮೆಯನ್ನು ನೀಡಿದ್ದರು, ಅವತ್ತು ಇವರು ರಾಜೀನಾಮೆಯನ್ನು ನೀಡಿದ್ದರೆ, ಇವತ್ತು ಕೇಳುವುದಕ್ಕೆ ನೈತಿಕತೆ ಇರುತ್ತಿತ್ತು, ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನನ್ನ ಮೆಲೆ 150 ಕೋಟಿ ರೂಪಾಯಿ ಗಳ ಆರೋಪವಿತ್ತು, ನೀವು ರಾಜೀನಾಮೆ ಕೊಟ್ಟಿದ್ದರೆ, ನಾನು ಕೊಡುತ್ತಿದ್ದೆ ಎಂದು ಹೇಳಿದರು. ಸಾಕ್ಷಿಯೇ ಇಲ್ಲದೆ, ನೀವು ನನ್ನ ರಾಜೀನಾಮೆಯನ್ನು ಕೇಳುವುದರಲ್ಲಿ ಅರ್ಥವೇನಿದೆ?

ಶ್ರೀ ಜಿ. ಕರುಣಾಕರ ರೆಡ್ಡಿ :- ನನ್ನ ರಾಜೀನಾಮೆಯನ್ನು ಕೇಳುವುದಕ್ಕೆ ಏನು ಸಾಕ್ಷ್ಯವನ್ನು ನೀಡಿದ್ದೀರಿ? ಮಾತನಾಡುವುದಕ್ಕೆ ನಿಮಗೆ ಬರುವುದಲ್ಲ, ಒಂದು ಬೆರಳು ನಮ್ಮ ಕಡೆಗೆ ತೋರಿಸಿದರೆ, ಮೂರು ಬೆರಳು ನಿಮ್ಮ ಕಡೆಗೆ ತೋರಿಸುತ್ತದೆಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಲೋಕಾಯುಕ್ತ ವರದಿಯಲ್ಲಿ ಓಬಳಾಪುರಂ ಮೈನಿಂಗ್ ಕಂಪನಿ, ಕರ್ನಾಟಕ ರಾಜ್ಯದ ಬಾರ್ಡರ್ ಲೈನ್‌ನಲ್ಲಿ ಇವತ್ತು ಎಲ್ಲಾ ರೆಕಾರ್ಡ್ಸ್ ತಿರುಚಿದ್ದಾರೆ ಎಂದು ಲೋಕಾಯುಕ್ತ ವರದಿಯಲ್ಲಿ ಕೊಟ್ಟಿರುವುದು, ನಾನು ಕೊಟ್ಟಿರುವುದಲ್ಲ.

ಶ್ರೀ ಜಿ. ಕರುಣಾಕರ ರೆಡ್ಡಿ :- ಹಾಗಾದರೆ ಲೋಕಾಯುಕ್ತ ವರದಿಯಲ್ಲಿ ತೋರಿಸಿ.

ಶ್ರೀ ಜನಾರ್ಧನ ರೆಡ್ಡಿ :- ನೀವು ಸಭೆಗೆ ಆ ರೀತಿ ಬಂದಿರುವುದನ್ನು ತೋರಿಸಬೇಕು. ಲೋಕಾಯುಕ್ತ ಅವರು ಓಬಳಾಪುರಂ ಮೈನಿಂಗ್ ಕಂಪನಿಯಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆಂದು ಹೇಳುವುದಾದರೆ ತಾವು ಅದನ್ನು ತೋರಿಸಿ. ಸುಮ್ಮನೆ ಬಾಯಿಗೆ ಬಂದಂತೆ ಮಾತನಾಡುವುದು ಬೇಡ. ವರದಿಯಲ್ಲಿ ಏನಾದರೂ ಇದ್ದರೆ ಅದನ್ನು ತೋರಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಪೂರ್ತಿ ಹೇಳುವುದನ್ನು ಅವರು ದಯವಿಟ್ಟು ಕೇಳಲಿ. ಲೋಕಾಯುಕ್ತರವರು ಏನು ಹೇಳಿದ್ದಾರೆ, ಯು.ವಿ.ಸಿಂಗ್‌ರವರು ಕೊಟ್ಟಿರತಕ್ಕಂತಹ ವರದಿ ಆಧಾರದ ಮೇಲೆ ಕೆಲವು ಅಧಿಕಾರಿಗಳ ಮುಖಾಂತರ ವರದಿಗಳನ್ನು ತರಿಸಿಕೊಂಡಿದ್ದಾರೆ. ಅದರ ಆಧಾರದ ಮೇಲೆ ಓಬಳಾಪುರಂ ಮೈನಿಂಗ್ ಕಂಪನಿ ಇವತ್ತು ಒತ್ತುವರಿ ಮಾಡಿಕೊಂಡಿರುವುದು ಕಾಣಿಸುತ್ತಿದೆ. ಆದರೆ ಆಂಧ್ರ ಮತ್ತು ಕರ್ನಾಟಕ ಎರಡೂ ರಾಜ್ಯಗಳ ಸಮಸ್ಯೆ ಬರುವುದರಿಂದ ಇದು ಆದಷ್ಟು ಬೇಗ ಜಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದಿಂದ ತನಿಖೆ ಆಗಬೇಕೆಂದು ಅವರು ಕೊಟ್ಟಿರತಕ್ಕಂತಹ ವರದಿ. ಆದರೆ ಅದರಲ್ಲಿ ಓಬಳಾಪುರ ಮೈನ್ಸ್‌ರವರು ಒತ್ತುವರಿ ಮಾಡಿದ್ದಾರೆಂದು ಪ್ರೈಮಫೇಸಿಯಲ್ಲಿ ಕಾಣುತ್ತದೆ ಎನ್ನತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೆ, ಈ ಮನೆಯ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಒಂದು ವಿನಂತಿಯನ್ನು ಮಾಡುತ್ತೇನೆ. ಈಗ ಏನು ಲೋಕಾಯುಕ್ತ ವರದಿ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿದ್ದೇವೆ, ಪುಟ 101 ರಲ್ಲಿ ಬಹಳ ಸ್ಪಷ್ಟವಾಗಿ ಅವರು ಒಂದು ಮಾತನ್ನು ಹೇಳಿದ್ದಾರೆ. 'In this report of mine, I am not inclined to endorse those findings of Dr.Singh solely because the dispute is in the nature of inter-state dispute and no conclusion could be arrived and without hearing the state of Andhra Pradesh. This dispute does not confine itself to a dispute between a few companies but involves the territorial integrity of two states.' No 1. ಎರಡನೆಯದು, ಆಂದ್ರ ಕರ್ನಾಟಕದ ಈ ಬಾರ್ಡರ್ dispute ಏನಿದೆ, ಏರಿಯಾ ಬಗ್ಗೆ ಏನು ಗೊಂದಲ ಇದೆ, ಸುಮಾರು 35 ವರ್ಷಗಳಿಂದ ಇರುವಂತಹ ಈ ಗೊಂದಲವನ್ನು ಬಗೆಹರಿಸಿ ಎಂದು ನಾವು ಎರಡು ಬಾರಿ ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಇವತ್ತು ಇದನ್ನು ರೆಡ್ಡಿ brothers ಒತ್ತುವರಿ ಮಾಡಿ ಕರ್ನಾಟಕದಿಂದ ಆಂದ್ರಕ್ಕೆ ಸಾಗಾಣಿಕೆ ಮಾಡುತ್ತಿದ್ದಾರೆಂದು ಯಾವುದೇ ಆಧಾರ ಇಲ್ಲದೇ ಆರೋಪ ಮಾಡುವುದರ ಬದಲಿಗೆ, ನಾನು ನೋಡುತ್ತಿದ್ದೇನೆ. ಒಟ್ಟಾರೆ ಈ ಚರ್ಚೆಯ ಉದ್ದೇಶ ಏನು? ಬಳ್ಳಾರಿ ಸ್ನೇಹಿತರಿಗೆ ಬೆಟ್ಟು ಮಾಡಿ ತೋರಿಸಿ ಬೆನಿಫಿಷಿಯರೀಸ್ ಕಾಂಗ್ರೆಸ್‌ನವರು ಬಹಳ ದೊಡ್ಡ ಪ್ರಮಾಣದಲ್ಲಿದ್ದಾರೆ. ಇನ್ನೊಂದು JDS ನವರು. ಅವರ ಕಾಲದಲ್ಲಿ ಅನುಮತಿ ಕೊಟ್ಟರು. ನಮ್ಮ BJP ಯ ಮಂತ್ರಿಗಳು 3-4 ಜನ ಇದ್ದಾರೆ. ನಾನು ಎರಡು ಸತ್ಯಗಳನ್ನು ಹೇಳುತ್ತೇನೆ. ಒಂದು ಈ ಅಧಿವೇಶನ ಮುಗಿದ ತಕ್ಷಣ ಸರ್ವ ಪಕ್ಷಗಳ ನಿಯೋಗದಲ್ಲಿ ಪ್ರಧಾನಿ ಬಳಿ ಹೋಗಿ, ಈ ರೀತಿ ಪ್ರತಿನಿತ್ಯ 10,000 ಲಾರಿ ಲೋಡ್ ಟ್ರಕ್‌ಗಳು ಕಬ್ಬಿಣದ ಅದಿರು ಹೋಗುತ್ತಿದೆ ಎಂದು ನೀವು ಏನು ಹೇಳುತ್ತಿದ್ದೀರಿ, ಇದರ ಆಧಾರದ ಮೇಲೆ ದಯಮಾಡಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಲಿ. ಇದು ಒಂದು. ಎರಡನೆಯದು ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ, ಆಂದ್ರ ರಾಜ್ಯದಲ್ಲಿ ನಿಮ್ಮ ಸರ್ಕಾರ ಇದೆ,ಇದರ ಬಗ್ಗೆ ಜಂಟಿ

ಸದನ ಸಮಿತಿ ಮಾಡುವುದಕ್ಕೆ ನಿಮ್ಮ ಅಡ್ಡಿ ಏನು? ಇದು ಎರಡನೆಯದು. ಮೂರನೆಯದು, ನಾನು ಈಗಾಗಲೇ ಆ ಮನೆಯಲ್ಲಿ ಹೇಳಿದ್ದೇನೆ. ಹೇಳಲಿಲ್ಲವೆಂದು ಹೇಳಬಾರದು. ಮಾನ್ಯ ಧರ್ಮ್‌ಸಿಂಗ್‌ರವರ ಕಾಲದಲ್ಲಿ ಮತ್ತು ಮಾನ್ಯ ಕುಮಾರಸ್ವಾಮಿಯವರ ಕಾಲದಲ್ಲಿ, ಗವರ್ನರ್ ಇದ್ದ ಕಾಲದಲ್ಲಿ ಏನೇನು ಮೈನಿಂಗ್ ಕೊಟ್ಟಿದ್ದಾರೆ, ಯಾರ ಬಂಧು, ಬಳಗ, ಸಂಬಂಧ ಇವರ ಹೆಸರು ಏಕೆ ಹೇಳುತ್ತಿದ್ದೇನೆಂದರೆ, ಜಂಟಿ ಸದನ ಸಮಿತಿ ಮಾಡಿ ತನಿಖೆ ಮಾಡೋಣ. ವಿವರಗಳನ್ನು ಒದಗಿಸೋಣ ಎಂದು ನಾನು ಹೇಳಿದ್ದೇನೆ. ನನಗೆ ಏನು ನೋವಾಗುತ್ತಿದೆ ಎಂದರೆ, ನಿನ್ನೆಯಿಂದ ಇವತ್ತಿನವರೆಗೂ ಒಂದು ಪುರಾವೆ ನಿಮ್ಮ ಬಳಿ ಇಲ್ಲ. ಪತ್ರಿಕೆಯಲ್ಲಿ ಹಾಗೆ ಬಂದಿದೆ, ಹೀಗೆ ಬಂದಿದೆ, ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದರೆ, ಮಂತ್ರಿಗಳು ರಾಜೀನಾಮೆ ಕೊಡಬೇಕಾದ ಪ್ರಶ್ನೆ ಎಲ್ಲಿ ಬರುತ್ತದೆ? ನಾವೆಲ್ಲಾ ಒಟ್ಟಾಗಿದ್ದೇವೆ, ಒಂದಾಗಿದ್ದೇವೆ. ಒಟ್ಟಾಗಿ ಆಡಳಿತ ನಡೆಸುತ್ತಿದ್ದೇವೆ. ಆರೋಪ ಸಾಬೀತು ಮಾಡಿ. ನಾವು ಅಭಿವೃದ್ಧಿ ದೃಷ್ಟಿಯಿಂದ ಯೋಚನೆ ಮಾಡುತ್ತಿದ್ದೇವೆ ಏನಃ . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಉತ್ತರ ಹೇಳುತ್ತಿದ್ದೀರಿ ಎಂದರೆ ನಾವು ಹೇಳುತ್ತೇವೆ. ಇಲ್ಲದಿದ್ದರೆ ಮಧ್ಯದಲ್ಲಿ ಹೇಳಿಕೊಂಡು ಹೋದರೆ ಚೆನ್ನಾಗಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಡಿಫೆಂಡ್ ಮಾಡುವುದು ನನ್ನ ಡ್ಯೂಟಿ ಇದೆ. ನಾನು ಸುಮ್ಮನೆ ಕುಳಿತಿದ್ದೇನೆ. ನಾನು ಏನೂ ಮಾತನಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾವೂ ಸುಮ್ಮನೆ ಕುಳಿತಿದ್ದೇವೆ. ನಾವೂ ಏನೂ ಮಾತನಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ರಾಜೀನಾಮೆ ಕೇಳಬೇಕಾದರೆ ಆಧಾರ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರು ಕೇಳುತ್ತಾರೆ. ನೀವು ಆಗ ಸಮರ್ಥನೆ ಮಾಡಿಕೊಳ್ಳಿ. ರಿಪ್ಲೇ ಕೊಡುವಾಗ ಹೇಳಿ. ಈ ಕಾರಣಕ್ಕಾಗಿ ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಹೇಳಿ. ನಾವು ಹೇಳುವುದು ಹೇಳುತ್ತೇವೆ. ಯಾರಿಗೂ ಹೆದರುವುದಿಲ್ಲ. CBI ಗೆ ಹೋಗಲಿ.

ಶ್ರೀ ಡಿ. ಜನಾರ್ಧನ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಲೋಕಾಯುಕ್ತ ವರದಿ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಹತ್ತಿರ ಕೂಡ ಅದೇ ಕಾಪಿ ಇದೆ. ಇದು public document ಆಗಿದೆ. ಲೋಕಾಯುಕ್ತರ ಬಗ್ಗೆ ನಾವು ಬಹಳ ಗೌರವದಿಂದ ಮಾತನಾಡಬೇಕು. ತಾವು ಲೋಕಾಯುಕ್ತರ ವರದಿ ತಪ್ಪು ಗ್ರಹಿಕೆ ಆಗುವ ರೀತಿಯಲ್ಲಿ ಸದನದಲ್ಲಿ ಮಾತನಾಡುವುದು ತಮಗೆ ಗೌರವ ತರುವುದಿಲ್ಲ. ಅವರ statement ಬಗ್ಗೆ ತಾವು ಬಹಳ ತಪ್ಪಾಗಿ ಮಾತನಾಡುತ್ತಿದ್ದೀರಿ. ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಓದಿದ್ದಾರೆ ಲೋಕಾಯುಕ್ತರು ಅಷ್ಟೇ ಕೊಟ್ಟಿದ್ದಾರೆ. ಅದನ್ನು ಬಿಟ್ಟು ಅವರನ್ನು ಬೆರಳೆತ್ತಿ ತೋರಿಸುವುದು ಸರಿಯಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಬಿಟ್ಟಿರುವ ಭಾಗವನ್ನು ಸ್ವಲ್ಪ ಕಂಪ್ಲೀಟ್ ಮಾಡಿಬಿಡಿ. ಪ್ರಾರಂಭದಿಂದ ಏನಿದೆ ಎಂದು ಹೇಳಿ. ಲೋಕಾಯುಕ್ತ ವರದಿ ಬಗ್ಗೆ ಇನ್ನು ಸ್ವಲ್ಪ ವಿವರಣೆ ಕೊಟ್ಟು ಬಿಟ್ಟರೆ ಒಳ್ಳೆಯದು. ಲೋಕಾಯುಕ್ತ ವರದಿ ಅವರು ಏನು ಕೊಟ್ಟಿದ್ದಾರೆ, ಎರಡು ಲೈನ್ ಹೇಳುತ್ತೀರಿ. ಅದಕ್ಕಿಂತ ಮುಂಚೆ ಏನು ಹೇಳಿದ್ದಾರೆ,

ಶ್ರೀ ಡಿ. ಜನಾರ್ಧನ ರೆಡ್ಡಿ :- ತಾವು ವರದಿ ಓದಿದ್ದೀರಿ ಇಲ್ಲ ಎನ್ನುವುದು ಅಲ್ಲ. ಇವತ್ತು ಲೋಕಾಯುಕ್ತರೇ ಹೇಳಿದ್ದಾರೆಂದು ಹೇಳಿ ಒಬ್ಬ ಲೋಕಾಯುಕ್ತರ ಬಗ್ಗೆ ನ್ಯಾಯ ಮೂರ್ತಿಗಳ ಬಗ್ಗೆ ಅವರು ಹೇಳದೆ ಇರುವುದನ್ನು ಸದನದಲ್ಲಿ ಹೇಳುವುದೆಂದರೆ ನಾಳೆ ನಿಮ್ಮ ಬಗ್ಗೆ ಜನ ಏನೆಂದು ಮಾತನಾಡಬೇಕು? ಲೋಕಾಯುಕ್ತರ ಬಗ್ಗೆ ಸದನಕ್ಕೆ ತಪ್ಪು ಮಾಹಿತಿ ಕೊಡುವುದು ಬಹಳ ತಪ್ಪು. ಯಾವುದೇ ರೀತಿಯಲ್ಲಿ ಲೋಕಾಯುಕ್ತರು ಆ ರೀತಿ ಹೇಳಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಉಪಾಧ್ಯಕ್ಷರೆ, ಯು.ವಿ. ಸಿಂಗ್‌ರವರ ವರದಿಯ ಆಧಾರದ ಮೇಲೆ ಲೋಕಾಯುಕ್ತರು ವರದಿ ಕೊಟ್ಟಿದ್ದಾರೆ. It is a part of the Lokayukta report. ಈ ರೀತಿಯಾಗಿ interpret ಮಾಡಬೇಕಾಗುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಕೆ.ಎ.ಸ್ವಾಮಿಯವರು ಹೈಕೋರ್ಟ್ ಜಡ್ಜ್ 1972ರಲ್ಲಿ ಅವರು ಏನು ಆದೇಶ ಕೊಟ್ಟರು? 'After the disputed area is demarked and until the boundary between the two states, Karnataka and Andhra Pradesh lying within the disputed area is settled, neither the petitioner nor the

respondents 1 & 3 should operate in the disputed area or cause any person to operate on their behalf.' ಅಂದರೆ respondents ಎಂದರೆ ಕರ್ನಾಟಕ ಮತ್ತು ಆಂಧ್ರ ಪ್ರದೇಶ. ಇದು ಅಳತೆ ಆಗುವವರೆಗೂ ಕೂಡ ಏನೂ ಕೆಲಸ ಮಾಡಬಾರದು ಎಂಬ ಮಾತು ಹೇಳಿದಾಗ್ಯೂ ಕೂಡ ನೀವು ಆ ಏರಿಯಾದಲ್ಲಿ ಏಕೆ ಪರ್ಮಿಟ್ ಇಶ್ಯೂ ಮಾಡುತ್ತಿದ್ದೀರಿ? ಪರ್ಮಿಟ್ ಸ್ಟಾಪ್ ಮಾಡಿ ನೋಡೋಣ.

ಶ್ರೀ ಜಿ. ಕರುಣಾಕರ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಸುಮಾರು 37 ವರ್ಷ ಇವರು ಅಧಿಕಾರದಲ್ಲಿದ್ದರು. 37 ವರ್ಷ ನಿಮ್ಮ ಪಕ್ಷ ಅಧಿಕಾರದಲ್ಲಿದ್ದರೂ ನೀವು ನಿದ್ರೆ ಮಾಡುತ್ತಿದ್ದಿರಾ? ಆಂಧ್ರಪ್ರದೇಶದಲ್ಲಿ ಮತ್ತು ಕರ್ನಾಟಕದಲ್ಲಿ ನಿಮ್ಮ ಪಕ್ಷವೇ ಅಧಿಕಾರದಲ್ಲಿತ್ತು.

ಶ್ರೀ ಡಿ. ಜನಾರ್ಧನರೆಡ್ಡಿ :- 1972 ರ ಸಮಯದಲ್ಲಿ ಅಧಿಕಾರದಲ್ಲಿದ್ದವರು ಅವರು. 2007ನೇ ಇಸವಿಯಲ್ಲಿ ನಮಗೆ ಲೀಸ್ ಸಿಕ್ಕಿದೆ. ಅದನ್ನು ಅವರು ನೆನಪು ಇಟ್ಟುಕೊಳ್ಳಬೇಕು. 2007ರಲ್ಲಿ ಈ ಲೀಸ್ ಓಬಳಾಪುರಂ ಮೈನಿಂಗ್ ಕಂಪನಿ ಕೈಯಲ್ಲಿ ಬಂದಿರುವುದು. 1972ರಿಂದ 2007ರ ತನಕ ಆ ರಾಜ್ಯದಲ್ಲಿರಬಹುದು, ಈ ರಾಜ್ಯದಲ್ಲಿರಬಹುದು, ಅಧಿಕಾರದಲ್ಲಿದ್ದವರು ಯಾರು, ನೀವು ಏಕೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಿರಿ, 1972ರಿಂದ ತಾವು ಏನು ಮಾಡಿದ್ದೀರಿ? 37 ವರ್ಷ ತಾವು ಏನು ಮಾಡಿದ್ದೀರಿ. ಸನ್ಮಾನ್ಯ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದು 8 ತಿಂಗಳುಗಳಾಗಿವೆ. ತಾವು 37 ವರ್ಷಗಳ ಕಾಲ ಅಧಿಕಾರದಲ್ಲಿದ್ದವರು. 1972ನೇ ಇಸವಿಯ ಹೈಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ತಾವು ಹಿರಿಯರು ಮಾತನಾಡುತ್ತಿದ್ದೀರಿ. ಅವತ್ತು ಅಧಿಕಾರದಲ್ಲಿದ್ದವರು ಯಾರು ? ಅವತ್ತು ಹೈಕೋರ್ಟ್ ಜಡ್ಜ್‌ಮೆಂಟ್‌ನ್ನು ಇಂಪ್ಲಿಮೆಂಟ್ ಮಾಡುವಂತಹ ಪರಿಸ್ಥಿತಿ ನಿಮ್ಮಲ್ಲಿ ಏಕೆ ಆಗಲಿಲ್ಲ? ಇವತ್ತು ತಾವು ಇದರ ಬಗ್ಗೆ ಏಕೆ ಹೇಳುತ್ತಿದ್ದೀರಿ? ಜನ ನೋಡಿದರೆ 1972 ರಿಂದ ಜನಾರ್ಧನ ರೆಡ್ಡಿಯವರೇ ಮೈನಿಂಗ್ ಮಾಡುತ್ತಿದ್ದಾರೆಂದು ತಿಳಿದುಕೊಳ್ಳುತ್ತಾರೆ. 1972ರಲ್ಲಿ ನಾನು ಐದು ವರ್ಷದ ಮಗು. ಹಾಗಾಗಿ 39 ವರ್ಷಗಳಿಂದ ತಾವು ಏನು ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನಮಗಿ ಏನು ಗೊತ್ತಿತ್ತು ಎಂದರೆ, ಯಾವಾಗಲೂ ಕ್ಷಮಿಸಬೇಕು ಎನ್ನುವ ಪದ ಉಪಯೋಗ ಮಾಡಿದ್ದಾರೆ ಎನ್ನುವುದು ಬೇಡ. ಕಳ್ಳತನಗಳು ಆಗುತ್ತವೆ. ಕಳ್ಳರು ಮೂವಬಲ್

ಪ್ರಾಪರ್ಟಿ ಕಳ್ಳತನ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಆದರೆ ಇಮ್ಮೂವಬಲ್ ಪ್ರಾಪರ್ಟಿಯು ಕಳ್ಳತನ ಆಗುತ್ತದೆ ಎಂದು ನಮಗೆ ಗೊತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನಾವು ಅಧಿಕಾರದಲ್ಲಿದ್ದೆವು ಮಾಡಿದ್ದೇವೆ ಬಿಟ್ಟಿದ್ದೇವೆ ಎನ್ನುವುದಕ್ಕಿಂತ ಹೆಚ್ಚಾಗಿ ತಾವು ಈಗ ಅಧಿಕಾರದ ಗದ್ದುಗೆಯಲ್ಲಿ ಕುಳಿತಿದ್ದೀರಿ. ಈಗ ನಿಮಗೆ ಸಿಂಪಲ್ ಥಿಂಗ್ ಎಂದರೆ, ನಿಮಗೆ ಎಲ್ಲಾ ರೀತಿಯಲ್ಲಿಯೂ ಕಾರಣ ಇದೆ. ಈಗ ಪರ್ಮಿಟ್ stop ಮಾಡಿ till demarcation is over. ಅಳತೆ ಆಗುವವರೆಗೂ ಪರ್ಮಿಟ್ ಅನ್ನು ಏಕೆ ಇಶ್ಯೂ ಮಾಡುತ್ತೀರಿ? ನಿಲ್ಲಿಸಿ ನೋಡೋಣ. ಅದನ್ನು ಮಾಡುವುದಕ್ಕೆ ನೀವು ತಯಾರಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾವು ಯಾವಾಗ ಸ್ಟಾಪ್ ಮಾಡಬೇಕು? ಅವರು ಕಾನೂನು ಬಾಹಿರವಾಗಿ ಮೈನಿಂಗ್ ಮಾಡುತ್ತಿದ್ದರೆ ಅದು ಪ್ರೂವ್ ಆಗಬೇಕು. So far, ಆ ಬೌಂಡರಿ, ಆ ಏರಿಯಾ ಆಂಧ್ರದ್ದೋ ಕರ್ನಾಟಕದ್ದೋ ಎಂದು ಹೇಳುವ ಪ್ರಶ್ನೆ ಬಂದಾಗ ನೀವು ಕರ್ನಾಟಕಕ್ಕೆ ಸೇರಿದ್ದು ಎಂದು ನೀವು ಹೇಳುತ್ತೀರಿ.

ಜಂಟಿ ಸರ್ವೆ ಆಗಿಲ್ಲ. ನಾವು ಪತ್ರ ಬರೆದಿದ್ದರೂ ಕೂಡ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಜಾಯಿಂಟ್ ಸರ್ವೆ ಆಗಿ ಸ್ಪಷ್ಟವಾಗಿ ಯಾವುದಕ್ಕೆ ಸೇರಿದೆಯೆಂದು ಗೊತ್ತಾದಮೇಲೆ ಕ್ರಮ ತೆಗೆದುಕೊಳ್ಳಿ ಮುಖ್ಯಮಂತ್ರಿಗಳೆ ಎಂದು ನನಗೆ ಹೇಳಿದರೆ ಆಗ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇದೇ ಕೆಲಸವನ್ನು ಇವತ್ತಿಂದಲ್ಲ, ಕಳೆದ 16 ವರ್ಷಗಳಿಂದ ನಡೆದುಕೊಂಡು ಬಂದಿರುವಾಗ ನೀವು ಕಣ್ಣು ಮುಚ್ಚಿಕೊಂಡು ಸುಮ್ಮನಿದ್ದಿರಿ. ಕೇಂದ್ರ ಸರ್ಕಾರ ಕೂಡ ಹಾಗೆಯೇ ಸುಮ್ಮನೆ ಇದೆ. ಅದರರ್ಥ ಅಲ್ಲಿ ಏನೂ ಅವ್ಯವಹಾರಗಳು ನಡೆದಿಲ್ಲ ಎಂದಿರಬಹುದು,ಅಥವಾ ಅವ್ಯವಹಾರ ನಡೆದಿರುವುದು ಸತ್ಯವಾದರೆ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಲಿ, ಜಾಯಿಂಟ್ ಸರ್ವೆಯನ್ನು ನಾಳೆಯೇ ಮಾಡಿಸೋಣ. ನಡೆಯಿರಿ ಹೋಗೋಣ ಪ್ರಧಾನಿ ಹತ್ತಿರ, ನಾನು ಬರುತ್ತೇನೆ ನಿಯೋಗದಲ್ಲಿ ಎಂದು ಹೇಳಿದ್ದೇನಲ್ಲ. ಏನೂ ಆಧಾರವಿಲ್ಲದೆ ನೀವು ರದ್ದು ಮಾಡಿ ಎಂದರೆ ಹೇಗೆ. ಏನೂ ಆಧಾರವಿಲ್ಲದೆ ರದ್ದು ಮಾಡಿದರೆ ನಾಳೆ ದಿವಸ ಯಾರಾದರೂ ರಿಟ್ ಹಾಕಿದರೆ ಸುಪ್ರೀಂಕೋರ್ಟ್‌ನಲ್ಲಿ ನಾನು ಛೀಮಾರಿ ಹಾಕಿಸಿಕೊಳ್ಳಲೆ?

ಶ್ರೀ ಟಿ.ಬಿ. ಜಯಚಂದ್ರ :- ಕೇಂದ್ರ ಸರ್ಕಾರಕ್ಕೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ಕೇರಳ ಎಲ್ಲ ರಾಜ್ಯಗಳೂ ಒಂದೇ ಆಗುತ್ತದೆ. ನೀವು disputed area ಎಂದು ಆದಮೇಲೆ, you can always stop it. ತಾವು ಕಳೆದ ಎಂಟು ತಿಂಗಳುಗಳಿಂದ ಅಧಿಕಾರದಲ್ಲಿದ್ದೀರಿ.

ಶ್ರೀ ಆರ್. ಅಶೋಕ್ :- Disputed area ಎಂದಮೇಲೆ ಆಂಧ್ರದವರು ಹೇಗೆ ಲೈಸೆನ್ಸ್ ಕೊಟ್ಟರು? ತಾವೇ ಈಗ disputed area ಎಂದು ಹೇಳಿದಿರಿ. ಹೀಗಿರುವಾಗ ಕೇಂದ್ರ ಸರ್ಕಾರ ಹೇಗೆ ಅನುಮತಿಯನ್ನು ಕೊಟ್ಟಿತು? ಆಂಧ್ರ ಸರ್ಕಾರ ಹೇಗೆ recommendation ಮಾಡುತ್ತದೆ?

ಶ್ರೀ ಟಿ.ಬಿ. ಜಯಚಂದ್ರ :- ಹೇಗೆ ಮಾಡಿತು ಎಂದು ಗೊತ್ತಾಗಬೇಕಾದರೆ ನೀವು ಸಿ.ಬಿ.ಐ.ಗೆ ಇದನ್ನು ರೆಫರ್ ಮಾಡಿಬಿಡಿ. ಹೇಗೆ ರೆಕಮೆಂಡ್ ಮಾಡಿತು ಎಂದು ಸುಮ್ಮನೆ ಚರ್ಚೆ ಮಾಡುವುದು ಬೇಡ.ಅದರ ಬದಲು ಸಿ.ಬಿ.ಐ.ಗೆ ಇದನ್ನು ರೆಫರ್ ಮಾಡಿ. ಇವೆಲ್ಲವೂ ಕೂಡ ಸಿ.ಬಿ.ಐ.ನಲ್ಲಿ ತೀರ್ಮಾನವಾಗಲಿ. ಪರ್ಮಿಟ್ ಕೊಟ್ಟಿರುವ ಬಗ್ಗೆ, ಮತ್ತೊಂದು, ಇನ್ನೊಂದು, ಹೀಗೆ ಹಲವಾರು ರೀತಿಯಲ್ಲಿ ನಾನಾ ರೀತಿಯ issues ಇದೆ. ಈಗ ನೀವು ಏನೂ ತಪ್ಪು ಮಾಡಿಲ್ಲಪ್ಪಾ. ಪರ್ಮಿಟ್ ನೀವು ಕೊಟ್ಟಿಲ್ಲ, ಯಾರೂ ತಪ್ಪು ಮಾಡಿಲ್ಲ, ಯಾರೂ ಇದರಲ್ಲಿ ತಪ್ಪು ಮಾಡಿಲ್ಲವೆಂದ ಮೇಲೆ ಇದನ್ನು ಸಿ.ಬಿ.ಐ. ತನಿಖೆಗೆ ಕೊಡುವುದಕ್ಕೆ ಏಕೆ ಹಿಂದುಮುಂದು ನೋಡುತ್ತೀರಿ? ಸಿ.ಬಿ.ಐ.ಗೆ ಕೊಡಿ. ಆಗ ಕಾಂಗ್ರೆಸ್‌ನವರು ತಪ್ಪು ಮಾಡಿದ್ದರೆ ಅವರೂ ಸಿಕ್ಕಿಹಾಕಿಕೊಳ್ಳಲಿ, ಜೆ.ಡಿ.ಎಸ್. ನವರು ತಪ್ಪು ಮಾಡಿದ್ದರೆ ಅವರೂ ಸಿಕ್ಕಿಹಾಕಿಕೊಳ್ಳಲಿ, ಯಾರು ಯಾರು ತಪ್ಪು ಮಾಡಿದ್ದಾರೆ ಅವರೆಲ್ಲರೂ ಸಿಕ್ಕಿಹಾಕಿಕೊಳ್ಳಲಿ. If your hands are so clean, why are you hesitating? Refer everything to CBI. Let us face the enquiry. ಉಪ್ಪು ತಿಂದವನು ನೀರನ್ನು ಕುಡಿಯುತ್ತಾನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಜಯಚಂದ್ರರವರೆ ನೀವು ಉಪನಾಯಕರು. ಈಗಾಗಲೇ ನೀವು ಹೇಳಿದಿರಿ ಸುಪ್ರೀಂಕೋರ್ಟಿನ ಒಬ್ಬ ನ್ಯಾಯಾಧೀಶರಾಗಿದ್ದಂಥವರು ಲೋಕಾಯುಕ್ತರಾಗಿದ್ದಾರೆ, ಅವರಿಗೆ ಈ ವಿಚಾರದ ಬಗ್ಗೆ ತನಿಖೆಗೆ ಕೊಡಲಾಗಿತ್ತು. ಎರಡನೆಯದಾಗಿ, ನನ್ನ ಅವಧಿಯದ್ದು ಡಿಸೆಂಬರ್ 2008ರದೂ ಸೇರಿಸಿ ತನಿಖೆ ಮಾಡಿ ಎಂದು ಹೇಳಿದ್ದೇನೆ.

ಲೋಕಾಯುಕ್ತ ವರದಿಯ ಪ್ರತಿಯನ್ನು ಪ್ರತಿಪಕ್ಷದ ನಾಯಕರಿಗೂ ಕೊಟ್ಟಿದ್ದೇನೆ. ಲೋಕಾಯುಕ್ತ ವರದಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ, ಕ್ರಮ ತೆಗೆದುಕೊಳ್ಳುವುದಕ್ಕೆ ಮೂರು ತಿಂಗಳ ಸಮಯವಿದೆ ಎನ್ನುವುದನ್ನು ನಾನು ನಿಮಗೆ ಹೇಳಬೇಕಾಗಿಲ್ಲ. ಅವರು ವರದಿ ಕೊಟ್ಟಿರುವುದು 18-12-2008. ಈಗಾಗಲೇ ನಾನು Additional Chief Secretary ಯವರಿಗೆ, ಅಧಿಕಾರಿಗಳಿಗೆ, ಅದನ್ನು ನೋಡಿಯಪ್ಪಾ, ಎಂಟತ್ತು, ಐದಾರು volume ಇರುವುದರಲ್ಲಿ ಏನು ಇದೆ, ಏನು ಮಾಡಬೇಕು ಎಂದು ಕೇಳಿದ್ದೇನೆ. ಆ ಮೂರು ತಿಂಗಳು ಅವಧಿಯೂ ಇನ್ನೂ ಮುಗಿದಿಲ್ಲ. ಈಗಾಗಲೇ ತನಿಖೆಗೆ ನಮ್ಮ ಅವಧಿಯದ್ದನ್ನೂ ಸೇರಿಸಿ ಕೊಟ್ಟಿದ್ದೇನೆ. ಎಲ್ಲಾ ಅವಧಿಯದ್ದೂ ಬರಲಿ ಸ್ವಾಮಿ ರಿಪೋರ್ಟ್‌ನಲ್ಲಿ. ಆಮೇಲೆ ನೋಡೋಣ. ಯಾರು ತಪ್ಪು ಮಾಡಿದ್ದಾರೆ ನೋಡಿ ಕ್ರಮ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಮೂರು ತಿಂಗಳ ಅವಕಾಶವಿದೆಯೆಂದು ಹೇಳಿದರು. ನಾನು ಹೇಳುವುದೇನೆಂದರೆ, ನಮ್ಮ ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿದ್ದಂಥವರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡಿದ್ದೀರಿ. ಸುಪ್ರೀಂಕೋರ್ಟ್ ನ್ಯಾಯಾಧೀಶರೇ ಇಂತಿಂಥವರು ತಪ್ಪು ಮಾಡಿದ್ದಾರೆಂದು ಅಧಿಕಾರಿಗಳ ಹೆಸರನ್ನು ಹೇಳಿಯೇ ಬರೆದಿದ್ದಾರೆ. ಇಂತಿಂಥವರ ಕಾಲದಲ್ಲಿ ಇಷ್ಟಿಷ್ಟೂ ನಷ್ಟವಾಗಿದೆಯೆಂದು ಬರೆದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಏನಾದರೂ ತೊಂದರೆ ಇದೆಯೆ? ಅದಕ್ಕೆ ಮೂರು ಜನ ಅಧಿಕಾರಿಗಳು ಬೇರೆ ಬೇಕೆ? ಹಾಗಾದರೆ ಆ ಲೋಕಾಯುಕ್ತ ವರದಿಯನ್ನು ತೆಗೆದು ಡಬ್ಬಕ್ಕೆ ಅದನ್ನು ಎಸೆಯಿರಿ. ವರದಿ ಇದ್ದರೂ ಕೂಡ ಮತ್ತೆ ಸುಮ್ಮನೆ ಏಕೆ ಆ ಮೂರು ಜನ ಅಧಿಕಾರಿಗಳು. ಆ ಮೂರು ಜನ ಅಧಿಕಾರಿಗಳ ಕೈಯಿಂದ ಬೈಂಡಿಂಗ್ ತೆಗೆದುಕೊಂಡು ನೀವು ಕ್ರಮ ತೆಗೆದುಕೊಳ್ಳುವ ಸನ್ನಿವೇಶಕ್ಕೆ ಹೋದಾಗ ಅದು ಒಂದು ಕಡೆ. ನಾನು ಕರುಣಾಕರರೆಡ್ಡಿಯವರ ರಾಜೀನಾಮೆಯನ್ನು ಏತಕ್ಕೆ ಕೇಳಿದೆನೆಂದರೆ,

ಶ್ರೀ ಜಿ. ಕರುಣಾಕರರೆಡ್ಡಿ :- ನಾನೇಕೆ ರಾಜೀನಾಮೆ ಕೊಡಬೇಕು.

ಉಪಾಧ್ಯಕ್ಷರು :- ರೇವಣ್ಣನವರೆ, ರಾಜೀನಾಮೆ ಬಗ್ಗೆ ನೀವು ಪ್ರಸ್ತಾಪ ಮಾಡಬೇಡಿ. ಈಗಾಗಲೇ ನೀವು ಕೇಳಿದ್ದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :- ಉಪಾಧ್ಯಕ್ಷರೆ, ರಾಜೀನಾಮೆಗೆ ಸಂಬಂಧಪಟ್ಟಂತೆ ನಾನು ಹೇಳಿರುವುದಕ್ಕೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮುಖ್ಯಮಂತ್ರಿಗಳು ಹೇಳಿದ ಮೇಲೆ ನಾನು ಹೇಳಲೇಬೇಕಾಗುತ್ತದೆ. ಅದು ನನ್ನ ಕರ್ತವ್ಯ. ದಯಮಾಡಿ ನನಗೆ ಸಹನೆಯಿಂದ ಇರಬೇಕು. ನನಗೆ ಅವಕಾಶ ಕೊಡಬೇಕೆಂದು ನಿಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ರಾಜ್ಯಸರ್ಕಾರದ ಅಂತರ್ಗಡಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನಲ್ಲ ಈ ಹೇಳಿಕೆಯನ್ನು ಕೊಟ್ಟಿರುವುದು. ಅಂತರ್ಗಡಿ ಸರ್ವೆ ಮಾಡುವುದಕ್ಕೆ 28-07-2007 ರಲ್ಲಿ ಆಂಧ್ರ ಸರ್ಕಾರಕ್ಕೆ ಕುಮಾರಸ್ವಾಮಿಯವರು ಇದ್ದಾಗ ಮಾಡಿದರು ಎಂದು ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇ ರೀತಿ 16-01-2009 ರಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆಂದು ಹೇಳುತ್ತಾರೆ. ಸರ್ಕಾರದ Survey of India ಗೆ, ಕಂದಾಯ ಇಲಾಖೆಗೆ. ಕಂದಾಯ ಇಲಾಖೆಯ ಮಂತ್ರಿಗಳು ಕರುಣಾಕರರೆಡ್ಡಿಯವರು ಇರುವುದರಿಂದ ಕಂದಾಯ ಇಲಾಖೆಯೆ ಸರ್ವೆ ಮಾಡುವವರಿಗೆ ಜಾಗ ತೋರಿಸಬೇಕಾಗುತ್ತದೆ. ಅದಕ್ಕೋಸ್ಕರ ಈ ಸರ್ವೆಯಾಗುವವರೆಗೂ ಅವರು ರಾಜೀನಾಮೆ ಕೊಡಲಿ ಎಂದು ನಾನು ಹೇಳಿದ್ದು. ಏಕೆಂದರೆ ಅವರ ಇಲಾಖೆಯ ಮೇಲೆ ಇವತ್ತು ಆಪಾದನೆಗಳು ಇರುವುದು. ಬೇರೆ ತರಹ ಇದ್ದರೆ ನಾನು ಅವರ ರಾಜೀನಾಮೆಯನ್ನು ಕೇಳುತ್ತಿರಲಿಲ್ಲ. ಅದನ್ನು ಮುಖ್ಯಮಂತ್ರಿಗಳು ತಿಳಿದುಕೊಳ್ಳಬೇಕೆಂದು ನಾನು ಮನವಿಯನ್ನು ಮಾಡುತ್ತಿದ್ದೇನೆ. ಏಕೆಂದರೆ ಕಂದಾಯ ಸಚಿವರ ಹತ್ತಿರ ಮತ್ತು ಜನಾರ್ದನರೆಡ್ಡಿಯವರ ಹತ್ತಿರ ಇರುವಷ್ಟು ಲಾಯರ್‌ಗಳು ನಮ್ಮ ಹತ್ತಿರ ಇಲ್ಲ. ಅಷ್ಟೊಂದು ಲೀಗಲ್ ಒಪಿನಿಯನ್ ಪಡೆಯಲು ನಮ್ಮ ಹತ್ತಿರ ಅಷ್ಟೊಂದು ಲಾಯರ್‌ಗಳು ಇಲ್ಲ.

ಶ್ರೀ ಎಸ್. ಶಿವಣ್ಣ :- ಅನವಶ್ಯಕವಾಗಿ ಏನೇನೋ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಸರ್ವೆ ಮಾಡಲು ಎಲ್ಲಿ ಬಂದಿದೆ ಪತ್ರ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :-ನಮಗಲ್ಲ ನಾಚಿಕೆ. ನೈತಿಕ ಹಕ್ಕಿದ್ದರೆ ನೀವು ಸಿ.ಬಿ.ಐ.ಗೆ ರೆಫರ್ ಮಾಡಿ.

(ಗೊಂದಲ)

ಶ್ರೀ ಎಸ್. ಶಿವಣ್ಣ :- ನಾವು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಬಂದಿದ್ದೇವೆ ಅಧ್ಯಕ್ಷರೆ,

(ಗೊಂದಲ)

ಉಪಾಧ್ಯಕ್ಷರು :- ನೀವಿಬ್ಬರು ಕುಳಿತುಕೊಳ್ಳಿ. ಕುಮಾರಸ್ವಾಮಿಯವರೇನೋ ಹೇಳುತ್ತಾರಂತೆ. ಅವರು ಮಾತನಾಡಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಲೋಕಾಯುಕ್ತ ರಿಪೋರ್ಟ್‌ನಲ್ಲಿ ಎರಡ್ಮೂರು ಪಾಯಿಂಟ್ ಹೇಳಿದರು. ಆದರೆ ಇನ್ನೂ ಒಂದೆರಡ್ಮೂರು ವಿಷಯಗಳು ಇವೆ. ಲೋಕಾಯುಕ್ತ ರಿಪೋರ್ಟ್‌ನಲ್ಲಿ ಅವರು ಕೊಡುತ್ತಾರೆ, ‘ During the course of this enquiry and my visit to the three districts referred to herein above, it has come to my knowledge that the Government of Karnataka had given three mining leases to some private parties in the area abutting Karnataka, Andhra Pradesh border, while Government of Andhra Pradesh had given a mining lease to one company on the other side of the border. Because of the proximity of the availability of mineral in this part of the border of two States, there has been some illegal transportation in and out of Karnataka and Andhra Pradesh of mineral illegally mined. Therefore during the course of my investigation itself, I had suggested to the Department of Mines and Geology to establish check points at routes available for transportation of these ores in and out of these two States to control such illegal

transportation. I have no feed back in regard to establishment of any such check points. But while this report was under preparation, newspaper reports showed that serious disputes have arisen between the people operating these mines both in Karnataka as well as in Andhra Pradesh, which had lead to various litigation has also created law and order situation. There are allegations on one side that the company from Andhra is encroaching the mining area within Karnataka border. While the counter allegation is that, the area in which the Andhra company is mining really belongs to Andhra Pradesh. To have a first hand knowledge of happenings in these border areas, I directed Dr.U.V.Singh to inspect that area and submit a report. Dr.Singh has given a detailed report supported by documents. These reports is made..' ಅದೆಲ್ಲಾ ಹೇಳಿಕೊಂಡು ಹೋಗುತ್ತಾರೆ, ಕೊನೆಗೆ ಅಧ್ಯಕ್ಷರೆ, ' At the same time, immediate steps should be taken to stop all mining works in the disputed area so that no loss is caused to either states forgetting the interest of individuals' ಎಂದು ಹೇಳುತ್ತಾರೆ. ಇದಕ್ಕೆ immediate action ತೆಗೆದುಕೊಳ್ಳಲು ತಾವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, Lokayukta Act Section 12(3)& (4) ನಲ್ಲಿ ಏನು ಹೇಳುತ್ತಾರೆಂದರೆ, 'If after

investigation of any action involving an allegation has been made the Lokayukta or Upalokayukta is satisfied that such allegation is substantial either wholly or partly, he shall report in writing, communicate his findings and recommendations along with the relevant documents, materials and other evidence to the Competent Authority'. Lokayukta Act Section 12(4) ನಲ್ಲಿ ಏನು ಹೇಳಿದ್ದಾರೆ ಅದನ್ನು ನಾವು ಮಾಡುತ್ತಿರುವುದು. 'The Competent Authority shall examine the report forwarded to it under Sub Section 3 and within three months of the date of the receipt of the report intimate or cause to be intimated to the Lokayukta or the Upalokayukta the action taken or proposed to be taken on the basis of the report.' So ಇದನ್ನು ನಾವು ಮಾಡುತ್ತಿದ್ದೇವೆ. ಇದು ಲೋಕಾಯುಕ್ತ ಆಕ್ಟ್‌ನಲ್ಲಿರತಕ್ಕ ಪ್ರಾವಿಷನ್ ಮೂರು ತಿಂಗಳವರೆಗೆ ಟೈಮ್ ಇದೆ. ನಾವು ಅಡಿಷನಲ್ ಚೀಫ್ ಸೆಕ್ರೆಟರಿಯವರಿಗೆ ಇನ್ನೂ Examine ಮಾಡುವುದಕ್ಕೆ ಮತ್ತು ನೋಡುವುದಕ್ಕೂ ಹೇಳಿದ್ದೇವೆ. ಅದು ಮೂರು ತಿಂಗಳು ಆಯಿತು, ನೀವು ಹಾಗೆಯೇ ಫೈಲನ್ನು ಮುಚ್ಚಿಟ್ಟಿದ್ದೀರಿ ಎಂದು ಹೇಳಿದರೆ ನಾನು ಅದನ್ನು ಅರ್ಥ ಮಾಡಿಕೊಳ್ಳುತ್ತೇನೆ. ಇದು ಲೋಕಾಯುಕ್ತ ಆಕ್ಟ್‌ನಲ್ಲೇ ಇರುವಂಥ Provision, ಅದು ಬರುತ್ತಿದ್ದಂತೆಯೇ ಕಣ್ಣು ಮುಚ್ಚಿಕೊಂಡು Action ತೆಗೆದುಕೊಳ್ಳಿ ಎಂದು ಹೇಳಿದರೆ ಹೇಗೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಆಯಿತು, Mining Activities ಅನ್ನು ನಿಲ್ಲಿಸಿ ಎಂದು Clearcut direction ಅನ್ನು ವರದಿಯಲ್ಲಿ ಕೊಟ್ಟಿದ್ದಾರೆ.

Disputed areaದಲ್ಲಿ mining activities ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಹೇಳಿದ್ದಾರೆ. Check points

ತೆಗೆಯಬೇಕು ಎಂದು ಹೇಳಿದ್ದಾರೆ. ಆದರೆ ನನಗೆ ಬಂದಿರುವ knowledge ಪ್ರಕಾರ check points ತೆಗೆದಿಲ್ಲವೆಂದು ಅವರೇ report ಕೊಡುತ್ತಾರೆ. ಅಲ್ಲಿ ಧಾರಾಳವಾಗಿ ನಡೆಯುತ್ತಿದೆ. Without permit ಅಲ್ಲಿ ಲೂಟಿ ಹೊಡೆಯುತ್ತಿದ್ದಾರೆ ಅಂತ ಇದೆ.

ಉಪಾಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಬಹಳ clear ಆಗಿ ಎರಡೂ provision ಓದಿದ್ದಾರೆ. The Government has already taken action. We will close the chapter. ವಿಶ್ವನಾಥ್‌ರವರೇ ತಾವು ಮಾತನಾಡಿ.

SRI T.B. JAYACHANDRA :- Immediate steps should be taken to stop the illegal activities. ಅದಕ್ಕೆ ನಾನು permit stop ಮಾಡುತ್ತೀರಾ ಎಂದು ಕೇಳಿದ್ದು. ನೀವು mining work stop ಮಾಡುವ ಬದಲು permit ಕೊಡುವುದನ್ನು stop ಮಾಡಿ. ಈ ರೀತಿ ಗೊಂದಲವಾದರೆ ಹೇಗೆ?

ಉಪಾಧ್ಯಕ್ಷರು :- ವಿಶ್ವನಾಥ್‌ರವರೇ ಮಾತನಾಡಿ.

ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ) :- ಮಾನ್ಯ ಉಪಾಧ್ಯಕ್ಷರೇ, ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ಬಹಳ ಪ್ರಚಲಿತವಾಗಿ ನಾವು ಶಾಸಕರಾಗಿ ಬರುವುದಕ್ಕೆ ಮೊದಲಿನಿಂದಲೂ ಈ ಬಳ್ಳಾರಿ ಗಣಿಯ ಬಗ್ಗೆ ಬಹಳ ವಿಚಾರಗಳನ್ನು ನಾವು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ. ಇವತ್ತು ಗಣಿ ಧಣಿಗಳು, ಗಣಿ ಧಣಿಗಳು ಎಂದು ಹೇಳಿ ಕೇವಲ ನಮ್ಮ ಪಕ್ಷದ ಕೆಲವು ಮುಖಂಡರನ್ನು ಎತ್ತಿ ತೋರಿಸುವಂತಹ ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಬಳ್ಳಾರಿಯಲ್ಲಿ ಗಣಿ ಕೈಗಾರಿಕೆ 2004ರಿಂದ ಹೆಚ್ಚಾಗಿ ಪ್ರಚಲಿತಕ್ಕೆ ಬಂದಿತು, ಅದಕ್ಕೆ ಕಾರಣ ಬಹುಶ: ಚೈನಾದಲ್ಲಿ ಏನು ವಿಶ್ವ ಒಲಂಪಿಕ್ಸ್ ಆಟ ನಡೆಯಬೇಕಾಗಿತ್ತು, ಅಲ್ಲಿಗೆ ಕಬ್ಬಿಣದ ಅದಿರು ಹೆಚ್ಚಾಗಿ ಬೇಡಿಕೆ ಇದ್ದುದ್ದರಿಂದ, ಇದ್ದಕ್ಕಿದ್ದ ಹಾಗೆ ಅದಕ್ಕೆ ಬೆಲೆ ಬಂದಿತು. ಅಲ್ಲಿಯವರೆಗೂ ಕೂಡ ನಾವ್ಯಾರು ಬಳ್ಳಾರಿ ಕಡೆ ಗಮನವನ್ನು ಹರಿಸಿರಲಿಲ್ಲ. ಕೆಲವರು ಸಂಪಾದನೆ ಮಾಡಿದಾಗ ಅದನ್ನು ಚೆನ್ನಾಗಿ ಖರ್ಚು ಮಾಡುತ್ತಾರೆ, ಅದನ್ನು ಮುಚ್ಚಿಡುವುದಕ್ಕೆ ಹೋಗುವುದಿಲ್ಲ. Income tax

ಇರಬಹುದು, ಚುನಾವಣೆಗಳಲ್ಲಿ ನಾವೇನು affidavit ಕೊಡುತ್ತೇವೆ, ಅದರಲ್ಲಿ ಕೂಡ ಮುಚ್ಚುಮರೆ ಮಾಡಿ ಇಡುವಂತಹ ಬುದ್ಧಿ ಆ ಗಣಿ ಧಣಿಗಳಿಗೆ ಇರಲಿಲ್ಲ. ಅವರು Helicopterಗಳನ್ನು ಅನುಭವಿಸಬೇಕೆಂದು ತೆಗೆದುಕೊಂಡು ಬಿಟ್ಟರು. ಇವತ್ತು ಈ ರಾಜ್ಯದಲ್ಲಿ ರಾಜಕೀಯದ ಬಹಳಷ್ಟು ಜನ helicopter ಗಳನ್ನು ಇಟ್ಟುಕೊಂಡಿರುವುದು ಬಹಳಷ್ಟು ಹಿಂದಿನಿಂದಲೂ ಇರತಕ್ಕಂಥಾದ್ದು ಇದೆ. ಅವರ ಬಗ್ಗೆ ಯಾರೂ ಕೂಡ ಚರ್ಚೆಯನ್ನು ಮಾಡಿರಲಿಲ್ಲ. ಇವತ್ತು ಸತ್ಯಶೋಧನಾ ಸಮಿತಿಯನ್ನು ನಾವು ನೇಮಕ ಮಾಡಿದ್ದೇವೆಂದು ಕಾಂಗ್ರೆಸ್ ಹಿರಿಯ ನಾಯಕರುಗಳು ಹೇಳಿದರು, ಅವರು ಸತ್ಯಶೋಧನೆಯನ್ನು ಕೇವಲ ಗಡಿ ಭಾಗದಲ್ಲಿ ಮಾತ್ರ ಮಾಡಿರುವುದು ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ಸ್ವತಂತ್ರ ಬಂದಾಗಿನಿಂದಲೂ ಅಲ್ಲಿ ಗಣಿ ಕೈಗಾರಿಕೆಗಳು ನಡೆಯುತ್ತಿವೆ. ಕೇವಲ ಗಡಿ ಭಾಗದಲ್ಲಿ ಮಾತ್ರ ಸತ್ಯಶೋಧನಾ ವರದಿಯುನ್ನು ಅವರು ಕೊಟ್ಟಿದ್ದಾರೆ. ಆದರೆ ಇವತ್ತು ಬಳ್ಳಾರಿ ಭಾಗದಲ್ಲಿ ನಡೆಯುತ್ತಿರತಕ್ಕಂಥ ನೂರಕ್ಕೆ 95 ಭಾಗ ಗಣಿಗಾರಿಕೆ ಮಾಡುತ್ತಿರತಕ್ಕಂಥವರು ಕಾಂಗ್ರೆಸ್‌ನ ನಾಯಕರು ಮತ್ತು ಅವರ ಹಿಂಬಾಲಕರು. ಇವತ್ತು ಈ ಒಂದು ವಿಶೇಷ ಅಧಿವೇಶನದ ಸಲುವಾಗಿ ಈ ಬೆಳಗಾವಿಗೆ ಬಂದೆವು, ಈ ಉತ್ತರ ಕರ್ನಾಟಕದ ಜನ ನಮ್ಮ ಉತ್ತರ ಕರ್ನಾಟಕದ ಅಭಿವೃದ್ಧಿಯು ಬಗ್ಗೆ ಮಾತನಾಡುತ್ತಾರೆಂದು ಹೊರಗಡೆಯಿಂದ ಬಂದು ಸದನದಲ್ಲಿ ನಿಂತುಕೊಂಡು ವಾಪಸ್ಸು ಹೋಗುತ್ತಿದ್ದಾರೆ. ನನಗೆ ಕೂಡ ಮೈಯಲ್ಲಿ ಹುಷಾರಿರಲಿಲ್ಲ, ಮಾತ್ರೆ ತೆಗೆದುಕೊಂಡು ಬರಬೇಕೆಂದು ಹೇಳಿದಾಗ ಕೇಳಿದರು, ಸರ್, ನೀವು ಯಾವಾಗ ಗಣಿ ವಿಷಯ ಮುಗಿಸುತ್ತೀರಿ? ನಮ್ಮ ಉತ್ತರ ಕರ್ನಾಟಕದ ವಿಚಾರ ಯಾವಾಗ ಪ್ರಾರಂಭ ಮಾಡುತ್ತೀರಿ? ನೀವು ಬಹಳ ಮಹತ್ವವಾದ ವಿಚಾರಗಳನ್ನು ಚರ್ಚೆ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೆವು ಎಂದು ನಮ್ಮ ಕೆಲವು ಸ್ನೇಹಿತರು ಹೇಳಿದರು. ಇವತ್ತು ಸರ್ಕಲ್‌ಗಳಲ್ಲಿ ಹಾವು-ಮುಂಗಸಿ ಆಟ ಆಡಿಸುತ್ತಾರ. ಅಲ್ಲಿ ಆಟ ಆಡಿಸುವವನು ಇನ್ನು ಸ್ವಲ್ಪ ಹೊತ್ತಿಗೆ ಹಾವು-ಮುಂಗಸಿ ಜಗಳ ಬಿಡುತ್ತೇನೆ ನೋಡಿ, ನೋಡಿ ಎಂದು ಹೇಳುತ್ತಿರುತ್ತಾನೆ, ಅದಕ್ಕೆ ಜನ ಕೂಡ ಕಾಯುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ ಹಾವು-ಮುಂಗಸಿಯನ್ನು ಜಗಳಕ್ಕೆ ಬಿಡಲಿಲ್ಲ, ಕೊನೆಗೆ ಅವನು ಬುಟ್ಟಿಯಲ್ಲಿ ಹಾಕಿಕೊಂಡು ಹೋದ. ಇವತ್ತು ಗಣಿಗಾರಿಕೆ ವಿಚಾರದಲ್ಲಿ ಸಮಯವನ್ನು ವ್ಯರ್ಥ ಮಾಡಿಕೊಂಡು ಚರ್ಚೆ ಏನು ಮಾಡುತ್ತಿದ್ದೇವೋ ಕೊನೆಗೆ ಆಗತಕ್ಕಂಥಾದ್ದು ಕೂಡ

ಅದೇ. ಇವತ್ತು ಸತ್ಯಶೋಧನಾ ಸಮಿತಿ ವರದಿಯನ್ನು ಕೊಟ್ಟಿದೆ ಎಂದು ಬಹಳ ಗಹನವಾಗಿ ಚರ್ಚೆ ನಡೆಯಿತು. ಬಹುಶಃ ಅವರು ಏನಾದರೂ ಬಹಳ ಒಳ್ಳೆಯ ವರದಿಯನ್ನು ಕೊಟ್ಟಿದ್ದರೆ, ಇವತ್ತು ನಮ್ಮ ಗಡಿ ಭಾಗದಲ್ಲಿ ಇರುವವರಿಗೆ ಅನೇಕರಿಗೆ ಗಡಿ ಸಮಸ್ಯೆ ಇದೆ. ಅದು ಬಾಂಗ್ಲಾ ಇರಬಹುದು, ಕಾಶ್ಮೀರದಲ್ಲಿ ಇರಬಹುದು, ದಯವಿಟ್ಟು ಆ ಸತ್ಯಶೋಧನಾ ಸಮಿತಿಯನ್ನು ಅಲ್ಲಿಗೂ ಕಳುಹಿಸಿದರೆ, ಅಲ್ಲೂ ಕೂಡ ಸಮಸ್ಯೆಯನ್ನು ಬಗೆಹರಿಸತಕ್ಕಂಥ ವಿಚಾರದಲ್ಲಿ ಗಮನ ಹರಿಸುವಂತಹ ಕೆಲಸವಾಗುತ್ತದೆ. ಸ್ನೇಹಿತರೇ, ನನಗೆ ಅನುಭವ ಬಹಳ ಕಡಿಮೆ ಇದೆ. ಆದರೂ ಕೂಡ ಇವತ್ತು ನನಗೆ ಸಂಕಟ ಆಗುತ್ತಿರತಕ್ಕಂಥಾದ್ದು, ಇವತ್ತು ಕೇವಲ ಬಳ್ಳಾರಿಗೆ ಸೀಮಿತವಾಗಿ ಅಕ್ರಮ ಗಣಿಗಾರಿಕೆ ಬಗ್ಗೆ ಚರ್ಚೆಯಾಗುತ್ತಿದ್ದು, ಮಾನ್ಯ ಜಯಚಂದ್ರರವರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. ಅದರಲ್ಲಿ ಅಕ್ರಮ ಗಣಿಗಾರಿಕೆ ಇದೆ, ಸಕ್ರಮ ಗಣಿಗಾರಿಕೆ ಕೂಡ ಇದೆ. ಇದು ಭಾರತೀಯ ಜನತಾ ಪಾರ್ಟಿಯ ಕೂಸಲ್ಲ. ಇವತ್ತು ಅವರು ಹೆದರಿಕೊಳ್ಳಬೇಡಿ, CBIಗೆ ಕೊಡಿ ಎಂದು ಹೇಳಿದರು. ನಮ್ಮ ಮಾನ್ಯ ಯಡಿಯೂರಪ್ಪನವರು ಒಬ್ಬರೇ ಶಾಸಕರಾಗಿ ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಕೂಡ ಹೆದರಲಿಲ್ಲ. ಇವತ್ತು ಅಂತಹವರ ನಾಯಕತ್ವದಲ್ಲಿ 115 ಜನ ಇದ್ದಾಗ ಇವತ್ತು ಹೆದರುವಂತಹ ಪ್ರಶ್ನೆ ಕೂಡ ಇಲ್ಲ. ಇವತ್ತು ಸಿದ್ಧಾಂತದಲ್ಲಿ ಬಂದಿರತಕ್ಕಂಥ ಪಕ್ಷ ನಮ್ಮದು. ಇವತ್ತು ಗಣಿ ವಿಚಾರದಲ್ಲಿ ಕೇವಲ ಬಳ್ಳಾರಿಗೆ ಸಂಬಂದಪಟ್ಟ ಹಾಗೆ ಯಾರನ್ನು target ಮಾಡಿಕೊಂಡು ಮಾತನಾಡುತ್ತಿದ್ದಾರೆನ್ನುವ ವಿಚಾರವನ್ನು ನಾವು ನೋಡುತ್ತಿದ್ದೇವೆ. ಇವತ್ತು ಚಾಮರಾಜನಗರದಲ್ಲಿ 19 ಖನಿಜಗಳ ಗಣಿಗಾರಿಕೆ ನಡೆಯುತ್ತಿದೆ. ಆರರಿಂದ ಏಳು ಗ್ರಾನೈಟ್‌ಗೆ ಸಂಬಂಧಪಟ್ಟ ಗಣಿಗಾರಿಕೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ನಾನು ಒಂದೆರಡು ಜಿಲ್ಲೆಗಳನ್ನು ಉದಾಹರಣೆ ಕೊಡುತ್ತೇನೆ. ಚಾಮರಾಜನಗರದಲ್ಲಿ black galaxy ಎಂದು ಕಪ್ಪು ಕಲ್ಲು ಸಿಗುತ್ತದೆ, ಅದು ಬಹಳ ಬೆಲೆ ಬಾಳುವಂಥಾದ್ದು. ಅಲ್ಲಿ ಅಕ್ರಮವಾಗಿ ಗಣಿ ಕೈಗಾರಿಕೆ ನಡೆದಿದ್ದು ಯಾರ ಕಾಲದಲ್ಲಿ? ಬಹುಶಃ ವೀರಪ್ಪನ್ ಇಲ್ಲ ಎಂದಿದ್ದರೆ, ಅಲ್ಲಿ ವೀರಪ್ಪನ್ ಇದ್ದಾನೆ ಎನ್ನುವ ಭಯಕ್ಕೋಸ್ಕರ ಗಣಿಗಾರಿಕೆಯನ್ನು ನಿಲ್ಲಿಸಿದರು. ಚಾಮರಾಜನಗರದಲ್ಲಿ ಕೂಡ ಇವತ್ತು ಅರಣ್ಯವನ್ನು ಒತ್ತುವರಿ ಮಾಡಿ ಗಣಿ ಕೈಗಾರಿಕೆಯನ್ನು ಮಾಡುವುದಕ್ಕೆ ಬೆಂಬಲ ಕೊಟ್ಟಂತಹ ಪಕ್ಷ ಯಾವುದು? ಇವತ್ತು ಅವರೇ ಮಾತನಾಡುತ್ತಿದ್ದಾರೆ. ಮಾಗಡಿ ತಾಲ್ಲೂಕು ಇರಬಹುದು, ರಾಮನಗರ

ಇರಬಹುದು, ಹಾಸನದಲ್ಲಿ ಕೂಡ ಬಹಳ ಬೆಲೆ ಬಾಳುವಂತಹ ಹಸಿರು ಕಲ್ಲು ಸಿಗುತ್ತದೆ. ಇವತ್ತು ಅಲ್ಲಿ 20,000 ಲಾರಿಗಳು ಓಡಾಡುತ್ತವೆ ಎಂದು ಹೇಳಿದರು. ಬಹುಶ: ಅಲ್ಲಿ ಕೂಡ ಬಹಳ ಹಿಂದಿನಿಂದ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಜೊತೆಗೆ ಮರಳು ಲಾರಿಗಳು ಕೂಡ ಬರುತ್ತಿವೆ. ಹೊಳೆನರಸೀಪುರದ ಮರಳು ಎಂದರೆ ಬಹಳ ಪ್ರಸಿದ್ಧಿ. ಮೊನ್ನೆ ತಹಶೀಲ್ದಾರ್‌ರವರು ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದಾರೆಂದು ತಡೆಯುವುದಕ್ಕೆ ಹೋದಾಗ, ಅವರ ಮೇಲೆ JCBಯನ್ನು ಹೊಡೆದು ಅವರನ್ನು ಕೊಲೆ ಮಾಡುವಂತಹ ಪ್ರಯತ್ನವನ್ನು ಮಾಡಿದರು. ಇದರ ಹಿಂದೆ ಯಾರಿದ್ದಾರೆಂದು ಕೂಡ ತನಿಖೆ ಮಾಡಬೇಕಾಗುತ್ತದೆ. ಹೊಳೆನರಸೀಪುರ ಎಂದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಹೊಳೆನರಸೀಪುರ ಎಂದರೆ ಮಾನ್ಯ ರೇವಣ್ಣನವರ ಬಗ್ಗೆಯಾಗಲಿ, ಇನ್ನೊಬ್ಬರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ಇವತ್ತು ನಾನು ಮನೆಯನ್ನು ಕಟ್ಟಿಸಬೇಕೆಂದಾಗ contractor ಸಾರ್, ಹೊಳೆ ನರಸೀಪುರದ ಮರಳು ಬಹಳ ಚೆನ್ನಾಗಿ ಬೆಳ್ಳಗೆ ಇರುತ್ತದೆಂದು ಹೇಳಿದರು. ಅದು 13,000 ರೂಪಾಯಿ ಒಂದು load. ಅರ್ಕಾವತಿ ನದಿ ಹೆಸರುಘಟ್ಟ ಮೂಲದಿಂದ ಬರುತ್ತಿತ್ತು. ನಂದಿಬೆಟ್ಟದಿಂದ ಪ್ರಾರಂಭವಾಗಿರುವಂತಹ ಅರ್ಕಾವತಿ ನದಿ, ಇವತ್ತು ಹೇಳುವುದಕ್ಕೆ ಹೆಸರು ಇಲ್ಲದಾಗಿದೆ. ಕಾರಣವೇನೆಂದರೆ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡಿ ನದಿಯನ್ನು ಪೂರ್ಣವಾಗಿ ನಾಶ ಮಾಡಿರತಕ್ಕಂಥವರು, ಇಲ್ಲಿಯವರೆಗೂ ಅಧಿಕಾರ ಮಾಡಿದಂತಹ, ಈಗ ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂತಹ ನಾಯಕರು. ಇವತ್ತು ಸತ್ಯಶೋಧನಾ ಸಮಿತಿ ಪರಿಶೀಲನೆ ಮಾಡಬೇಕಾಗಿರುವುದು ಬಳ್ಳಾರಿಯಲ್ಲಿ ಮಾತ್ರ ಅಲ್ಲ. 50-60 ವರ್ಷದಿಂದ ಇಡೀ ರಾಜ್ಯವನ್ನು ಲೂಟಿ ಮಾಡಿದ್ದಾರೆ. 40% ಇದ್ದಂತಹ ಅರಣ್ಯ ಇವತ್ತು 19% ಬಂದು ನಿಂತಿರುವುದಕ್ಕೆ ಕಾರಣಕರ್ತರು ಎಂದರೆ ಇಲ್ಲಿಯವರೆಗೂ ಅಧಿಕಾರ ನಡೆಸಿದಂತಹ ಕಾಂಗ್ರೆಸ್ ನಾಯಕರುಗಳು. ಇದೂ ಕೂಡ ತನಿಖೆಯಾಗಬೇಕು. ಇವತ್ತು ಲೋಕಾಯುಕ್ತದವರು ಏನು ಒಂದು ವರದಿಯನ್ನು ಕೊಡುತ್ತಿದ್ದಾರೆ, ಅದರ ಬಗ್ಗೆ ನಮ್ಮದು ಯಾವುದೇ ತಕರಾರಿಲ್ಲ. ಆಗಲೇ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಆಂಧ್ರದ ಗಡಿಯಿಂದಲೇ ಒತ್ತುವರಿಯಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಸರ್ಕಾರ ಇದೆ, ಇದರ ಬಗ್ಗೆ ಯಾವುದೇ ರೀತಿಯಾದಂತಹ ತನಿಖೆ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಈ ರೀತಿ ಗಣಿ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದ್ದು, ಇವತ್ತು ನಮ್ಮ ಉತ್ತರ

ಕರ್ನಾಟಕದ ಜನ ಆಶಾಭಾವನೆಯಿಂದ ನಮ್ಮ ಕಡೆ ನೋಡುತ್ತಿದ್ದಾರೆ. ನಾವು ಕೂಡ ಬೆಂಗಳೂರಿನಿಂದ ಇಲ್ಲಿಯವರೆಗೆ ಬಂದು ಈ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಸುತ್ತಿರತಕ್ಕಂಥಾದ್ದು, ಈ ಭಾಗದಲ್ಲಿ ಅಭಿವೃದ್ಧಿಯಾಗಬೇಕೆಂದು. ಅದು ಬಿಟ್ಟು ಎರಡು-ಮೂರು ದಿವಸ ಕೇವಲ ಗಣಿ ಚರ್ಚೆಗೋಸ್ಕರ ಮೀಸಲಾಗಿಟ್ಟುಕೊಂಡು ಯಾರನ್ನು target ಮಾಡುವುದಕ್ಕೋಸ್ಕರ ಮಾಡುತ್ತಿದ್ದಾರೆ, ಅದಕ್ಕೆ ಇದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ಸ್ವಾತಂತ್ರ್ಯ ಬಂದಾಗಿನಿಂದ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) :- ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಕಳೆದ ವಿಧಾನಸಭೆಯ ಸದಸ್ಯನಾಗಿದ್ದಾಗಲೂ ಸಹ ಅಕ್ರಮ ಗಣಿಗಾರಿಕೆ ಇರಬಹುದು ಅಥವಾ ಕಪ್ಪ ಕಾಣಿಕೆ ವಿಚಾರದಲ್ಲಿ ವಿಧಾನಸಭೆಯಲ್ಲಿ ಚರ್ಚೆಯಾಗಿದ್ದು, ಈಗಲೂ ಚರ್ಚೆಯಾಗುತ್ತಿದೆ. ಈಗ ಮಾತನಾಡುವಾಗ ಒಬ್ಬ ಸದಸ್ಯರು ಹೇಳುತ್ತಿದ್ದರು.

ಮಾನ್ಯ ಸದಸ್ಯರೊಬ್ಬರು ಈಗ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಇದು ಯಾರ ಪಾಪದ ಕೂಸೋ ಗೊತ್ತಿಲ್ಲ, ಆದರೆ ಕರ್ನಾಟಕಕ್ಕೆ ಬೇಡವಾದ ಕೂಸಾಗಿದೆ. ಇಲ್ಲಿ ಎಲ್ಲೋ ಒಂದು ಸಂಶಯ ಬರುತ್ತಿದೆ, ಸಂದೇಹ ಬರುತ್ತಿದೆ ಎಂಬ ಮಾತನ್ನು ಹೇಳಿದರು. ನಾನು ಅದನ್ನು ಸ್ವಾಗತಿಸುತ್ತೇನೆ. ಅದಕ್ಕೆ ನಾವೆಲ್ಲಾ ಸಾಕ್ಷಿಯಾಗುವುದಕ್ಕೆ ತಯಾರಿಲ್ಲ. ಈ ಒಂದು ವಿಧಾನಸಭೆಗೆ ನಾವೆಲ್ಲಾ ಆಯ್ಕೆಯಾಗಿದ್ದೇವೆ. ಈ 224 ಜನ ಶಾಸಕರುಗಳು ಸಹ ಈ ಒಂದು ರಾಜ್ಯದ ನೆಲ, ಜಲ, ಮತ್ತು ಅದಿರು ಇರಬಹುದು, ಅದರ moral trustees ನೈತಿಕ ದತ್ತಿಗಳು ನಾವು ಇದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇತ್ತೀಚಿನ ಸಭೆಯಲಿ ಮಾತನಾಡುವ ಸಂದರ್ಭದಲ್ಲಿ ಹೇಳಿದರು, ಗಡಿಯಾಗಲಿ, ನೆಲವಾಗಲಿ, ಜಲವಾಗಲಿ, ಒಂದು ಇಂಚು ಅವುಗಳನ್ನು ಒತ್ತುವರಿ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ನನ್ನ ನೇತೃತ್ವದಲ್ಲಿ ಮಾಡುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ನಾನು ಇದನ್ನು ಖಂಡಿತವಾಗಿಯೂ ಸ್ವಾಗತಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಈ ಸದನದ ಮುಖೇನ ಇಡೀ ರಾಜ್ಯದ ಜನತೆ, ಇಡೀ ರಾಷ್ಟ್ರದ ಜನತೆ, ಈ ಒಂದು ವ್ಯವಸ್ಥೆಯಲ್ಲಿ ಎರಡು ವರ್ಗದ ಜನರು ಇರುತ್ತಾರೆ. ಒಂದು dealers, ಇನ್ನೊಂದು leaders, cum

dealers + leaders ಇರುತ್ತಾರೆ. ಅವರು ಮಾಡುವಂಥ ಪಾಪದ ಕೂಸಿಗೆ ನಾವು ಸಾಕ್ಷಿಯಾಗಬೇಕಾ ಎಂದು ನಾವು ಇದು ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ. ಆಂಧ್ರ ಪ್ರದೇಶ ಮತ್ತು ಕರ್ನಾಟಕ ಈ ಎರಡೂ ರಾಜ್ಯಗಳ ನಡುವೆ ಇರುವಂಥ ಗಡಿ ಪ್ರದೇಶದಲ್ಲಿ ಒತ್ತುವರಿಯಾಗಿದೆಯೆಂದು ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಜನಾರ್ಧನ ರೆಡ್ಡಿಯವರು, ಮಾನ್ಯ ಕರುಣಾಕರ ರೆಡ್ಡಿಯವರು ಅವರ ಕುಟುಂಬದ ಮೇಲೆ ಅಪಾದನೆ ಬಂದಿದೆಯೆಂದು ಹೇಳುತ್ತಿದ್ದಾರೆ. ಈ ದೇಶದಲ್ಲಿ ಎಲ್ಲರಿಗೂ ಸಂವಿಧಾನಿಕವಾಗಿ ವ್ಯಾಪಾರ ಮಾಡುವುದಕ್ಕೆ ಹಕ್ಕು ಇದೆ. ಆದರೆ ಒಂದು ವಿಷಯುವೇನೆಂದರೆ ಗಡಿ ಪ್ರಶ್ನೆ ಬಂದಾಗ, ಎಲ್ಲೋ ಒಂದು ರೀತಿಯಾಗಿ ಭಾವನಾತ್ಮಕವಾಗಿ ಯಾರೋ ಒಬ್ಬ ವ್ಯಾಪಾರಿಯಿಂದ ಒತ್ತುವರಿಯಾಗಿದೆಯೆಂದು ಇಡೀ ರಾಜ್ಯ ನೋಡುತ್ತಾ ಇದೆ. ಈ ಸದನದಲ್ಲಿ ಇದು ಸಿ.ಬಿ.ಐ. ತನಿಖೆ ಏಕೆ ಆಗಬೇಕೆನ್ನುವುದಕ್ಕೆ ಈ ರಾಜ್ಯ ರಾಜ್ಯಗಳ ನಡುವೆ, ಇಲ್ಲಿ ಕೇಂದ್ರದಲ್ಲೂ ಸಹ ಜಾಣ ಮೌನವನ್ನು ಏಕೆ ವಹಿಸಿದ್ದಾರೆನ್ನುವಂಥಾದ್ದು ಒಂದು ಪ್ರಶ್ನೆಯಾಗಿದೆ. ಇಲ್ಲಿ dealers ಮತ್ತು leaders ಎನ್ನುವಂಥಾದ್ದು, ಇಲ್ಲಿ ವ್ಯಾಪಾರಿಗಳು ಎಲ್ಲವನ್ನೂ manage ಮಾಡುವಂಥ ವ್ಯವಸ್ಥೆ ಇದೆ. ವ್ಯಾಪಾರಿಗಳೆಂದರೆ ಅಕ್ರಮ ಇರಬಹುದು, ಅಥವಾ ಅವರು ಅದಿರನ್ನು ತೆಗೆದುಕೊಳ್ಳುವುದಕ್ಕೆ ಒತ್ತುವರಿಯನ್ನು ಮಾಡುವಂಥಾದ್ದು ಇರಬಹುದು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದು ಯಾವುದೇ ಸಚಿವರಿಗೆ ನೋವಾಗುವಂಥಾದ್ದಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಸತ್ಯ ಗೊತ್ತಾಗಬೇಕು, ಈ ನಾಡಿಗೆ ಗೊತ್ತಾಗಬೇಕು. ಅವರು 2007ರಲ್ಲಿ ಅಷ್ಟೇ ನಾವು ಓಬಳಾಪುರದ ಗಡಿಯನ್ನು ತೆಗೆದುಕೊಂಡಿದ್ದೆಂದು ಹೇಳಿದರು. ನಾವು ಅದನ್ನು ಸ್ವಾಗತಿಸೋಣ. ಆದರೆ ಈ ಗಣಿ ಪ್ರದೇಶ ಒತ್ತುವರಿಯಾಗಿದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ ಎನ್ನುವಂಥಾದ್ದು. ಇಲ್ಲಿ ಮೇಲ್ನೋಟಕ್ಕೆ ಬಂದಂಥ ಅಂಶಗಳ ಪ್ರಕಾರವಾಗಿ ಬಾಂಡ್ ಅಗಲಿ, ಅಥವಾ ಒತ್ತುವರಿಯಾಗಿದೆಯೆಂಬ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ ಇದು ತನಿಖೆಯಾಗಲೇ ಬೇಕು. ಇದನ್ನು ಯಾರು ಹೇಳಬೇಕು? ಮಾನ್ಯ ಎಂ.ವೈ.ಘೋರ್ಪಡೆಯವರು ಇದ್ದಾಗ ಹಲವಾರು ಬಾರಿ ಸಂಡೂರು ಮತ್ತು ಅವರ ಕ್ಷೇತ್ರದಲ್ಲಿ ನಾನು ಅವರ ಜೊತೆಯಲ್ಲಿ ಪರ್ಯಟನೆ ಮಾಡಿದ್ದೇನೆ. ನಮ್ಮ ಪೂರ್ವಿಕರು ಇದ್ದಾಗ ಕಂಪ್ಲಿ sugar factory ಇದ್ದಾಗ, ಆಗ ಅಲ್ಲಿ ನಮ್ಮ ಮುತ್ತಾತನವರು ಇದ್ದರು. ಗಣಿ ಎಂದು ಏನು ಇದೆ, ಆ ಪ್ರದೇಶದಲ್ಲಿ ಈ ಒಂದು

ನೆಪದಲ್ಲಿ ಈ ರಾಜ್ಯದ ಬೊಕ್ಕಸಕ್ಕೆ ಒಂದು ರೀತಿಯಲ್ಲಿ ನಷ್ಟವಾಗುತ್ತಿದೆ ಏನೋ ಎಂದು ಅನಿಸುತ್ತದೆ. ಈಗಷ್ಟೇ ಮಾನ್ಯ ವಿಶ್ವನಾಥ್‌ರವರು ಒಂದು ಮಾತನ್ನು ಹೇಳಿದರು ಉತ್ತರ ಕರ್ನಾಟಕದ ಜನ ಇಲ್ಲಿ ಒಳ್ಳೆಯ ಯೋಜನೆಗಳು ಆಗಬೇಕು ಮತ್ತು ಉತ್ತರ ಕರ್ನಾಟಕ ಬಗ್ಗೆ ಹೆಚ್ಚು ಮಾತನಾಡಬೇಕು, ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಬೇಕಾದರೆ, ಅಭಿವೃದ್ಧಿ ಮಾಡಬೇಕಾದರೆ, ಇದು ಒಂದು ಮೂಲವಾಗಿದೆ. ಈ ಮೂಲದ ಬಗ್ಗೆಯೂ ಚಿಂತನೆ ಮಾಡಬೇಕು. ಯಾರೋ ಕೆಲವೆರಡು ವರ್ಷಗಳಿಂದ ಆಗರ್ಭ ಶ್ರೀಮಂತರಾಗುವುದಾದರೆ, ಈ ರಾಜ್ಯ ಏಕೆ ಬಡತನದ ಬೇಗೆಯಿಂದ ಬೇಯುತ್ತಿದೆ ಎನ್ನುವಂಥ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಇದು ಅಕ್ರಮವೋ, ಸಕ್ರಮವೋ, ಎನ್ನುವಂಥಾದ್ದು ಗೊತ್ತಾಗಬೇಕೆಂದರೆ, ಪಾರದರ್ಶಕವಾಗಿ ಒಬ್ಬ ಸಚಿವರಾಗಿದ್ದಂಥವರು ಹಿಂದೆ ಮಾನ್ಯ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಇದ್ದಂಥ ಇತಿಹಾಸವಿದೆ. ಇತಿಹಾಸದ ಹಿಂದಿನ ಪುಟಗಳನ್ನು ತೆಗೆದು ನೋಡಿದಾಗ, ತನ್ನ ಮೇಲೆ ಅಪಾದನೆ ಬಂದಾಗ ರಾಜೀನಾಮೆ ಕೊಟ್ಟು, ನಾನು ತನಿಖೆಗೆ ಸಿದ್ಧವೆಂದು ಹೇಳಿದಂಥಾದ್ದು. ಸನ್ಮಾನ್ಯ ಸಚಿವರೇ ಏಕೆ ಹೆದರಿಕೊಳ್ಳಬೇಕು? ದಯವಿಟ್ಟು ಮುಕ್ತವಾಗಲಿ, ಈ ದೋಷಾರೋಪದಿಂದ ಮುಕ್ತರಾಗಲಿಯೆಂಬುದು ನಮ್ಮ ಬಯಕೆಯಾಗಿದೆ. ಈ ದೋಷಾರೋಪದಿಂದ ಮುಕ್ತವಾದರೆ, ನನಗೆ ಈ ಸಂದರ್ಭದಲ್ಲಿ ಒಂದು ಮಾತು ನೆನಪಾಗುತ್ತದೆ.

"ಬಿಚ್ಚು ನುಡಿವ ಮನಕೆ, ಮುಚ್ಚುಮರೆ ಏತಕೆ?
ಬಿಚ್ಚಿಡು ಎಲ್ಲವನು, ಆತ್ಮ ಸಾಕ್ಷಿಯ ಮುಂದೆ,
ನಿನ್ನ ತಪ್ಪಿಗೆ ನೀನು ನೊಂದುಕೊಂಡರೆ ಶಿಕ್ಷೆ ಏತಕೆ? ಎಂದು

ಒಬ್ಬ ಕವಿ ಹೇಳುತ್ತಾರೆ. ಯಾರಲ್ಲಿ ಪಾಪ ಪ್ರಜ್ಞೆ ಇರುತ್ತದೆ. ಅವರಿಗೆ ಅವರಿಗೆ ಅಳುಕು ಇರುತ್ತದೆ. ಇದು ಬಹಳ ಮುಖ್ಯವಾಗಿರುವಂಥಾದ್ದು. ನಮಗೆ ಸ್ವಾತಂತ್ರ್ಯ ಬಂದು 61 ವರ್ಷಗಳಾಗಿವೆ. ನಾನು ಹೇಳುವುದೆನೆಂದರೆ ಎಲ್ಲರೂ ಗಣಿಗಾರಿಕೆಯನ್ನು ಮಾಡಬಹುದು. ಇವತ್ತು ಸಂವಿಧಾನಿಕವಾಗಿ ಗಣಿಗೆ ಅನುಮತಿಯನ್ನು ಕೊಟ್ಟ ಮೇಲೆ ಗಣಿಗಾರಿಕೆಯನ್ನು ಮಾಡಬಹುದು. ಆದರೆ ಅಕ್ರಮವಾಗಿ store ಮಾಡುವಂಥಾದ್ದು, ಒತ್ತುವರಿ ಮಾಡುವಂಥಾದ್ದು, ಬೆದರಿಕೆ ಹಾಕುವಂಥಾದ್ದು, ಈ ಬೆದರಿಕೆಯನ್ನು ಹಾಕಿ ಒಕ್ಕಲೆಬ್ಬಿಸುವಂಥಾದ್ದು,

ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಅಧಿಕಾರಿಗಳನ್ನು ಉಪಯೋಗಿಸಿಕೊಂಡು, ಕಪಿಮುಷ್ಠಿಯಲ್ಲಿಟ್ಟುಕೊಂಡು, ಆ ಒಂದು ಭಯಾನಕ ವಾತಾವರಣವನ್ನು ಸೃಷ್ಟಿ ಮಾಡಿ, ಎಲ್ಲರನ್ನೂ ಒಕ್ಕಲೆಬ್ಬಿಸುವಂಥಾದ್ದು ಖಂಡಿತವಾಗಿ ಯಾೂ ಸರಿಯಲ್ಲ. Karnataka is a showcase of minerals ಎಂದು ಹೇಳುತ್ತಾರೆ. ಅಗಲೇ ಒಬ್ಬ ಗೆಳೆಯರು ಮಾತನಾಡುವಾಗ ಹೇಳುತ್ತಿದ್ದರು. ಈ minerals ಅನ್ನು product ಆಗಿ ಮಾಡಿ, export ಮಾಡಿದರೆ ಖಂಡಿತವಾಗಿ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗ ುತ್ತದೆಂದು ಹೇಳಿದರು. ಇದು ಖಂಡಿತವಾಗಿಯೂ ಸತ್ಯವಾದದ್ದು. ಒಂದು shaving blade ತೆಗೆದುಕೊಳ್ಳಬೇಕೆಂದರೆ 120 ರೂ.ಗಳಿಂದ 5 ರೂ., 10 ರೂ.ಗಳಾಗುತ್ತದೆ. ಕಬ್ಬಿಣವನ್ನು export ಮಾಡುವುದರಿಂದ ಗೊತ್ತಾಗುತ್ತದೆ, ಕಬ್ಬಿಣದಿಂದ products ಮಾಡುವಂಥಾದ್ದು. ನಾವು products ಅನ್ನು ಮಾಡುವ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕಾಗುತ್ತದೆ. ಈ ದಿಕ್ಕಿನಲ್ಲಿ ರಾಜ್ಯದಲ್ಲಿ ಆಗಿರುವಂಥ ಗಣಿಯ ಮೇಲೆ ಬಂದಿರುವ ಅಪಾದನೆಗೆ ಖಂಡಿತವಾಗಿಯೂ ನಾವು ಸಾಕ್ಷಿಯಾಗುವುದಕ್ಕೆ ತಯಾರಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, 32 ಕಿ.ಮೀ. ಒತ್ತುವರಿಯಾಗಿದೆ, ಸುಮಾರು ಸಮುದ್ರ ತಳದಿಂದ ಸುಮಾರು 971 ಮೀಟರ್ ಎತ್ತರ ಮತ್ತು 0.5 ಕಿ.ಮೀ. ಅಗಲ ಒತ್ತುವರಿಯಾಗಿದೆ. ದಯವಿಟ್ಟು ಇದು ತನಿಖೆಯಾಗಬೇಕು, ಮೂಕ ಪ್ರೇಕ್ಷಕರಾಗಿ ಕುಳಿತುಕೊಳ್ಳುವುದಕ್ಕೆ ನಾವ್ಯಾರು ತಯಾರಾಗಿಲ್ಲ. ಕರ್ನಾಟದ ಗಡಿ zero Zone ಎಂದು ಸಮುದ್ರದಲ್ಲಿ ನಾವು ಹೇಗೆ ಹೇಳುತ್ತೇವೆಯೋ, ಅಥವಾ no man's land ಎಂದು ಹೇಗೆ ಹೇಳುತ್ತೇವೆಯೋ, ಅದು ಆಂಧ್ರವಾಗಲಿ, ಕರ್ನಾಟಕವಾಗಲಿ, ಇಲ್ಲಿ ಯಾವುದೇ ರೀತಿಯಲ್ಲಿ ಗಣಿಗಾರಿಕೆಗೆ ಅವಕಾಶವನ್ನು ಕೊಡಬಾರದು. ಈಗಾಗಲೇ ಲೋಕಾಯುಕ್ತರ ವರದಿ ಏನು ಬಂದಿದೆ. ಇನ್ನೊಂದು ವಿಷಯವನ್ನು ಹೇಳುವುದೇನೆಂದರೆ environment impact assessment ಎನ್ನುವಂಥಾದ್ದು, ಬಳ್ಳಾರಿಯಲ್ಲೇ ಇರಬೇಕು. ಎಲ್ಲೋ ದೆಹಲಿಯಲ್ಲಿ ಕುಳಿತುಕೊಂಡು ಇದರಿಂದ ಆಗುವಂತಹ ದುಷ್ಪರಿಣಾಮಗಳು ಅದು ಪರಿಸರದ ಮೇಲೆ, ನಿಸರ್ಗದ ಮೇಲೆ, ಜನ ಸಂಪತ್ತಿನ ಮೇಲೆ, ಪಕ್ಷಿ ಸಂಕುಲಗಳ ಮೇಲೆ, ಸಸ್ಯ ಸಂಕುಲಗಳ ಮೇಲೆ, ಆಗುವಂಥ impact ಅನ್ನು ಖಂಡಿತವಾಗಿ ನಾವು ಭರಿಸುವುದಕ್ಕೆ

ಸಾಧ್ಯವಾಗುವುದಿಲ್ಲ. ಇದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಕೆಲವೇ ಜನ ಶ್ರೀಮಂತರಾಗುವುದಕ್ಕೋಸ್ಕರ ಈ ನಾಡಿನ ಸಂಪತ್ತನ್ನು ಎಲ್ಲೊ ಒಂದು ಕಡೆ ನಾವು ಒತ್ತೆ ಇಡುತ್ತಿದ್ದೇವಲ್ಲಾ ಎಂದು ನೋವಾಗುತ್ತದೆ. ಈ ಸಂದರ್ಭದಲ್ಲಿ ಹಲವಾರು ಜನ ಗೆಳೆಯರು ಮಾತನಾಡಿದರು. ನಾನು ಬಹಳ ನೊಂದು ಹೇಳುತ್ತೇನೆ. ನಾನು ಇರುವಂಥಾದ್ದನ್ನು sample ಆಗಿ ಹೇಳುತ್ತಿದ್ದೇನೆ. ಇದು ಬಹಳ ತಪ್ಪು, ಎಲ್ಲೊ ಒಂದು ಕಡೆ ಜನ "ಬೇಲಿಯೇ ಎದ್ದು ಹೊಲ ಮೇಯುತ್ತಿದೆ" ಎಂದು ಹೇಳುತ್ತಾರೆ. ಶಾಸಕರು ಎಂದು ಹೇಳಿದರೆ, ಮಂತ್ರಿಗಳೆಂದು ಹೇಳಿದರೆ, ಎಲ್ಲೋ ಒಂದು ಕಡೆ ತಪ್ಪು ಭಾವನೆಯಲ್ಲಿ ನೋಡುವಂಥ ಕಳಂಕ ರಹಿತರಾಗಬೇಕಾದರೆ ಮುಕ್ತವಾಗಿ ತನಿಖೆಗೆ ತಯಾರಾಗಿದ್ದೇವೆಂದು ಹೇಳಿ ಮಾನ್ಯ ರೇವಣ್ಣನವರು ಹೇಳಿದರು. ನಾನು ಅದನ್ನು ಸ್ವಾಗತಿಸುತ್ತೇನೆ, ಅದು ಗಂಡಸುತನ, ಅದು ಗುಂಡಿಗೆ, ಆ ರೀತಿಯಾಗಿ ಬಂದರೆ ಖಂಡಿತವಾಗಿ ಜನ ನಮ್ಮನ್ನು ಸ್ವಾಗತಿಸುತ್ತಾರೆ. ನಾವು ಏನು ತಪ್ಪು ಮಾಡಿದ್ದೇವೆ, ಜನತೆಯ ಮುಂದೆ ನಾವು ಹೋಗುತ್ತೇವೆನ್ನುವಂಥಾದ್ದು, ನಿಜವಾಗಿಯೂ ಸ್ವಾಗತಾರ್ಹ. ನಾನು ಒಂದು ಮಾತನ್ನು ಹೇಳುವುದೇನೆಂದರೆ ಅಧಿಕಾರಿಯೊಬ್ಬರನ್ನು ಇವತ್ತು ವರ್ಗಾವಣೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು demoralizing the good officer, ಇದು ಸಹ ನಾವು ಅಕ್ರಮಕ್ಕೆ ಬೆಂಬಲ ಕೊಟ್ಟ ಹಾಗೆ ಆಗುತ್ತದೆ. ಅದಕ್ಕೆ ಸಹಿ ಹಾಕಿದ್ದಾರೋ ಇಲ್ಲವೋ ಎಂಬುದು ಸದ್ಯದಲ್ಲೇ ಗೊತ್ತಾಗುತ್ತದೆ. ಎಲ್ಲೋ ಒಂದು ಕಡೆ ಪೂರ್ವಾಗ್ರಹಪೀಡಿತವಾಗಿ, ಯಾರದೋ ಕಪಿಮುಷ್ಠಿಯಲ್ಲಿ, ಯಾರದೋ ಒತ್ತಡಕ್ಕೆ, ಈ ರಾಜ್ಯದ ಬೊಕ್ಕಸವನ್ನು ಅಥವಾ ಅಧಿಕಾರಕ್ಕೋಸ್ಕರ, ಅಗಲೇ ಮಾತನಾಡುವಾಗ ಕುರ್ಚಿ ಬೇಕೋ, ಸಿಟ್ಟು ಬೇಕೋ, ಎಂದು ಬಹಳ ಚೆನ್ನಾಗಿ ಹೇಳಿದರು. ನನಗೆ ಸಿಟ್ಟು ಬೇಡ, ಕುರ್ಚಿ ಬೇಕೆಂದು ಹೇಳಿದರು. ದಯಮಾಡಿ ಈಗಾಗಲೇ ಅಲ್ಲಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕಿರಿಯ ಅಭಿಯಂತರರು ಬಹಳ ಸ್ಪಷ್ಟವಾಗಿ trijunction point ಇರಬಹುದು, ಬಾಂದ್ ಕಲ್ಲಿನ ಬಗ್ಗೆ ಅವರು ಬಹಳ ಸ್ಪಷ್ಟವಾಗಿ ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಇದು ಸತ್ಯವೊ, ಅಸತ್ಯವೊ, ಎಂಬುದು ಗೊತ್ತಾಗಬೇಕಾಗುತ್ತದೆ. ನನಗೆ ಒಂದು ಪತ್ರ ಬಂತು, ನೀವೆಲ್ಲಾ ಹೇಡಿಗಳಾ, ನೀವೆಲ್ಲಾ ಮೂಕ ಪ್ರೇಕ್ಷಕರಾಗಿ ಕುಳಿತ್ತಿದ್ದೀರಲ್ಲಾ ಎಂದು ಒಬ್ಬರು ಬರೆಯುತ್ತಾರೆ. ಅದನ್ನು ನೋಡಿದಾಗ ನಮಗೆ ಮನಸ್ಸಿಗೆ ನೋವಾಗುತ್ತದೆ. ಇವತ್ತು

ಅಲ್ಲಿ ಆಗುತ್ತಿರುವಂತಹ ದಬ್ಬಾಳಿಕೆ, ದೌರ್ಜನ್ಯ, ಬೆದರಿಕೆಗಳ ಬಗ್ಗೆ ಹೇಳಿದಾಗ, ನಮ್ಮ ರಾಜ್ಯ ಆಂಧ್ರ ಪ್ರದೇಶದ ರೀತಿಯಲ್ಲಿ, ಅಥವಾ ಬಿಹಾರ ರಾಜ್ಯದ ರೀತಿಯಲ್ಲಿ ಎಲ್ಲೋ ಒಂದು ಕಡೆ ದಬ್ಬಾಳಿಕೆಗೆ, ದೌರ್ಜನ್ಯಕ್ಕೆ ಅವಕಾಶವನ್ನು ಕೊಡಬಾರದು. ಈ ಒಂದು ಹಗರಣ ಏನು ಬಂದಿದೆ, ಅಪವಾದ ಏನು ಬಂದಿದೆ, ಅದು ಈ ಸದನದ ಮಂತ್ರಿಗಳೆಂದರೆ ಅವರು ನಮಗೂ ಮಂತ್ರಿಗಳೇ, ನಮ್ಮ ಮಂತ್ರಿಗಳ ಮೇಲೆ ಬಂದಿರುವಂಥ ಅಪಾದನೆಗಳು ನಮ್ಮ ಮೇಲೆಲ್ಲಾ ಬಂದ ಹಾಗೆ, ನಮ್ಮ ರಾಜ್ಯ ಸರ್ಕಾರದ ಮಂತ್ರಿಗಳಾಗಿರಬಹುದು, ಸರ್ಕಾರದ ಮೇಲೆ ಆಗಿರಬಹುದು. ಇದು CBI ತನಿಖೆಯಾಗಿ, ನಿಷ್ಪಕ್ಷಪಾತವಾಗಿ ಸತ್ಯಾಂಶವನ್ನು ಹೊರಗೆಡವಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಕೊನೆಯದಾಗಿ ಕೃಷ್ಣಪ್ಪನವರೆ ಮಾತನಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) :- ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಸುಧೀರ್ಘವಾಗಿ ಮೈನ್ಸ್ ಬಗ್ಗೆ ಪರ, ವಿರೋಧಿ ಚರ್ಚೆ ಬಹಳಷ್ಟು ನಡೆದಿದೆ. ಹಿಂದೆಯೂ ಸಹ parliamentನಲ್ಲೂ ಬಹಳ ಸಾರಿ ನಡೆದಿದೆ. Coal ಇದ್ದಂತಹ ಕಾಲದಲ್ಲಿ ಶ್ರೀಮತಿ ಇಂದಿರಾಗಾಂಧಿಯುವರು ಆ coal ನ proprietor ತರಹ ಮಾಲೀಕರ ತರಹ, ಇಡೀ ಸರ್ಕಾರವೇ ನನ್ನದೆನ್ನುವ ಕಾಲವನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಶ್ರೀಮತಿ ಇಂದಿರಾ ಗಾಂಧಿಯವರು ಆಗ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡು ರಾಷ್ಟ್ರೀಕರಣ ಮಾಡುವ ಮುಖಾಂತರ ಅದಕ್ಕೆ full stop ಇಟ್ಟಿದ್ದಾರೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆಂದರೆ ಗಣಿಗೆ ಏನಾದರೂ ಮಾಡಿ ರಾಷ್ಟ್ರೀಕರಣ ಮಾಡುವುದರ ಮುಖಾಂತರ ಈ ರಾಜ್ಯಕ್ಕೆ ನೆಮ್ಮದಿಯನ್ನು ತಂದು ಕೊಡಬೇಕೆಂಬುದು ನನ್ನ ಅನಿಸಿಕೆಯಾಗಿದೆ. ಇದರಲ್ಲಿ encroachment ಇರಬಹುದು, ಅರ್ಜಿ ಇರಬಹುದು, ಎಲ್ಲರೂ ಹಾಕುವುದು ಸಹಜ. ಅದು ಕೆಲವೊಮ್ಮೆ ಏನಾಗುತ್ತದೆ ಎಂದರೆ ಯಾರೋ ಒಬ್ಬರ ಹಣದ ಪ್ರಭಾವದಿಂದ ಎಲ್ಲೋ ಒಂದು ಹಂತದಲ್ಲಿ ಅದು shake ಆಗುವ ಸಂದರ್ಭದಲ್ಲಿ ಬಹಳ ನೋವಾಗಿ ಇದು ರಾಷ್ಟ್ರದ, ಈ ರಾಜ್ಯದ ಹಿತದೃಷ್ಟಿಯಿಂದ ಸರ್ವಾನುಮತದ ತೀರ್ಮಾನದ ಮುಖಾಂತರ ಇದನ್ನು ರಾಷ್ಟ್ರೀಕರಣ ಮಾಡುವುದಕ್ಕೆ ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು

ಮುಂದಾಗಬೇಕು. ಈ ಸದನವೂ ಸಹಾ ಮುಂದಾದರೆ ಇದಕ್ಕೆ ಒಂದು full stop ಸಿಗುತ್ತದೆಂದು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ನಿಯಮ 69ರ ಅಡಿಯಲ್ಲಿ ಚರ್ಚೆಯಾಗುತ್ತಿರುವಂಥ ವಿಷಯದ ಮೇಲೆ ನಾಳೆ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಈಗ ಸದನವನ್ನು ನಾಳೆ ಬೆಳಗ್ಗೆ 11.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 7 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 22ನೇ ಜನವರಿ 2009ರ ಗುರುವಾರದಂದು ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)